ವಿಶ್ವವಾಣಿ

ವಿಶ್ವಾಸವೇ ವಿಶ್ವ

ಹಾರ್ದಿಕ್‌ಗೆ ಕೊಕ್, ಜೈಸ್ವಾಲ್‌ಗೆ ಮುಂಬೈ ಗಾಳ

ಐಪಿಎಲ್ ನಲ್ಲಿ ಕಳಪೆ ಪ್ರದರ್ಶನ ನೀಡಿದ್ದ ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯಗೆ ಫ್ರಾಂಚೈಸಿಯು ಮುಂದಿನ ಆವೃತ್ತಿಯಲ್ಲಿ ಕೊಕ್ ನೀಡಲಿದೆ ಎನ್ನಲಾಗುತ್ತಿದೆ. ರಾಜಸ್ಥಾನ್ ರಾಯಲ್ಸ್ ತಂಡದ ಯಶಸ್ವಿ ಜೈಸ್ವಾಲ್ ಮುಂಬೈ ಇಂಡಿಯನ್ಸ್‌ಗೆ ಸೇರ್ಪಡೆ ಆಗುವ ಸಾಧ್ಯತೆ ದಟ್ಟವಾಗಿದೆ.

PARISHRAMA
PU COLLEGE | NEET ACADEMY

NEET ಅಂದ್ರೆ ಪರಿಶ್ರಮ

NCERT lines changed the fate of our students.
Historical selections expected.



Pradeep Eshwar
Teacher by Passion. A mentor who has produced 7,000+ doctors across South India.

Re-NEET-2026 scores based on Parishrama's provisional key answers



690 EXPECTED NEET SCORE — Likith NR
685 EXPECTED NEET SCORE — Punyavardhan

Join before the results!
If you obtain a government seat, you'll receive a 100% refund of the fees paid.

HIGHLIGHTS
- Pradeep Eshwar's Biology classes will cover every line of NCERT Biology
- We will ensure you get 350+ marks in Biology
- 16 hours of rigorous studies
- Our food is highly appreciated by students and their parents. We welcome you to come and try

All our tests are now conducted as Computer-Based Tests (CBTs), helping you prepare for the online NEET examination expected from next year.

680 EXPECTED NEET SCORE — Rakshith Gowda SM
680 EXPECTED NEET SCORE — Manojna S
680 EXPECTED NEET SCORE — Shashank N
660 EXPECTED NEET SCORE — Harshitha D M
660 EXPECTED NEET SCORE — Deekshitha B N
660 EXPECTED NEET SCORE — Siri Gowri
650 EXPECTED NEET SCORE — Pavan Gowda G
650 EXPECTED NEET SCORE — Vijayalakshmi S Badri
650 EXPECTED NEET SCORE — Sowjanya R Gowda
650 EXPECTED NEET SCORE — Niveditha R
650 EXPECTED NEET SCORE — Akash S M
650 EXPECTED NEET SCORE — Hitesh M
640 EXPECTED NEET SCORE — Shreya Gajakosh
640 EXPECTED NEET SCORE — Aishwarya B
640 EXPECTED NEET SCORE — Hitha Rai
630 EXPECTED NEET SCORE — Pranathi H C
630 EXPECTED NEET SCORE — Anurag Aravind
615 EXPECTED NEET SCORE — Bhoomika Yaliger

- Despite the lengthy paper, 195+ students are expected to secure a perfect 360/360 in Biology under the guidance of our MD, Shri Pradeep Eshwar
- 400+ students will score 340 out of 360 in Biology
- More than 630 Students will score 550+
- Expecting 800 Students to secure Medical Seat

Pradeep Eshwar's unique teaching methodology and line-by-line NCERT guidance have made this remarkable achievement possible.

ADMISSIONS OPEN FOR 2026-27
PUC & NEET (LONG TERM)

RESIDENTIAL	SEMI RESIDENTIAL	NON-RESIDENTIAL
PCMB (BOARD+NEET+K-CET)	PCMB (BOARD+NEET+K-CET)	PCMB (BOARD)

PREPARE WITH US FOR 16 HOURS PER DAY FOR 10 MONTHS.
We will work to help you reach your dream medical college.

First Batch	Second Batch	Third Batch
Starts today at 10:00am	Starts tomorrow 23/06/2026	Starts day after 24/06/2026

Scan to Register For NEET

For more details:
080-24413400 7483830545
www.parishramagroup.com | Follow us on:

ಸಮಾಚಾರ ಸಣ್ಣದಲ್ಲ

ಬಾವಿಗೆ ಬಿದ್ದ ಹಸು; ಅಗ್ನಿ ಶಾಮಕ ದಳದಿಂದ ರಕ್ಷಣೆ

ಮಂಗಳೂರು: ಆಕಸ್ಮಿಕವಾಗಿ ಬಾವಿಗೆ ಬಿದ್ದಿದ್ದ ಹಸುವೊಂದನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಸ್ಥಳೀಯರು ಸೇರಿ ಸುರಕ್ಷಿತವಾಗಿ ರಕ್ಷಿಸಿದ ಘಟನೆ ಪಚ್ಚನಾಡಿಯಲ್ಲಿ ನಡೆದಿದೆ. ಈ ಹಸು ಸ್ಥಳೀಯ ನಿವಾಸಿ ಫ್ರಾಂಕ್ಲಿನ್ ಫರ್ನಾಂಡಿಸ್ ಅವರಿಗೆ ಸೇರಿದ್ದಾಗಿದೆ. ಭಾನುವಾರ ಸಂಜೆ ಹಸು ಮನೆಯ ಸಮೀಪದ ಬಾವಿಯ ಬಳಿ ಮೇಯುತ್ತಿದ್ದಾಗ, ಆಯತಪ್ಪಿ ಬಾವಿಯೊಳಗೆ ಬಿದ್ದಿದೆ ಎಂದು ಮೂಲಗಳು ತಿಳಿಸಿವೆ. ಸುಮಾರು 25 ಅಡಿ ಆಳವಿದ್ದ ಆ ಬಾವಿಯಲ್ಲಿ ನೀರು ಇತ್ತು. ಘಟನೆ ಮನೆಯ ಸಮೀಪವೇ ನಡೆದಿದ್ದರಿಂದ, ಕುಟುಂಬದವರು ತಕ್ಷಣವೇ ಹಸು ಬಾವಿಗೆ ಬಿದ್ದಿರುವುದನ್ನು ಗಮನಿಸಿ ಕದ್ರಿ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು.ಕೂಡಲೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ತಂಡವು ಕಾರ್ಯಾಚರಣೆ ಆರಂಭಿಸಿತು. ಅಗ್ನಿಶಾಮಕ ಸಿಬ್ಬಂದಿ ಮತ್ತು ಸ್ಥಳೀಯರ ಜಂಟಿ ಪ್ರಯತ್ನದಿಂದ ಹಸುವನ್ನು ಬಾವಿಯಿಂದ ಸುರಕ್ಷಿತವಾಗಿ ಮೇಲೆತ್ತಲಾಯಿತು. ಈ ರಕ್ಷಣಾ ಕಾರ್ಯಾಚರಣೆಯಲ್ಲಿ ಕದ್ರಿ ಅಗ್ನಿಶಾಮಕ ಠಾಣಾಧಿಕಾರಿ ಆಲ್ಬರ್ಟ್ ಮೋನಿಸ್, ಸಹಾಯಕ ಠಾಣಾಧಿಕಾರಿ ರಮೇಶ್ ದಯಾಕರ್, ಸಿಬ್ಬಂದಿ ಚಂದ್ರಹಾಸ ಸಾಲಿಯಾನ್, ಚಾಲಕ ಸುರೇಶ್ ಕುಮಾರ, ಸಿಬ್ಬಂದಿ ಮಹೇಶ್, ರುಸ್ತುಂ ಪಾಷಾ ಭಾಗವಹಿಸಿದ್ದರು.

ರಸ್ತೆ ಸುರಕ್ಷತೆ: ಶಾಲೆಗಳ ಸಭೆ ಜೂ.24ರಂದು

ಮಂಗಳೂರು: ಶಾಲಾ ಶಿಕ್ಷಣ ಇಲಾಖೆ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ನೇತೃತ್ವದಲ್ಲಿ ವಿದ್ಯಾರ್ಥಿಗಳಲ್ಲಿ ರಸ್ತೆ ಸುರಕ್ಷತೆ ಕುರಿತು ಅರಿವು ಮೂಡಿಸುವ ಸಲುವಾಗಿ ಜೂ. 24 ರಂದು ಸಂಜೆ 4 ಗಂಟೆಗೆ ಬಂಟ್ವಾಳ ತಾಲೂಕಿನ ಮೊಡಂಕಾಪು ಇನ್ಫೆಂಟ್ ಜೀಸಸ್ ಶಾಲೆಯಲ್ಲಿ ಎಲ್ಲಾ ಅನುದಾನ ರಹಿತ ಪ್ರೌಢಶಾಲೆಗಳ ಮುಖ್ಯಸ್ಥರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಸಭೆ ಆಯೋಜಿಸಲಾಗಿದೆ.

ಕುರಿ,ಮೇಕೆಗಳಿಗೆ ಉಚಿತ ಕರುಳು ಬೇನೆ ಲಸಿಕೆ

ಮಂಗಳೂರು: ಪಶುಪಾಲನಾ ಇಲಾಖೆ ವತಿಯಿಂದ ಜಿಲ್ಲೆಯಾದ್ಯಂತ ಆಡು, ಮೇಕೆ ಹಾಗೂ ಕುರಿಗಳಿಗೆ ಕರುಳು ಬೇನೆ ವಿರುದ್ಧದ ಮೊದಲ ಸುತ್ತಿನ ಉಚಿತ ಲಸಿಕಾ ಕಾರ್ಯಕ್ರಮ ಜೂ.30 ರವರೆಗೆ ನಡೆಯಲಿದೆ. ಈ ರೋಗದಿಂದ ಪ್ರಾಣಿಗಳಿಗೆ ಪ್ರಾಣಾಪಾಯವಿರುವುದರಿಂದ ರೈತರು ಹತ್ತಿರದ ಪಶುವೈದ್ಯಕೀಯ ಸಂಸ್ಥೆಯನ್ನು ಸಂಪರ್ಕಿಸಿ ಲಸಿಕೆ ಹಾಕಿಸುವಂತೆ ಇಲಾಖೆಯ ಉಪನಿರ್ದೇಶಕರು ಕೋರಿದ್ದಾರೆ.

ಕೊಟ್ಟಿಯೂರು ದೇವಳಕ್ಕೆ ಹೋದ ಯುವಕ ನಾಪತ್ತೆ

ಮಂಗಳೂರು: ಕೊಟ್ಟಿಯೂರು ದೇವಸ್ಥಾನಕ್ಕೆ ಹೋಗುವುದಾಗಿ ಹೇಳಿ ಜೂನ್ 3 ರಂದು ಹೋದ ರತನ್ ಕುಮಾರ್(31) ಎಂಬ ಯುವಕ ನಾಪತ್ತೆಯಾಗಿದ್ದಾರೆ. ಈ ಕುರಿತು ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 5 ಅಡಿ ಎತ್ತರ, ಎಣ್ಣೆ ಕಪ್ಪು ಮೈಬಣ್ಣ, ಕಪ್ಪು ಪ್ಯಾಂಟ್ ಮತ್ತು ಆಕಾಶ ನೀಲಿ ಬಣ್ಣದ ಶರ್ಟ್ ಧರಿಸಿದ್ದಾರೆ. ಕನ್ನಡ, ತುಳು, ಹಿಂದಿ ಭಾಷೆ ಮಾತನಾಡುತ್ತಾರೆ. ಮಾಹಿತಿ ಸಿಕ್ಕಲ್ಲಿ ಪುಂಜಾಲಕಟ್ಟೆ ಪೊಲೀಸ್ ಠಾಣೆಯನ್ನು ಸಂಪರ್ಕಿಸಲು ಕೋರಲಾಗಿದೆ.

ವಿರಾಮ
ಪ್ರತಿ ಭಾನುವಾರ

ಮಾನ್ಯ ಭೂ ದಾಖಲೆಗಳ ಉಪ-ನಿರ್ದೇಶಕರ ನ್ಯಾಯಾಲಯ
ಜಿಲ್ಲಾ ಕಛೇರಿ, ದಾವಣಗೆರೆ ಜಿಲ್ಲೆ, ದಾವಣಗೆರೆ

ಆರ್.ಎ. 94/26-27
ಅಪೀಲುದಾರರು : ಶ್ರೀಮತಿ ಸುಮಿತ್ರಮ್ಮ ಮತ್ತು ಇತರರು
ಎದುರುದಾರರು : -ವಿರುದ್ಧ-
ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಹರಿಹರ ತಾಲೂಕು, ಹರಿಹರ, ದಾವಣಗೆರೆ ಜಿಲ್ಲೆ, ಮತ್ತು ಇತರರು
ಜಿಎಂ ಸಿದ್ದೇಶ್ ತಂದೆ ಬಿಜಿ ಮಹೇಶ್ವರಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು
3. 4. ಜಿ ಎಂ ರುದ್ರಗೌಡ ತಂದೆ ಬಿಜಿ ಮಹೇಶ್ವರಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು
5. ಚನ್ನಬಸಪ್ಪ ತಂದೆ ಹಾಲೇಶಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು 6. ಸೋಮಶೇಖರಪ್ಪ ತಂದೆ ಜಿ ಮಹಾಲಿಂಗಪ್ಪ ಹೊಸರು ಹಾಗೂ ವ್ಯವಸಾಯಗಾರರು 7. ಡಿ ಶಿವಪ್ಪ ತಂದೆ ದೇವೇಂದ್ರಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು
13. ಜಗದೀಶ್ ತಂದೆ ಲೇಟ್ ಹಾಲಸಿದ್ದಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು
14. ಶಿವಕುಮಾರ್ ತಂದೆ ಲೇಟ್ ಆಲಸಿದ್ದಪ್ಪ ವಯಸ್ಕರು ಹಾಗೂ ವ್ಯವಸಾಯಗಾರರು
15. ರೇಖಾ ಡಿ ತಂದೆ ಲೇಟ್ ಆಲಸಿದ್ದಪ್ಪ ವಯಸ್ಕರು ಹಾಗೂ ವ್ಯವಸಾಯಗಾರರು
16. ಲಲಿತಮ್ಮ ಕೋಂ ಲೇಟ್ ಎಸ್ಆರ್ ರೇವಣಸಿದ್ದಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು
17. ಮಂಜುಳಾ ಡಿ ಆರ್ ತಂದೆ ಲೇಟ್ ಎಸ್ಆರ್ರೇವಣಸಿದ್ದಪ್ಪ ವಯಸ್ಕರು ಹಾಗೂ ವ್ಯವಸಾಯಗಾರರು
19. ಸಂತೋಷ್ ಡಿ ಆರ್ ತಂದೆ.ಲೇಟ್ ಎಸ್ಆರ್ ರೇವಣ ಸಿದ್ದಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು
21 ಎಸ್ ಡಿ ಬಸವರಾಜ್ ತಂದೆ ಎಸ್ಜಿ ರುದ್ರಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು
22. ಡಿಪಿ ಮಂಜಪ್ಪ ತಂದೆ ಪರಮೇಶ್ವರಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು
23. ಡಿಪಿ ಶಿವಕುಮಾರ್ ತಂದೆ ಪರಮೇಶ್ವರಪ್ಪ ವಯಸ್ಕರ ಹಾಗೂ ವ್ಯವಸಾಯಗಾರರು
33. ಸಿದ್ದೇಶಪ್ಪ ತಂದೆ ಬಸವನಗೌಡ ವಯಸ್ಕರ ಹಾಗೂ ವ್ಯವಸಾಯಗಾರರು ಎಲ್ಲರೂ ಕಶಂಶಿಪುರ ಗ್ರಾಮದ ವಾಸಿಗಳು ಹರಿಹರ ತಾಲೂಕ್ ದಾವಣಗೆರೆ ಜಿಲ್ಲೆ.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ 5 ನಿಯಮ 20(1-3) ರ ಪ್ರಕಾರ ನೋಟಿಸ್
ಈ ಮೇಲ್ಕಂಡ ದಾವೆಯಲ್ಲಿ ಮೇಲ್ಮನವಿದಾರರು ಎದುರುದಾರರ ವಿರುದ್ಧ ರೀಸರ್ವೇ ನಂಬರ್ 23/1 ರಿಂದ 23/13 ರಲ್ಲಿ ಆಗಿರುವ ಎಲ್ಲಾ ಪೋಡ್ಗಳನ್ನ ರದ್ದುಪಡಿಸಿ ಹೊಸದಾಗಿ ಅನುಭೋಗದಂತೆ ಅಳತೆ ಮಾಡಿ ಹದ್ದುಬಸ್ತು ಮಾಡಲು ಮೇಲೆ ಮನವಿ ಸಲ್ಲಿಸಿದ್ದು ಇರುತ್ತದೆ. 3,4,5,6,7,13,14,15,16,17,19,21,22,23,33, ವರೆಗಿನ ಎಲ್ಲಾ ಎದುರುದಾರರಿಗೆ ಘನ ನ್ಯಾಯಾಲಯದಿಂದ ನೋಟಿಸ್ ಜಾರಿಯಾದರೂ ಸಹ ಪ್ರಕರಣದಲ್ಲಿ ಹಾಜರಾಗದ ಕಾರಣ ಹಾಗೂ ಇನ್ನೂ ಕೆಲವು ಎದುರುದಾರರು ನೋಟಿಸ್ನ್ನ ಪಡೆಯದ ಕಾರಣ ಘನ ನ್ಯಾಯಾಲಯಕ್ಕೆ ಮೇಲ್ಮನವಿಗಾರರು ಸದರಿ ಅರ್ಜಿಯನ್ನ ಸಲ್ಲಿಸುತ್ತಿದ್ದಾರೆ.
ಆದ್ದರಿಂದ ಮಾನ್ಯ ಘನ ನ್ಯಾಯಾಲಯವು ನಿಮಗೆ ಈ ಮೂಲಕ ತಿಳಿಸುವುದೇನೆಂದರೆ ನೀವಾಗಲಿ ಅಥವಾ ನಿಮ್ಮ ಪರ ವಕೀಲರಾಗಲಿ ದಿನಾಂಕ 25 106 /2026 ರಂದು ಮಧ್ಯಾಹ್ನ 3 ಗಂಟೆಗೆ ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿರುವ ಭೂ ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ ಜಿಲ್ಲಾ ಕಚೇರಿ ದಾವಣಗೆರೆ ಜಿಲ್ಲೆ, ನ್ಯಾಯಾಲಯದಲ್ಲಿ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ ತಪ್ಪಿದಲ್ಲಿ ಪ್ರಕರಣವನ್ನು, ಏಕ ಪಕ್ಷಿಯವಾಗಿ ಇತ್ಯರ್ಥ ಪಡಿಸಲಾಗುವುದು ತಿಳಿಯಿರಿ. ಸಹಿ ಮತ್ತು ನ್ಯಾಯಾಲಯದ ಮೋಹರಿನೊಂದಿಗೆ ದಿನಾಂಕ ನೀಡಲಾಗುವುದು. 11/06/2026

ಅಪೀಲುದಾರರು ಪರ ವಕೀಲರು
ಶ್ರೀ ಯುವರಾಜ್.ಹೆಚ್.ಡಿ
ನ್ಯಾಯಾಲಯದ ಆದೇಶದ ಮೇರೆಗೆ
ಆದಾಖಲೆಗಳ ಉಪ ನಿರ್ದೇಶಕರು
ಉಪನಿದೇವಶಕರ ಪದಾಥನಿಗಮಾಲಯ ದಾವಣಗೆರೆ.

ರಾಜ್ಯ ಕಂಬಳ ಸಂಸ್ಥೆ | ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳ ಕಂಬಳ ಸಮಿತಿ ಮಹಾಸಭೆ

ತಾತ್ಕಾಲಿಕ ಕಂಬಳ ವೇಳಾಪಟ್ಟಿ ಬಿಡುಗಡೆ

ವಿಶ್ವವಾಣಿ ಸುದ್ದಿಮನೆ, ಮೂಡುಬಿದಿರೆ

ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಗಳ ವ್ಯಾಪ್ತಿಯ ಜಿಲ್ಲಾ ಕಂಬಳ ಸಮಿತಿಯ ಮಹಾಸಭೆಯು ರಾಜ್ಯ ಕಂಬಳ ಅಸೋಸಿಯೇಷನ್ ಹಾಗೂ ಜಿಲ್ಲಾ ಕಂಬಳ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಅವರ ಅಧ್ಯಕ್ಷತೆಯಲ್ಲಿ ಮೂಡುಬಿದಿರೆಯ ಸಮಾಜ ಮಂದಿರದಲ್ಲಿ ನಡೆಯಿತು.

ಈ ಸಭೆಯಲ್ಲಿ ಕಂಬಳ ಋತುವಿನ ದಿನಾಂಕಗಳ ಕುರಿತು ಚರ್ಚೆ ನಡೆಸಿ ತಾತ್ಕಾಲಿಕ ವೇಳಾಪಟ್ಟಿಯ ರೂಪರೇಖೆಯನ್ನು ಸಿದ್ಧಪಡಿಸಲಾಯಿತು. ಮುಂದಿನ ಮೂರು ವರ್ಷಗಳ ಅವಧಿಗೆ ಸಮಿತಿ ಮುನ್ನಡೆಸುವ ಪದಾಧಿಕಾರಿಗಳ ಆಯ್ಕೆ ಹಾಗೂ ಜಿಲ್ಲಾ ಮಟ್ಟದ ಅಧಿಕೃತ ಕಂಬಳಗಳ ಪಟ್ಟಿಗೆ ಸೇರ್ಪಡೆ ಗೊಳಿಸಲು ಸಲ್ಲಿಕೆಯಾಗಿರುವ ಹೊಸ ಅರ್ಜಿಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸಲಾಯಿತು.

ವಿಶೇಷ ಅನುದಾನಕ್ಕೆ ಮನವಿ:

ಸಭೆಯಲ್ಲಿ ಮಾತನಾಡಿದ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಅವರು, ಕಂಬಳದ ಓಟಗಾರರು, ತೀರ್ಪುಗಾರರು ಹಾಗೂ ಪರಿಚಾರಕರಿಗೆ ಹೆಚ್ಚಿನ ನೆರವು ಒದಗಿಸುವ ಉದ್ದೇಶದಿಂದ ಅನುದಾನಕ್ಕಾಗಿ ನಿರಂತರ ಪ್ರಯತ್ನ ನಡೆಯುತ್ತಿದೆ. ಸುಮಾರು 15 ಬಾರಿ ಬೆಂಗಳೂರಿಗೆ ಭೇಟಿ ನೀಡಿ ಅಶೋಕ್ ಕುಮಾರ್ರೈ, ಐವನ್ ಡಿಸೋಜ ಹಾಗೂ ಸುನಿಲ್ ಕುಮಾರ್ಅವರ ಸಹಕಾರದೊಂದಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರವಾಸೋದ್ಯಮ ಸಚಿವರಾಗಿದ್ದ ಎಚ್.ಕೆ. ಪಾಟೀಲ್ ಹಾಗೂ ಕ್ರೀಡಾ ಸಚಿವ ನಾಗೇಂದ್ರ ಅವರನ್ನು ಭೇಟಿ ಮಾಡಿ ವಿಶೇಷ ಅನುದಾನಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಪ್ರವಾಸೋದ್ಯಮ ಇಲಾಖೆಯಿಂದ ಕೇವಲ 10 ಕಂಬಳಗಳಿಗೆ ತಲಾ 5 ಲಕ್ಷ ರೂ. ಅನುದಾನ ನೀಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಲಾಗಿದ್ದು, ಕ್ರೀಡಾ ಇಲಾಖೆಯಿಂದ ಬಿಡುಗಡೆಯಾದ 40 ಲಕ್ಷ ರೂ. ಅನುದಾನವನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಸಮಾನವಾಗಿ ಹಂಚುವಂತೆ ಮನವಿ ಮಾಡಲಾಗಿದೆ. ಇದರೊಂದಿಗೆ ಪಟ್ಲ ಫೌಂಡೇಶನ್ ಮೂಲಕ ಕಂಬಳ ಪರಿಚಾರಕರು, ತೀರ್ಪುಗಾರರು ಹಾಗೂ ಓಟಗಾರರಿಗೆ ವಿಮಾ ಸೌಲಭ್ಯ ಕಲ್ಪಿಸುವ ಉದ್ದೇಶವೂ ಇದೆ ಎಂದರು.

ಸಭೆಯಲ್ಲಿ ಕಂಬಳ ಸಮಿತಿಯಿಂದ ನಡೆದ ಕೆಲವು ಲೋಪದೋಷಗಳ ಬಗ್ಗೆ ಹೊಕ್ಕಾಡಿಗೋಳಿ ಕಂಬಳದ ಸಂಘಟಕ ರಶ್ಮಿತ್ ಶೆಟ್ಟಿ ಅವರು ಪ್ರಶ್ನಿಸಿದರು. ಪ್ರಧಾನ ಕಾರ್ಯದರ್ಶಿ ಲೋಕೇಶ್ ಶೆಟ್ಟಿ ಮುಚ್ಚೂರು ಕಲ್ಕುಡ ಸಭೆಯ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ತೀರ್ಪುಗಾರರ ಸಂಚಾಲಕ ವಿಜಯಕುಮಾರ್ಕಂಗಿನಮನೆ, ಗೌರವಾಧ್ಯಕ್ಷ ರೋಹಿತ್ ಹೆಗ್ಡೆ, ಉಪಾಧ್ಯಕ್ಷ ಶ್ರೀಕಾಂತ್ ಭಟ್, ಗೌರವ ಸಲಹೆಗಾರ ಶಾಂತರಾಮ್ ಶೆಟ್ಟಿ, ಉಪ್ಪಿನಂಗಡಿ ಕಂಬಳದ ಸ್ಥಾಪಕ ಅಧ್ಯಕ್ಷ ಉಮೇಶ್ ಶೆಣೈ , ಸಮಿತಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಜಿಲ್ಲಾ ಕಂಬಳ ಸಮಿತಿಯ ಮಹಾಸಭೆಯು ಜಿಲ್ಲಾ ಕಂಬಳ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಅವರ ಅಧ್ಯಕ್ಷತೆಯಲ್ಲಿ ಮೂಡುಬಿದಿರೆಯ ಸಮಾಜ ಮಂದಿರದಲ್ಲಿ ನಡೆಯಿತು.

ಅಕ್ಟೋಬರ್‌ನಿಂದ ಏಪ್ರಿಲ್ ವರೆಗೆ ವೇಳಾಪಟ್ಟಿ

ಅಕ್ಟೋಬರ್17: ಮೈಸೂರು	ಫೆಬ್ರವರಿ 6: ಪುತ್ತೂರು
ನವೆಂಬರ್14: ಪಣಪಿಲ	ಫೆಬ್ರವರಿ 13: ಜಪ್ಪಿನಮೊಗರು
ನವೆಂಬರ್21: ಕೊಡಂಗೆ	ಫೆಬ್ರವರಿ 20: ವಾಮಂಜೂರು
ನವೆಂಬರ್28: ಕಕ್ಕೇಪದವು	ಫೆಬ್ರವರಿ 27: ಎರ್ಮಾಳ್
ಡಿಸೆಂಬರ್5: ಹೊಕ್ಕಾಡಿ	ಮಾರ್ಚ್ 6: ಬಂಟ್ವಾಳ
ಡಿಸೆಂಬರ್6: ಬಳ್ಕಮಂಜ	ಮಾರ್ಚ್ 13: ಬಂಗಾಡಿ
ಡಿಸೆಂಬರ್12: ಬಾರಾಡಿ	ಮಾರ್ಚ್ 20: ವೇಣೂರು
ಡಿಸೆಂಬರ್19: ಮಂಗಳೂರು	ಮಾರ್ಚ್ 27: ಉಪ್ಪಿನಂಗಡಿ
ಡಿಸೆಂಬರ್26: ಮೂಲ್ಕಿ	ಏಪ್ರಿಲ್ 3: ಗುರುಪುರ
ಜನವರಿ 9: ನರಿಂಗಾನ	ಏಪ್ರಿಲ್ 10: ಬಳ್ಕುಂಜೆ
ಜನವರಿ 16: ಅಡ್ವೆ	ಏಪ್ರಿಲ್ 17: ಹರೇಕಳ
ಜನವರಿ 23: ಮೂಡುಬಿದಿರೆ	ಏಪ್ರಿಲ್ 24: ಬಡಗಬೆಟ್ಟು
ಜನವರಿ 30: ಐಕಳ	

ಶಾಸಕರು ತಕ್ಷಣ ಕೆಡಿಪಿ ಸಭೆ ಕರೆಯಬೇಕು

ಉಡುಪಿ : ರಾಜ್ಯ ಸರಕಾರ ಕಾರ್ಕಳ ತಾಲೂಕು ಕೆಡಿಪಿ ಸದಸ್ಯರ ನೇಮಕಾತಿ ಮಾಡಿ ಹಲವು ತಿಂಗಳುಗಳೇ ಕಳೆದಿದ್ದರೂ ಸಮಿತಿಯ ಅಧ್ಯಕ್ಷರಾದ ಶಾಸಕರು ಸಭೆಯನ್ನು ಕರೆದಿರುವುದಿಲ್ಲ. ಶಾಸಕರು ತಕ್ಷಣ ಕೆಡಿಪಿ ಸಭೆಯನ್ನು ಕರೆದು ಕ್ಷೇತ್ರದ ಪ್ರಗತಿಯ ಬಗ್ಗೆ ಚರ್ಚೆ ನಡೆಸಬೇಕೆಂದು ಕೆಡಿಪಿ ನಾಮನಿರ್ದೇಶಿತ ಸದಸ್ಯ ಎಂ. ಪಿ ಮೊಯಿದ್ದಿನಬ್ಬಾ ಆಗ್ರಹಿಸಿದರು.

ಕಾರ್ಕಳದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ವಿವಿಧ ಅಭಿವೃದ್ಧಿ ಯೋಜನೆ, ಕಾರ್ಯಕ್ರಮಗಳನ್ನು ಸುಮಾರು 33 ಕ್ಕೂ ಹೆಚ್ಚು ಇಲಾಖೆಗಳ ಮೂಲಕ ಅನುಷ್ಠಾನಗೊಳಿಸುತ್ತಿದೆ. ಆ ಕಾರ್ಯಕ್ರಮ ಯೋಜನೆಗಳ ಪ್ರಗತಿ ಸಮಯಾನುಸಾರ ಪರಿಶೀಲಿಸಿ ಪರಿಣಾಮಕಾರಿಯಾಗಿ ಅನುಷ್ಠಾ ಮಾಡುವಂತಾಗಲು ಪ್ರಗತಿ ಪರಿಶೀಲನಾ ಸಭೆ ತೀರಾ ಅಗತ್ಯ. ಆದರೆ, ಕಾರ್ಕಳ ಶಾಸಕರು ಕೆಡಿಪಿ ಸಮಿತಿ ಅಧ್ಯಕ್ಷರಾಗಿ ಸಭೆ ಕರೆಯುತ್ತಿಲ್ಲ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ. ಕೇವಲ ಶಾಸಕರೊಬ್ಬರೇ ಅಧಿಕಾರಿಗಳೊಂದಿಗೆ ಸಭೆ ನಡೆಸುವುದು ಸರಕಾರದಿಂದ ನಾಮ ನಿರ್ದೇಶಿತರಾದ ಸದಸ್ಯರ ಕಡೆಗಣನೆ ಆಗಿದೆ. ಇದು ಶಿಷ್ಟಾಚಾರದ ಉಲ್ಲಂಘನೆಯಾಗಿದ್ದು ನಮಗೂ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಕಾಳಜಿ ಇದೆ ಎಂಬುವುದನ್ನು ಶಾಸಕರ ಗಮನಕ್ಕೆ ತರ ಬಯಸುತ್ತೇವೆ ಎಂದರು.

ಸರಕಾರಿ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರಿಲ್ಲದಿರುವ ಕುರಿತು ಅನೇಕ ಬಾರಿ ದೂರುಗಳು ಬಂದಿದ್ದವು. ಒಂದು ವೇಳೆ ಕೆಡಿಪಿ ಸಭೆ ನಡೆಸಿದ್ದರೆ ಈ ಬಗ್ಗೆ ಚರ್ಚೆ ನಡೆಸಿ ಪರಿಹಾರವನ್ನು ಕಂಡುಕೊಳ್ಳಬಹುದಿತ್ತು. ಕೆಡಿಪಿ ಸಭೆ ಕುರಿತು ಶಾಸಕರು ನಿರ್ಲಕ್ಷ್ಯ ವಹಿಸಿದ್ದರು. ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮೀ ಅವರು ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿದ ಒಂದೇ ದಿನದಲ್ಲಿ ವೈದ್ಯರ ನೇಮಕವಾಗುತ್ತದೆಯಾದರೆ ಕಳೆದ 22 ವರ್ಷಗಳಿಂದ ಶಾಸಕರಾಗಿ ಸಚಿವರಾಗಿ ಅಧಿಕಾರ ನಡೆಸುವ ಶಾಸಕರಿಂದ ಇದು ಯಾಕೆ ಸಾಧ್ಯವಾಗಲಿಲ್ಲ ? ಎಂದು ಮೊಯಿದ್ದಿನಬ್ಬಾ ಪ್ರಶ್ನಿಸಿದರು.

ಸಭೆಯಲ್ಲಿ ಕೆಡಿಪಿ ಸದಸ್ಯರಾದ ರುಕ್ಮಯ ಶೆಟ್ಟಿಗಾರ್‌ಕುಕ್ಕುಂದೂರು, ಅಮಿತಾ ಶೆಟ್ಟಿ ಸಾಣೂರು ಉಪಸ್ಥಿತರಿದ್ದರು.

ಕಾರ್ಕಳ ತಾಲೂಕು ಕೆಡಿಪಿ ನಾಮನಿರ್ದೇಶಿತ ಸದಸ್ಯ ಎಂ. ಪಿ ಮೊಯಿದ್ದಿನಬ್ಬಾ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಆಧ್ಯಾತ್ಮ, ಆಯುರ್ವೇದ, ಯೋಗಕ್ಕೆ ವಿಶ್ವ ಬೆರಗು

ಕಾರ್ಕಳ : ಭಾರತದ ಆಧ್ಯಾತ್ಮ, ಆಯುರ್ವೇದ, ಯೋಗ ಇಂದು ಜಗತ್ತನ್ನೇ ತನ್ನತ್ತ ಆಕರ್ಷಿಸುತ್ತಿದೆ ಎಂದು ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್‌ಹೇಳಿದರು.

ಅವರು ಕಾರ್ಕಳ ರಾಮಮಂದಿರದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಮಾತನಾಡಿ, ಯೋಗವು ಭಾರತದ ಪ್ರಾಚೀನ ಮತ್ತು ಅಮೂಲ್ಯ ಪರಂಪರೆಯಾಗಿದೆ. ದೇಹ, ಮನಸ್ಸಿನ ಸಮಾತೋಲನ ಕಾಪಾಡುವಲ್ಲಿ ಯೋಗ ಸಹಕಾರಿಯಾಗುವುದು ಎಂದರು.

ಯೋಗಗುರುಗಳಾದ ಕೃಷ್ಣ ಆಚಾರ್ಯ ಹಾಗೂ ಸುಲೋಚನಾ ಟೀಚರ್‌ಅವರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ 2 ದಶಕಗಳಿಂದ ನಿರಂತರವಾಗಿ ಯೋಗ ತರಬೇತಿ ಮೂಲಕ ಆರೋಗ್ಯ ರಕ್ಷಣೆ ಕಾರ್ಯದಲ್ಲಿ ತ ೊಡ ಗಿಸಿಕ ೊಂಡಿರ ುವುದ ು ಶ್ಲಾಘನೀಯವೆಂದರು.

ಸನ್ಮಾನ :

ಕಳೆದ 20 ವರ್ಷಗಳಿಂದ ಶ್ರೀರಾಮ ಮಂದಿರದಲ್ಲಿ ಯೋಗಗುರುಗಳಾಗಿ ಸೇವೆ ಸಲ್ಲಿಸುತ್ತಿರುವ ನಿಟ್ಟೆ ಡಾ. ಎನ್.ಎಸ್.ಎ.ಎಂ. ಹೈಸ್ಕೂಲ್ನ ನಿವೃತ್ತ ಮುಖ್ಯಶಿಕ್ಷಕ ಕೃಷ್ಣ ಆಚಾರ್ಯ ಹಾಗೂ ಕಾಬೆಟ್ಟು ಹೈಸ್ಕೂಲ್ನ ನಿವೃತ್ತ ಮುಖ್ಯಶಿಕ್ಷಕಿ ಸುಲೋಚನಾ ಅವರನ್ನು ಪ್ರಗತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು.

ಟ್ರಸ್ಟಿಗಳಾದ ಪದ್ಮಪ್ರಸಾದ್ ಜೈನ್, ರಾಮಚಂದ್ರ ಬರೆಪ್ಪಾಡಿ, ಅರುಣ್ ಮಾಂಜ, ಡಾ. ಕೌಶಿಕ್, ಎಸ್ಕೆಡಿಆರ್ಡಿಪಿ ಯೋಜನಾಧಿಕಾರಿ ಬಾಲಕೃಷ್ಣ ಹಿರಿಂಜ, ಉದ್ಯಮಿ ಸಂತೋಷ್ ರೆಂಜಾಳ, ಎಸ್ಬಿಐ ಅನಂತಶಯನ ಬ್ರಾಂಚ್ ಮ್ಯಾನೇಜರ್ ಪ್ರೇಮ್ ಕುಮಾರ್, ಹಿರಿಯ ಯೋಗತರಬೇತಿದಾರರಾದ ಶಶಿಕಲಾ ಮಣಿಯಾಣಿ, ರಾಮಚಂದ್ರ ದೇವಾಡಿಗ, ಸದಾಶಿವ ಕಿಣಿ, ಗೋವಿಂದ ಅಡಿಗ ಹಾಗೂ ಯೋಗ ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಪ್ರಗತಿ ಚಾರಿಟೇಬಲ್ ಟ್ರಸ್ಟ್ನ ಕಾರ್ಯದರ್ಶಿ ಕೀರ್ತನ್ ಕುಮಾರ್‌ಪ್ರಾಸ್ತವಿಕ ಮಾತುಗಳನ್ನಾಡಿದರು. ನಳಿನಿ ಎಸ್. ಸುವರ್ಣ ನಿರ್ವಹಿಸಿದರು. ರಕ್ಷಣ್ ಕುಮಾರ್ ಸಹಕರಿಸಿದರು.

ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ ಅವರು ರಾಮಮಂದಿರದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಮಾತನಾಡಿದರು.

ಸಂಘದ ನೋಂದಣಿ ಆಗ ಏಕೆ ಪ್ರಶ್ನಿಸಲಿಲ್ಲ?

ಶಿವಮೊಗ್ಗ : ಪದೇ ಪದೇ ಆರ್‌ಎಸ್‌ಎಸ್ ಬಗ್ಗೆ ಮಾತನಾಡುತ್ತಿರುವ ಗೃಹಮಂತ್ರಿ ಪ್ರಿಯಾಂಕ್ ಖರ್ಗೆಯವರಿಗೆ ಸಂವಿಧಾನದ ಬಗ್ಗೆ ಅರಿವೇ ಇಲ್ಲ ಎಂದು ರಾಷ್ಟ್ರಭಕ್ತ ಬಳಗದ ಸಂಚಾಲಕ ಹಾಗೂ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್‌ಎಸ್‌ಎಸ್ ಸಂಘದ ನೋಂದಣಿ ವಿಷಯವಾಗಿ ಪ್ರಿಯಾಂಕ್ ಖರ್ಗೆಯವರು ಸಂಘದ ಸರಸಂಘ ಸಂಚಾಲಕ ಮೋಹನ್ ಭಾಗವತ್ ಅವರಿಗೆ ಬರೆದಿರುವ ಪತ್ರ ಮತ್ತು ಕೇಳಿರುವ ಪ್ರಶ್ನೆಗಳು ಪ್ರಿಯಾಂಕ್ ಖರ್ಗೆ ಅವರದ್ದೋ ಅಥವಾ ಕಾಂಗ್ರೆಸ್ ಪಕ್ಷದ್ದೋ? ಸಂಘದ ನೋಂದಣಿ ಬಗ್ಗೆ ಈಗ ಪ್ರಶ್ನಿಸುವವರು ಹಲವು ದಶಕಗಳ ಕಾಲ ದೇಶವನ್ನಾಳಿದಾಗ ಏಕೆ ಸುಮ್ಮನಿದ್ದರು ಎಂದು ಪ್ರಶ್ನೆ ಮಾಡಿದರು.

ಅಷ್ಟಕ್ಕೂ ಯಾವುದೇ ಸಂಘದ ನೋಂದಣಿ ಮಾಡಿಸುವುದು-ಬಿಡುವುದು ಆಯಾ ಸಂಸ್ಥೆಗೆ ಸೇರಿದ್ದಾಗಿದೆ. ಒಂದು ಸ್ವಯಂಪ್ರೇರಿತ ವ್ಯಕ್ತಿಗಳ ಸಮೂಹ ಸಂವಿಧಾನದಡಿ ಸಂಘ ರಚಿಸುವ ಮೂಲಭೂತ ಹಕ್ಕನ್ನು ಹೊಂದಿರುತ್ತದೆ. ನೋಂದಣಿ ಮಾಡಿಸಲೇಬೇಕೆಂಬ ನಿಯಮವೂ ಇಲ್ಲ. 1982ರ ಸಂಘಗಳ ನೋಂದಣಿ ಕಾರ್ಯಕೂಡ ಇದನ್ನೇ ಹೇಳುತ್ತದೆ. ಸರಕಾರದ ಅನುದಾನ ಪಡೆಯಲು ಅಥವಾ ಕಾನೂನುಬದ್ಧ ಘಟಕವಾಗಿ ಕಾರ್ಯ ನಿರ್ವಹಿಸಲು ಬಯಸಿದಾಗ ಮಾತ್ರ ನೋಂದಣಿ ಬೇಕಾಗುತ್ತದೆ. ಇದು ಪ್ರಿಯಾಂಕ್ ಖರ್ಗೆಯವರಿಗೆ ಗೊತ್ತಿರಬೇಕು. ಅವರಿಗೆ ಸಂವಿಧಾನದ ಅರಿವೇ ಇಲ್ಲ ಎಂದು ಟೀಕಿಸಿದರು.

ಯಾರನ್ನೋ ಮೆಚ್ಚಿಸಲು ಹೈಕಮಾಂಡ್ಗೆ ಹತ್ತಿರವಾಗಲು ಸಚಿವ ಪಟ್ಟವನ್ನು ಬಯಸುವವರು ಈ ರೀತಿಯ ಹೇಳಿಕೆಗಳನ್ನು ನೀಡುತ್ತಾ ಹೋಗುತ್ತಾರೆ. ಈಗಾಗಲೇ ಪ್ರಿಯಾಂಕ್ ಖರ್ಗೆಯವರ ಪತ್ರಕ್ಕೆ ಕಾನೂನು ತಜ್ಞರು ಉತ್ತರವನ್ನು ನೀಡಿದ್ದಾರೆ. ಹಾಗೆಯೇ ಹೈಕೋರ್ಟಿನ ಹಿರಿಯ ವಕೀಲ ಹನುಮಂತರಾಯರು ಕೂಡ ಖರ್ಗೆ ಆರೋಪಗಳಲ್ಲಿ ಹುರುಳಿಲ್ಲ ಎಂದಿದ್ದಾರೆ. ಇದನ್ನು ಪ್ರಿಯಾಂಕ್ ಖರ್ಗೆ ಅರ್ಥಮಾಡಿಕೊಳ್ಳಬೇಕು ಎಂದರು. ಹೊಸದಾಗಿ ಅಧಿಕಾರದ ಸ್ವೀಕರಿಸಿದ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಕೂಡ ಇದೇ ಹಾದಿಯಲ್ಲಿ ಸಾಗುತ್ತಿದ್ದಾರೆ. ಈ ಇಬ್ಬರು ಒಂದು ರೀತಿಯಲ್ಲಿ ಅರ್ಬನ್ ನಕ್ಸಲರು. ಈ ಇಬ್ಬರೂ ಹಿರಣ್ಯ - ಕಶ್ಯಪು ಇದ್ದಂತೆ. ಇವರನ್ನು ನಾಶ ಮಾಡಲು ಭಕ್ತಿಪ್ರಹ್ಲಾದನ ರೀತಿ ನಾವಿದ್ದೇವೆ ಎಂದು ಟೀಕಿಸಿದರು. ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಈ. ವಿಶ್ವಾಸ್, ಶೇಷಾಚಲ, ಕುಬೇರಪ್ಪ, ಶ್ರೀಕಾಂತ್, ಬಾಲು, ಸೀತಾಲಕ್ಷ್ಮಿ, ಕೆಂಪಮ್ಮ, ಶಿವಾಜಿ ಇದ್ದರು.

ಕಾರ್ಕಳ ಯಕ್ಷ ರಂಗಾಯಣದ ಹೆಸರು ಬದಲಾವಣೆಗೆ ಆಕ್ಷೇಪ

ಕರಾವಳಿ ಸಾಂಸ್ಕೃತಿಕ ಅಸ್ಮಿತೆಗೆ ಸರಕಾರ ದ್ರೋಹ : ಶಾಸಕ

ಉಡುಪಿ : ಕಾರ್ಕಳದ 'ಯಕ್ಷರಂಗಾಯಣ' ಕೇಂದ್ರದ ಹೆಸರನ್ನು ರಾಜ್ಯ ಸರಕಾರವು ಏಕಾಏಕಿ 'ಕರಾವಳಿ ರಂಗಾಯಣ' ಎಂದು ಬದಲಾಯಿಸಿರುವುದು ಅತ್ಯಂತ ಬೇಜವಾಬ್ದಾರಿ ಹಾಗೂ ಏಕ ಪಕ್ಷೀಯ ನಿರ್ಧಾರ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಜಿ ಸಚಿವ, ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್‌ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಶ್ವವಿಖ್ಯಾತ ಯಕ್ಷಗಾನ ಮತ್ತು ನಾಟಕರಂಗದ ಪರಂಪರೆಯನ್ನು ಮುಂದಿನ ತಲೆಮಾರಿಗೆ ದಾಟಿಸುವ ಮಹತ್ತರ ದೂರದೃಷ್ಟಿಯೊಂದಿಗೆ ಕಾರ್ಕಳದಲ್ಲಿ ಯಕ್ಷರಂಗಾಯಣ ಸ್ಥಾಪನೆ ಮಾಡಲಾಗಿತ್ತು. ಹೆಸರು ಬದಲಿಸುವ ಈ ದಿಢೀರ್‌ಮತ್ತು ದುರುದ್ದೇಶಪೂರಿತ ನಡೆ ಇಡೀ ಕರಾವಳಿಯ ಯಕ್ಷಗಾನ ಕಲೆಗೆ, ರಂಗಭೂಮಿಗೆ ಹಾಗೂ ಹಗಲಿರುಳು ಈ ಕಲೆಯನ್ನೇ ನಂಬಿ ಬದುಕುತ್ತಿರುವ ಸಾವಿರಾರು ಕಲಾವಿದರ ಸ್ವಾಭಿಮಾನಕ್ಕೆ ಮಾಡಿರುವ ಘೋರ ಅಪಮಾನ. ಇದು ಯಕ್ಷಗಾನ ಕಲೆಯ ಕತ್ತು ಹಿಸುಕುವ ರಾಜ್ಯ ಸರಕಾರದ ವ್ಯವಸ್ಥಿತ ಸಂಚು ಎಂದವರು ಆರೋಪಿಸಿದ್ದಾರೆ.

ಒಲೈಕೆಗೆ ನಿಂತಿದೆ :

ಬಿಜೆಪಿ ಸರಕಾರದ ಆಡಳಿತದಲ್ಲಿ ನಾನು ಕನ್ನಡ ಮತ್ತು ಸಂಸ್ಕೃತಿ ಸಚಿವನಾಗಿದ್ದಾಗ ಇಡೀ ಅವಿಭಜಿತ ಜಿಲ್ಲೆಯ ಅಸ್ಮಿತೆಯಾದ ಯಕ್ಷಗಾನ ಕಲೆಯನ್ನು ಯಕ್ಷಗಾನದ ಹೆಸರಲ್ಲೇ ಯುವ ಜನಾಂಗಕ್ಕೆ ಪರಿಚಯಿಸಬೇಕು ಎಂಬ ಆಶಯದಿಂದ ಆರಂಭಿಸಲಾಗಿತ್ತು. ಆ ಬಳಿಕ ಈ ಕೇಂದ್ರದಲ್ಲಿ ನಿರಂತರ ಯಕ್ಷಗಾನ, ನಾಟಕ ಕಲೆ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಾ ಬಂದಿದ್ದು, ಯುವ ಸಮೂಹ ಯಕ್ಷಗಾನ, ನಾಟಕ ಕಲೆಯತ್ತ ಆಕರ್ಷಿತರಾಗಿದ್ದರು. ಯಕ್ಷ ರಂಗಾಯಣದ ಕಟ್ಟಡ, ಇತ್ಯಾದಿಗಳಿಗೆ ಸುಮಾರು 2 ಕೋಟಿ ರೂ ಹಣ ಮಂಜೂರಾಗಿ ಯಕ್ಷರಂಗಾಯಣ ಹೆಸರಲ್ಲಿ ಕಟ್ಟಡಗಳ ನಿರ್ಮಾಣವಾಗಿದೆ. ಆದರೆ, ಇವತ್ತು ಆ ಹೆಸರಿನಿಂದ 'ಯಕ್ಷ' ಎಂಬ ಪದವನ್ನೇ ಕಿತ್ತೊಗೆಯುವ ಮೂಲಕ ಸರಕಾರ ಯಾರ ಓಲೈಕೆಗೆ ನಿಂತಿದೆ? ಜಾಗತಿಕ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ 'ಯಕ್ಷಗಾನ'ದ ಹೆಸರನ್ನು ಸಾಂಸ್ಕೃತಿಕ ಭೂಪಟದಿಂದಲೇ ಅಳಿಸಿ ಹಾಕಲು ಹೊರಟಿರುವ ಈ ಕೃತ್ಯದ ಹಿಂದೆ ಯಾರ ಕೈವಾಡವಿದೆ? ಕಲೆಯ ಹೆಸರನ್ನು ಬದಲಿಸಲು ಸರಕಾರಕ್ಕೆ ಒತ್ತಡ ಹೇರಿದ ಆ ಅದೃಶ್ಯ ಶಕ್ತಿಗಳು ಯಾವುವು? ಎಂದವರು ಪ್ರಶ್ನಿಸಿದ್ದಾರೆ.

ಸಹಿಸಲಾಗುತ್ತಿಲ್ಲವೇ ?

ಈ ಹಿಂದೆ ಬಿಜೆಪಿ ಅಧಿಕಾರ ಅವಧಿಯಲ್ಲಿ ನಾಡಿನ ಸಾಂಸ್ಕೃತಿಕ ಚಟುವಟಿಕೆಗಳಿಗೆ ಒತ್ತು ನೀಡಲಾಗಿತ್ತು. ಯಕ್ಷಗಾನ ಸಮಾವೇಶ ಮೇಳ, ಹೀಗೆ ಹಲವು ವಿಧದ ಕಾರ್ಯಕ್ರಮ ಕೈಗೊಂಡು ಯಕ್ಷಗಾನ ಕಲಾವಿದರನ್ನು ಪ್ರೋತ್ಸಾಹಿಸಲಾಗಿತ್ತು. ಆದರೆ ಈ ಸರಕಾರ ಆಡಳಿತಕ್ಕೆ ಬಂದ ಬಳಿಕ ಕಲೆಗೆ ಒಂದಲ್ಲ ಒಂದು ರೀತಿ ದ್ರೋಹ ಬಗೆಯುವ ಪ್ರಯತ್ನ ನಡೆಸುತ್ತಿದೆ. ಯಕ್ಷಗಾನ ಕಲೆಯನ್ನು ಕೂಡ ಈ ಸರಕಾರಕ್ಕೆ ಸಹಿಸಲಾಗುತ್ತಿಲ್ಲವೇ? ಎಂದು ಪ್ರಶ್ನಿಸಿರುವ ಅವರು ಕರಾವಳಿ ರಂಗಾಯಣ ಎಂದು ಹೆಸರು ಬದಲಿಸುವ ನಿರ್ಧಾರಕ್ಕೆ ಮುನ್ನ ಕರಾವಳಿ ಭಾಗದವರ ಜನಪ್ರತಿನಿಧಿಗಳ ಜೊತೆ ಚರ್ಚಿಸದೇ, ಯಾರ ಗಮನಕ್ಕೂ ತಾರದೇ, ಸ್ಥಳೀಯರ ವಿಶ್ವಾಸ ಗಳಿಸದೇ ತರಾತುರಿಯಲ್ಲಿ ಈ ನಿರ್ಧಾರ ಕೈಗೊಂಡಿದ್ದಾರೆ ಎಂದವರು ಆರೋಪಿಸಿದ್ದಾರೆ.

'ಯೋಗ ವಿದ್ ಯೋಧ' ಯೋಗಾಭ್ಯಾಸ

ಮಂಗಳೂರು: ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ವಿಶೇಷ ಅಂಗವಾಗಿ, ''ಭೂಕೈಲಾಸ'' ಎಂದೇ ಪ್ರಖ್ಯಾತಿ ಪಡೆದಿರುವ ಐತಿಹಾಸಿಕ ಶ್ರೀ ಕ್ಷೇತ್ರ ಕಾರಿಂಜೇಶ್ವರ ಬೆಟ್ಟದ ಆವರಣದಲ್ಲಿ 3ನೇ ಆವೃತ್ತಿಯ ''ಯೋಗ ವಿದ್ ಯೋಧ'' ಬೃಹತ್ ಯೋಗಾಭ್ಯಾಸ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು.

ಪ್ರಕೃತಿ ಮತ್ತು ದೈವಿಕತೆಯ ಸನ್ನಿಧಿಯಲ್ಲಿ ಮನಸ್ಸನ್ನು ಶಾಂತಗೊಳಿಸಿ, ದೇಹವನ್ನು ಹತೋಟಿಗೆ ತರುವ ಈ ಅಪೂರ್ವ ಯೋಗಾಭ್ಯಾಸಕ್ಕೆ ಪ್ರಕೃತಿಯ ರುದ್ರ ರಮಣೀಯ ಕೊಡ್ಯಾಮಲೆ ಬೆಟ್ಟಗಳ ಶ್ರೇಣಿ ಸಾಕ್ಷಿಯಾಯಿತು. ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಸಂಸದರಾದ ಬ್ರಿಜೇಶ್ ಚೌಟ ಅವರ ನೇತೃತ್ವದಲ್ಲಿ ಈ ಯೋಗಾಭ್ಯಾಸ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ನೂರಾರು ಯೋಗಾಸಕ್ತರು ಅತ್ಯಂತ ಉತ್ಸಾಹ ಮತ್ತು ಸಕ್ರಿಯತೆಯಿಂದ ಭಾಗವಹಿಸಿ ಯೋಗದ ಮಹತ್ವವನ್ನು ಸಾರಿದರು.

ಕರಾವಳಿ ಭಾಗ ಕರ್ನಾಟಕದ ಆರ್ಥಿಕ ಆಸ್ತಿ: ಪ್ರತಿಮಾ

ಮಂಗಳೂರು : ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ನೇತೃತ್ವದಲ್ಲಿ ನಡೆದ ಕರಾವಳಿ ಪ್ರವಾಸೋದ್ಯಮ ಸಭೆಯು ಈ ಭಾಗದ ಅಭಿವೃದ್ಧಿಗೆ ಮೊದಲ ಹೆಜ್ಜೆಯಾಗಿದೆ ಎಂದು ''ದಿ ಅರ್ಬನ್ ವಿಷನ್'' ಅಧ್ಯಕ್ಷ ಪ್ರತಿಮಾ ಮನೋಹರ್‌ತಿಳಿಸಿದ್ದಾರೆ.

ಕಡಲತೀರಗಳು, ದ್ವೀಪಗಳು, ಜಲಪಾತಗಳು, ಆಧ್ಯಾತ್ಮಿಕತೆ ಮತ್ತು ಆಹಾರ ಪರಂಪರೆಯ ಅಪೂರ್ವ ಸಂಗಮವಾಗಿರುವ ಕರಾವಳಿಯು ರಾಜ್ಯದ ಶ್ರೇಷ್ಠ ಆರ್ಥಿಕ ಆಸ್ತಿಯಾಗಿದೆ. ಪ್ರವಾಸೋದ್ಯಮವನ್ನು ಕೇವಲ ಆತಿಥ್ಯ ಕ್ಷೇತ್ರವಾಗಿ ನೋಡದೆ, ಜಾಗತಿಕ ಮಟ್ಟದ ದುಬೈ, ಫುಕೆಟ್ ಮಾದರಿಯಲ್ಲಿ ಆರ್ಥಿಕ ಬೆಳವಣಿಗೆಯ ತಂತ್ರವಾಗಿ ರೂಪಿಸಬೇಕಿದೆ. ಮೂಲಸೌಕರ್ಯ, ಜಲಕ್ರೀಡೆ, ಸಮುದಾಯ ಆಧಾರಿತ ಪ್ರವಾಸೋದ್ಯಮ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಮೂಲಕ ಕರಾವಳಿಯನ್ನು ಭಾರತದ ಪ್ರಮುಖ ಪ್ರವಾಸೋದ್ಯಮ ಕಾರಿಡಾರ್‌ಆಗಿ ಪರಿವರ್ತಿಸಬಹುದು. ಇದು ಜಿಡಿಪಿ ಹೆಚ್ಚಳಕ್ಕೆ ನೆರವಾಗುವುದಲ್ಲದೆ, ವಿದೇಶಿ ವಿನಿಮಯವನ್ನು ಆಕರ್ಷಿಸುತ್ತದೆ ಎಂದರು.

ಅತ್ಯಂತ ಮುಖ್ಯವಾಗಿ, ಈ ಯೋಜನೆಗಳು ಸ್ಥಳೀಯವಾಗಿಯೇ ಉದ್ಯೋಗಗಳನ್ನು ಸೃಷ್ಟಿಸುತ್ತವೆ. ಹೋಂ ಸ್ಟೇಗಳು, ಸಾರಿಗೆ, ಕುಶಲಕರ್ಮಿಗಳು, ರೈತರು ಹಾಗೂ ಸಣ್ಣ ಉದ್ಯಮಿಗಳಿಗೆ ಆರ್ಥಿಕ ಭದ್ರತೆ ನೀಡುವ ಮೂಲಕ ಸ್ಥಳೀಯ ಉದ್ಯಮಶೀಲತೆಯನ್ನು ಬಲಪಡಿಸಲಿವೆ. ಒಂದೇ ಸೂರಿನಡಿ ವೈವಿಧ್ಯಮಯ ಅನುಭವ ನೀಡುವ ಕರಾವಳಿ ಕರ್ನಾಟಕಕ್ಕೆ ಜಾಗತಿಕ ಮಟ್ಟದಲ್ಲಿ ಬೆಳೆಯುವ ಎಲ್ಲಾ ಸಾಮರ್ಥ್ಯವಿದೆ ಎಂದರು.

ಮಕ್ಕಳ ನಾಪತ್ತೆ: ಕಟ್ಟುನಿಟ್ಟಿನ ಕ್ರಮಕ್ಕೆ ಡಿಸಿ ಸೂಚನೆ

ಮಂಗಳೂರು: ''ಜಿಲ್ಲೆಯಲ್ಲಿ ಮಕ್ಕಳು ಕಾಣೆಯಾಗುವ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಯಾವುದೇ ವಿಳಂಬವಿಲ್ಲದೆ ತಕ್ಷಣವೇ ತನಿಖೆ ನಡೆಸಿ, ಮಕ್ಕಳನ್ನು ಪತ್ತೆಹಚ್ಚಲು ಪೊಲೀಸ್ ಇಲಾಖೆ ಚುರುಕಾಗಬೇಕು'' ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

86 ಮಕ್ಕಳು ನಾಪತ್ತೆ: ಕಳೆದೊಂದು ವರ್ಷದಲ್ಲಿ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 86 ಮಕ್ಕಳು ನಾಪತ್ತೆಯಾಗಿರುವ ಬಗ್ಗೆ ಪ್ರಕರಣಗಳು ದಾಖಲಾಗಿವೆ. ಈ ಪೈಕಿ 79 ಮಕ್ಕಳನ್ನು ಈಗಾಗಲೇ ಪತ್ತೆಹಚ್ಚಲಾಗಿದೆ. ಬಾಕಿ ಇರುವ ಮಕ್ಕಳ ಪತ್ತೆಗೂ ಆದ್ಯತೆ ನೀಡಬೇಕು ಎಂದು ಅವರು ತಿಳಿಸಿದರು.

ಸಂಸ್ಥೆಗಳ ಪರಿಶೀಲನೆ: ಜಿಲ್ಲೆಯಲ್ಲಿ ಬಾಲ ನ್ಯಾಯ ಕಾಯ್ದೆಯಡಿ ನೋಂದಣಿಯಾಗಿರುವ 69 ಅನಾಥಾಲಯ ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳಿದ್ದು, ಇಲ್ಲಿ 2,581 ಮಕ್ಕಳು ಆಶ್ರಯ ಪಡೆದಿದ್ದಾರೆ. ಅಧಿಕಾರಿಗಳು ಪ್ರತಿ ತಿಂಗಳು ಈ ಸಂಸ್ಥೆಗಳಿಗೆ ಭೇಟಿ ನೀಡಿ ಉತ್ತಮ ಗಾಳಿ, ಬೆಳಕು, ವಾಸ್ತವ್ಯ ಹಾಗೂ ಗುಣಮಟ್ಟದ ಆಹಾರದ ವ್ಯವಸ್ಥೆ ಇರುವ ಬಗ್ಗೆ ಪರಿಶೀಲಿಸಬೇಕು. ಶಾಲೆಗಳಲ್ಲಿ 1098 ಸಂಖ್ಯೆ ಪ್ರದರ್ಶನ: ಸಂಕಷ್ಟದಲ್ಲಿರುವ ಮಕ್ಕಳ ನೆರವಿಗಾಗಿ ಇರುವ 24 ಗಂಟೆಗಳ ಉಚಿತ ಸಹಾಯವಾಣಿ ''1098'' ಸಂಖ್ಯೆಯನ್ನು ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು. ಕಳೆದ ವರ್ಷ ಈ ಸಹಾಯವಾಣಿಗೆ 763 ಪ್ರಕರಣಗಳು ಬಂದಿವೆ.

ಪ್ರೀ ಶಾಲೆ ನೋಂದಣಿ: ಜಿಲ್ಲೆಯಲ್ಲಿ ಹೆಚ್ಚುತ್ತಿರುವ ನರ್ಸರಿ, ಬೇಬಿ ಸಿಟಿಂಗ್ ಹಾಗೂ ಪ್ರೀ ಸ್ಕೂಲ್ಗಳ ಮೇಲ್ವಿಚಾರಣೆ ಮತ್ತು ನೋಂದಣಿಗೆ ಕಟ್ಟುನಿಟ್ಟಿನ ನಿಯಮ ರೂಪಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಗೆ ನಿರ್ದೇಶನ ನೀಡಲಾಗಿದೆ.

ಬಾಲಕಾರ್ಮಿಕ ಪದ್ಧತಿ: ಹೋಟೆಲ್ ಹಾಗೂ ಅಂಗಡಿ ಮುಂಗಟ್ಟುಗಳಲ್ಲಿ ಬಾಲಕಾರ್ಮಿಕರನ್ನು ನೇಮಿಸಿಕೊಳ್ಳದಂತೆ ಕಾರ್ಮಿಕ ಇಲಾಖೆ ನಿರಂತರ ದಾಳಿ ನಡೆಸಬೇಕು. ನಿಯಮ ಉಲ್ಲಂಘಿಸಿದ 92 ಸಂಸ್ಥೆಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, 49 ಪ್ರಕರಣಗಳಲ್ಲಿ 3.06 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಂತ್ರಸ್ತರಿಗೆ ನೆರವು: 2026-27ರ ಅವಧಿಯಲ್ಲಿ 34 ಫಲಾನುಭವಿಗಳಿಗೆ ಬಾಲ ನ್ಯಾಯ ನಿಧಿಯಿಂದ 1.70 ಲಕ್ಷ ನೆರವು ನೀಡಲಾಗಿದೆ. ಜಿಲ್ಲೆಯ 2 ದತ್ತು ಕೇಂದ್ರಗಳಿಂದ 2010 ರಿಂದ ಇದುವರೆಗೆ 199 ಮಕ್ಕಳನ್ನು ದತ್ತು ನೀಡಲಾಗಿದೆ.

ಅಪರ ಜಿಲ್ಲಾಧಿಕಾರಿ ರಾಜು ಕೆ. ಮಾತನಾಡಿ, ವಿವಿಧ ಹಾಸ್ಟೆಲ್ಗಳಲ್ಲಿರುವ ಹೆಣ್ಣುಮಕ್ಕಳ ಆರೋಗ್ಯ ತಪಾಸಣೆ ಹಾಗೂ ಕೌನ್ಸಿಲಿಂಗ್ ನಡೆಸಬೇಕು. ಲೈಂಗಿಕ ಶೋಷಣೆಯಂತಹ ದೂರುಗಳು ಕಂಡುಬಂದರೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ನ್ಯಾಯಾಧೀಶೆ ಜೈಬುನ್ನಿಸಾ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್‌ಉಪಸ್ಥಿತರಿದ್ದರು.



ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬೆಳೆ ವಿಮೆ: ನೋಂದಣಿಗೆ 30 ಕೊನೆ

ಉಡುಪಿ : ಜಿಲ್ಲೆಯಲ್ಲಿ ಅಡಿಕೆ ಮತ್ತು ಕಾಳುಮೆಣಸು ಬೆಳೆಗಳಿಗೆ ಹವಾಮಾನ ವೈಪರಿತ್ಯದಿಂದಾಗಿ ಉಂಟಾಗುವ ಬೆಳೆ ನಷ್ಟಕ್ಕೆ ಮರು ವಿನ್ಯಾಸಗೊಳಿಸಿದ ಹವಾಮಾನಾಧಾರಿತ ಬೆಳೆ ವಿಮೆ ಕಾರ್ಯಕ್ರಮದಡಿ ನೋಂದಣಿಗೆ ರೈತರಿಗೆ ಅವಕಾಶ ಕಲ್ಪಿಸಲಾಗಿದ್ದು, ಬೆಳೆ ಸಮೀಕ್ಷೆಯಲ್ಲಿ ಅಡಕೆ ಮತ್ತು ಕಾಳುಮೆಣಸು ವಿಮಾ ಮೊತ್ತವನ್ನು ಪಾವತಿಸಿ ಯೋಜನೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ನೋಂದಣಿಗೆ ಜೂ. 30 ಕೊನೆಯ ದಿನವಾಗಿದ್ದು, ರೈತರು ವಿಮಾ ಕಂತುಗಳನ್ನು ಪಾವತಿಸಲು ನಿಗದಿತ ದಾಖಲೆಗಳೊಂದಿಗೆ ಹತ್ತಿರದ ಬ್ಯಾಂಕ್, ವ್ಯವಸಾಯ ಸೇವಾ ಸಹಕಾರಿ ಸಂಘ, ಸಿ.ಎಸ್.ಸಿ. ಹಾಗೂ ಗ್ರಾಮ ಒನ್-ಸೇವಾ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ.

ಬೆಳೆ ಸಾಲ ಪಡೆಯದ ರೈತರಿಗೆ ಈ ಯೋಜನೆಯು ಐಚ್ಛಿಕವಾಗಿರುತ್ತದೆ. ಬೆಳೆ ಸಾಲ ಪಡೆದ ರೈತರು ಯೋಜನೆಯಲ್ಲಿ ಪಾಲ್ಗೊಳ್ಳದೇ ಇರಲು ಇಚ್ಛಿಸಿದಲ್ಲಿ 7 ದಿನ ಮುಂಚಿತವಾಗಿ ಮುಚ್ಚಳಿಕೆ ಪತ್ರವನ್ನು ಬೆಳೆ ಸಾಲ ಪಡೆದ ಹಣಕಾಸು ಸಂಸ್ಥೆಗೆ ನೀಡಬೇಕು.

ವಿಮೆ ಮಾಡಿಸುವ ರೈತರು ಫ್ರುಟ್ ತಂತ್ರಾಂಶದ ನೊಂದಣಿ ಸಂಖ್ಯೆಯನ್ನು ಹೊಂದಿರುವುದರೊಂದಿಗೆ ನೊಂದಣಿ ಸಂಖ್ಯೆಗೆ ಪಹಣಿ ವಿವರವನ್ನು ಜೋಡಿಸಿಕೊಳ್ಳಬೇಕು. ನೊಂದಣಿ ಸಂಖ್ಯೆ ಇಲ್ಲದ ರೈತರು ನೊಂದಣಿ ಸಂಖ್ಯೆಯನ್ನು ಮಾಡಿಕೊಂಡು ವಿಮೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ವಿಮೆ ಮಾಡಿಸಿರುವ ರೈತರಿಗೆ ವಿಮೆ ಮಾಡಲ್ಪಟ್ಟ ಬೆಳೆಗಳಿಗೆ 2026 ರ ಜುಲೈ 1 ರಿಂದ 2027 ರ ಜೂನ್ 30 ರ ವರೆಗೆ ವಿಮೆ ರಕ್ಷಣೆಯ ಅವಧಿ ಇರುತ್ತದೆ. ಈ ಅವಧಿಯಲ್ಲಿ ಹವಾಮಾನ ವೈಪರಿತ್ಯಗಳಿಂದಾಗಿ ಬೆಳೆ ನಷ್ಟ ಉಂಟಾದಲ್ಲಿ ವಿಮೆ ರಕ್ಷಣೆ ಅವಧಿಯ ನಂತರದಲ್ಲಿ ವಿಮಾ ಪರಿಹಾರ ಲೆಕ್ಕಾಚಾರ ಮುಗಿದ ಒಂದು ತಿಂಗಳಿನೊಳಗಾಗಿ ವಿಮಾ ಕಂಪೆನಿಯು ನಷ್ಟ ಪರಿಹಾರವನ್ನು ಪಾವತಿಸಲಿದೆ.

ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ವಾಣಿಜ್ಯ /ಗ್ರಾಮೀಣ ಸಹಕಾರಿ ಬ್ಯಾಂಕ್, ಹೋಬಳಿ ರೈತ ಸಂಪರ್ಕ ಕೇಂದ್ರ, ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಅಥವಾ ಜಿಲ್ಲಾ ತೋಟಗಾರಿಕೆ ಜಂಟಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಮಂಗಳವಾರ 23.06.2026 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಫಿಫಾ ವಿಶ್ವಕಪ್: 92 ವರ್ಷಗಳಲ್ಲೇ ಈಜಿಪ್ಟ್‌ಗೆ ಮೊದಲ ಗೆಲುವಿನ ಸಿಹಿ

1934ರಲ್ಲಿ ಫಿಫಾ ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ 92 ವರ್ಷಗಳ ಬಳಿಕ ಈಜಿಪ್ಟ್ ತನ್ನ ಮೊತ್ತ ಮೊದಲ ಗೆಲುವನ್ನು ದಾಖಲಿಸಿದೆ. ಸೋಮವಾರ ವ್ಯಾಂಕೋವರ್‌ನಲ್ಲಿ ನಡೆದ ಪಂದ್ಯದಲ್ಲಿ ಅದು ನ್ಯೂಜಿಲೆಂಡ್ ತಂಡವನ್ನು 3-1 ಗೋಲುಗಳ ಅಂತರದಲ್ಲಿ ಪರಾಭವಗೊಳಿಸಿ ಹೊಸ ಇತಿಹಾಸವನ್ನು ಸೃಷ್ಟಿಸಿತು.

ಸೊಂಪಾದ ಪುಟಗಳು

ಪರಿಷತ್ತಿನ ಫಲಿತಾಂಶ, ಗೆದ್ದರೂ ನಲುಗಿದ ಕಮಲ ಪಡೆ!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6



ಅಮ್ಮ ಮುಖ್ಯ, ಅಪ್ಪನೂ ಅಷ್ಟೇ ಮುಖ್ಯ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಎಲ್ಲಿಗಾದರೂ ಹೋಗಲು ಅನುಮತಿ ಕೇಳಬೇಡಿ. ರೆಕ್ಕೆಗಳು ನಿಮ್ಮದೇ ಮತ್ತು ಆಕಾಶ ಯಾರಿಗೂ ಸೇರಿದ್ದಲ್ಲ. ಸಾಧನೆ ಮಾಡಲು ಯಾರೋ ಬಂದು ದಾರಿ ತೋರಿಸಬೇಕಿಲ್ಲ. ನಿಮ್ಮಲ್ಲಿರುವ ಸಾಮರ್ಥ್ಯದ (ರೆಕ್ಕೆಗಳ) ಮೇಲೆ ನಿಮಗೆ ನಂಬಿಕೆಯಿರಲಿ. ಸಾಧನೆಯ ಮುಗಿಲಿಗೆ ಯಾವುದೇ ಮಿತಿಗಳಿಲ್ಲ.

ವಕ್ರತುಂಡೋಕ್ತಿ

'ನಾನು ತವರಿಗೆ ಹೋಗ್ತೀನಿ' ಎಂದು ಹೆಂಡತಿ ಅಂದಾಗ ತಕ್ಷಣವೇ ಬಸ್ ಚಾರ್ಜ್ ಜತೆಗೆ ಕೈತುಂಬಾ ದುಡ್ಡು ಕೈಗಿಟ್ಟು, ಕಣ್ಣೀರು ಒರೆಸಿಕೊಳ್ಳುವ ನಟನೆ ಮಾಡುವವನೇ ಬುದ್ಧಿವಂತ ಗಂಡ.

ತೀವ್ರ ಆಡಳಿತ ವಿರೋಧಿ ಅಲೆ: ಬ್ರಿಟನ್ ಪ್ರಧಾನಿ ಸ್ಟಾರ್ಮರ್ ರಾಜೀನಾಮೆ

ಲಂಡನ್: ನಿರೀಕ್ಷೆಯಂತೆ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಸೋಮವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆಡಳಿತಾರೂಢ ಲೇಬರ್ ಪಕ್ಷದೊಳಗೆ ಅವರ ನಾಯಕತ್ವದ ವಿರುದ್ಧ ದೊಡ್ಡ ಮಟ್ಟದ ಅಸಮಾಧಾನ ಸ್ಫೋಟಗೊಂಡಿತ್ತು. ಮುಂಬರುವ ಸಾರ್ವತ್ರಿಕ ಚುನಾವಣೆ ಯಲ್ಲಿ ಪಕ್ಷವನ್ನು ಮುನ್ನಡೆಸಲು ನಾನು ಸರಿಯಾದ ವ್ಯಕ್ತಿಯೇ ಎಂಬುದು ಲೇಬರ್ ಪಕ್ಷದ ನಾಯಕರ ಪ್ರಶ್ನೆಯಾಗಿತ್ತು. ಪಕ್ಷದ ನಿರ್ಧಾರವನ್ನು ನಾನು ಗೌರವದಿಂದ ಸ್ವೀಕ ರಿಸುತ್ತೇನೆ. ಇನ್ನೊಬ್ಬರು ನೇಮಕದವರೆಗೆ ಹಂಗಾಮಿ ಪ್ರಧಾನಿಯಾಗಿರುತ್ತೇನೆ ಎಂದು ಸ್ಟಾರ್ಮರ್ ಹೇಳಿದ್ದಾರೆ.

ಯುವಕನ ಕಿರುಕುಳ: ಒಂದೇ ಕುಟುಂಬದ ಮೂವರು ಆತ್ಮಹತ್ಯೆ

ಮೈಸೂರು: ಮರ್ಯಾದೆಗೆ ಹೆದರಿ ಕುಟುಂಬವೊಂದರ ಮೂವರು ಮರಣಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ ಘಟನೆ ಮೈಸೂರು ತಾಲೂಕಿನ ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಶಿವಣ್ಣ (50), ಪತ್ನಿ ನಾಗರತ್ನ (45) ಹಾಗೂ ಅವರ ಪುತ್ರಿ ರಕ್ಷಿತಾ (21) ತಮ್ಮ ಮನೆಯಲ್ಲಿ ವಿಷಸೇವಿಸಿ ಮೃತಪಟ್ಟಿದ್ದಾರೆ. ಶಿವಣ್ಣ ಅವರ ಮಗಳು ರಕ್ಷಿತಾಗೆ ಮದುವೆ ನಿಶ್ಚಯ ಆಗಿತ್ತು. ನಿಶ್ಚಿತಾರ್ಥದಲ್ಲಿ ಸಂಭ್ರಮದಿಂದ ಓಡಾಡಿದ್ದ ಉಲ್ಲಾಸ್ ಎಂಬಾತ ಕೆಲ ದಿನಗಳ ಹಿಂದೆ ರಕ್ಷಿತಾಳನ್ನು ಮದುವೆ ಮಾಡಿಕೊಳ್ಳುವ ಬಯಕೆ ವ್ಯಕ್ತಪಡಿಸಿದ್ದನು. ಅದಕ್ಕೆ ಒಪ್ಪಿಗೆ ಸಿಗದಿದ್ದಾಗ ಆಕೆ ಕಳುಹಿಸಿದ್ದ ಸಂದೇಶ, ಚಿತ್ರಗಳನ್ನು ಹುಡುಗನಿಗೆ ಕಳುಹಿಸಿದ್ದಾನೆ ಎನ್ನಲಾಗಿದೆ. ಇದಕ್ಕೆ ಬೆದರಿ ರಕ್ಷಿತಾ ಕುಟುಂಬಸ್ಥರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

100% ಅಟ್ಟಾ (ಹಿಟ್ಟು) ಎಂದು ಗ್ರಾಹಕರಿಗೆ ಮೋಸ. 2 ಪ್ರಮುಖ ಬ್ರ್ಯಾಂಡ್‌ಗಳ ಮೇಲೆ ಎಚ್ಚರಿಕೆ ನೀಡಿದ ಕೇಂದ್ರ ಸರ್ಕಾರ. ಸುದ್ದಿ



ಬಿಡದಿ ಟೌನ್‌ಶಿಪ್: ಮಾಜಿ ಸಿಎಂ ಆಹ್ವಾನ ಸ್ವೀಕರಿಸಿದ ಹಾಲಿ ಸಿಎಂ

ಜೂ.26ಕ್ಕೆ ವಿಧಾನಸೌಧದ ಕಚೇರಿಯಲ್ಲಿ ಚರ್ಚೆಗೆ ಡಿಕೆಶಿ ಆಹ್ವಾನ

ಜೂ.27ಕ್ಕೆ ಬಿಡದಿಯಲ್ಲಿ ಬಹಿರಂಗ ಚರ್ಚೆ ಮಾಡೋಣ: ಎಚ್‌ಡಿಕೆ

ಶಿವಕುಮಾರ ಪಂಥಾಹ್ವಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಡದಿ ಟೌನ್‌ಶಿಪ್ ಅನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಅಸ್ತಿತ್ವದ ಪ್ರಶ್ನೆಯನ್ನಾಗಿ ತೆಗೆದುಕೊಂಡಂತೆ ಕಾಣುತ್ತಿದೆ. ಈ ಸಂಬಂಧ ಚರ್ಚೆಗೆ ವಿಧಾನಸೌಧಕ್ಕೆ ಬನ್ನಿ ಎಂದು ಸಿಎಂ ಡಿ.ಕೆ.ಶಿವಕುಮಾರ್ ಜೆಡಿಎಸ್‌ಗೆ ಪಂಥಾಹ್ವಾನ ನೀಡಿದ್ದರೆ, ಬಾಧಿತ ಪ್ರದೇಶಕ್ಕೆ ಬಂದು ಚರ್ಚೆ ಮಾಡಿ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಸವಾಲು ಹಾಕಿದ್ದಾರೆ. ರಾಜ್ಯದ ರಾಜಕೀಯ ಇತಿಹಾಸದಲ್ಲೇ ಇದು ಹೊಸ ನಡೆಯಾಗಿದೆ.

ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ರಾಜ್ಯದ ಹಾಲಿ ಮುಖ್ಯಮಂತ್ರಿ 2007ರಲ್ಲಿ ವಿಧಾನಸಭೆ ಕಲಾಪದಲ್ಲಿ ಹೇಳಿದ್ದ ಮಾತುಗಳನ್ನು ಒಮ್ಮೆ ನೆನಪು ಮಾಡಿಕೊಳ್ಳಲಿ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಇದಾದ ಕೆಲ ಗಂಟೆಗಳಲ್ಲೇ ತಾವು ಪ್ರಾರಂಭಿಸಿದ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ತಮ್ಮ ಜೊತೆ ಚರ್ಚಿಸಲು ಉತ್ಸುಕನಾಗಿದ್ದೇನೆ. ಜೂ.26ರಂದು ವಿಧಾನಸೌಧಕ್ಕೆ ಬೆ.11 ಗಂಟೆಗೆ ತಾವು ಮತ್ತು ತಮ್ಮ ತಂಡದ ಐದು ಪ್ರತಿನಿಧಿಗಳು ಬನ್ನಿ ಎಂದು ಸಿಎಂ ಡಿ.ಕೆ.ಶಿವಕುಮಾರ್ ಆಹ್ವಾನಿಸಿದ್ದಾರೆ. ಇದು ಮತ್ತೊಂದು ಸುತ್ತಿನ ರಾಜಕೀಯ ಕದನಕ್ಕೆ ಕಾರಣವಾಗಲಿದೆ.

ರಾಜ್ಯದ ರಾಜಕೀಯ ಇತಿಹಾಸದಲ್ಲಿ ಯಾವುದೇ ಯೋಜನೆ, ಆರೋಪ ಪ್ರತ್ಯಾರೋಪ ಹಾಗೂ ಇತರೆ ಟೀಕೆ ಟಿಪ್ಪಣಿಗಳಿಗೆ ನೇರವಾಗಿ ಚರ್ಚೆಗೆ ಆಹ್ವಾನ ನೀಡಿರುವ ನಿದರ್ಶನಗಳು ಇಲ್ಲ. ಮಾಧ್ಯಮಗಳ ಮೂಲಕ ರಾಜಕಾರಣಿಗಳು ಉತ್ತರ ನೀಡುತ್ತಿದ್ದರೇ ವಿನಃ, ಈ ರೀತಿ ಮುಖಾಮುಖಿಯಾದ ಉದಾಹರಣೆ ಇಲ್ಲ. ಹೀಗಾಗಿ ಸಿಎಂ ಅವರ ಆಹ್ವಾನವನ್ನು ಮಾಜಿ ಸಿಎಂ ಭಾಗಶಃ ಸ್ವೀಕರಿಸಿದ್ದರೂ, ಈ ಚರ್ಚೆಯನ್ನು ಬಿಡದಿ ಇಲ್ಲವೇ ಬೈಲಮಂಗಲ ವ್ಯಾಪ್ತಿಯ ಯಾವುದೇ ಸೂಕ್ತ ಸಾರ್ವಜನಿಕ ಸ್ಥಳದಲ್ಲಿ ಕರೆಯುವುದು ಸಮಂಜಸ. ಜೂ.26ರಂದು ನಿಗದಿತ ಕಾರ್ಯಕ್ರಮ ಇರುವುದರಿಂದ, ಉದ್ದೇಶಿತ ಸಭೆಯನ್ನು ಜೂ.27ಕ್ಕೆ ಬಿಡದಿ ವ್ಯಾಪ್ತಿಯಲ್ಲಿ ಚರ್ಚಿಸಲು ಸಿದ್ದ ಎಂದಿದ್ದಾರೆ. ಚರ್ಚೆಗೆ ಸಿದ್ಧವಿದ್ದರೂ ಮುಖಾಮುಖಿಯಾಗುವರೇ, ಹೀಗೆಯೇ ಕಾಲಹರಣವಾಗಲಿದೆಯೇ ಎಂಬುದನ್ನು ನೋಡಬೇಕಾಗಿದೆ.

ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ತಮ್ಮ ಜೊತೆ ಚರ್ಚಿಸಲು ಉತ್ಸುಕನಾಗಿದ್ದೇನೆ. ಜೂ.26ರಂದು ವಿಧಾನಸೌಧಕ್ಕೆ ಬೆಳಗ್ಗೆ 11 ಗಂಟೆಗೆ ತಾವು ಮತ್ತು ತಮ್ಮ ತಂಡದ ಐದು ಪ್ರತಿನಿಧಿಗಳು ಚರ್ಚೆಗೆ ಬರಬೇಕೆಂದು ಆಹ್ವಾನಿಸುತ್ತೇನೆ.
-ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

VS

ಜೂ.26ಕ್ಕೆ ನಿಗದಿತ ಕಾರ್ಯಕ್ರಮವಿದೆ. ಜೂ.27ಕ್ಕೆ ಬಿಡದಿ ಆಸುಪಾಸು ಸಾರ್ವಜನಿಕವಾಗಿ ಈ ಚರ್ಚೆಯನ್ನು ಕರೆಯುವುದು ಸಮಂಜಸ. ಬನ್ನಿ ಭೈರಮಂಗಲದ ಪ್ರತಿಭಟನಾ ಸ್ಥಳಕ್ಕೆ. ಅಲ್ಲಿ ಕೂತಿರುವವರು ಅಸಲಿ ರೈತರೋ, ನಕಲಿಯೋ ತಿಳಿಯುತ್ತದೆ.
-ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ

ಉತ್ತರ ನೀಡುವೆ ಎಂದಿದ್ದ ಸಿಎಂ: ಇದಕ್ಕೂ ಮುನ್ನ ವಿಧಾನಸೌಧದಲ್ಲಿ ಮಾತನಾಡಿದ ಸಿಎಂ ಡಿ.ಕೆ.ಶಿವಕುಮಾರ್, ಬಿಡದಿ ಟೌನ್‌ಶಿಪ್ ವಿಚಾರವಾಗಿ ಎಚ್.ಡಿ.ಕುಮಾರಸ್ವಾಮಿ ಪರವಾಗಿ ಜೆಡಿಎಸ್‌ನವರು ಅಧಿವೇಶನದಲ್ಲಿ ಚರ್ಚೆ ಮಾಡಲಿ, ಉತ್ತರ ಕೊಡೋಣ ಎಂದಿದ್ದರು. ಅಲ್ಲದೇ, ಈಗ ಏನನ್ನೂ ಮಾತನಾಡುವುದಿಲ್ಲ. ಹಿಂದೆಯೇ ಚರ್ಚೆಗೆ ಕರೆದಿದ್ದೆ. ಅದರೆ ಬರಲಿಲ್ಲ. ಮುಂದಿನ ಅಧಿವೇಶನದಲ್ಲಿ ಅವರ ಪಕ್ಷದ, ಇತರ ಅನುಭವಿ ರಾಜಕಾರಣಿಗಳ ಮೂಲಕ ಚರ್ಚೆ ಮಾಡಿಸಲಿ. ಕುಮಾರಸ್ವಾಮಿ ದಾಖಲೆ ಬಿಡುಗಡೆ ಮಾಡಿದ್ದರೆ ಅವರಿಗೆ ಶುಭವಾಗಲಿ ಎಂದಿದ್ದರು.

→ 4

ಏಟು-ಎದಿರೇಟು

- ಶಿವಕುಮಾರ್‌ರಿಂದ ಎಚ್‌ಡಿಕೆಗೆ ಚರ್ಚೆಗೆ ಆಹ್ವಾನ. ರಾಜ್ಯದ ರಾಜಕೀಯ ಇತಿಹಾಸದಲ್ಲೇ ಮೊದಲ ಉದಾಹರಣೆ. ಯೋಜನೆ, ಆರೋಪಗಳಿಗೆ ನೇರವಾಗಿ ಚರ್ಚೆಗೆ ಆಹ್ವಾನಿಸಿದ ಹಿಂದಿನ ಇತಿಹಾಸ ಇಲ್ಲ.
- ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ಹಾಲಿ ಮುಖ್ಯಮಂತ್ರಿ 2007ರಲ್ಲಿ ವಿಧಾನಸಭೆ ಕಲಾಪದಲ್ಲಿ ಹೇಳಿದ್ದ ಮಾತುಗಳನ್ನು ಒಮ್ಮೆ ನೆನಪು ಮಾಡಿಕೊಳ್ಳಲಿ ಎಂದು ತಿವಿದಿದ್ದ ಕೇಂದ್ರ ಸಚಿವ ಕುಮಾರಸ್ವಾಮಿ
- ಇದಾದ ಕೆಲ ಗಂಟೆಗಳಲ್ಲೇ ತಾವು ಪ್ರಾರಂಭಿಸಿದ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ಜೂ.26ಕ್ಕೆ ವಿಧಾನಸೌಧದಲ್ಲೇ ಚರ್ಚಿಸಲು ಸಿದ್ದ, ಬನ್ನಿ ಎಂದು ಎಚ್‌ಡಿಕೆಗೆ ಶಿವಕುಮಾರ್ ಆಹ್ವಾನ.
- ಜೂ.26ಕ್ಕೆ ಬೇಡ, ಉದ್ದೇಶಿತ ಸಭೆಯನ್ನು ಜೂ.27ಕ್ಕೆ ಬಿಡದಿ ವ್ಯಾಪ್ತಿಯಲ್ಲಿ ಚರ್ಚಿಸೋಣ, ಭೈರಮಂಗಲದಲ್ಲಿ 500 ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ರೈತರೆದುರು ಬನ್ನಿ: ಎಚ್‌ಡಿಕೆ ಸವಾಲು

ಪರಿಷತ್ ಅಡ್ಡಮತ: ದಿಲ್ಲಿಯಲ್ಲಿ ವಿಜಯೇಂದ್ರ, ಅಶೋಕ್ ಆಣೆಪ್ರಮಾಣದ ಬಗ್ಗೆ ಮುಂದುವರಿದ ಪರ-ವಿರೋಧ ಚರ್ಚೆ

ಅಡ್ನಾಡಿಗಳ ಬಗ್ಗೆ ಬಿಜೆಪಿ ದಿಲ್ಲಿ ವರಿಷ್ಠರಿಗೆ ವಿವರಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನಕ್ಕೆ ಕಂಗೆಟ್ಟಿರುವ ಬಿಜೆಪಿಯಲ್ಲಿ ಆಂತರಿಕ ಭಿನ್ನಮತ ಸ್ಫೋಟಗೊಂಡಿದೆ. ಆಣೆಪ್ರಮಾಣದ ಹೇಳಿಕೆಯ ನಂತರ ಕೇಂದ್ರ ವರಿಷ್ಠರ ಕೆಂಗಣ್ಣಿಗೆ ಗುರಿಯಾಗಿರುವ ರಾಜ್ಯ ನಾಯಕರು ವರದಿ ಒಪ್ಪಿಸಲು, ಇಲ್ಲವೇ ತಲೆದಂಡಕ್ಕೆ ಸಿದ್ಧರಾಗಬೇಕಾದ ಪರಿಸ್ಥಿತಿ ಬಂದೊದಗಿದೆ. ಇದೇ ವೇಳೆ ರಾತ್ರಿ ಅಪಾರ್ಟ್‌ಮೆಂಟ್‌ನ ರಹಸ್ಯ ಕಾರ್ಯಾಚರಣೆಯ ಬಗ್ಗೆ ಹೇಳಿದ್ದರೂ, ಪಕ್ಷದ ಮುಖಂಡರು ಹೊಂದಾಣಿಕೆ ಮಾಡಿಕೊಂಡಿರುವ ವಿಚಾರವೂ ಮುನ್ನೆಲೆಗೆ ಬಂದಿದೆ.

ಪಕ್ಷದ ವರಿಷ್ಠರ ಜತೆ ಚರ್ಚಿಸುವ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಶಾಸಕಾಂಗ ಪಕ್ಷದ ನಾಯಕ ಆರ್.ಅಶೋಕ ದೆಹಲಿಗೆ ತೆರಳಿದ್ದು, ಮಂಗಳವಾರ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸೇರಿ ಇತರ ವರಿಷ್ಠರನ್ನು ಭೇಟಿ ಮಾಡಿ ಅಡ್ಡ ಮತದಾನದ ಬೆಳವಣಿಗೆಗಳ ಬಗ್ಗೆ ವಿವರಣೆ ನೀಡಲಿದ್ದಾರೆ.

ಪ್ರತ್ಯೇಕವಾಗಿ ದೆಹಲಿಗೆ ಪ್ರಯಾಣ: ಸೋಮವಾರ ಬೆಳಗ್ಗೆ ವಿಜಯೇಂದ್ರ ಮತ್ತು ಅಶೋಕ್ ಅವರು ಪ್ರತ್ಯೇಕವಾಗಿ ದೆಹಲಿಗೆ ಪ್ರಯಾಣಿಸಿದ್ದಾರೆ. ಮಂಗಳವಾರ ಇಡೀ ದಿನ ವಿವಿಧ ನಾಯಕರ ಭೇಟಿ ಮಾಡುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ವಿಜಯೇಂದ್ರ ಅವರು ಲಿಖಿತ ವಿವರಣೆ ಸಿದ್ಧಪಡಿಸಿಕೊಂಡಿದ್ದು, ವರಿಷ್ಠರಿಗೆ ಸಲ್ಲಿಸಲಿದ್ದಾರೆ ಅನ್ನಲಾಗಿದೆ. ಅಡ್ಡಮತದಾನದ ಬೆಳವಣಿಗೆಯನ್ನು ಬಿಜೆಪಿ ವರಿಷ್ಠರು ಗಂಭೀರವಾಗಿ ತೆಗೆದುಕೊಂಡಿದ್ದು, ಯಾರು ಪಕ್ಷದ ಬೇಲಿ ಹಾರಿದ್ದಾರೋ ಭವಿಷ್ಯದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಆಗಬೇಕು ಎಂಬ ನಿಲುವು ಹೊಂದಿದ್ದಾರೆ.

→ 4

ಚುನಾವಣೆಯಲ್ಲಿ ಕಾಂಗ್ರೆಸ್ ಕುದುರೆ ವ್ಯಾಪಾರ ನಡೆಸಿದ್ದನ್ನು, ಹಣದ ಹೊಳೆ ಹರಿಸಿರುವುದನ್ನು ತಿಳಿಸುತ್ತೇವೆ. ಕೇಂದ್ರ ನಾಯಕರ ಜೊತೆಗೆ ಗಂಭೀರವಾಗಿ ಚರ್ಚೆ ಮಾಡಿ ಕ್ರಮಕ್ಕೆ ಆಗ್ರಹಿಸುತ್ತೇವೆ. ಅಡ್ಡಮತದಾನ ಮಾಡಿದವರು ಈ ಜನ್ಮದಲ್ಲಿ ಚುನಾವಣೆಗೆ ನಿಲ್ಲಬಾರದು ಹಾಗೆ ಮಾಡುತ್ತೇವೆ.
-ಅರ್.ಅಶೋಕ, ಪ್ರತಿಪಕ್ಷ ನಾಯಕ

ನಮ್ಮ ಶಾಸಕನೂ ಮಾರಾಟ: ಕ್ಷೇತ್ರಗಳಲ್ಲಿ ಜನರ ಅಪಹಾಸ್ಯ

ಪಕ್ಷಕ್ಕೆ ಎಷ್ಟೇ ನಿಷ್ಠರಾಗಿದ್ದರೂ ಕೂಡ ಬಿಜೆಪಿ ಶಾಸಕರಿಗೆ ಈಗ ನೆಮ್ಮದಿ ಇಲ್ಲದಂತಾಗಿದೆ. ಕಟ್ಟಾ ಬಿಜೆಪಿಗರಿಗೂ ಈಗ ಅವರವರ ಕ್ಷೇತ್ರದಲ್ಲೇ ಕಾರ್ಯಕರ್ತರಾದಿಯಾಗಿ ಸಾಮಾಜಿಕ ಜಾಲತಾಣದಲ್ಲಿ ನಮ್ಮವನೂ ಮಾರಾಟವಾಗಿದ್ದಾನೆ ಎಂಬ ಮಾತುಗಳು ನಿರಂತರವಾಗಿ ಕೇಳಿ ಬರುತ್ತಿದೆ. ಇನ್ನು ಕರಾವಳಿ ಭಾಗದ ಇಬ್ಬರು ಶಾಸಕರು, ಮೈಸೂರು ಭಾಗದ ಶಾಸಕರು, ಉತ್ತರ ಕರ್ನಾಟಕದ ಮೂವರು ಶಾಸಕರು ಸ್ಥಳೀಯವಾಗಿ ಮುಖ ಎತ್ತಿಕೊಂಡು ಓಡಾಡದಂತಹ ಪರಿಸ್ಥಿತಿ ಇದೆ. ಅನುಮಾನದಿಂದಲೇ ನೋಡುವಂತಾಗಿದೆ.

'ಅಡ್ಡದ' ಮಾಹಿತಿ ನೀಡಿದ್ದರೂ ಬಿಜೆಪಿ ಉದಾಸೀನ: ಡಿವಿಎಸ್

ಅಡ್ಡಮತದಾನದ ವಿಚಾರಕ್ಕೆ ಸಂಬಂಧಿಸಿದಂತೆ ಹೆಬ್ಬಾಳದ ಪ್ರೆಸ್ಟೀಜ್‌ಅಪಾರ್ಟ್‌ಮೆಂಟ್‌ನಲ್ಲಿ ರಹಸ್ಯ ಸಭೆ ನಡೆಸಲಾಗಿದೆ ಎಂದು ಮಾಜಿ ಸಿಎಂ ಸದಾನಂದ ಗೌಡ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಅಲ್ಲದೇ ಪಕ್ಷದ ರಾಜ್ಯ ನಾಯಕರ ಉದಾಸೀನ ತೆಯೇ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಗೆಲುವಿಗೆ ಪ್ರಮುಖ ಕಾರಣ ಎಂದು ಚಾಟಿ ಬೀಸಿದ್ದಾರೆ. ಜೂನ್ 13ರಂದು ನನಗೆ ಹೆಬ್ಬಾಳದ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಿಂದ ಒಂದು ಕರೆ ಬಂದಿತ್ತು. ಅದನ್ನು ಯಾವುದೇ ಬಿಜೆಪಿ ನಾಯಕರೂ ಗಂಭೀರವಾಗಿ ಸ್ವೀಕರಿಸಿಲ್ಲ ಎಂದಿದ್ದಾರೆ.

ಶೇ.33ರಿಂದ 44ರಷ್ಟು ಏರಿಸಿ: ಕೆಸ್ಸಾರ್ಟಿಸಿ, ಬಿಎಂಟಿಸಿ

ಸದ್ಯವೇ ಬಸ್ ಪ್ರಯಾಣ ದರ ಏರುವುದು ಖಚಿತ

ಬೆಂಗಳೂರು: ದರ ಏರಿಕೆಯ ಬಿಸಿಯಲ್ಲಿರುವ ರಾಜ್ಯದ ಜನರಿಗೆ ಇದೀಗ ಸಾರಿಗೆ ಬಸ್ ದರ ಏರಿಕೆಯ ಬಿಸಿ ತಟ್ಟುವುದು ಬಹುತೇಕ ನಿಶ್ಚಿತ ಎನ್ನಲಾಗಿದೆ.

ಪಶ್ಚಿಮ ಏಷ್ಯಾದ ಯುದ್ಧದ ಕಾರಣಕ್ಕೆ ಡಿಸೇಲ್ ದರದಲ್ಲಿ ಭಾರಿ ಏರಿಕೆಯಾಗಿರು ವುದರಿಂದ, ಸಾರಿಗೆ ನಿಗಮಗಳು ಭಾರಿ ಆರ್ಥಿಕ ಹೊರೆ ಅನುಭವಿಸುತ್ತಿವೆ. ಇದಕ್ಕೆ ಪೂರಕವಾಗಿ ಸಚಿವ ಸಂಪುಟ ಸಭೆ ಯ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿಯೂ ಮಾತನಾಡಿದ್ದ ಸಿಎಂ ಡಿ.ಕೆ.ಶಿವಕುಮಾರ್, 'ಕೆಎಸ್‌ಆರ್‌ಟಿಸಿಯೂ ಉಳಿಯಬೇಕು, ಸಾರ್ವಜನಿಕರಿಗೂ ಹೊರೆ ಯಾಗಬಾರದು' ಆ ನಿಟ್ಟಿನಲ್ಲಿ ಕ್ರಮ ವಹಿಸುತ್ತೇವೆ ಎಂದಿದ್ದರು. ಇದಕ್ಕೆ ಪೂರಕವಾಗಿ, ಕೆಎಸ್‌ಆರ್‌ಟಿಸಿ ಟಿಕೆಟ್ ದರ ಶೇ.33 ರಷ್ಟು ಹಾಗೂ ಬಿಎಂಟಿಸಿ ಟಿಕೆಟ್ ದರವನ್ನು ಶೇ. 44ರಷ್ಟು ಏರಿಕೆ ಮಾಡುವಂತೆ ಸರಕಾರಕ್ಕೆ ಅಧಿಕೃತವಾಗಿ ಪ್ರಸ್ತಾವನೆ ಸಲ್ಲಿಸಿವೆ.

ತೀವ್ರ ಆರ್ಥಿಕ ನಷ್ಟ ಹಾಗೂ ಡೀಸೆಲ್ ದರ ಏರಿಕೆಯಿಂದ ರಾಜ್ಯ ಸಾರಿಗೆ ಸಂಸ್ಥೆ ನಷ್ಟ ಅನುಭವಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕೆಎಸ್ಸಾರ್ಟಿಸಿ ಯಿಂದ ನಾಲ್ಕು ನಿಗಮಗಳು ಹಾಗೂ ಬಿಎಂಟಿಸಿ ಟಿಕೆಟ್ ದರ ಏರಿಕೆ ಮಾಡುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪ್ರಸ್ತಾವನೆ ಸಲ್ಲಿಸಿದೆ.

ದರ ಏರಿಕೆಗೆ ಕಾರಣ

- ಡೀಸೆಲ್,ಆಯಿಲ್ ಮತ್ತು ಬಸ್ ಬಿಡಿಭಾಗಗಳ ದರ ಏರಿಕೆಯಿಂದ ನಿಗಮಗಳಿಗೆ ಹೊರೆ ಹೆಚ್ಚಾಗಿದೆ
- ಪ್ರತಿನಿತ್ಯ ನಾಲ್ಕೂ ನಿಗಮಗಳ ಬಸ್‌ಗಳಿಗೆ 13 ಲಕ್ಷ ಲೀಟರ್‌ಗೂ ಹೆಚ್ಚು ಡೀಸೆಲ್ ಬಳಕೆಯಾಗುತ್ತಿದೆ.
- ಇಂಧನ ದರ ಏರಿಕೆಯೊಂದರಿಂದಲೇ ಸಾರಿಗೆ ನಿಗಮಕ್ಕೆ ಮಾಸಿಕ 40 ಕೋಟಿ ರುಪಾಯಿ ಹೊರೆಯಾಗುತ್ತಿದೆ.
- ಸಾರಿಗೆ ನೌಕರರ ವೇತನ ಪರಿಷ್ಕರಣೆಯಿಂದ ನಿಗಮಗಳ ಮೇಲಿನ ಆರ್ಥಿಕ ಹೊರೆ ದುಪ್ಪಟ್ಟಾಗಿದೆ.

ರಾಜ್ಯ ಸರಕಾರ ಈ ಹಿಂದೆ 2025ರ ಜನವರಿ 5ರಿಂದ ಜಾರಿಗೆ ಬರುವಂತೆ ಸರಕಾರಿ ಬಸ್‌ಗಳ ಟಿಕೆಟ್ ದರವನ್ನು ಶೇ. 15ರಷ್ಟು ಹೆಚ್ಚಳ ಮಾಡಿ ಆದೇಶ ಹೊರಡಿಸಿತ್ತು. ಈಗ ಸಾರಿಗೆ ಸಂಸ್ಥೆಗಳು ಮತ್ತೊಮ್ಮೆ ದರ ಪರಿಷ್ಕರಣೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿವೆ. ಕ್ರಮ ಕೈಗೊಳ್ಳದಿದ್ದರೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿವೆ ಎಂದು ಎಚ್ಚರಿಸಿವೆ.

ಮಾವಿಗೆ 'ಬೆಲೆ ಕೊಡಿ': ಸಿಡಿದ ಕೋಲಾರ ರೈತರು

ರಾಜ್ಯ ಸರಕಾರವು ಮಾವಿಗೆ ಸೂಕ್ತವಾದ ಬೆಂಬಲ ಬೆಲೆ ಘೋಷಣೆ ಮಾಡುವಂತೆ ಒತ್ತಾಯಿಸಿ ಸೋಮವಾರ ಜೆಡಿಎಸ್ ಪಕ್ಷ ಮತ್ತು ರೈತ ಸಂಘದ ನೇತೃತ್ವದಲ್ಲಿ ಕೋಲಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ಮಾವಿನ ಕಾಯಿಗಳನ್ನು ರಸ್ತೆಗೆ ಸುರಿಯಲಾಯಿತು.

ಅಂಕೇಗೌಡರಿಗೆ 5 ಕೋಟಿ., 2 ಎಕರೆ ಜಾಗ

ಬೆಂಗಳೂರು: 2026ನೇ ಸಾಲಿನ ಪದ್ಮಶ್ರೀ ಪುರಸ್ಕೃತ, ಕನ್ನಡಿಗ ಮಂಡ್ಯದ ಅಂಕೇಗೌಡರ ಕನಸಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಂದಿಸಿದ್ದಾರೆ. ಅಂಕೇಗೌಡರು ಸಂಗ್ರಹಿಸಿ ರುವ ಅಪರೂಪದ 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳ ರಕ್ಷಣೆ ಹಾಗೂ ಹೈಟೆಕ್ ಗ್ರಂಥಾಲಯ ನಿರ್ಮಾಣಕ್ಕಾಗಿ ಸರ್ಕಾರದ ವತಿಯಿಂದ 5 ಕೋಟಿ ರುಪಾಯಿ ಅನುದಾನ ಮತ್ತು 2 ಎಕರೆ ಜಮೀನು ನೀಡಲು ಶಿವಕುಮಾರ್ ಸೋಮವಾರ ಮಹತ್ವದ ಆದೇಶ ಹೊರಡಿಸಿದ್ದಾರೆ. ವಿಧಾನಸೌಧದಲ್ಲಿರುವ ಮುಖ್ಯ ಮಂತ್ರಿಗಳ ಕಚೇರಿಯಲ್ಲಿ ಪದ್ಮಶ್ರೀ ಪುರಸ್ಕೃತ ಅಂಕೇಗೌಡರು, ಶಿವಕುಮಾರ್‌ರನ್ನು ಸೌಜನ್ಯದ ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಅಂಕೇಗೌ ಡರು ತಮ್ಮ ಪುಸ್ತಕ ಮನೆಯ ಇತಿಹಾಸ ಹಾಗೂ ಅಲ್ಲಿರುವ ಲಕ್ಷಾಂತರ ಜ್ಞಾನದ ಭಂಡಾರವನ್ನು ಸಂರಕ್ಷಿಸಲು ಎದುರಿಸುತ್ತಿರುವ ಸವಾಲುಗಳನ್ನು ಮುಖ್ಯಮಂತ್ರಿಗಳ ಮುಂದೆ ವಿವರಿಸಿದರು.

ಉ.ಪ್ರ.ದ ಲಖನೌದಲ್ಲಿ ಭೀಕರ ಅಗ್ನಿ ಅವಘಡ ಪಾರಾಗಲು ಮೇಲಿಂದ ಜಿಗಿದ ವಿದ್ಯಾರ್ಥಿಗಳು

ಕೋಚಿಂಗ್ ಕೇಂದ್ರಕ್ಕೆ ಬೆಂಕಿ: 15 ವಿದ್ಯಾರ್ಥಿಗಳು ಆಹುತಿ

ಲಖನೌ: ಉತ್ತರಪ್ರದೇಶದ ವಾಯುವ್ಯ ಲಖನೌದ ಅಲಿಗಂಜ್ ಪ್ರದೇಶದಲ್ಲಿರುವ ತರಬೇತಿ ಕೇಂದ್ರವಿದ್ದ ಕಟ್ಟಡಕ್ಕೆ ಸೋಮವಾರ ಬೆಂಕಿ ಹತ್ತಿ ಉರಿದಿದೆ. ಭಾರೀ ಬೆಂಕಿ ಅವಘಡದಲ್ಲಿ ಕನಿಷ್ಠ 15 ಜನರು ಸಾವನ್ನಪ್ಪಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ದುರಂತ ಸಂಭವಿಸಿದ್ದು, ಕಟ್ಟಡದಲ್ಲಿ ಹಲವರು ಸಿಲುಕಿಕೊಂಡಿದ್ದರು. ಕೆಲವು ವಿದ್ಯಾರ್ಥಿಗಳು ಪ್ರಾಣ ರಕ್ಷಣೆಗಾಗಿ ಮೊದಲ ಮಹಡಿಯಿಂದ ಜಿಗಿದ ದೃಶ್ಯದ ವಿಡಿಯೋಗಳು ಸಾಮಾಜಿಕ ತಾಣಗಳಲ್ಲಿ ವೈರಲ್ ಆಗಿವೆ. ಘಟನೆಗೆ ಪ್ರಧಾನಿ ನರೇಂದ್ರ ಮೋದಿ ವಿಷಾದ ವ್ಯಕ್ತಪಡಿಸಿ 2 ಲಕ್ಷ ರು., ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮೃತಪಟ್ಟವರ ಕುಟುಂಬಕ್ಕೆ 5 ಲಕ್ಷ ರು., ಗಾಯಗೊಂಡವರಿಗೆ 50000 ರು. ಪರಿಹಾರ ಘೋಷಿಸಿದ್ದಾರೆ.

ಬೆಂಕಿಯ ಕೆನ್ನಾಲಿಗೆ ಆವರಿಸಿದ್ದ ಕಟ್ಟಡದಿಂದ ಹುಡುಗನೊಬ್ಬ ಕೆಳಕ್ಕೆ ಜಿಗಿಯುತ್ತಾನೆ. ಗೇಟ್‌ಗೆ ಬಡಿದು ನೆಲಕ್ಕೆ ಅಪ್ಪಳಿಸುತ್ತಾನೆ. ಅಲ್ಲೇ ನೆರೆದಿದ್ದ ಕೆಲವರು ಆತನಿಗೆ ಸಹಾಯ ಮಾಡಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುತ್ತಾರೆ. ಹುಡುಗನಿಗೆ ಗಾಯಗಳಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾನೆ. ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ. ಉಪಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಕೂಡ ಸ್ಥಳಕ್ಕೆ ಭೇಟಿ ನೀಡಿ ರಕ್ಷಣಾ ಕಾರ್ಯಗಳ ಮೇಲ್ವಿಚಾರಣೆ ನಡೆಸಿದ್ದಾರೆ.

ಆ.21ರವರೆಗೆ ಇರಾನ್ ತೈಲಕ್ಕೆ ಅಮೆರಿಕ ನಿರ್ಬಂಧ ಇಲ್ಲ ಸಂಘರ್ಷ ಪರಿಹಾರ ಘಟಕಕ್ಕೆ ಅಮೆರಿಕ-ಇರಾನ್ ಒಪ್ಪಿಗೆ

ಆಕ್ರೋಶದ ನಡುವೆಯೇ ಮತ್ತೆ ಹಳಿಗೆ ಬಂದ ಶಾಂತಿ ಮಾತುಕತೆ

ಜಿನೀವಾ: ಇರಾನ್ ಮತ್ತೆ ಹೊರ್ಮುಜ್ ಬಂದ್, ಆ ರಾಷ್ಟ್ರದ ಅಸ್ತಿತ್ವವನ್ನೇ ಇಲ್ಲ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಬೆದರಿಕೆ ಹಾಕಿದ ಬೆನ್ನಲ್ಲೇ, ಇರಾನ್ ಸಿಟ್ಟಾಗಿತ್ತು. ಇರಾನ್ ಪ್ರತಿನಿಧಿಗಳು ಜಿನೀವಾ ಶಾಂತಿಸಭೆಯಿಂದ ಹೊರನಡೆದಿದ್ದರು. ಸೋಮವಾರ ಮತ್ತೆ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ. ಆ.21ರವರೆಗೆ ಅಮೆರಿಕ ಇರಾನ್ ತೈಲದ ಮೇಲಿನ ನಿರ್ಬಂಧಗಳನ್ನು ಸಡಿಲಿಸಿದೆ. ಇರಾನಿನ ಕಚ್ಚಾ ತೈಲ ಉತ್ಪಾದನೆ, ಮಾರಾಟ ಮತ್ತು ವಿತರಣೆಯ ಮೇಲಿನ ನಿರ್ಬಂಧಗಳನ್ನು ಸಡಿಲಗೊಳಿಸಿದೆ.

ಮಧ್ಯಪ್ರಾಚ್ಯದಲ್ಲಿ ತಿಂಗಳುಗಳ ಕಾಲ ಮುಂದುವರಿದ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸ್ವಿಜರ್ಲೆಂಡ್‌ನಲ್ಲಿ ನಡೆದ ಅಮೆರಿಕ-ಇರಾನ್ ಉನ್ನತ ಮಟ್ಟದ ಮಾತುಕತೆಗಳಲ್ಲಿ ಮಹತ್ವದ ಪ್ರಗತಿ ಸಾಧಿಸಲಾಗಿದೆ. ಲೆಬನಾನ್‌ನಲ್ಲಿ ನಡೆಯುತ್ತಿರುವ ಸಂಘರ್ಷವನ್ನು ನಿಯಂತ್ರಿಸಲು ಮತ್ತು ಕದನ ವಿರಾಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ವಿಶೇಷ ಸಂಘರ್ಷ ಪರಿಹಾರ ಘಟಕ ಸ್ಥಾಪಿಸಲು ಉಭಯ ದೇಶಗಳು ಒಪ್ಪಿಕೊಂಡಿವೆ.

ಪಾಕಿಸ್ತಾನ ಮತ್ತು ಕತಾರ್ ಮಧ್ಯಸ್ಥಿಕೆಯಲ್ಲಿ ನಡೆದ ಈ ಮಾತುಕತೆಯ ಮೊದಲ ಸುತ್ತು ಸೋಮವಾರ ಮುಕ್ತಾಯಗೊಂಡಿದೆ. ಮುಂದಿನ ಕೆಲವು ದಿನಗಳ ಕಾಲ ತಾಂತ್ರಿಕ ಮಟ್ಟದ ಚರ್ಚೆಗಳು ಮುಂದುವರಿಯಲಿವೆ. ಈ ಬೆಳವಣಿಗೆಯನ್ನು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ದೊಡ್ಡ ಮುನ್ನಡೆ ಎಂದು ಬಣ್ಣಿಸಿದ್ದಾರೆ. ಮಧ್ಯಸ್ಥಿಕೆ ವಹಿಸಿದ್ದ ಪಾಕಿಸ್ತಾನ ಮತ್ತು ಕತಾರ್ ಬಿಡುಗಡೆ ಮಾಡಿದ ಜಂಟಿ ಹೇಳಿಕೆಯ ಪ್ರಕಾರ, ಲೆಬನಾನ್ ಸರಕಾರದ ಪ್ರತಿನಿಧಿಗಳನ್ನೂ ಒಳಗೊಂಡಿರುವ ಹೊಸ ವ್ಯವಸ್ಥೆಯ ಮೂಲಕ ಲೆಬನಾನ್‌ನಲ್ಲಿ ಇಸ್ರೇಲ್ ಸೇನಾ ಕಾರ್ಯಾಚರಣೆಯನ್ನು ಅಂತ್ಯಗೊಳಿಸುವುದಾಗಿದೆ. ಲೆಬನಾನ್‌ನಲ್ಲಿ ಇಸ್ರೇಲ್ ದಾಳಿ ನಿಲ್ಲಬೇಕು ಇರಾನ್ ಬಲವಾದ ಬೇಡಿಕೆಯಿಟ್ಟಿದೆ.

ಬಿಹಾರದಲ್ಲಿ ಬಯೋಮೆಟ್ರಿಕ್ ಸಿಬ್ಬಂದಿ ವೇಷದಲ್ಲಿ ಪರೀಕ್ಷೆಗೆ ಹಾಜರಾಗಲು ಯತ್ನ, ಸರಣಿ ಅರೆಸ್ಟ್

ನೀಟ್ ವಂಚನೆಗೆ ತರಹೇವಾರಿ ಯತ್ನ, 30 ಬಂಧನ

ಪಾಟ್ನಾ: ಮೇ 3ರಂದು ನೀಟ್ ವೈದ್ಯಕೀಯ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಬೆನ್ನಲ್ಲೇ, ಜೂ.21ಕ್ಕೆ ಪ್ರಧಾನಮಂತ್ರಿ ಕಚೇರಿಯ ಉಸ್ತುವಾರಿಯಲ್ಲೇ ಮರುಪರೀಕ್ಷೆ ನಡೆಸಲಾಯಿತು. ಇದನ್ನೂ ಹಾಳುಗೆಡವಲೂ ದುಷ್ಟಶಕ್ತಿಗಳು ತಮ್ಮ ಸಂಪೂರ್ಣ ಶಕ್ತಿಯನ್ನು ವಿನಿಯೋಗಿಸಿರುವ ಆಘಾತಕಾರಿ ಸಂಗತಿ ಇದೀಗ ಬೆಳಕಿಗೆ ಬಂದಿದೆ. ನೀಟ್ ಪರೀಕ್ಷಾ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ದೃಢೀಕರಣಕ್ಕಾಗಿ ನಿಂತಿದ್ದ ಸಿಬ್ಬಂದಿಯನ್ನೇ ವಂಚನೆಗೆ ಬಳಸಿಕೊಳ್ಳಲಾಗಿದೆ. ಬಯೋ ಸಿಬ್ಬಂದಿ ಬೆಂಬಲದೊಂದಿಗೆ ನಕಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಬಿಹಾರದ ಲಖೀಸರಾಯ್ ಜಿಲ್ಲೆಯಲ್ಲಿ 30 ಜನರನ್ನು ಬಂಧಿಸಲಾಗಿದೆ. ಇದರಲ್ಲಿ 9 ನಕಲಿ ಅಭ್ಯರ್ಥಿಗಳು, 14 ಬಯೋಮೆಟ್ರಿಕ್ ಸಂಸ್ಥೆಯ ಸಿಬ್ಬಂದಿಯೂ ಸೇರಿದ್ದಾರೆ.

ವಂಚನೆ ಬಯಲಾಗಿದ್ದು ಹೇಗೆ?: ಲಖೀಸರಾಯ್ ಜಿಲ್ಲೆಯ ಹಸನ್‌ಪುರ ಪ್ರೌಢಶಾಲಾ ಪರೀಕ್ಷಾ ಕೇಂದ್ರಕ್ಕೆ ಪಾಟ್ನಾ ವೈದ್ಯಕೀಯ ಕಾಲೇಜಿನ 3ನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿ ಮಾಯಾಂಕ್ ಕಶ್ಯಪ್ ಪರೀಕ್ಷೆ ಬರೆಯಲು ಬಂದಿದ್ದಾರೆ. ಇವರು ಬಯೋಮೆಟ್ರಿಕ್ ಕಂಪನಿಯ ಸಿಬ್ಬಂದಿಯಂತೆ ವೇಷಧರಿಸಿದ್ದರು. ಇವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇವರನ್ನು ವಿಚಾರಣೆಗೊಳಪಡಿಸಿದಾಗ ಸರಣಿಸರಣಿಯಾಗಿ ಬಯೋಮೆಟ್ರಿಕ್ ಸಿಬ್ಬಂದಿ ರೂಪದಲ್ಲೇ ಒಳಬಂದು ಮೂಲ ವಿದ್ಯಾರ್ಥಿಯ ಜಾಗದಲ್ಲಿ ತಾವೇ ಪರೀಕ್ಷೆಗೆ ಕೂರುವ ಜಾಲ ಪತ್ತೆಯಾಗಿದೆ. ಕೆಆರ್‌ಕೆ ಶಾಲೆಯಲ್ಲಿ ಒಬ್ಬ, ಕೇಂದ್ರೀಯ ವಿದ್ಯಾಲಯದಲ್ಲಿ 7 ಮಂದಿ, ಹಸನ್‌ಪುರದಲ್ಲಿ ಇನ್ನೊಬ್ಬರು ಬಂಧನಕ್ಕೊಳಗಾಗಿದ್ದಾರೆ. ಇವರೆಲ್ಲರೂ ಬಯೋಮೆಟ್ರಿಕ್ ಪರೀಕ್ಷೆಯಲ್ಲಿ ತಪ್ಪಿಸಿಕೊಂಡು ಒಳಬರುವುದರಲ್ಲಿ ಬಯೋಮೆಟ್ರಿಕ್ ಸಂಸ್ಥೆಯ ಸಿಬ್ಬಂದಿ ನೆರವು ಸಿಕ್ಕಿದೆ.

ಒಬ್ಬ ವಂಚಕನಿಗೆ 20 ಲಕ್ಷರು.: ಅಸಲಿ ವಿದ್ಯಾರ್ಥಿ ಹೆಸರಲ್ಲಿ ನಕಲಿ ವ್ಯಕ್ತಿಗಳು ನೀಟ್ ಬರೆಯಲು 20 ಲಕ್ಷ ರು. ನಿಗದಿ ಮಾಡಲಾಗಿತ್ತು. ಮುಂಗಡವಾಗಿ 1ರಿಂದ 2 ಲಕ್ಷ ರು. ತೆಗೆದುಕೊಳ್ಳಲಾಗಿದೆ. ಪರೀಕ್ಷೆ ಬರೆದ ಮೇಲೆ ಬಾಕಿ ಹಣ ನೀಡುವುದಾಗಿ ಒಪ್ಪಂದವಾಗಿದೆ!

ಜಾಲದ ಹಿಂದೆ ಅರ್ಪಿತ್ ರಾಜ್ ಎಂಬ ವಂಚಕ

ಲಖೀಸರಾಯ್ ವಂಚನೆಯ ಇಡೀ ಜಾಲದ ಹಿಂದಿರುವುದು ಅರ್ಪಿತ್ ರಾಜ್ ಎಂಬ ವಂಚಕ. ಗಯಾದಲ್ಲಿರುವ ಅನ್ನಪೂರ್ಣ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ. ಮೊದಲ ಬಾರಿ ಪ್ರಶ್ನೆಪತ್ರಿಕೆ ಸೋರಿಕೆ ಹಿಂದೆಯೂ ಈತನ ಕೈವಾಡವಿದೆಯೆಂದು ಸಿಬಿಐ ಹಲವು ಬಾರಿ ವಿಚಾರಣೆ ನಡೆಸಿತ್ತು. ಈ ಬಾರಿಯೂ ತೀವ್ರ ವಿಚಾರಣೆಗೊಳಪಡಿಸಲಾಗಿದೆ. ಬಯೋಮೆಟ್ರಿಕ್ ಸಿಬ್ಬಂದಿ ವೇಷದಲ್ಲಿ ವಿದ್ಯಾರ್ಥಿಗಳನ್ನು ಒಳಕಳುಹಿಸಿದ್ದು ಈತನದ್ದೇ ಬುದ್ಧಿವಂತಿಕೆ ಎನ್ನಲಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆಗೆ ಮಾಸ್ಕ್ ಮ್ಯಾನ್ ಯತ್ನ

ಭಾನುವಾರದ ನೀಟ್ ಪರೀಕ್ಷೆಗೆ ಮುನ್ನಾದಿನವಾದ ಶನಿವಾರವೇ ರಾಜಸ್ಥಾನದ ಅಜ್ಮೇರ್‌ನಲ್ಲಿ, ನೀಟ್ ವಿದ್ಯಾರ್ಥಿಗೆ ಅಪರಿಚಿತನೊರ್ವ ವಿಡಿಯೋ ಕರೆ ಮಾಡಿ, ಪ್ರಶ್ನೆಪತ್ರಿಕೆಯನ್ನು ಬಹಿರಂಗವಾಗಿ ತೋರಿಸಿದ್ದಾನೆ. ಅಲ್ಲದೇ ಈ ಪ್ರಶ್ನೆಪತ್ರಿಕೆ ಕೊಡಲು 30 ಸಾವಿರ ರುಪಾಯಿ ಬೇಡಿಕೆ ಕೂಡ ಇಟ್ಟಿದ್ದಾನೆ. ಈ ಸಂಬಂಧ ಡಿಎವಿ ಕಾಲೇಜು ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷ ಮತ್ತು ಎಬಿವಿಪಿ ಸದಸ್ಯ ಕೃಷ್ಣ ಸಿಂಗ್ ಠಾಕೂರ್ ಅವರು ಪೊಲೀಸರಿಗೆ ದೂರು ಸಲ್ಲಿಸಿದ್ದು, ಮುಖಕ್ಕೆ ಮುಖವಾಡ ಧರಿಸಿ ವಿದ್ಯಾರ್ಥಿಯೊಂದಿಗೆ ಮಾತನಾಡಿದ ವ್ಯಕ್ತಿಯನ್ನು ಪತ್ತೆಹಚ್ಚುವಲ್ಲಿ ಪೊಲೀಸರು ಕಾರ್ಯೋನ್ಮುಖರಾಗಿದ್ದಾರೆ. ದೂರಿನ ಪ್ರಕಾರ ಭಾನುವಾರ ನೀಟ್ ಪರೀಕ್ಷೆಗೆ ಹಾಜರಾಗಬೇಕಿದ್ದ ಪ್ರಥಮ ವರ್ಷದ ಡಿಎವಿ ಕಾಲೇಜಿನ ವಿದ್ಯಾರ್ಥಿಗೆ, ಅಪರಿಚಿತ ಸಂಖ್ಯೆಯಿಂದ ಕರೆ ಬಂದಿತ್ತು. ಆ ವೇಳೆ ಆತ ಮುಖವಾಡ ಧರಿಸಿದ್ದ.

ಸಮಾಚಾರ ಸಣ್ಣದಲ್ಲ

ವಿಚಾರಣೆ ವೇಳೆ ಸಾವು ಲಾಕಪ್ ಡೆತ್ ಆರೋಪ

ಯಾದಗಿರಿ: ಜಮೀನು ವ್ಯಾಜ್ಯ ವಿಚಾರಣೆಗೆಂದು ಠಾಣೆಗೆ ತೆರಳಿದ ವೃದ್ಧರೊಬ್ಬರು ಠಾಣೆಯಲ್ಲಿಯೇ ಅನುಮಾನಸ್ಪದವಾಗಿ ಸಾವನ್ನಪ್ಪಿದ್ದ ಘಟನೆ ಹುಣಸಗಿ

ತಾಲೂಕಿನ ನಾರಾಯಣಪುರ ಪೊಲೀಸ್ ಠಾಣೆಯಲ್ಲಿ ನಡೆದಿದೆ. ಮೃತರನ್ನು ಹುಣಸಗಿ ತಾಲೂಕಿನ ಕರಿಕಲ್‌ನ ನಿವಾಸಿ ರಾಜೇಸಾಬ್ ವಾಲಿ ಕಾರ್ (70) ಎಂದು ಗುರುತಿಸ ಲಾಗಿದೆ. ಪೊಲೀಸರ ಹಲ್ಲೆಯಿಂದ ರಾಜೇಸಾಬ್ ಮೃತಪಟ್ಟಿದ್ದಾರೆ ಎಂದು ಮೃತನ ಸಂಬಂಧಿಕರು ಪೊಲೀಸರ ಮೇಲೆ ಲಾಕಪ್ ಡೆತ್ ಆರೋಪ ಮಾಡಿದ್ದಾರೆ.

ಮುಮ್ಮಡಿ ನಿರ್ವಾಣ ಸ್ವಾಮೀಜಿ ಲಿಂಗೈಕ್ಯ

ಮೈಸೂರು: ಕನಕಪುರ ಮಠದ ಹಿರಿಯ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿ ವಯೋಸಹಜ

ಕಾಯಿಲೆಗಳಿಂದ ಸೋಮವಾರ ಲಿಂಗೈಕ್ಯ ರಾಗಿದ್ದಾರೆ. ಪೂಜ್ಯರ ಅಂತಿಮ ದರ್ಶನಕ್ಕೆ ಮಠದ ಆವರಣದಲ್ಲಿ ಮಂಗಳವಾರ ಮಧ್ಯಾಹ್ನ 3 ಗಂಟೆ ವರೆಗೆ ವ್ಯವಸ್ಥೆ ಮಾಡಲಾಗಿದೆ. ಕನಕಪುರದ ರಸ್ತೆಗಳಲ್ಲಿ ಪಾರ್ಥಿವ ಶರೀರ ಮೆರವಣಿಗೆ ನಡೆಯಲಿದೆ ಎಂದು ಮೂಲಗಳು ತಿ

ಬಳ್ಳಾರಿ, ರಾಯಚೂರು, ವಿಜಯನಗರ, ಕೊಪ್ಪಳ ಜಿಲ್ಲೆಗಳಲ್ಲಿ ಏಕಕಾಲಕ್ಕೆ 381 ರೌಡಿಗಳ ಮನೆ ಶೋಧ: ಐಜಿಪಿ ಹರ್ಷ

ರೌಡಿ ಶೀಟರ್‌ಗಳಿಗೆ ಪೊಲೀಸರು ಬಿಸಿ

ಬಳ್ಳಾರಿ: ಬಳ್ಳಾರಿ ವಲಯ ವ್ಯಾಪ್ತಿಯ ಜಿಲ್ಲೆಯಗಳಲ್ಲಿ (ಬಳ್ಳಾರಿ, ವಿಜಯನಗರ, ರಾಯಚೂರು, ಕೊಪ್ಪಳ) ಸೋಮವಾರ ಪೊಲೀಸ್ ಇಲಾಖೆಯು ರೌಡಿಗಳ ನಿವಾಸಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ ಪರಿಶೀಲನೆ ನಡೆಸಿದೆ ಎಂದು ಬಳ್ಳಾರಿ ವಲಯ ಪೊಲೀಸ್ ಮಹಾನಿರ್ದೇಶಕರು (ಐಜಿಪಿ) ಡಾ. ಪಿ.ಎಸ್. ಹರ್ಷ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೌಡಿಗಳ ಚಟುವಟಿಕೆಗಳನ್ನು ಮಟ್ಟಹಾಕಬೇಕು ಎಂದು ಮುಖ್ಯಮಂತ್ರಿ ಮತ್ತು ಪೊಲೀಸ್ ಇಲಾಖೆಯ ಸ್ಪಷ್ಟ ನಿರ್ದೇಶನಗಳಿವೆ. ವಲಯದಲ್ಲಿ ರೌಡಿಗಳ ನಿಗ್ರಹಕ್ಕಾಗಿ ಸಿಪಿಐ ಹಾಗೂ ಪಿಎಸ್‌ಐಗಳ ನೇತೃತ್ವದಲ್ಲಿ ಒಟ್ಟು 22 ರೌಡಿ ನಿಗ್ರಹ ಪಡೆಗಳನ್ನು ರಚಿಸಲಾಗಿದೆ. ಈ ತಂಡಗಳು, ರೌಡಿಗಳ ಮಾಹಿತಿ ಆಧರಿಸಿ ಸೋಮವಾರ ಮುಂಜಾನೆ ಏಕಕಾಲಕ್ಕೆ ದಾಳಿ ನಡೆಸಿವೆ. ರೌಡಿಗಳು ಪರೇಡ್‌ನಲ್ಲಿ ನೀಡಿದ ಅಧಿಕೃತ ವಿಳಾಸದಲ್ಲೇ ಇದ್ದಾರೆಯೇ, ಸಹಚರರೊಂದಿಗೆ ಅಕ್ರಮ ಚಟುವಟಿಕೆ ನಡೆಸುತ್ತಿದ್ದಾರೆಯೇ ಅಥವಾ ಮನೆಯಲ್ಲಿ ಮಾರಕಾಸ್ತ್ರಗಳನ್ನು ಇಟ್ಟುಕೊಂಡಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ಈ ಶೋಧ ನಡೆಸಲಾಗಿದೆ ಎಂದು ತಿಳಿಸಿದರು.

ಬಳ್ಳಾರಿ ಜಿಲ್ಲೆಯಲ್ಲಿ ಸೋಮವಾರ 104 ರೌಡಿಗಳ ಮನೆಗಳು, ವಿಜಯನಗರ 106, ರಾಯಚೂರು 103, ಕೊಪ್ಪಳ 68 ಮನೆ ಸೇರಿ ಒಟ್ಟು 381 ಮನೆಗಳ ಮೇಲೆ ದಾಳಿ ನಡೆಸಲಾಗಿದೆ. ಇದರಲ್ಲಿ 16 ಜಾಗಗಳನ್ನು

ಪೊಲೀಸ್ ಇಲಾಖೆಯ ಅಧಿಕಾರಿಗಳೇ ಅಕ್ರಮದಲ್ಲಿ ಭಾಗಿಯಾದರೆ ಅಥವಾ ಕ್ರಿಮಿನಲ್‌ಗಳ ಜತೆ ಮೃದು ಧೋರಣೆ ತಳೆದರೆ ಸಹಿಸುವುದಿಲ್ಲ. ಈಗಾಗಲೇ ಕೆಲವರನ್ನು ಅಮಾನತು ಮಾಡಲಾಗಿದ್ದು, ಇನ್ನು ಕೆಲವರನ್ನು ಜೈಲಿಗೂ ಕಳುಹಿಸಲಾಗಿದೆ. ಇಲಾಖೆಯ ಕಟ್ಟುಪಾಡುಗಳನ್ನು ಮೀರಿ ಕೆಲಸ ಮಾಡುವವರ ವಿರುದ್ಧ ಕಠಿಣ ಕ್ರಮ ಖಚಿತ.
-**ಹರ್ಷ**, ಬಳ್ಳಾರಿ ವಲಯ ಐಜಿಪಿ

ಹೊರತುಪಡಿಸಿ ಉಳಿದೆಲ್ಲೆಡೆ ರೌಡಿಗಳು ಪತ್ತೆಯಾಗಿದ್ದಾರೆ. ಈ ವೇಳೆ 13 ಜನ ರೌಡಿಗಳು ಮೃತಪಟ್ಟಿರುವುದು ಬೆಳಕಿಗೆ ಬಂದಿದೆ ಎಂದು ಹೇಳಿದರು.

ಬಳ್ಳಾರಿಯ ಎಪಿಎಂಸಿ ಠಾಣೆ ವ್ಯಾಪ್ತಿಯ ಅಂದ್ರಾಳು ಸೀತಾರಾಂ ಎಂಬಾತನ ಮನೆಯಲ್ಲಿ ಏರ್ ಗನ್ ಮಾದರಿಯ ಆಯುಧ, ಸ್ಟಾಂಪ್ ಪೇಪರ್‌ಗಳು ಹಾಗೂ ಇತರೆ ದಾಖಲೆ ಪತ್ರಗಳು ಲಭಿಸಿವೆ. ಇವುಗಳನ್ನು ಜಪ್ತಿ ಮಾಡಿ, ತಾಂತ್ರಿಕ ತನಿಖೆಗೆ ಒಳಪಡಿಸಲಾಗಿದೆ. ಬೇರೆ ಕಡೆಗಳಲ್ಲೂ ರೌಡಿಗಳಿಗೆ ಸಂಬಂಧಪಡದ ದಾಖಲೆಗಳು ಸಿಕ್ಕಿವೆ. ಅವುಗಳ ಪರಿಶೀಲನೆ ನಡೆಯುತ್ತಿದೆ ಎಂದರು.

4 ಜಿಲ್ಲೆಗಳಲ್ಲಿ 3,814 ರೌಡಿ ಶೀಟರ್‌ಗಳು

ನಾಲ್ಕು ಜಿಲ್ಲೆಗಳ ವ್ಯಾಪ್ತಿಯಲ್ಲಿ ಸದ್ಯ ಒಟ್ಟು 3,814 ರೌಡಿ ಶೀಟರ್‌ಗಳಿದ್ದಾರೆ. ರಾಯಚೂರಿನಲ್ಲಿ 1,560, ಕೊಪ್ಪಳ 954, ಬಳ್ಳಾರಿ 664, ವಿಜಯನಗರ 633 ರೌಡಿಗಳಿದ್ದಾರೆ. ಇವರ ಮೇಲೆ ನಿರಂತರ ನಿಗಾ ಇಡಲಾಗುವುದು. ಕೇವಲ ಮನೆಗಳಲ್ಲದೇ, ಅವರ ಅಡ್ಡಾಗಳು ಮತ್ತು ಸಹಚರರನ್ನೂ ಮ್ಯಾಪ್ ಮಾಡಲಾಗುವುದು. ಯಾವುದೇ ಅಕ್ರಮ ಚಟುವಟಿಕೆ ಕಂಡುಬಂದರೂ 'ಜೀರೋ ಟಾಲರೆನ್ಸ್' ನೀತಿ ಅನುಸರಿಸಲಾಗುವುದು ಎಂದು ಬಳ್ಳಾರಿ ವಲಯ ಪೊಲೀಸ್ ಮಹಾನಿರ್ದೇಶಕರು (ಐಜಿಪಿ) ಡಾ. ಪಿ.ಎಸ್. ಹರ್ಷ ಎಚ್ಚರಿಸಿದರು.

ಎಲ್ಲೆಲ್ಲಿ ರೌಡಿಗಳ ಮನೆ ಶೋಧ?

ಜಿಲ್ಲೆ	ರೌಡಿಗಳ ಮನೆಗಳು
ಬಳ್ಳಾರಿ	104
ವಿಜಯನಗರ	106
ರಾಯಚೂರು	103
ಕೊಪ್ಪಳ	68
ಒಟ್ಟು	381 ಮನೆಗಳ ಶೋಧ

ರೌಡಿಗಳು ಅಕ್ರಮವಾಗಿ ಹಣ ವಸೂಲಿ ಮಾಡಿದ್ದರೆ ಆದಾಯ ತೆರಿಗೆ (ಐಟಿ) ಇಲಾಖೆಯ ಸಹಕಾರದೊಂದಿಗೆ ಅವರನ್ನು ಮಟ್ಟ ಹಾಕಲಾಗುವುದು. ಬೇನಾಮಿ ಆಸ್ತಿಗಳನ್ನು ಮಾಡಿದ್ದರೆ ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರಾರ್ ಜೊತೆಗೂಡಿ ಕೆಲಸ ಮಾಡಲಾಗುವುದು. ಕೇಸ್ ಟ್ರಯಲ್ ಮಾನಿಟರಿಂಗ್ ಮೂಲಕ ಶಿಕ್ಷೆ ಪ್ರಮಾಣ ಹೆಚ್ಚಿಸಲಾಗುವುದು ಎಂದು ಅವರು ಹೇಳಿದರು.

ಇಷ್ಟು ದಿನ ಗಡಿಪಾರು ಪ್ರಕ್ರಿಯೆ ಸಮಯ ತೆಗೆದುಕೊಳ್ಳುತ್ತಿತ್ತು. ಈಗ ಪೊಲೀಸ್ ಠಾಣೆ ಹಂತದಲ್ಲೇ ಈ ಪ್ರಕ್ರಿಯೆ ಪೂರ್ಣಗೊಳಿಸುವ ಅಧಿಕಾರ ಸಿಕ್ಕಿದೆ. ನಾಲ್ಕೂ ಜಿಲ್ಲೆಗಳಲ್ಲಿ ಈಗಾಗಲೇ 190 ಗಡಿಪಾರು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು, 79 ಪ್ರಕರಣಗಳಲ್ಲಿ ಆದೇಶ ಹೊರಬಿದ್ದಿದೆ. 45 ತಿರಸ್ಕೃತಗೊಂಡಿದ್ದು, 71 ಬಾಕಿ ಇವೆ. ಬಳ್ಳಾರಿಯಲ್ಲಿ 35 ಪ್ರಸ್ತಾವನೆ, ವಿಜಯನಗರ 9, ರಾಯಚೂರು 40, ಕೊಪ್ಪಳ 5 ಪ್ರಸ್ತಾವನೆ ಸಲ್ಲಿಕೆಯಾಗಿದೆ. ಪ್ರಸ್ತುತ ವಲಯದ ವ್ಯಾಪ್ತಿಯಲ್ಲಿ ಒಟ್ಟು 48 ರೌಡಿ ಶೀಟರ್‌ಗಳು (ಕೊಪ್ಪಳ-19, ಬಳ್ಳಾರಿ-13, ರಾಯಚೂರು-10, ವಿಜಯನಗರ-6) ಜೈಲಿನಲ್ಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ.ಪಿ ಇದ್ದರು.

ಕ್ಯಾನ್ಸರ್ ಪೀಡಿತ ಕರಿಬಸಮ್ಮ ವೃದ್ಧಾಶ್ರಮದಲ್ಲಿ ವಾಸ್ತವ್ಯ

ಸೇನೆಗೆ ಹತ್ತು ಲಕ್ಷ ರುಪಾಯಿ ದೇಣಿಗೆ ನೀಡಿದ ನಿವೃತ್ತ ಶಿಕ್ಷಕಿ

ದಾವಣಗೆರೆ: ಕ್ಯಾನ್ಸರ್‌ನಿಂದ ಬಳಲುತ್ತಿರುವ ದಾವಣಗೆರೆಯ ನಿವೃತ್ತ ಶಿಕ್ಷಕಿ ಕರಿಬಸಮ್ಮ (86) ಅವರು ಭಾರತೀಯ ಸೇನೆಗೆ 10 ಲಕ್ಷ ರು.ದೇಣಿಗೆ ನೀಡಿದ್ದಾರೆ.

ನಗರದ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ವೃದ್ಧಾಶ್ರಮದಲ್ಲಿ ಕರಿಬಸಮ್ಮ ಬದುಕು ಕಟ್ಟಿಕೊಂಡಿದ್ದಾರೆ. ಅವರು ದೇಶದ ಯೋಧರಿಗಾಗಿ ಏನಾದರೂ ಒಂದೊಳ್ಳೆ ಕೆಲಸ ಮಾಡಬೇಕು ಎಂಬ ಸಂಕಲ್ಪ ಹೊಂದಿದ್ದರು. ಮನೆ ಮಾರಾಟ ಮಾಡಿದ ಹಣ, ಪಿಂಚಣಿಯ ಹಣ ಬ್ಯಾಂಕ್‌ನಲ್ಲಿ ಇರಿಸಿ, ಬರೋಬ್ಬರಿ ಹತ್ತು ಲಕ್ಷ ರು.ಪಾಯಿಯನ್ನು ಭಾರತ್ ಕೇ ವೀರ್ ನಿಧಿಗೆ ಅರ್ಪಿಸಿದ್ದಾರೆ. ಚೆಕ್‌ನ್ನು ಯೋಧರ ನಿಧಿಗೆ ತಲುಪಿಸುವಂತೆ ಜಿಲ್ಲಾಧಿಕಾರಿ ಡಾ.ಗಂಗಾಧರಸ್ವಾಮಿ ಜಿಎಂ ಅವರ ಕೈಗೆ ನೀಡಿದ್ದಾರೆ.

ಐವತ್ತು ವರ್ಷಗಳ ಹಿಂದೆ ಅವರು ದೇಣಿಗೆ ನೀಡಬೇಕು ಎಂದುಕೊಂಡಿದ್ದರು. ಈಗ ಅವರ ಬಯಕೆ ಈಡೇರಿದೆ. ಅಜ್ಜಿಯ ವಿನೂತನ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಭಾರೀ ಪ್ರಶಂಸೆ ವ್ಯಕ್ತವಾಗುತ್ತಿದೆ. ಅಲ್ಲದೆ ಕರಿಬಸಮ್ಮ ಅವರು ಯುವ ಜನರಿಗೆ ದೇಶ ಪ್ರೇಮದ ಪಾಠ ಮಾಡಿದ್ದಾರೆ. ಅವರು ಬಿಪಿ, ಶುಗರ್, ಸ್ಲಿಪ್ ಡಿಸ್ಕ್, ಕ್ಯಾನ್ಸರ್ ನಿಂದ ಬಳಲುತ್ತಿದ್ದು, ದಯಾಮರಣ ಹೋರಾಟಕ್ಕೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ.

ದಾವಣಗೆರೆ ಜಿಲ್ಲಾಧಿಕಾರಿ ಡಾ.ಗಂಗಾಧರಸ್ವಾಮಿ ಜಿಎಂ ಅವರ ಮೂಲಕ ಸೇನೆ ನಿಧಿಗೆ ನಿವೃತ್ತ ಶಿಕ್ಷಕಿ ಕರಿಬಸಮ್ಮ 10 ಲಕ್ಷ ರು. ದೇಣಿಗೆ ನೀಡಿದರು.

ಬಿಡದಿ ರೈತರ ಹೋರಾಟದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಭಾಗಿ

ಬಿಡದಿ ಟೌನ್‌ಶಿಪ್ ಮತ್ತೊಮ್ಮೆ ಪರಿಶೀಲಿಸಲಿ

ರಾಮನಗರ: ಬಿಡದಿ ಟೌನ್‌ಶಿಪ್ ಯೋಜನೆ ಅನುಷ್ಠಾನದ ಬಗ್ಗೆ ರಾಜ್ಯ ಸರಕಾರ ಮತ್ತೊಮ್ಮೆ ಪರಿಶೀಲನೆ ಮಾಡಬೇಕು. ರೈತರಿಗೆ ಬೇಡವಾದ ಟೌನ್‌ಶಿಪ್ ಅನ್ನು ಸರಕಾರ ಕೈ ಬಿಡಬೇಕು ಎಂದು ಸರ್ವೋದಯ ಕರ್ನಾಟಕ ಪಕ್ಷದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಒತ್ತಾಯಿಸಿದರು.

ಬೈರಮಂಗಲದಲ್ಲಿ ಬಿಡದಿ ಟೌನ್‌ಶಿಪ್ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಸೋಮವಾರ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಯೋಜನೆ ಕುರಿತು ರೈತ ಸಂಘ ಕೈಗೊಂಡಿರುವ ನಿರ್ಣಯಕ್ಕೆ ನನ್ನ ಸಹಮತವಿದೆ. ಇಲ್ಲಿನ ರೈತರ ಹೋರಾಟಕ್ಕೆ ನನ್ನ ಬೆಂಬಲವಿದೆ. ನೊಯಿಡಾದಲ್ಲಿ ರೈತರು ಜಮೀನು ಕೊಟ್ಟು ಕೋಟಿ ಕೋಟಿ ಹಣ ಪಡೆದವರು ಹಣ ಖಾಲಿ ಮಾಡಿಕೊಂಡು ಇಂದು ಅದೇ ಕಂಪನಿ ಮುಂದೆ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದಾರೆ. ಬಿಡದಿ ಟೌನ್‌ಶಿಪ್ ಯೋಜನೆಯಿಂದ ಸಾವಿರಾರು ಕುಟುಂಬಗಳು ಬೀದಿಗೆ ಬರುತ್ತವೆ. ಯೋಜನೆ ವಿರುದ್ಧ ಹೋರಾಡುತ್ತಿರುವ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ರೈತರ

ರಾಮನಗರ ತಾಲೂಕಿನ ಬೈರಮಂಗಲ ಗ್ರಾಮದಲ್ಲಿ ರೈತ ಸಂಘದ ವತಿಯಿಂದ ಬಿಡದಿ ಟೌನ್‌ಶಿಪ್ ವಿರೋಧಿಸಿ ಪ್ರತಿಭಟನೆ ನಡೆಯಿತು.

ಭೂ ಹಿತರಕ್ಷಣಾ ಸಮಿತಿ ಹಾಗೂ ರೈತ ಸಂಘಗಳ ಪದಾಧಿಕಾರಿಗಳ ನಿಯೋಗವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಳಿಗೆ ಕರೆದೊಯ್ದು ಟೌನ್‌ಶಿಪ್ ಕೈ ಬಿಡುವಂತೆ ಮನವಿ ಮಾಡಲಾಗುವುದು ಎಂದು ಹೇಳಿದರು.

ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ಅಥವಾ ಕೈಗಾರಿಕಾ ಪ್ರದೇಶದ ಹೆಸರಿನಲ್ಲಿ ದೊಡ್ಡ ಕಟ್ಟಡಗಳನ್ನು ಕಟ್ಟಿ ರೈತರನ್ನು ಬೀದಿಗೆ ತಂದು ನಿಲ್ಲಿಸುವುದೇ ಅಭಿವೃದ್ಧಿಯಲ್ಲ. ಈ ದಿಸೆಯಲ್ಲಿ ಅಭಿವೃದ್ಧಿಯ ಪರಿಕಲ್ಪನೆ ಬದಲಾಗಬೇಕಿದೆ. ಕೃಷಿ ಮತ್ತು ರೈತರ ಹಿತ ಕಾಯುವ ಅಭಿವೃದ್ಧಿ ಬೇಕಿದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಡಿ.ಕೆ. ಶಿವಕುಮಾರ್ ಅವರು ಡಿನೋಟಿಫಿಕೇಶನ್ ರದ್ದು ಮಾಡಿದರೆ ನಾನು ಜೈಲಿಗೆ ಹೋಗಬೇಕಾಗುತ್ತದೆ ಎಂದು ರೈತರ ಕಿವಿಗೆ ಹೂ ಮುಡಿಸುತ್ತಿದ್ದಾರೆ. ಹಾಗೇನಾದರೂ ನೀವು ಜೈಲಿಗೆ ಹೋದರೆ ನಾವು ರೈತರು ನಿಮ್ಮ ಜತೆ ಜೈಲಿಗೆ ಬರಲು ಸಿದ್ಧರಿದ್ದೇವೆ ಎಂದು ಹೇಳಿದರು.

ರಸ್ತೆಗೆ ಮಾವು ಸುರಿದು ಕೋಲಾರದಲ್ಲಿ ರೈತರು, ಜೆಡಿಎಸ್ ಕಾರ್ಯಕರ್ತರು ಆಕ್ರೋಶ

ಮಾವಿಗೆ ಬೆಂಬಲ ಬೆಲೆ ಘೋಷಣೆಗೆ ಆಗ್ರಹ

ಕೋಲಾರ: ಮಾವು ಬೆಳೆಗೆ ಬೆಂಬಲ ಬೆಲೆ ಘೋಷಣೆಗೆ ಆಗ್ರಹಿಸಿ ಕೇಂದ್ರ ಸಚಿವ ಎಚ್.ಡಿ.ಕುಮಾಸ್ವಾಮಿ ಮನವಿ ಮಾಡಿದ ಬೆನ್ನಲ್ಲೇ ಕೋಲಾರದಲ್ಲಿ ಸೋಮವಾರ ಮಾವು ಬೆಳೆಗಾರರು ಹಾಗೂ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರಾಜ್ಯ ಸರಕಾರ ಮಾವಿಗೆ ಸೂಕ್ತವಾದ ಬೆಂಬಲ ಬೆಲೆ ಘೋಷಣೆ ಮಾಡುವಂತೆ ಒತ್ತಾಯಿಸಿ, ನಗರದ ಹೊಸ ಬಸ್ ನಿಲ್ದಾಣದ ವೃತ್ತದಲ್ಲಿ ಮಾವಿನ ಕಾಯಿ ರಸ್ತೆಗೆ ಸುರಿದು ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಸಂಸದ ಎಂ.ಮಲ್ಲೇಶ್ ಬಾಬು ಮಾತನಾಡಿ ಸರಕಾರದೊಂದಿಗೆ ಕೃಷಿ ಇಲಾಖೆಯಿಂದ ಬರಬೇಕಾದ ಅನುದಾನ ಬಗ್ಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದಾರೆ. ರಾಜ್ಯ ಸರಕಾರವು ಕೂಡಲೇ ಬೆಂಬಲ ಬೆಲೆ ಘೋಷಣೆ ಮಾಡಬೇಕಾಗಿದೆ. ಎಪಿಎಂಸಿ ಮಾರುಕಟ್ಟೆ ನಿಯಮಗಳ ಪ್ರಕಾರ ಎಷ್ಟು ಬೆಂಬಲ ಬೆಲೆ ನೀಡಬೇಕೋ ಅದರ ಬಗ್ಗೆ ಪ್ರಸ್ತಾವನೆಯನ್ನು

ಮಾವು ಬೆಳೆಗೆ ಬೆಂಬಲ ಬೆಲೆ ಘೋಷಣೆಗೆ ಆಗ್ರಹಿಸಿ ಕೋಲಾರದಲ್ಲಿ ಜೆಡಿಎಸ್ ಕಾರ್ಯಕರ್ತರು ಹಾಗೂ ರೈತರು ಪ್ರತಿಭಟನೆ ನಡೆಸಿದರು.

ಕೇಂದ್ರಕ್ಕೆ ಕಳುಹಿಸಲಾಗಿದೆ ರಾಜ್ಯ ಸರಕಾರವು ಬೆಂಬಲ ಬೆಲೆಯನ್ನು ಇನ್ನಷ್ಟು ಹೆಚ್ಚಿಸಬೇಕು ಕಳೆದ ವರ್ಷ 2 ರು. ನೀಡಲಾಗಿತ್ತು. ಈ ಬಾರಿ ಕನಿಷ್ಠ 10 ರುಪಾಯಿ ನೀಡಬೇಕು ಎಂದು ಒತ್ತಾಯಿಸಿದರು.

ಕೋಲಾರ ಜಿಲ್ಲೆಯಾದ್ಯಂತ ಪ್ರತಿಭಟನೆ ನಡೆಸಿದ್ದು, ಈ ಕುರಿತು ಒತ್ತಡ ಹೇರಿದರೆ, ಕೇಂದ್ರ ಸರಕಾರಕ್ಕೆ ಬೆಂಬಲ ಬೆಲೆ ಘೋಷಿಸಲು ಸುಲಭವಾಗುತ್ತದೆ. ಕಳೆದ ವರ್ಷ ನಾನು, ಕುಮಾರಸ್ವಾಮಿ ಮತ್ತು ದೇವೇಗೌಡರು ಮೂವರೂ ಸೇರಿ ಮಾತನಾಡಿದ್ದೆವು, ಆಗ ಕೇಂದ್ರ ಸಚಿವರು ಸ್ಪಂದಿಸಿದ್ದರು ರಾಜ್ಯದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಲು ಕೃಷಿ ಸಚಿವರೇ ಇಲ್ಲ, ಮುಖ್ಯಮಂತ್ರಿಗಳೇ ಒಂದು ಪತ್ರ ಬರೆದು ಇದಕ್ಕೆ ಪರಿಹಾರ ಒದಗಿಸಬೇಕು. ಕೇಂದ್ರ ಸಚಿವರು ದೆಹಲಿಗೆ ಮರಳಿದ ತಕ್ಷಣ ಈ ವಿಷಯದ ಬಗ್ಗೆ ಅವರೊಂದಿಗೆ ಮಾತನಾಡಿ, ರೈತರಿಗೆ ನೆರವಾಗುವ ರೀತಿಯಲ್ಲಿ ನಮ್ಮ ರೈತರನ್ನು ಉಳಿಸಲು ಜೆಡಿಎಸ್ ಪಕ್ಷವು ಬದ್ಧವಾಗಿದೆ ಎಂದರು.

2006ರಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಟೊಮ್ಯಾಟೊ ಬೆಲೆ ಕುಸಿದಿದ್ದಾಗ ಕೆಲವೇ ಗಂಟೆಗಳಲ್ಲಿ ಬೆಂಬಲ ಬೆಲೆ ಘೋಷಿಸಿದ್ದರು. ಈಗಿನ ಕಾಂಗ್ರೆಸ್ ಸರಕಾರ ಏಕೆ ವಿಳಂಬ ಮಾಡುತ್ತಿದೆ. ಕೂಡಲೇ ಸಿಎಂ ಡಿ.ಕೆ. ಶಿವಕುಮಾರ್ ಮಧ್ಯಪ್ರವೇಶಿಸಿ ಮಾವು ಬೆಳೆಗೆ ಬೆಂಬಲ ಬೆಲೆ ಘೋಷಣೆಗೆ ಕೇಂದ್ರ ಸರಕಾರಕ್ಕೆ ಪತ್ರ ಬರೆಯಬೇಕು.
-**ಎಂ.ಮಲ್ಲೇಶ್ ಬಾಬು**, ಸಂಸದ

ಶಿವಕುಮಾರ ಪಂಥಾಹ್ವಾನ

← ಮೊದಲಪುಟದಿಂದ

ಇದಾದ ಕೆಲ ಹೊತ್ತಿನಲ್ಲೇ ಎಚ್.ಡಿ.ಕುಮಾರಸ್ವಾಮಿ, 500 ದಿನಗಳಿಂದ ಪ್ರತಿಭಟನೆ ಮಾಡುತ್ತಿರುವವರು ಅಸಲಿ ರೈತರಲ್ಲ ಎನ್ನುತ್ತಿರುವ ಮುಖ್ಯಮಂತ್ರಿಗೆ ಸವಾಲು ಹಾಕಿ, ಬನ್ನಿ ಬೈರಮಂಗಲದ ಪ್ರತಿಭಟನಾ ಸ್ಥಳಕ್ಕೆ. ಅಲ್ಲಿ ಕೂತಿರುವವರು ಅಸಲಿ ರೈತರೋ ಅಥವಾ ನಕಲಿ ರೈತರೋ ಎಂಬುದು ನಿಮಗೆ ಗೊತ್ತಾಗುತ್ತದೆ. ನಾನು ಸಿದ್ಧನಿದ್ದೇನೆ, ಬೈರಮಂಗಲಕ್ಕೆ ಬರುವುದಕ್ಕೆ ನೀವು ಸಿದ್ಧರಿದ್ದೀರಾ ಎಂದು ಪ್ರಶ್ನಿಸಿದ್ದರು. ಅಲ್ಲದೆ, ರಿಯಲ್ ಎಸ್ಟೇಟ್ ದುರಾಸೆಯಿಂದ ಮುಗ್ಧ ರೈತರಿಂದ ಫಲವತ್ತಾದ ಭೂಮಿಯನ್ನು ಕಸಿದುಕೊಂಡು ದಂಧೆಕೋರರಿಗೆ ನೀಡಲು ಬ್ರೋಕರ್ ಕೆಲಸ ಮಾಡುತ್ತಿರುವ ಈ ಸರಕಾರದ ನೇತೃತ್ವ ವಹಿಸಿರುವ ನಾಯಕರು, ಇದೇ ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ವಿಧಾನಮಂಡಲ ಕಲಾಪದಲ್ಲಿಯೇ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಅವರಲ್ಲಿ ಹಾಲಿ ಮುಖ್ಯಮಂತ್ರಿ ಪ್ರಮುಖರು. ನೋಡಿದರೆ ಟೌನ್‌ಶಿಪ್ ಯೋಜನೆಯನ್ನು ಕಾರ್ಯಗತ ಮಾಡಿಯೇ ತೀರುತ್ತೇನೆ ಎಂದು ರಿಯಲ್ ಎಸ್ಟೇಟ್ ಮಾಡಲು ಮುಂದಾಗಿದ್ದಾರೆ ಎಂದಿದ್ದರು.

ಸುಮ್ಮನೇ ಮಾತೋ ಏನಾದರೂ ಆಗುತ್ತೋ?

ಬಿಡದಿ ಟೌನ್ ಶಿಪ್ ಸಂಬಂಧ ಸ್ಥಳೀಯವಾಗಿ ಪ್ರತಿಭಟನೆ ಅಲ್ಲಲ್ಲಿ ನಡೆಯುತ್ತಿದ್ದರೂ, ಇನ್ನು ಕೆಲವೆಡೆ ತಮ್ಮ ಜಮೀನನ್ನು ಸರಕಾರಕ್ಕೆ ಕೊಟ್ಟಿರುವ ನಿದರ್ಶನಗಳೂ ಇದೆ. ಇದೇ ವೇಳೆ ಬಿಜೆಪಿಯೂ ಕೂಡ ಸ್ಥಳೀಯರು ಹಾಗೂ ರೈತರನ್ನು ಮಾತನಾಡಿಸಿ ಟೌನ್‌ಶಿಪ್ ಬೇಡ ಎಂದು ಹೇಳಿದೆ. ಇತ್ತ ರಾಮನಗರ ಜಿಲ್ಲೆ ಉಗಮಕ್ಕೆ ಹಾಗೂ ಇದಾದ ನಂತರ ರಾಮನಗರ ವಿಲೀನಗೊಂಡು ಬೆಂಗಳೂರು ದಕ್ಷಿಣ ಜಿಲ್ಲೆಯಾಗಲು ಕಾರಣರಾದ ಎಚ್.ಡಿ.ದೇವೇಗೌಡರ ಕುಟುಂಬ ಹಾಗೂ ಡಿ.ಕೆ.ಶಿವಕುಮಾರ್ ಅವರ ನಾಲ್ಕು ದಶಕದ ರಾಜಕೀಯ ಹಣಾಹಣಿ ಹಾಗೂ ಹಿತಾಸಕ್ತಿಯೂ ಕೂಡ ಈ ಯೋಜನೆಯಲ್ಲಿದೆ. ಚರ್ಚೆಯ ಅಖಾಡವು ಹಿಟ್ ಆ್ಯಂಡ್ ರನ್ ಆಗಲಿದೆಯೋ ಗೂಗ್ಲಿ ಬೀಳಲಿದೆಯೋ ಎಂಬುದು ಕೂಡ ಸಾರ್ವಜನಿಕವಾಗಿ ಬಿಸಿ ಚರ್ಚೆಯಾಗುತ್ತಲಿದೆ.

ಡಿಕೆಶಿಗೆ ವಿದೇಶಕಾಲ ನೀಡಿದ ವಿಶ್ವೇಶ್ವರ ಭಟ್

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರನ್ನು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಸೋಮವಾರ ಬೆಂಗಳೂರಿನಲ್ಲಿ ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು. ಈ ವೇಳೆ ವಿಶ್ವೇಶ್ವರ ಭಟ್ಟರ ನೂರನೇ ಪುಸ್ತಕವಾಗಿರುವ ವಿದೇಶಕಾಲವನ್ನು ಡಿ.ಕೆ.ಶಿವಕುಮಾರ್ ಅವರಿಗೆ ನೀಡಿದರು.

ಚಡಚಣ ಪ್ರಕರಣ: ಕಾಲಿಗೆ ಗುಂಡಿಕ್ಕಿ ಮುಖ್ಯ ಆರೋಪಿ ಸೆರೆ

ವಿಜಯಪುರ: ಚಡಚಣ ತಾಲೂಕಿನ ಗೋವಿಂದಾಪುರ ಗ್ರಾಮದಲ್ಲಿ ಕಳೆದ ತಿಂಗಳು ನಡೆದ ಭೀಕರ ಹತ್ಯಾಕಾಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ(ಜೂ. 22) ಪೊಲೀಸರು ಮತ್ತೊಬ್ಬ ಆರೋಪಿ ಕಾಲಿಗೆ ಫೈರಿಂಗ್ ಮಾಡಿ ಬಂಧಿಸಿದ್ದಾರೆ.

ವಿಜಯಪುರ ಜಿಲ್ಲೆಯ ಇಟ್ಟಂಗಿಹಾಳ ಗ್ರಾಮದ ಹೊರ ವಲಯದಲ್ಲಿ ಘಟನೆ ನಡೆದಿದ್ದು, ಪ್ರಕರಣದಲ್ಲಿ ಮುಖ್ಯ ಆರೋಪಿಯಾಗಿದ್ದ ಮಹೇಶ್ ತಳವಾರ್ ಮೇಲೆ ಫೈರಿಂಗ್ ಮಾಡಿ ಚಡಚಣ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯನ್ನು ಬಂಧಿಸಲು ಹೋದಾಗ ಓಡಿ ಹೋಗಲು ಯತ್ನಿಸಿದ್ದು, ಮತ್ತೆ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆಗೆ ಯತ್ನಿಸಿದ ವೇಳೆ ಆತ್ಮರಕ್ಷಣೆಗಾಗಿ ಚಡಚಣ ಸಿಪಿಐ ಪರಶುರಾಮ್ ಮನಗೂಳಿ, ಮಹೇಶ್ ಕಾಲಿಗೆ ಗುಂಡು ಹಾರಿಸಿದ್ದಾರೆ ಎನ್ನಲಾಗಿದೆ. ಘಟನೆಯಲ್ಲಿ ಚಡಚಣ ಠಾಣೆ ಸಿಬ್ಬಂದಿ ಶೇಖರ್ ಪವಾರ್, ವಿಜಯಕುಮಾರ್ ಬನಸೋಡೆಗೆ ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ. ಇನ್ನೂ ಆರೋಪಿ ಮಹೇಶ್ ತಳವಾರ್ ಬಲಗಾಲಿಗೆ ಗುಂಡು ತಗುಲಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಇನ್ನೂ ಗೋವಿಂದಾಪುರದಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೂ ಪೊಲೀಸರು, ಮಹಾಸಿದ್ದ ಶ್ರೀಮಂತ ಬಿರಾದಾರ, ಲಯಪ್ಪ ನೆನಪ್ಪ ಬಿರಾದಾರ, ಕಲ್ಲಾಣಗೌಡ ಈಶ್ವರಗೌಡ ಪಾಟೀಲ್ ಸೇರಿದಂತೆ ಒಟ್ಟು 12 ಮಂದಿಯನ್ನು ಬಂಧಿಸಿದ್ದಾರೆ. ತನಿಖೆ ಮುಂದುವರೆದಿದೆ.

ಕರ್ನಾಟಕ ಸರ್ಕಾರ
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ –585401.
Email: eokvafsu@gmail.com, ಕಛೇರಿ ದೂರವಾಣಿ: 08482–245361
ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟೆ.ನಂ.153/ಕಾಮಗಾರಿ/2026–27/ ದಿನಾಂಕ:20.06.2026
ಟೆಂಡರ ಪ್ರಕಟಣೆ
(ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)
1) ಕಾಮಗಾರಿ ವಿವರ Carrying out civil/electrical works at various constituent units of the KVAFSU Bidar, 2) ಕಾಮಗಾರಿ ಅಂದಾಜು ಮೊತ್ತ **Rs.17692306.00 (Excluding GST),** 3) ಗುತ್ತಿಗೆದಾರ ರಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ ಟೆಂಡರ ಮೊತ್ತದ ವಿವರ **Rs.17692306.00(Excluding GST),** 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಟೆಂಡರ ಫಾರಂ ಸಲ್ಲಿಸಲು ಅಂತಿಮ **ದಿನಾಂಕ 20.07.2026 up to 5.00 PM,** 7) ಫೈನಾನ್ಸಿಯಲ ಬಿಡ ಟೆಂಡರ ತೆರೆಯುವ **ದಿನಾಂಕ 22.07.2026 at 11.30 AM,** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ. ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482–245446, 9) ಅಂತರ್ಜಾಲ ತಾಣದ ವಿಳಾಸ e-procurement portal- https://kppp.karnataka.gov.in
ಸಹಿ/– ಆಸ್ತಿ ಅಧಿಕಾರಿಗಳು
ಕಪಪಮೀವಿವಿ, ಬೀದರ.
ವಾ.ಸಾ.ಸಂ.ಇ/ಬೀದರ/71/ಕೆಎಸ್ಎಂಸಿ&ಎ/2026–27

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU–41/1005/2026–27 (E-222346) ದಿನಾಂಕ: 22.06.2026
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	BIAAPA ಮಹಾ ಯೋಜನೆ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಬಿ.ಸಿ.ಮಂಜುನಾಥ	ಯಲಹಂಕ	ಜಾಲ	ಬಾಗಲೂರು	100/5	0–8.50	ವ್ಯವಸಾಯ	ವಸತಿ
					101	0–16		
					ಒಟ್ಟು	0–24.50		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಸದರಿ ಜಮೀನನ್ನು ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗಿರುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ವಾಟ್ಸ್‌ಪ್: 9483166622 (24x7). @BDAOfficialGok
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಅಡ್ಡಾಡಿಗಳ ಬಗ್ಗೆ ಬಿಜೆಪಿ ವರಿಷ್ಠರಿಗೆ ವಿವರಣೆ

← ಮೊದಲಪುಟದಿಂದ

ಈ ಹಿನ್ನೆಲೆಯಲ್ಲಿ ವಿಜಯೇಂದ್ರ ಅವರು ಶುಕ್ರವಾರ ರಾಷ್ಟ್ರೀಯ ಅಧ್ಯಕ್ಷರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಕ್ಕೆ ತಕ್ಕಂತೆ ಎಲ್ಲ ಮಾಹಿತಿಯೊಂದಿಗೆ ದಿಲ್ಲಿಗೆ ತೆರಳಿದ್ದಾರೆ ಎನ್ನಲಾಗಿದೆ.

ಈ ಮಧ್ಯೆ ಪಕ್ಷಕ್ಕೆ ದ್ರೋಹ ಬಗೆದಿರುವುದು ಮಾತೆಗೆ ದ್ರೋಹ ಬಗೆದಂತೆ ಎಂದು ಹೇಳಿದ್ದ ವಿಜಯೇಂದ್ರ, ಧರ್ಮಸ್ಥಳದಲ್ಲಿ ಶಾಸಕರ ಸಭೆ ನಡೆಸಿ ಆಣೆಪ್ರಮಾಣದ ಮಾತನ್ನಾಡಿದ್ದರು. ಅಂತಿಮವಾಗಿ ಹಲವು ಹಿರಿಯ ನಾಯಕರು, ರಾಜಕೀಯ ಉದ್ದೇಶಗಳಿಗಾಗಿ ಪವಿತ್ರಸ್ಥಳವನ್ನು ಬಳಸದಂತೆ ಸಲಹೆ ನೀಡಿದ್ದನ್ನು ಪರಿಗಣಿಸಿ, ವಿಚಾರವನ್ನು ಕೈಬಿಟ್ಟಿದ್ದಾರೆ. ಅಡ್ಡ ಮತದಾನವನ್ನು ಕೆಲವರು ತಮ್ಮದೇ ರೀತಿಯಲ್ಲಿ ಸಮರ್ಥಿಸಿ ಕೊಂಡಿದ್ದಾರೆ. ಇದನ್ನು ಅಭಿವೃದ್ಧಿಯ ಹಿತಾಸಕ್ತಿ ಯಿಂದ ಮಾಡಲಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ಇದರಲ್ಲಿ ಕುದುರೆ ವ್ಯಾಪಾರ ನಡೆದಿದೆ. ಆದರೂ ಇದನ್ನು ಅಭಿವೃದ್ಧಿ ಎಂದು ಬಿಂಬಿಸಲಾ ಗುತ್ತಿದೆ. ಯಾರ ಅಭಿವೃದ್ಧಿ? ಕ್ಷೇತ್ರದ ಅಭಿವೃದ್ಧಿಯಲ್ಲ, ಅದು ವೈಯಕ್ತಿಕ ಅಭಿವೃದ್ಧಿಯಾಗಿದೆ. ಅಡ್ಡ ಮತದಾನದಲ್ಲಿ ಭಾಗಿಯಾಗಿರುವವರನ್ನು ಸುಮ್ಮನೆ ಬಿಡುವುದಿಲ್ಲ. ಶಿಸ್ತುಕ್ರಮ ಎದುರಿಸಬೇಕಾಗುತ್ತದೆ ಎಂದು ವಿಜಯೇಂದ್ರ ಹೇಳಿದ್ದರೂ, ತೆರೆಮರೆಯಲ್ಲಿ ಪಕ್ಷದ ಪ್ರಮುಖರೇ ಹಣಕಾಸಿನ ಮುಗ್ಗಟ್ಟು ಹಾಗೂ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ಆರ್ಥಿಕ ಸಹಾಯಬೇಕಾಗುತ್ತದೆ ಎಂದಿದ್ದಾರೆ. ಈ ಕಾರಣಕ್ಕೆ ಮಾರಾಟವಾದವರೂ ಇದ್ದಾರೆ ಎನ್ನುವುದು ಕೂಡ ಈಗ ಬಿಜೆಪಿಯಲ್ಲಿ ಗುಟ್ಟಾಗಿ ಉಳಿದಿಲ್ಲ.

ಮೊದಲೇ 'ಅಡ್ಡದ' ಮಾಹಿತಿ ನೀಡಿದ್ದೆ: ಸದಾನಂದ ಗೌಡ

ಬಿಜೆಪಿ ಕಾರ್ಯದರ್ಶಿಗೆ ರಹಸ್ಯಸಭೆ ಮಾಹಿತಿ ನೀಡಿದ್ದೆ

ಅಡ್ಡಮತದಾನದ ವಿಚಾರಕ್ಕೆ ಸಂಬಂಧಿಸಿದಂತೆ ಹೆಬ್ಬಾಳದ ಪ್ರೆಸ್ಟೀಜ್‌ಅಪಾರ್ಟ್‌ಮೆಂಟ್‌ನಲ್ಲಿ ರಹಸ್ಯ ಸಭೆ ನಡೆಸಲಾಗಿದೆ ಎಂದು ಮಾಜಿ ಸಿಎಂ ಸದಾನಂದ ಗೌಡ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಅಲ್ಲದೇ ಪಕ್ಷದ ರಾಜ್ಯ ನಾಯಕರ ಉದಾಸೀನತೆಯೇ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಗೆಲುವಿಗೆ ಪ್ರಮುಖ ಕಾರಣ ಎಂದು ಚಾಟಿ ಬೀಸಿದ್ದಾರೆ. ಜೂನ್ 13ರಂದು ನನಗೆ ಹೆಬ್ಬಾಳದ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಿಂದ ಒಂದು ಕರೆ ಬಂದಿತ್ತು. ಕಾಂಗ್ರೆಸ್‌ನ ನಾಲ್ಕು ಪ್ರಮುಖ ನಾಯಕರು ಮತ್ತು ಬಿಜೆಪಿಯ ಕೆಲ ಶಾಸಕರು ಅಲ್ಲಿ ರಹಸ್ಯ ಸಭೆ ನಡೆಸುತ್ತಿದ್ದಾರೆ ಎಂದು ಆ ವ್ಯಕ್ತಿ ಮಾಹಿತಿ ನೀಡಿದರು. ನಾನು ತಕ್ಷಣವೇ ಅಲರ್ಟ್ ಆಗಿ ನಮ್ಮ ಪಕ್ಷದ ರಾಜ್ಯಾಧ್ಯಕ್ಷರಿಗೆ ಮತ್ತು ಆರ್.ಅಶೋಕ ಅವರಿಗೆ ಕರೆ ಮಾಡಿದೆ. ಆದರೆ ಇಬ್ಬರೂ ಸಿಗಲಿಲ್ಲ. ತಕ್ಷಣವೇ ರಾಜ್ಯ ಪ್ರಧಾನ ಕಾರ್ಯದರ್ಶಿಯೊಬ್ಬರಿಗೆ ಕರೆ ಮಾಡಿ ವಿಷಯ ತಿಳಿಸಿದೆ. ಅವರು 'ಸರಿ ನೋಡುತ್ತೇನೆ' ಎಂದರು. ಅದರ ಮರುದಿನವೇ ಅದೇ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಪಕ್ಕದ ಮತ್ತೊಂದು ಅಪಾರ್ಟ್‌ಮೆಂಟ್‌ನಲ್ಲಿ ಎರಡನೇ ಸಭೆಯೂ ನಡೆಯಿತು. ಆಗಲೂ ನಾನು ಅದೇ ಪ್ರಧಾನ ಕಾರ್ಯದರ್ಶಿಗೆ ಕರೆ ಮಾಡಿ ಎಚ್ಚರಿಸಿದೆ. ಆದರೆ ನಮ್ಮವರು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ಗೌಡರು ದೂರಿದ್ದಾರೆ. ಹೀಗಿದ್ದರೂ ಅಡ್ಡಮತದಾನ ನಡೆದು ಪಕ್ಷಕ್ಕೆ ಭಾರಿ ಮುಖಭಂಗವಾದ ಮೇಲೆ ಅದೇ ಪ್ರಧಾನ ಕಾರ್ಯದರ್ಶಿ ಡಿವಿಎಸ್ ಅವರಿಗೆ ಕರೆ ಮಾಡಿ, ಅಣ್ಣ ನೀವು ಹೇಳಿದ ಹಾಗೆಯೇ ಆಯ್ತಲ್ಲ ಎಂದಿದ್ದರಂತೆ. ಅದಕ್ಕೆ ಸದಾನಂದ ಗೌಡರು, ಹೊಳೆ ದಾಟಿದ ಮೇಲೆ ಮತ್ತೇನು ಚರ್ಚೆ? ಎಂದು ಉತ್ತರಿಸಿದ್ದಾರೆ. ಈ ವಿಚಾರವೂ ಕೂಡ ಈಗ ಬಿಜೆಪಿಯಲ್ಲಿ ಚರ್ಚೆಯಾಗುತ್ತಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರವರ ಕಛೇರಿ, ಜಲಭವನ, ನಂ.ಪಿ–4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು–09. **ದೂರವಾಣಿ ಸಂ:** 0821– 2545894,
ಇ–ಮೇಲ್: kwbcemys2014@gmail.com
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಕೊಲ್ಲೂರು ಪಟ್ಟಣದಲ್ಲಿ ಹಾಲಿ ಇರುವ 1.50 MLD ಸಾಮರ್ಥ್ಯದ MBBR ಮಾದರಿಯ STP ಯನ್ನು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಠೇವಣಿ ಕೊಡುಗೆಯಡಿ ಮೇಲ್ದರ್ಜೆಗೇರಿಸುವ ಕಾಮಗಾರಿಯ 2ನೇ ಕರೆ ಟೆಂಡರ್‌ನ್ನು (including 1 year DLP) (lumpsum tender – no variation) **ಇಂಡೆಂಟ್ ಸಂಖ್ಯೆ:** KUWSDB/2026-27/ WT/ WORK_INDENT508/CALL-2ರಲ್ಲಿ ಆಹ್ವಾನಿಸಲಾಗಿರುತ್ತದೆ.
ವಿವರಗಳಿಗೆ – https://kppp.karnataka.gov.in
ಸಹಿ/–ಮುಖ್ಯ ಅಭಿಯಂತರರು,
ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು
DIPR/DDMYS/362/KSMCA/239/2026-27

ಅಪಘಾತ: ಚಾಲಕ ಸಾವು, 5 ಮಂದಿ ಬಿಇಒ ಪಾರು

ಚನ್ನಪಟ್ಟಣ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಮುದುಗೆರೆ ಸಮೀಪ ಸಂಭವಿಸಿದ ಭೀಕರ ಅಪಘಾತದಲ್ಲಿ ಕಾರು ಚಾಲಕ ಸಾವನ್ನಪ್ಪಿದ್ದು, ಮೈಸೂರು ಜಿಲ್ಲೆಯ ಐವರು ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾದ ಘಟನೆ ನಡೆದಿದೆ.

ಕಾರಿನಲ್ಲಿದ್ದ ಬಿಇಒಗಳಾದ ಮಹೇಶ್, ರೇವಣ್ಣ, ರಾಜು, ಪ್ರಕಾಶ್ ಹಾಗೂ ಕೃಷ್ಣ ಎಂಬುವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಚಾಮುಂಡೇಶ್ವರಿ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಮೈಸೂರು ಜಿಲ್ಲೆಯ ಐವರು ಬಿಇಒಗಳು ಶಿಕ್ಷಣ ಇಲಾಖೆಯ ಕೆಲಸದ ನಿಮಿತ್ತ ಕಾರಿನಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಿದ್ದರು. ಕಾರು ಮುದುಗೆರೆ ಗ್ರಾಮದ ಬಳಿ ಬರುತ್ತಿದ್ದಂತೆ, ಕಾರಿನ ಟೈಯರ್ ಏಕಾಏಕಿ ಸ್ಫೋಟ ಆಗಿದೆ. ವೇಗದಲ್ಲಿದ್ದ ಕಾರಿನ ಟೈಯರ್ ಸಿಡಿದ ಪರಿಣಾಮ, ಚಾಲಕನ ನಿಯಂತ್ರಣ ತಪ್ಪಿದ ಕಾರು ಡಿವೈಡರ್ ಹಾರಿ ರಸ್ತೆಯ ಇನ್ನೊಂದು ಬದಿಗೆ

(ವಿರುದ್ಧ ದಿಕ್ಕಿನ ರಸ್ತೆಗೆ) ನುಗ್ಗಿದೆ. ಅದೇ ವೇಳೆ ಎದುರಿನಿಂದ ಬರುತ್ತಿದ್ದ ಕ್ಯಾಂಟರ್ ವಾಹನಕ್ಕೆ ಕಾರು ರಭಸವಾಗಿ ಡಿಕ್ಕಿ ಹೊಡೆದಿದೆ.

ಸಮಾಚಾರ ಸಣ್ಣದಲ್ಲ

ಜೂ.27, 28ರಂದು ರಾಜ್ಯಮಟ್ಟದ ಸಭೆ

ಕಲಬುರಗಿ: ಅತಿ ಹಿಂದುಳಿದ ಸಮುದಾಯಗಳ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಬಲೀಕರಣಕ್ಕೆ ಅಗತ್ಯ ಕ್ರಮಗಳ ಕುರಿತು ಚರ್ಚಿಸಲು ರಾಜ್ಯ ಮಟ್ಟದ ಮಠಾಧೀಶರ ಚಿಂತನ ಶಿಬಿರ ಆಯೋಜಿಸಲಾಗಿದೆ ಎಂದು ಬ್ರಹ್ಮಶ್ರೀ ನಾರಾಯಣ ಗುರುಶಕ್ತಿ ಪೀಠದ ಪೂಜ್ಯರು ಹಾಗೂ ಅತಿ ಹಿಂದುಳಿದ ಮಠಾಧೀಶರ ಮಹಾ ಸಭೆಯ ರಾಜ್ಯಾಧ್ಯಕ್ಷ ಪೂಜ್ಯ ಪ್ರಣವಾನಂದ ಮಹಾ ಸ್ವಾಮಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್ 27 ಮತ್ತು 28ರಂದು ಕಲಬುರಗಿಯಲ್ಲಿ ಶಿಬಿರ ಆಯೋಜಿಸಲಾಗಿದೆ. ನಗರದ ಶ್ರೀ ಶರಣಬಸವೇಶ್ವರ ದೇವಸ್ಥಾನದ ಆವರಣದಲ್ಲಿರುವ ಯಾತ್ರಿನಿವಾಸದಲ್ಲಿ ನಡೆಯುವ ಈ ಎರಡು ದಿನಗಳ ಶಿಬಿರವನ್ನು ತೈಲೇಂದ್ರ ಮಹಾ ಸಂಸ್ಥಾನದ ಜಗದ್ಗುರುಗಳು ಉದ್ಘಾಟಿಸಲಿದ್ದಾರೆ ಎಂದರು. ಅತಿ ಹಿಂದುಳಿದ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ, ಶಿಕ್ಷಣ, ಉದ್ಯೋಗ ಹಾಗೂ ವಿವಿಧ ಸರಕಾರಿ ಸೌಲಭ್ಯಗಳ ಲಭ್ಯತೆ ಕುರಿತು ಶಿಬಿರದಲ್ಲಿ ಸಮಗ್ರ ಚರ್ಚೆ ನಡೆಯಲಿದೆ. ಸಮುದಾಯಗಳ ಅಭಿವೃದ್ಧಿ ನಿಗಮಗಳಿಗೆ ಸಮರ್ಪಕ ಅನುದಾನ ಒದಗಿಸುವಂತೆ ಸರಕಾರವನ್ನು ಒತ್ತಾಯಿಸುವ ಕುರಿತು ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಆನ್‌ಲೈನ್ ಗೇಮಿಂಗ್ ಚಟ: ಅಧಿಕಾರಿಯ ಮಗ ಆತ್ಮಹತ್ಯೆ

ಕಲಬುರಗಿ: ಆನ್‌ಲೈನ್ ಗೇಮಿಂಗ್ ಚಟಕ್ಕೆ ಬಿದಿದ್ದ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಮಗ, ಎಂಜಿನಿಯರಿಂಗ್ ಪದವೀಧರ ಕೃಷ್ಣರಾವ್ ಅಪ್ಪರಾವ್ ಮಾಲಿ ಪಾಟೀಲ್ (25) ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಲಬುರಗಿ ನಗರದ ಸೇಡಂ ರಸ್ತೆಯ ಮಾನಸ ರೆಸಿಡೆನ್ಸಿಯಲ್ಲಿ ಘಟನೆ ನಡೆದಿದೆ. ಅಥಣಿಯ ವಾಣಿಜ್ಯ ತೆರಿಗೆ ಇಲಾಖೆ ಸಿಟಿಓ ಭಾರತಿ ಮಾಲಿ ಪಾಟೀಲ್ ಅವರ ಪುತ್ರ. ಎಂಜಿನಿಯರಿಂಗ್ ಮುಗಿಸಿದ್ದ ಕೃಷ್ಣ ಫ್ಲ್ಯಾಟ್‌ನಲ್ಲಿ ಒಬ್ಬರೇ ವಾಸವಿದ್ದರು ಎನ್ನಲಾಗಿದೆ. ಜೂನ್ 18 ರಂದು ಬೆಳಗ್ಗೆ ತಾಯಿ ಕರೆ ಮಾಡಿದಾಗ ಕೃಷ್ಣ ಉದಾಸೀನವಾಗಿ ಮಾತನಾಡಿ ಫೋನ್ ಕಟ್ ಮಾಡಿದ್ದ. ಆ ಬಳಿಕ ಸತತ ಕರೆಗಳಿಗೆ ಪ್ರತಿಕ್ರಿಯಿಸದಿದ್ದಾಗ ಆತಂಕಗೊಂಡ ತಾಯಿ ಜೂನ್ 20 ರಂದು ಸಂಜೆ ಕಲಬುರಗಿಯ ಮನೆಗೆ ಬಂದಿದ್ದಾರೆ. ಒಳಗಡೆಯಿಂದ ಮುಚ್ಚಿದ್ದ ಬಾಗಿಲು ಎಷ್ಟು ಬಡಿದರೂ ತೆಗೆಯದಿದ್ದಾಗ, 112ಗೆ ಕರೆ ಮಾಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಬಾಗಿಲು ಮುರಿದು ಒಳಹೊಕ್ಕಾಗ ಕೃಷ್ಣ ಅವರ ಶವ ಜೋಕಾಲಿ ಹುಕ್ಕಿಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಜೂನ್ 18 ರಂದೇ ಆತ್ಮಹತ್ಯೆ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಈ ಸಂಬಂಧ ವಿವಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಡ್ಡಮತ ಸಾಬೀತಾದರೆ ರಾಜಕೀಯ ನಿವೃತ್ತಿ: ವಜ್ಜಲ್



ಲಿಂಗಸೂಗೂರು: ನಾನು ಯಾವುದೇ ಕಾರಣಕ್ಕೂ ಪಕ್ಷದ್ರೋಹದ ಕೆಲಸ ಮಾಡುವುದಿಲ್ಲ. ಪರಿಷತ್ ಚುನಾವಣೆಯಲ್ಲಿ ನಾನು ಅಡ್ಡ ಮತದಾನ ಮಾಡಿದ್ದೇನೆ ಎಂಬ ಆರೋಪ ಸತ್ಯಕ್ಕೆ ದೂರವಾದದ್ದು ಎಂದು ಶಾಸಕ ಮಾನಪ್ಪ ವಜ್ಜಲ್ ಸ್ಪಷ್ಟಪಡಿಸಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ನಾನು ಬಿಜೆಪಿ ಶಾಸಕನಾದಾಗಿನಿಂದಲೂ ಕಾಂಗ್ರೆಸ್ ಸರಕಾರ ನನ್ನ ಕ್ಷೇತ್ರವನ್ನು ಮಲತಾಯಿ ಧೋರಣೆಯಿಂದ ನೋಡುತ್ತಿದೆ. ನನ್ನ ಕಂಪನಿಯನ್ನು ಮುಚ್ಚುವ ಹಂತಕ್ಕೆ ತಂದು ನಿಲ್ಲಿಸುವ ಮೂಲಕ ಕಾಂಗ್ರೆಸ್ ಸರಕಾರ ನನ್ನ ಮೇಲೆ ದ್ವೇಷ ರಾಜಕಾರಣ ಮಾಡುತ್ತಿದೆ. ಸುಮಾರು 750 ಕೋಟಿ ರು.ಕಾಮಗಾರಿ ಹಣ ಸರಕಾರ ತಡೆಹಿಡಿದಿದೆ ಎಂದು ದೂರಿದರು. ಆಧಾರ ರಹಿತ ಆರೋಪಗಳಿಗೆ ಯಾವುದೇ ಅರ್ಥವಿಲ್ಲ, ನನಗೆ ಯಾವುದೇ ಆಸೆ-ಆಮಿಷಗಳ ಅವಶ್ಯಕತೆಯಿಲ್ಲ ಎಂದರು.

5ನೇ ವರ್ಷ
ವಿಶ್ವವಾಣಿ ಕ್ಲಬ್‌ಹೌಸ್
ಸಂಜೆ: 06.55 ರಿಂದ 08.05 ರವರೆಗೆ
23.06.2026

ಮಂಗಳವಾರದ ಅತಿಥಿ
ರಾಜು ಅಡಕಳ್ಳಿ
ವಿಷಯ
ವಿದೇಶ ಪ್ರವಾಸ ಪಾಠ
vishwavani.news

ದಿನ ವಿಶೇಷ

23 ಜೂನ್ 2026 ಮಂಗಳವಾರ

- ಸೂರ್ಯೋದಯ : 5-43
- ಸೂರ್ಯಾಸ್ತ : 7-14
- ತಿಥಿ : ನವಮಿ
- ನಕ್ಷತ್ರ : ಹಸ್ತ
- ಸಂವತ್ಸರ : ಪರಾಭವ
- ಅಯನ : ಉತ್ತರಾಯನ
- ಋತು : ಗ್ರೀಷ್ಮ
- ಮಾಸ : ಜ್ಯೇಷ್ಠ
- ಪಕ್ಷ : ಶುಕ್ಲಪಕ್ಷ

2007ರಲ್ಲಿ ಡಿಕೆಶಿ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ ಟೌನ್‌ಶಿಪ್‌ಗೆ ವಿರೋಧಿಸಿದ್ದರು: ಕೇಂದ್ರ ಸಚಿವ ಎಚ್‌ಡಿಕೆ

ಟೌನ್‌ಶಿಪ್: ಅಂದು ವಿರೋಧ, ಇಂದೇಕೆ ಆಸಕ್ತಿ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ರಾಜ್ಯದ ಹಾಲಿ ಮುಖ್ಯಮಂತ್ರಿ 2007ರಲ್ಲಿ ವಿಧಾನಸಭೆ ಕಲಾಪದಲ್ಲಿ ಹೇಳಿದ್ದ ಮಾತುಗಳನ್ನು ಒಮ್ಮೆ ನೆನಪು ಮಾಡಿಕೊಳ್ಳಲಿ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಪ್ರತಿಭಟನಾ ಸ್ಥಳಕ್ಕೆ ಬಂದು ನೋಡಿದರೆ ಅಲ್ಲಿ ಕೂತಿರುವವರು ಅಸಲಿ ರೈತರೋ ಅಥವಾ ನಕಲಿ ರೈತರೋ ಎಂಬುದು ಗೊತ್ತಾಗುತ್ತದೆ. ನಾನು ಸಿದ್ಧನಿದ್ದೇನೆ, ಭೈರಮಂಗಲಕ್ಕೆ ಬರುವುದಕ್ಕೆ ನೀವು ಸಿದ್ಧರಿದ್ದೀರಾ? ಎಂದು ಪ್ರಶ್ನಿಸಿದ್ದಾರೆ.

> ನಿಮ್ಮ ಪಾಪದ ಕೊಡ ತುಂಬಿದೆ. ಎಲ್ಲವನ್ನೂ ಜನರು ನೋಡುತ್ತಿದ್ದಾರೆ. ನಿಮಗೆ ಶಾಸ್ತಿಯಾಗುವ ಕಾಲ ಸನಿಹದಲ್ಲಿದೆ.
> -ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎಲ್ಲ ಕಾಂಗ್ರೆಸ್ ನಾಯಕರು ಬಿಡದಿ ಯೋಜನೆಯನ್ನು ತೀವ್ರವಾಗಿ ವಿರೋಧಿಸಿದ್ದರು. ಅಂದು ದೊಡ್ಡ ಗಂಟಲಿನಲ್ಲಿ ವಿರೋಧಿಸಿದವರು ಇಂದು ಯೋಜನೆಯ ಪರವಾಗಿ ಮಾತಾಡುತ್ತಿದ್ದಾರೆ. ಇದು ವಿರೋಧಾಭಾಸ. ಪ್ರಮುಖವಾಗಿ ಮಲ್ಲಿಕಾರ್ಜುನ ಖರ್ಗೆ ಮತ್ತು ಸಿದ್ದರಾಮಯ್ಯ ಅವರು ಹಾಲಿ ಮುಖ್ಯಮಂತ್ರಿ ನಡೆಸುತ್ತಿರುವ ಅಕ್ರಮಗಳನ್ನು ನೋಡಿಕೊಂಡು ಜಾಣಮೌನ ವಹಿಸಿದ್ದಾರೆ ಎಂದಿದ್ದಾರೆ.

ಬೆಂಗಳೂರಿನ ಮೇಲೆ ಒತ್ತಡ ಕಡಿಮೆ ಮಾಡಲು ಬಿಡದಿ ಸೇರಿದಂತೆ ಐದು ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿದ್ದು ನಾನೇ. 23.9.2009 ರಂದು ಟೌನ್‌ಶಿಪ್ ಯೋಜನೆ ಬಗ್ಗೆ ತೀರ್ಮಾನ ಮಾಡಲಾಯಿತು. 18.10.2006 ರಂದು ಯೋಜನೆಗೆ ಸರಕಾರದ ವತಿಯಿಂದ ಅಧಿಸೂಚನೆ ಹೊರಡಿಸಲಾಯಿತು. 'ಎಚ್.ಡಿ. ಕುಮಾರಸ್ವಾಮಿ ಆರ್ಕಿಟೆಕ್ಟ್ ಆಫ್ ಬಿಡದಿ ಟೌನ್ ಶಿಪ್' ಅಂತಾರೆ. ನಾನು ಇಲ್ಲ ಎನ್ನುವುದಿಲ್ಲ. ಆದರೆ, ರೈತರ ಭೂಮಿಯನ್ನು ಕಿತ್ತುಕೊಂಡು ರಿಯಲ್ ಎಸ್ಟೇಟ್‌ನವರಿಗೆ ಕೊಡಲು ನಾನು ಈ ಯೋಜನೆ ರೂಪಿಸಿರಲಿಲ್ಲ. ಹೀಗಾಗಿ ರೈತರು ಬೇಡ ಎಂದ ಕೂಡಲೇ ಮುಲಾಜಿಲ್ಲದೆ ಆ ಯೋಜನೆ ಅಲ್ಲಿಗೇ ಕೈಬಿಟ್ಟೆ. ಈಗಲೂ ಶೇ.80ರಿಂದ 90ರಷ್ಟು ರೈತರು ಯೋಜನೆಗೆ ವಿರೋಧ ಮಾಡುತ್ತಿದ್ದಾರೆ. ಹೀಗಾಗಿ ಮುಖ್ಯಮಂತ್ರಿ ಅವರಿಗೆ ಅದನ್ನು ಕೈ ಬಿಡಲು ಏನು ಸಮಸ್ಯೆ? ಎಂದು ಪ್ರಶ್ನಿಸಿದರು.

ನಮ್ಮ ಕ್ರೆಡಿಬಿಲಿಟಿ ಎಂದಿದ್ದ ಹಾಲಿ ಸಿಎಂ: ಅಸೆಂಬ್ಲಿಯಲ್ಲಿ ನಿಯಮ 69ರ ಅಡಿಯಲ್ಲಿ ಚರ್ಚೆ ನಡೆದಿದ್ದ ಸಂದರ್ಭದಲ್ಲಿ 2007 ಆಗಸ್ಟ್ 1ರಂದು ಈ ರಾಜ್ಯದ ಘನತವೆತ್ತ ಹಾಲಿ ಮುಖ್ಯಮಂತ್ರಿ ಉದ್ದುದ್ದ ಭಾಷಣ ಮಾಡಿದ್ದರು. ಇದು ನಮ್ಮ ಪಕ್ಷದ ಕ್ರೆಡಿಬಲಿಟಿ ವಿಚಾರ. ಅದಕ್ಕೋಸ್ಕರ ತಾವು ತಮ್ಮ ಅಧಿಕಾರಿಗಳ ಬಳಿ ಏನು ಪೇಪರ್ ಇವೆ, ಅವರು ಏನು ಪ್ರಪೋಸ್ ಮಾಡಿದ್ದಾರೆ, ನಿಮ್ಮ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರು, ಕೆಐಎಡಿಬಿ ಟೌನ್‌ಶಿಫ್‌ನವರು ಏನು ಪ್ರಪೋಸ್ ಮಾಡಿ ಘೋಷಣೆ ಮಾಡಿದ್ದಾರೆ, ಇವೆರಡನ್ನು ಲೆಕ್ಕ ಮಾಡಿಕೊಂಡು ನೀವು ಉತ್ತರಕ್ಕೆ ಬನ್ನಿ. ಯು ಹ್ಯಾವ್ ಆಸ್ಕ್ ಟು ಅಪಾಲಜಿ ಟು ದ ಕಾಂಗ್ರೆಸ್ ಪಾರ್ಟಿ. ಅದರ್ ವೈಸ್ ಯು ಹ್ಯಾವ್ ಟು ವಿತ್ ಡ್ರಾ ಯುವರ್ ಸ್ಟೇಟ್ಮೆಂಟ್. ಇದು ಅಂದು ಇಂದಿನ ಮುಖ್ಯಮಂತ್ರಿ ಬಾಯಿಂದ ಉದುರಿದ ಅಣಿಮುತ್ತುಗಳು. ಅಂದು ಸಚಿವರಾಗಿದ್ದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರನ್ನು ಉದ್ದೇಶಿಸಿ ಡಿಕೆಶಿ ಅವರು ಈ ಮಾತುಗಳನ್ನು ಹೇಳಿದ್ದರು. ಅಂದು ರೈತರು, ಕೃಷಿ ಭೂಮಿ, ಫಲವತ್ತತೆ, ಮರಗಳು ಇತ್ಯಾದಿ ಅಂಶಗಳನ್ನು ಇಟ್ಟುಕೊಂಡು ಉದ್ದುದ್ದ ಮಾತನಾಡಿದ್ದ ಮಹಾಶಯ ಡಿಸಿಎಂ, ಸಿಎಂ ಆದಕೂಡಲೇ ರೈತರ ಭೂಮಿಗೆ ಕನ್ನ ಹಾಕಿರುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಇಡೀ ಯೋಜನೆ ಕೈಬಿಡಿ: ರೈತರ ಭೂಮಿ ಕಂಡೋರ ಪಾಲು ಆಗದಿರಲಿ ಎಂದು 2006ರಲ್ಲಿ ಅಂದಿನ ನನ್ನ ಸರಕಾರ ಸಿಡಿಪಿ ಪ್ಲಾನ್‌ಗೆ ಒಪ್ಪಿಗೆ ನೀಡಿತು. ಅದರ ಪರಿಣಾಮವಾಗಿ ರೈತರ ಭೂಮಿ ಅವರಿಗೆ ಉಳಿದುಕೊಂಡಿತು. ಆದರೆ ಈ ಮುಖ್ಯಮಂತ್ರಿ ನನ್ನ ಮೇಲೆ ರೆಡ್ ಜೋನ್ ಹಾಕಿದರು ಎಂದು ಅನಗತ್ಯವಾಗಿ ಹೇಳುತ್ತಿದ್ದಾರೆ. ರೆಡ್ ಜೋನ್ ಬಂತು ಎಂದರೆ ಅದರಲ್ಲಿ ಅಪರಾಧವೇನಿದೆ? ರೈತರು ತಮ್ಮ ಭೂಮಿಯನ್ನು ಅಭಿವೃದ್ಧಿ ಮಾಡಿಕೊಳ್ಳಬಹುದು, ಮನೆ ಕಟ್ಟಿಕೊಳ್ಳಬಹುದು. ದೇಗುಲ, ಶಾಲೆ, ಆಸ್ಪತ್ರೆ ಇತ್ಯಾದಿಗಳ ನಿರ್ಮಾಣಕ್ಕೆ ಅಡ್ಡಿ ಇರಲಿಲ್ಲ. ಅಂತಿಮವಾಗಿ ಕೈತಪ್ಪಿ ಹೋಗುತ್ತಿದ್ದ ಭೂಮಿ ರೈತರಿಗೆ ಉಳಿಯಿತು. ಹೀಗಾಗಿ ರೆಡ್ ಜೋನ್ ಎನ್ನುವುದರ ಚರ್ಚೆ ಅನಗತ್ಯ ಎಂದರು.

ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಡಿನೋಟಿಫಿಕೇಷನ್ ಮಾಡಿದರೆ ಸಿಎಂ ಜೈಲಿಗೆ ಹೋಗಲ್ಲ

ನೋಟಿಫಿಕೇಶನ್ ಆಗಿರುವ ಭೂಮಿಯನ್ನು ಡಿನೋಟಿಫಿಕೇಷನ್ ಮಾಡಿ ನಾನು ಜೈಲಿಗೆ ಹೋಗಲೇ? ಎಂದು ಹಾಲಿ ಮುಖ್ಯಮಂತ್ರಿ ಕೇಳುತ್ತಿದ್ದಾರೆ. ನೋಟಿಫಿಕೇಷನ್ ಮಾಡಿದವರೆಲ್ಲ ಜೈಲಿಗೆ ಹೋಗಿದ್ದಾರಾ ಈ ರಾಜ್ಯದಲ್ಲಿ? ಅರ್ಕಾವತಿಯಲ್ಲಿ ರೀಡೂ ಮಾಡಿಕೊಂಡವರೇ ನೆಮ್ಮದಿಯಾಗಿ ಓಡಾಡಿಕೊಂಡಿದ್ದಾರೆ. ಈ ಹಂತದಲ್ಲಿ ರೈತರ ಉದ್ಧಾರಕ್ಕಾಗಿ ಇಡೀ ಯೋಜನೆಯನ್ನೇ ಕೈಬಿಟ್ಟರೆ ಮುಖ್ಯಮಂತ್ರಿ ಏಕೆ ಜೈಲಿಗೆ ಹೋಗುತ್ತಾರೆ? ಇವರು ಕೇವಲ ಸಬೂಬು ಹೇಳಿಕೊಂಡು ರೈತರಿಗೆ ವಂಚಿಸುತ್ತಿದ್ದಾರೆ. ಇವರಿಗೆ ಟೌನ್‌ಶಿಪ್ ಮಾಡಿ ಭೂಮಿ ಕೊಳ್ಳೆ ಹೊಡೆಯುವುದೇ ಮುಖ್ಯವಾಗಿದೆ. ರೈತರನ್ನು ಉಳಿಸಿಕೊಳ್ಳಲು ಡಿನೋಟಿಫಿಕೇಷನ್ ಮಾಡಿದರೆ ಯಾರು ಕೂಡ ಜೈಲಿಗೆ ಹೋಗುವುದಿಲ್ಲ ಎಂದರು.

ನಾಗರಬಾವಿಯಲ್ಲಿ ಬಾಡಿಗೆ ಮನೆಯಲ್ಲಿ ದಂಧೆ

ವಿಧಾನಸೌಧ ಅಥವಾ ಸರಕಾರಿ ಕಚೇರಿಯಲ್ಲಿ ಕೆಲಸಗಳು ನಡೆದರೆ ಎಲ್ಲರಿಗೂ ಸುಲಭವಾಗಿ ಗೊತ್ತಾಗುತ್ತದೆ, ಇಲ್ಲವೇ ಕುಮಾರಸ್ವಾಮಿಗೆ ಮಾಹಿತಿ ಹೋಗುತ್ತದೆ ಎಂಬ ಉದ್ದೇಶದಿಂದ ನಾಗರಬಾವಿಯಲ್ಲಿ ಬಾಡಿಗೆ ಮನೆಯಿಂದ ಇವರು ಟೌನ್‌ಶಿಪ್ ದಂಧೆ ಮಾಡುತ್ತಿದ್ದಾರೆ ಎಂದು ಆರೋಪಿಸಿರುವ ಕುಮಾರಸ್ವಾಮಿ, ಕೆಲವು ಪುಡಾರಿಗಳು, ಟೌನ್‌ಶಿಪ್ ಕಿಂಗ್‌ಪಿನ್ ಚೇಲಾಗಳು ಸೇರಿಕೊಂಡು ಆ ಮನೆಯಲ್ಲಿ ವ್ಯವಹಾರ ನಡೆಸುತ್ತಿದ್ದಾರೆ. ಟೌನ್‌ಶಿಪ್‌ಗೆ ಸಂಬಂಧಿಸಿದ ಯಾವುದೇ ಕೆಲಸಗಳು ರಾಮನಗರ ಜಿಲ್ಲಾಧಿಕಾರಿಯ ಕಚೇರಿಯಲ್ಲಿ ನಡೆಯುತ್ತಿಲ್ಲ. ಎಲ್ಲವೂ ತೆರೆಮರೆಯಲ್ಲಿ ರಹಸ್ಯವಾಗಿ ಮಾಡುತ್ತಿದ್ದಾರೆ ಎಂದರು.

ಅಂಕೇಗೌಡರ ಪುಸ್ತಕ ನಿರ್ವಹಣೆಗೆ 5 ಕೋಟಿ ನಗದು, 2 ಎಕರೆ ಭೂಮಿ

ಅಂಕೇಗೌಡರ ಪುಸ್ತಕ ಸಂಗ್ರಹಕ್ಕೆ ಕಟ್ಟಡ, 5 ಕೋಟಿ ರು. ನಗದು, 2 ಎಕರೆ ಭೂಮಿಗಾಗಿ ಸಿಎಂ ಡಿಕೆಶಿಗೆ ಮನವಿ ಮಾಡಲಾಯಿತು. ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಇದ್ದರು.

ಬೆಂಗಳೂರು: ಪದ್ಮಶ್ರೀ ಪುರಸ್ಕೃತ, ಪುಸ್ತಕ ಪ್ರೇಮಿ ಎಂದು ಹೆಸರಾಗಿರುವ ಎಂ.ಅಂಕೇಗೌಡ ಅವರ ಸಂಗ್ರಹದಲ್ಲಿರುವ 20 ಲಕ್ಷಕ್ಕೂ ಹೆಚ್ಚಿನ ಪುಸ್ತಕಗಳನ್ನು ಇಡಲು ಸುಸಜ್ಜಿತ ಕಟ್ಟಡ ವ್ಯವಸ್ಥೆ ಹಾಗೂ ನಿರ್ವಹಣೆಗೆ ಐದು ಕೋಟಿ ರು. ನಗದು ಹಾಗೂ ಎರಡು ಎಕರೆ ಭೂಮಿ ನೀಡಬೇಕು ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೆ ಸೂಚನೆ ನೀಡಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಸೋಮವಾರ ಭೇಟಿ ಮಾಡಿದ ಅಂಕೇಗೌಡ ಅವರು ಪುಸ್ತಕಗಳಿಗೆ ಸೂಕ್ತ ವ್ಯವಸ್ಥೆಗೆ ಮನವಿ ಮಾಡಿದರು. ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ 'ಅಂಕೇಗೌಡ ಜ್ಞಾನ ಪ್ರತಿಷ್ಠಾನ'ದ ಮೂಲಕ ಬರೋಬ್ಬರಿ 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ. ಮುಖ್ಯಮಂತ್ರಿಗಳ ಬಳಿ ಮನವಿ ಮಾಡಿದ ಅಂಕೇಗೌಡರು ದೇಶದ ಅತಿದೊಡ್ಡ ಪರ್ಸನಲ್ ಲೈಬ್ರರಿ ಇದಾಗಿದ್ದು, ನೀವು ಸೂಕ್ತ ಕಟ್ಟಡ ವ್ಯವಸ್ಥೆ ಮಾಡಿದರೆ ಮಕ್ಕಳಿಗೆ ಅರಿವಿನ ತಾಣವಾಗಿ ಮಾರ್ಪಾಡಗಲಿದೆ. ಸಂಗ್ರಹದಲ್ಲಿರುವ ಅಪರೂಪದ ಪುಸ್ತಕಗಳು ಅತ್ಯುತ್ತಮ ದಾಖಲೆಗಳು ಎಂದು ಹೇಳಿದರು. ಇದೇ ವೇಳೆ ತಮ್ಮ ಬಳಿ ಇರುವ ಅಪರೂಪದ ನಾಣ್ಯಗಳು, ಅಂಚೆ ಚೀಟಿಗಳನ್ನು ಮುಖ್ಯಮಂತ್ರಿಯವರಿಗೆ ತೋರಿಸಿದರು.

ಪ್ಲಾಸ್ಟಿಕ್ ಕಚ್ಚಿದ ಸಾಕು ನಾಯಿ ಸ್ಫೋಟಕ್ಕೆ ಸಾವು

ದಾವಣಗೆರೆ: ರಸ್ತೆಯಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ಕವರ್ ಕಚ್ಚುತ್ತಿದ್ದಂತೆ ಭೀಕರ ಸ್ಫೋಟಗೊಂದು ಸಾಕುನಾಯಿ ಸಾವನ್ನಪ್ಪಿರುವ ಘಟನೆ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ನಲ್ಲುದರೆಯಲ್ಲಿ ನಡೆದಿದೆ.ಅರೆಕೆರೆ ರುದ್ರೇಶ್ ಎನ್ನುವವರಿಗೆ ಸೇರಿದ ನಾಯಿ ಸಾವನ್ನಪ್ಪಿದೆ. ರುದ್ರೇಶ್ ಅವರು ಜಮೀನಿನಲ್ಲಿ ದನ ಮೇಯಿಸಲು ಹೋಗುತ್ತಿದ್ದಾಗ ನಾಯಿ ಸಹ ಅವರ ಜತೆಗೆ ಹೋಗುತ್ತಿತ್ತು. ಈ ವೇಳೆ ರಸ್ತೆ ಬದಿ ಬಿದ್ದಿದ್ದ ಪ್ಲಾಸ್ಟಿಕ್ ಕವರ್ ಕಂಡ ನಾಯಿ ಅದರಲ್ಲಿ ಯಾವುದೋ ಆಹಾರ ಇರಬಹುದೆಂದು ಭಾವಿಸಿ, ಬಾಯಿಯಿಂದ ಕಚ್ಚಿದೆ. ಕೂಡಲೇ ಸ್ಫೋಟಗೊಂಡಿದ್ದು, ನಾಯಿ ಮುಖ ಛಿದ್ರವಾಗಿ ಸಾವನ್ನಪ್ಪಿದೆ. ಇದರಿಂದ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಕಾಡು ಹಂದಿಗಳ ನಿಯಂತ್ರಣಕ್ಕೆ ಇಡುವ ಸಿಡಿಮದ್ದಿನ ರೀತಿ ಇದ್ದು, ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲಿಸಿದ್ದಾರೆ.

ಸಿಎಂ ಡಿ.ಕೆ.ಶಿವಕುಮಾರ, ಆಂಧ್ರದ ಚಂದ್ರಬಾಬು ನಾಯ್ಡು, ತೆಲಂಗಾಣದ ರೇವಂತ ರೆಡ್ಡಿ ಭಾಗಿ

ಟಿಬಿ ಡ್ಯಾಂ ಕ್ರೆಸ್ಟ್‌ಗೇಟ್ 25ಕ್ಕೆ ಲೋಕಾರ್ಪಣೆ

ಕೊಪ್ಪಳ: ತುಂಗಭದ್ರಾ ಜಲಾಶಯಕ್ಕೆ ಅಳವಡಿಸಿರುವ ಹೊಸ ಕ್ರೆಸ್ಟ್‌ಗೇಟ್‌ಗಳನ್ನು ಜೂನ್ 25 ರಂದು ಸಿಎಂ ಡಿ.ಕೆ.ಶಿವಕುಮಾರ ಲೋಕಾರ್ಪಣೆ ಮಾಡಲಿದ್ದಾರೆ. ತೆಲಂಗಾಣ ಸಿಎಂ ಎ.ರೇವಂತ್ ರೆಡ್ಡಿ ಹಾಗೂ ಆಂಧ್ರಪ್ರದೇಶ ಸಿಎಂ ಎನ್.ಚಂದ್ರಬಾಬು ನಾಯ್ಡು ಸೇರಿ ಕೇಂದ್ರ ಸಚಿವರು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಕೊಪ್ಪಳ ತಾಲೂಕು ಮುನಿರಾಬಾದ್ ಗ್ರಾಮದಲ್ಲಿನ ಸರಕಾರಿ ಹೈಸ್ಕೂಲ್ ಗ್ರೌಂಡ್‌ನಲ್ಲಿ ಬೃಹತ್ ಕಾರ್ಯಕ್ರಮ ಆಯೋಜಿಸಲಾಗಿದೆ. ಕೇಂದ್ರದ ಕ್ಯಾಬಿನೆಟ್ ಹಾಗೂ ರಾಜ್ಯ ಖಾತೆಯ ಜಲಶಕ್ತಿ ಸಂಪನ್ಮೂಲ ಮಂತ್ರಿಗಳು ಸೇರಿ ಮೂರು ರಾಜ್ಯದ ನೀರಾವರಿ ಸಚಿವರು, ಹಿರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗಿ ಆಗಲಿದ್ದಾರೆ. ಇನ್ನು ಡಿ.ಕೆ.ಶಿವಕುಮಾರ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಇದೇ ಮೊದಲ ಬಾರಿಗೆ ಇಂತಹ ಬೃಹತ್ ಸರಕಾರಿ ಕಾರ್ಯಕ್ರಮದಲ್ಲಿ ಭಾಗಿ ಆಗುತ್ತಿರುವುದು ವಿಶೇಷ.

51 ಕೋಟಿ ವೆಚ್ಚ: ಕಳೆದ 2024ರ ನವೆಂಬರ್ 10ರಂದು ರಾತ್ರಿ ತುಂಗಭದ್ರಾ ಜಲಾಶಯದ 19ನೇ ಕ್ರೆಸ್ಟ್‌ಗೇಟ್ ಕೊಚ್ಚಿ ಹೋಗಿತ್ತು. ಈ ಹಿನ್ನೆಲೆ ತುಂಗಭದ್ರಾ ಡ್ಯಾಂನಲ್ಲಿ ಸಂಗ್ರಹ ಆಗಿದ್ದ ಅಪಾರ ಪ್ರಮಾಣದ ನೀರು ನದಿಗೆ ಹರಿದು ಹೋಗಿತ್ತು. ಯುದ್ಧೋಪಾದಿಯಲ್ಲಿ ಕಾರ್ಯಾಚರಣೆ ನಡೆಸಿದ ಮೂರು ಅಧಿಕಾರಿಗಳು ಕೊಚ್ಚಿ ಹೋಗಿದ್ದ 19ನೇ ಕ್ರೆಸ್ಟ್‌ಗೇಟ್ ಜಾಗದಲ್ಲಿ ತಾತ್ಕಾಲಿಕವಾಗಿ ಸ್ಟಾಪ್ ಲಾಗ್ ಗೇಟ್ ಅಳವಡಿಕೆ ಮಾಡಲಾಗಿತ್ತು.

ತುಂಗಭದ್ರ ಜಲಾಶಯದ ಕ್ರೆಸ್ಟ್‌ಗೇಟ್ ಲೋಕಾರ್ಪಣೆ ಕಾರ್ಯಕ್ರಮದ ಸ್ಥಳಕ್ಕೆ ಶಾಸಕ ಶಿವರಾಜ ತಂಗಡಗಿ ಸೋಮವಾರ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

> ಕರ್ನಾಟಕ ರಾಜ್ಯ ಸರಕಾರ ರೈತರಿಗೆ ಕೊಟ್ಟ ಮಾತಿನಂತೆ ಜೂನ್ ತಿಂಗಳ ಒಳಗೆ ಹೊಸ ಕ್ರೆಸ್ಟ್‌ಗೇಟ್ ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ. ವಿರೋಧ ಪಕ್ಷದ ನಾಯಕರು ಆಗಸ್ಟ್ ಕಳೆದರೂ ಕೆಲಸ ಮುಗಿಯಲ್ಲ ಎಂದು ಅನಗತ್ಯ ಟೀಕೆ ಮಾಡಿದ್ದರು. ನಾವು ಕೆಲಸದ ಮೂಲಕ ಉತ್ತರ ಕೊಟ್ಟಿದ್ದೇವೆ.
> -ಶಿವರಾಜ ಎಸ್. ತಂಗಡಗಿ, ಶಾಸಕ

ನಿಶ್ಚಯವಾದ ಹುಡುಗಿಗೆ ಮದುವೆಗಾಗಿ ಕಿರುಕುಳ

ಕುಟುಂಬದ ಮೂವರು ಆತ್ಮಹತ್ಯೆ

ಮೈಸೂರು: ಯುವಕನ ಕಿರುಕುಳಕ್ಕೆ ಬೇಸತ್ತು ಕುಟುಂಬವೊಂದರ ಮೂವರು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ ಘಟನೆ ಮೈಸೂರು ತಾಲೂಕಿನ ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಶಿವಣ್ಣ (50), ಪತ್ನಿ ನಾಗರತ್ನ (45) ಹಾಗೂ ಅವರ ಪುತ್ರಿ ರಕ್ಷಿತಾ (21) ತಮ್ಮ ಮನೆಯಲ್ಲಿ ವಿಷ ಸೇವಿಸಿ ಮೃತಪಟ್ಟಿದ್ದಾರೆ.

ಶಿವಣ್ಣ ಅವರ ಮಗಳು ರಕ್ಷಿತಾಗೆ ಮದುವೆ ನಿಶ್ಚಯ ಆಗಿತ್ತು. ಕೆಲವೇ ದಿನಗಳಲ್ಲಿ ಮದುವೆ ಸಂಭ್ರಮ ಇರಬೇಕಿದ್ದ ಮನೆಯಲ್ಲಿ ಸೂತಕ ಆವರಿಸಿದ್ದು ನಿಜಕ್ಕೂ ದುರಂತ. ನಿಶ್ಚಿತಾರ್ಥದಲ್ಲಿ ಸಂಭ್ರಮದಿಂದ ಓಡಾಡಿದ್ದ ಉಲ್ಲಾಸ್ ಎಂಬಾತ ಕೆಲ ದಿನಗಳ ಹಿಂದೆ ರಕ್ಷಿತಾಳನ್ನು ಮದುವೆ ಮಾಡಿಕೊಳ್ಳುವ ಬಯಕೆ ವ್ಯಕ್ತಪಡಿಸಿದ್ದನು. ಅಲ್ಲದೆ ಶಿವಣ್ಣ ಅವರ ಮನೆಗೆ ಬಂದು ಹೆಣ್ಣು ಕೊಡುವಂತೆ ಕೇಳಿದ್ದ ಎನ್ನಲಾಗಿದೆ. ಇದಕ್ಕೆ ಶಿವಣ್ಣ ನಿರಾಕರಣೆ ಮಾಡಿದ ವೇಳೆ ಗ್ರಾಮದಲ್ಲಿ ಗಲಾಟೆ ಮಾಡಿದ್ದನು. ಆಗ ಹಿರಿಯರ ಸಮ್ಮುಖದಲ್ಲಿ ಪಂಚಾಯಿತಿ ನಡೆದು, ಈಗಾಗಲೇ ಯುವತಿಗೆ ಮದುವೆ ನಿಶ್ಚಯ ಆಗಿದೆ. ಹೀಗೆ ಮಾಡುವುದು ಸರಿಯಲ್ಲ ಎಂದು ಬುದ್ಧಿವಾದ ಹೇಳಿದ್ದರು. ಇಷ್ಟಕ್ಕೆ ಸುಮ್ಮನಾಗದ ಉಲ್ಲಾಸ್ ಮದುವೆ ನಿಶ್ಚಯ ಆಗಿದ್ದ ಹುಡುಗನಿಗೆ ರಕ್ಷಿತಾ ಮಾಡಿದ್ದಳು ಎನ್ನಲಾದ ವಾಟ್ಸಾಪ್ ಮೆಸೇಜ್, ಫೋಟೊಗಳನ್ನು ರವಾನೆ ಮಾಡಿದ್ದಾನೆ. ಈ ವಿಚಾರ ತಿಳಿದ ಶಿವಣ್ಣ ಕುಟುಂಬಸ್ಥರು ತೀವ್ರವಾಗಿ ನೊಂದು, ಮರ್ಯಾದೆಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ನಮ್ಮ ಸಾವಿಗೆ ಉಲ್ಲಾಸ್ ಗೌಡ ಕಾರಣ' ಆತನಿಗೆ ಶಿಕ್ಷೆ ಆಗಬೇಕು ಎಂದು 2 ಪುಟಗಳ ಡೆತ್‌ನೋಟ್‌ನಲ್ಲಿ ಉಲ್ಲೇಖಿಸಲಾಗಿದೆ. ಈ ಸಂಬಂಧ ವರುಣಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆ ನಡೆಸಿದ ಕರವೇ ಬೆಳಗಾವಿ ಡಿಸಿಗೆ ಮನವಿ ಪತ್ರ ಸಲ್ಲಿಕೆ

ಎಂಇಎಸ್ ನಿಷೇಧಕ್ಕೆ ಕರವೇ ಆಗ್ರಹ

ಬೆಳಗಾವಿ: ಗಡಿ ಭಾಗದಲ್ಲಿ ಪದೇ ಪದೇ ಕನ್ನಡಿಗರ ಸ್ವಾಭಿಮಾನಕ್ಕೆ ದಕ್ಕೆ ತರುವ ನಿಟ್ಟಿನಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ ಪುಂಡಾಟ ಮೆರೆಯುತ್ತಿದ್ದು, ಇಂತಹ ನಾಡವಿರೋಧಿ ಸಂಘಟನೆಯನ್ನು ನಿಷೇಧಿಸುವಂತೆ ಆಗ್ರಹಿಸಿ ಕರವೇ ಸದಸ್ಯರು ಸೋಮವಾರ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದರು.

ಸೋಮವಾರ ಕಡ್ಡಾಯ ಕನ್ನಡ ವಿರೋಧಿಸಿ ಎಂಇಎಸ್ ಸಂಘಟನೆ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ನಾಡವಿರೋಧಿ ಘೋಷಣೆ ಕೂಗಿ ಮನವಿ ಸಲ್ಲಿಸಿದ್ದಕ್ಕೆ ಆಕ್ರೋಶಗೊಂಡ ಕನ್ನಡ ಸಂಘಟನೆ ಸದಸ್ಯರು ಪ್ರತಿಭಟನೆ ನಡೆಸಿದರು.

ವಿರೇಭದ್ರೇಶ್ವರ ಕ್ರಾಸ್ ನಿಂದ ಬೆಳಗಾವಿ ಡಿಸಿ ಕಚೇರಿವರೆಗೆ ಪ್ರತಿಭಟನೆ ನಡೆಸಿದ ಕರವೇ ಸದಸ್ಯರು, ಕೂಡಲೇ ಎಂಇಎಸ್ ನಾಯಕರನ್ನು ಗಡಿಪಾರು ಮಾಡಬೇಕು ಹಾಗೆಯೇ ಸಂಘಟನೆಯನ್ನು ನಿಷೇಧಿಸುವಂತೆ ಆಗ್ರಹಿಸಿದರು. ಜಿಲ್ಲಾಧಿಕಾರಿ ಎದುರಲ್ಲೇ ಕಡ್ಡಾಯ ಕನ್ನಡ ಆದೇಶ ಪ್ರತಿ ಹರಿದು ಹಾಕಿರುವ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಯಿತು.

ಎಂಇಎಸ್ ಮುಖಂಡರ ಪುಂಡಾಟ: ಬೆಳಗಾವಿಯಲ್ಲಿ ಕನ್ನಡ ಕಡ್ಡಾಯ ವಿರೋಧಿಸಿ ಪುಂಡಾಟಿಕೆ ನಡೆಸಿದ್ದು ಬೆಳಗಾವಿ ಡಿಸಿ ಕಚೇರಿಯಲ್ಲಿ ಜಮಾವಣೆಯಾಗಿ, ಸರಕಾರದ ಆದೇಶ ಪ್ರತಿ ಹರಿದು ಹಾಕುವ ಮೂಲಕ ಉದ್ಧಟತನ ತೋರಿದರು. ಅಷ್ಟೇ ಅಲ್ಲದೆ ನಾಡದ್ರೋಹಿ ಘೋಷಣೆ ಕೂಗಿದ್ದು, ಕರ್ನಾಟಕ ಸರಕಾರದ ವಿರುದ್ಧ ನಾಲಿಗೆ ಹರಿಬಿಡುವ ಮೂಲಕ ತಮ್ಮ ಹಳೆ ಖ್ಯಾತೆ ಮುಂದುವರಿಸಿದರು.

ಎಂಇಎಸ್ ಪುಂಡಾಟ ವಿರೋಧಿಸಿ ಬೆಳಗಾವಿಯಲ್ಲಿ ಕರವೇ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಕಡ್ಡಾಯ ಕನ್ನಡ ವಿರೋಧಿಸಿ: ಎಂಇಎಸ್

ಬೆಳಗಾವಿಯಲ್ಲಿ ಕನ್ನಡ ನಾಮಫಲಕ ಕಡ್ಡಾಯಕ್ಕೆ ವಿರೋಧಿಸಿ, ಮರಾಠಿ ನಾಮಫಲಕ್ಕೆ ಅವಕಾಶ ನೀಡಬೇಕು ಎಂದು ನಾಡದ್ರೋಹಿ ಎಂಇಎಸ್ ಮುಖಂಡರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಸೋಮವಾರ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ಎಂಇಎಸ್ ವಿವಿಧ ಬೇಡಿಗೆ ಆಗ್ರಹಿಸಿದೆ. ಶೇ.60 ರಷ್ಟು ಕನ್ನಡದೊಂದಿಗೆ ಶೇ. 40 ಅನ್ಯ ಭಾಷೆ ಎಂಬ ಕರ್ನಾಟಕ ಸರ್ಕಾರ ಕಾನೂನು ಬೆಳಗಾವಿಯಲ್ಲಿಯೂ ಜಾರಿಯಾಗಲಿ. ಅಲ್ಲದೇ ಭಾಷಿಕ ಅಲ್ಪಸಂಖ್ಯಾತರ ಕಾನೂನಿನಡಿ ಸಿಗಬೇಕಾದ ಸೌಲಭ್ಯಗಳನ್ನು ಬೆಳಗಾವಿ ಜಿಲ್ಲಾಡಳಿತ ಜಾರಿಗೊಳಿಸಲಿ ಎಂದು ಮನವಿ ಸಲ್ಲಿಸಿದರು. ಈ ವೇಳೆ ಬೆಳಗಾವಿ ಗಡಿಭಾಗದಲ್ಲಿ ಭಾಷಾ ಅಲ್ಪಸಂಖ್ಯಾತರ ಕಾನೂನುಗಳ ಜಾರಿ ಹಾಗೂ ಶಾಂತಿ ಸೌಹಾರ್ದತೆ ಕಾಪಾಡಲು ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿಭಾಗದ ಸಮಸ್ಯೆಗಳ ಚರ್ಚೆಗೆ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯನ್ನು ಸ್ಥಾಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದ್ದಾರೆ. ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷರಾದ ಪ್ರಕಾಶ್ ಮರಗಾಳೆ, ಮುಖಂಡರಾದ ಮಾಜಿ ಶಾಸಕ ಮನೋಹರ ಕಿಣೇಕರ ಇನ್ನುಳಿದವರು ಇದ್ದರು.

ನಾಡಬಾಂಬ್ ಸ್ಫೋಟ ಕೆಲ ಮನೆಗಳಿಗೆ ಹಾನಿ

ಹಳಿಯಾಳ: ತಾಲೂಕಿನ ಕಾಳಗಿನಕೊಪ್ಪ ಗ್ರಾಮದ ಮನೆಯೊಂದರಲ್ಲಿ ಸೋಮವಾರ ನಸುಕಿನ ಜಾವ ನಾಡಬಾಂಬ್ ಸ್ಫೋಟಗೊಂಡು ಮನೆಯ ಚಾವಣಿ ಹಾಗೂ ಗೋಡೆ ಕುಸಿದಿದೆ. ಸ್ಫೋಟದ ತೀವ್ರತೆಗೆ ಅಕ್ಕಪಕ್ಕದ ಕೆಲ ಮನೆಗಳಿಗೂ ಹಾನಿಯಾಗಿದೆ.

ನಾಡಬಾಂಬ್ ಇರಿಸಿದ್ದವರು ಭಯದಿಂದ ಗ್ರಾಮದ ಕೆರೆ ಸಮೀಪ ಸ್ಫೋಟಕ ಸಾಮಗ್ರಿ ಎಸೆದು ಪರಾರಿಯಾಗಿದ್ದಾರೆ. ದುರ್ಘಟನೆಯಲ್ಲಿ ಶಂಕರ್ ನಿಂಗಪ್ಪ ಬೆಡದೊಳ್ಕರ್, ಅಪ್ಪಾರಾವ್ ನಿಂಗಪ್ಪ ಬೆಡದೊಳ್ಕರ್, ಪಿಶಪ್ಪ ಲೋಕಪ್ಪ ದೊಡ್ಡಗೌಡ ಎಂಬುವವರ ಮನೆಗೆ ಹಾನಿಯಾಗಿದೆ. ಮನೆಯಲ್ಲಿದ್ದವರಿಗೆ ಯಾವುದೇ ಅಪಾಯ ಉಂಟಾಗಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ.

ವಸಂತ್ ರಾಯಪ್ಪ ಕೊರವರ ಎಂಬುವವರಿಗೆ ಸೇರಿದ್ದ ಮನೆಯಲ್ಲಿ ಸ್ಫೋಟ ಸಂಭವಿಸಿದೆ. ಬೈಕ್ ಸವಾರಿಬ್ಬರು ಮನೆಯಿಂದ ಬೈಕನಲ್ಲಿ ಪರಾಗಿ ಆಗಿದ್ದಾರೆ. ಪರಾರಿ ಆಗುವ ವೇಳೆ ಮನೆಯಲ್ಲಿದ್ದ ಕೆಲವು ನಾಡಬಾಂಬುಗಳನ್ನು ಗ್ರಾಮದ ಕೆರೆಯಲ್ಲಿ ಎಸೆದು ತೆರಳಿದ್ದಾರೆ.

ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಡಿಸಿಎಂ ಸಭೆ

ಖಾಲಿ ಹುದ್ದೆಗಳ ಭರ್ತಿ, ಬಡ್ತಿ ಪ್ರಕ್ರಿಯೆ ಚುರುಕುಗೊಳಿಸಿ: ಪರಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಂದಾಯ ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸಲು ಸಹಾಯಕ ಆಯುಕ್ತರಿಗೆ ಹೆಚ್ಚಿನ ಜವಾಬ್ದಾರಿ ನೀಡಬೇಕು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಅಭಿಪ್ರಾಯಪಟ್ಟರು.

ವಿಧಾನಸೌಧದಲ್ಲಿ ಕಂದಾಯ ಇಲಾಖೆಯ ವಿವಿಧ ಯೋಜನೆಗಳು, ಆಡಳಿತಾತ್ಮಕ ಪ್ರಗತಿ ಹಾಗೂ ಸಾರ್ವಜನಿಕ ಸೇವೆಗಳ ಅನುಷ್ಠಾನದ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಮಗ್ರ ಪರಿಶೀಲನೆ ನಡೆಸಿದ ಅವರು, ಬಾಕಿ ಉಳಿದಿರುವ ಕಡತಗಳನ್ನು ಶೀಘ್ರ ವಿಲೇವಾರಿ ಮಾಡುವಂತೆ ನಿರ್ದೇಶನ ನೀಡಿದರು. ಪರವಾನಗಿ ಭೂಮಾಪಕರ ಸಮಸ್ಯೆಗಳ ಕುರಿತು ಗಮನ ಹರಿಸಬೇಕೆಂದು ಸೂಚಿಸಿದ ಅವರು, ಭೂಮಾಪಕರ ಸಭೆಯನ್ನು ಕರೆದು ಅವರ ಅಹವಾಲುಗಳು ಹಾಗೂ ಬೇಡಿಕೆಗಳನ್ನು ಆಲಿಸಬೇಕು. ಭೂಮಾಪಕರ ಸೇವಾ ಹಾಗೂ ವೃತ್ತಿಪರ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಂಡು, ತ್ವರಿತವಾಗಿ ಇತ್ಯರ್ಥಪಡಿಸಬೇಕು ಎಂದು ಹೇಳಿದರು.

ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ವೇಗಗೊಳಿಸಬೇಕು. ಅಧಿಕಾರಿ ಮತ್ತು ಸಿಬ್ಬಂದಿಗೆ ಬಡ್ತಿ ನೀಡುವ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ವಿಳಂಬ ಉಂಟಾಗಬಾರದು. ಜೇಷ್ಠತಾ ಪಟ್ಟಿಯನ್ನು ಶೀಘ್ರ ಪ್ರಕಟಿಸಿ, ನಿಯಮಾನುಸಾರ ಪಾರದರ್ಶಕವಾಗಿ ಬಡ್ತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಇ-ಪೌತಿ ಖಾತೆ ಸೇರಿದಂತೆ ಇಲಾಖೆಯ ಎಲ್ಲ ಆನ್‌ಲೈನ್ ಮತ್ತು ಸಾರ್ವಜನಿಕ ಸೇವೆಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ನಾಗರಿಕರು ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗದಂತೆ ಸೇವೆಗಳ ವಿತರಣೆಯಲ್ಲಿ ದಕ್ಷತೆ ಮತ್ತು ಪಾರದರ್ಶಕತೆ ಕಾಪಾಡಬೇಕು ಎಂದು ಹೇಳಿದರು.

ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಭೂ ದಾಖಲೆ, ಖಾತೆ ಬದಲಾವಣೆ, ಸರ್ವೇ ಕಾರ್ಯ, ಮ್ಯೂಟೇಷನ್ ಹಾಗೂ ಇತರೆ ಕಂದಾಯ ಸೇವೆಗಳ ವಿಲೇವಾರಿಯಲ್ಲಿ ವಿಳಂಬ ಕಡಿಮೆ ಮಾಡುವ ನಿಟ್ಟಿನಲ್ಲಿ ನಿರಂತರ ಮೇಲ್ವಿಚಾರಣೆ ನಡೆಸಬೇಕು. ಇಲಾಖೆಯ ಎಲ್ಲ ಕಾರ್ಯಗಳ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಿ, ಗುರಿ ಸಾಧನೆಯತ್ತ ಗಮನ ಹರಿಸಬೇಕು. ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ಆಡಳಿತಾತ್ಮಕ ಕಾರ್ಯಗಳಿಗೆ ಮತ್ತಷ್ಟು ವೇಗ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಧಾನಸೌಧದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಡಿಸಿಎಂ ಡಾ.ಜಿ. ಪರಮೇಶ್ವರ ಸಭೆ ನಡೆಸಿದರು.

ಸಂಪಾದಕೀಯ

ಅಗ್ನಿ ಸುರಕ್ಷತೆ ಖಾತ್ರಿ ಬೇಕು

ಉತ್ತರ ಪ್ರದೇಶದ ಲಖನೌನಲ್ಲಿರುವ ಮೂರು ಅಂತಸ್ತಿನ ಕೋಚಿಂಗ್ ಸೆಂಟರ್‌ನಲ್ಲಿ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಕನಿಷ್ಠ 14 ಮಂದಿ ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದು, ಇನ್ನೂ ಹಲವು ವಿದ್ಯಾರ್ಥಿಗಳು ಕಟ್ಟಡದೊಳಗೆ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಈ ತಿಂಗಳ ಆರಂಭದಲ್ಲಿ ದಿಲ್ಲಿಯ ಮಾಳವೀಯ ನಗರದ ಹೋಟೆಲೊಂದರಲ್ಲಿ ನಡೆದ ಅಗ್ನಿ ಆಕಸ್ಮಿಕದಲ್ಲಿ 21 ಮಂದಿ ಬಲಿಯಾಗಿದ್ದರು. ಅವರಲ್ಲಿ 13 ವಿದೇಶೀಯರೂ ಇದ್ದರು. ಕೆಲ ದಿನಗಳ ಹಿಂದೆ ಮೈಸೂರಿನ ದಟ್ಟಗಳ್ಳಿಯಲ್ಲಿರುವ ರೆಸ್ಟೋರೆಂಟ್‌ನಲ್ಲಿ ಉಂಟಾದ ಬೆಂಕಿ ಅನಾಹುತದಲ್ಲಿ ಇಬ್ಬರು ಸತ್ತು, ಹತ್ತಾರು ಮಂದಿ ತೀವ್ರವಾಗಿ ಗಾಯಗೊಂಡಿದ್ದರು. ಎಲ್ಲ ಬೆಂಕಿ ಆಕಸ್ಮಿಕಗಳ ಮೂಲ ಕಾರಣ ಬೇರೆ ಬೇರೆ ಆಗಿರಬಹುದಾದರೂ, ಹೆಚ್ಚಿನ ಜೀವಹಾನಿಗಳಿಗೆ ಕಾರಣ ಅಲ್ಲಿ ಸೂಕ್ತ ಸುರಕ್ಷತಾ ಕ್ರಮಗಳು ಇಲ್ಲದಿರುವುದೇ ಆಗಿರುತ್ತದೆ. ಇಂಥ ಆಕಸ್ಮಿಕಗಳು ಸಂಭವಿಸಿದ ನಂತರ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತುಕೊಂಡು ಕ್ಲಬ್‌ಗಳು, ಪಬ್‌ಗಳು, ರೆಸ್ಟೋರೆಂಟ್‌ಗಳಿಗೆ ದಾಳಿ ನಡೆಸಿ, ಸೇಫ್ಟಿ ಕ್ರಮಗಳು ಇಲ್ಲದ ಕಡೆಗಳನ್ನು ಗುರುತಿಸಿ ಕ್ರಮ ಕೈಗೊಳ್ಳುವುದು, ಅವುಗಳನ್ನು ಮುಚ್ಚುವುದು ನಡೆಸತೊಡಗುತ್ತಾರೆ. ಆದರೆ ಈ ಎಲ್ಲ ಸುರಕ್ಷತಾ ಕ್ರಮಗಳನ್ನೂ ಕ್ಲಬ್- ಹೋಟೆಲ್‌ಗಳು ತೆರೆಯುವ ಹೊತ್ತಿನಲ್ಲಿಯೇ ಪರಿಶೀಲನೆ ನಡೆಸಿರುವುದಿಲ್ಲ. ಇದೇ ಸಮಸ್ಯೆಗೆ ಕಾರಣ. ಬಹುಮಹಡಿ ಕಟ್ಟಡಗಳಲ್ಲಿ ಇಂಥ ಅನಾಹುತಗಳು ಸಂಭವಿಸದಂತೆ, ತುರ್ತು ಪರಿಸ್ಥಿತಿಯಲ್ಲಿ ಕೈಗೆ ಸಿಗುವಂತೆ ಅಗ್ನಿಶಾಮಕ ಉಪಕರಣಗಳಿರಬೇಕು. ಬೆಂಕಿ, ಹೊಗೆ ಕಾಣಿಸಿಕೊಂಡರೆ ಒಳಗಿರುವವರನ್ನು ಎಚ್ಚರಿಸಲು ಸ್ಮೋಕ್ ಡಿಟೆಕ್ಟರ್‌ಗಳು, ಅಲಾರಂಗಳಿರಬೇಕು. ಮೆಟ್ಟಿಲುಗಳು ಮತ್ತು ತುರ್ತು ನಿರ್ಗಮನ ದಾರಿಗಳನ್ನು ಇಟ್ಟಿರಬೇಕು. ಇವುಗಳನ್ನು ಯಾವುದೇ ಹೊತ್ತಿನಲ್ಲೂ ಮುಚ್ಚಿರದೆ ಮುಕ್ತವಾಗಿ ಇಡಬೇಕು. ಕಟ್ಟಡದಲ್ಲಿ ಕನಿಷ್ಠ ಎರಡು ಪ್ರತ್ಯೇಕ ಮೆಟ್ಟಿಲುಗಳಿರಬೇಕು. ಅಗ್ನಿ ಅವಘಡ ಸಂಭವಿಸಿದಾಗ ಯಾವುದೇ ಕಾರಣಕ್ಕೂ ಲಿಫ್ಟ್ ಬಳಸಬಾರದು. ಹಾಗೆಯೇ ಆಗಾಗ ಅಣಕು ಡ್ರಿಲ್‌ಗಳನ್ನು ನಡೆಸಬೇಕು. ವಿದ್ಯುತ್ ಉಪಕರಣಗಳ ಸುರಕ್ಷತೆ ಖಾತ್ರಿಪಡಿಸಿರಬೇಕು. ಓವರ್‌ಲೋಡ್ ಆಗದಂತೆ ನೋಡಿಕೊಳ್ಳಬೇಕು. ಇವೆಲ್ಲ ಸಂಗತಿಗಳನ್ನೂ ಪರಿಶೀಲಿಸಿ ಖಚಿತಪಡಿಸಿದ 'ಅಗ್ನಿ ಸುರಕ್ಷತಾ ಪ್ರಮಾಣಪತ್ರ'ವನ್ನು ವಾಣಿಜ್ಯ ಬಳಕೆಯ ಕಟ್ಟಡ ಮಾಲಿಕರು ಪಡೆದಿರುವುದು ಕಡ್ಡಾಯವಾಗಿದೆ. ಆದರೆ ಕಟ್ಟಡ ಮಾಲಿಕರು, ರಿಯಾಲ್ಟಿ ಏಜೆಂಟರು, ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಶಾಮೀಲಾದಾಗ ಇದ್ಯಾವುದನ್ನೂ ದೃಢಪಡಿಸದೆ, ಎಲ್ಲವನ್ನೂ ಕಡೆಗಣಿಸಿ, ಅಲ್ಲಿಗೆ ಆಗಮಿಸುವ ಸಾರ್ವಜನಿಕರ ಜೀವನದ ಜತೆ ಚೆಲ್ಲಾಟವಾಡುವುದು ಸಾಮಾನ್ಯವಾಗುತ್ತದೆ. ನಗರಗಳಲ್ಲಿ ವಾಣಿಜ್ಯ ಬಳಕೆಯ ಬಹುಮಹಡಿ ಕಟ್ಟಡಗಳಿಗೆ ಪರಿಶೀಲನೆ ಕಡ್ಡಾಯಗೊಳಿಸಿ, ಜನರ ಸುರಕ್ಷತೆ ಖಾತ್ರಿಪಡಿಸಿ.

ಸೊಂಪಾದಕೀಯ

ಕಾಕ್ರೋಚ್ ಕಿಂಗ್!

ಒಂದು ಲಕ್ಷದಷ್ಟು ಜಿರಳೆಗಳನ್ನು ಸ್ಮಗಲ್ ಮಾಡಿಕೊಂಡು ಹೋದವನೊಬ್ಬ ಆಸ್ಟ್ರೇಲಿಯಲ್ಲಿ ಕಸ್ಟಮ್ಸ್ ಅಧಿಕಾರಿಗಳಿಗೆ ಸಿಕ್ಕಿ ಬಿದ್ದಿದ್ದಾನೆ. ಜಿರಳೆಗಳನ್ನು ಕಂಡರೆ ಅರಚಾಡಿಕೊಂಡು ದೂರ ಓಡುವವರೇ ಎಲ್ಲರೂ. ಹಾಗಿರುವಾಗ ಈ ಭೂಪತಿ ಜಿರಳೆಗಳನ್ನು ತರಳೆಗಳಷ್ಟೇ ಆಪ್ತವಾಗಿ ಗುಪ್ತವಾಗಿ ಕಾಪಾಡಿ ತೆಗೆದುಕೊಂಡು ಹೋದದ್ದು ಯಾಕೆ ಎಂಬ ಅನುಮಾನ ಸಹಜ. ಇವು ಸಾಮಾನ್ಯ ಜಿರಳೆಗಳಲ್ಲವಂತೆ. ಮಡಗಾಸ್ಕರ್ ಹಿಸ್ಸಿಂಗ್ ಅಥವಾ ಡುಬಿಯಾ ಎಂಬ ಜಾತಿಯ ತುಸು ದೊಡ್ಡ ಜಿರಳೆಗಳಿವು. ಆಸ್ಟ್ರೇಲಿಯದಲ್ಲಿ ಇವು ಇಲ್ಲ. ಇಂಥ ಎಕ್ಸೋಟಿಕ್ ಕ್ರಿಮಿ ಕೀಟ ಪ್ರಾಣಿ ಪಕ್ಷಿಗಳನ್ನು ಅಲ್ಲಿ ತರುವಂತಿಲ್ಲ. ಇದು ಆ ದೇಶದ ಇತಿಹಾಸದಲ್ಲೇ ಅತಿದೊಡ್ಡ ಬಗ್ ಬಸ್ಟ್ (ಕೀಟಗಳ ಕಳ್ಳಸಾಗಣೆ ಪ್ರಕರಣ). ಜಿರಳೆ, ಜೇಡ, ಹುಳುಗಳು ಸೇರಿದಂತೆ ಅನೇಕ ಕೀಟಗಳನ್ನು ಆತ ಮನೆಯಲ್ಲೇ ಸಾಕಿ ಕಾಳಸಂತೆಯಲ್ಲಿ ಮಾರುತ್ತಿದ್ದನಂತೆ. ಏನು ಉಪಯೋಗ? ಇವುಗಳನ್ನು ದೊಡ್ಡ ಹಲ್ಲಿಗಳ, ಹಾವುಗಳ ಆಹಾರವಾಗಿ ಉಪಯೋಗಿಸಲಾಗುತ್ತದೆ ಎಂಬ ಸಂಶಯ. ಈ ಜಿರಳೆಗಳನ್ನು ಇನ್ನು ನಾಶಪಡಿಸಲಾಗುತ್ತದೆ. ಪಾಪ, ಅವುಗಳಿಗೆ ಮಾತು ಬರುವುದಿಲ್ಲ. ನಮ್ಮ ಅಭಿಜಿತ್ ದೀಪ್ಕೆಯಂಥ ನಾಯಕ ಇಲ್ಲ. ಇದ್ದಿದ್ದರೆ ಅಲ್ಲೊಂದು ಕಾಕ್ರೋಚ್ ಪಾರ್ಟಿ ಕಟ್ಟಿಕೊಂಡು ಪ್ರತಿಭಟನೆ ಮಾಡುತ್ತಿದ್ದವೋ ಏನೋ. ಭಾರತವನ್ನು ನೋಡಿ ಆಸ್ಟ್ರೇಲಿಯನ್ನರು ಪಾಠ ಕಲಿಯಬೇಕು. ವಿದೇಶದ ಜಿರಳೆಗಳನ್ನು ನಾವು ಸ್ವಾಗತಿಸುತ್ತೇವೆ. ಆಸ್ಟ್ರೇಲಿಯನ್ನರು ಚಪ್ಪಲಿ ಹುಡುಕುತ್ತಾರೆ. ಇದರ ನಡುವೆ, ಜಿರಳೆಗಳನ್ನು ಮಾರಿಕೊಂಡು, ಕದ್ದು ಸಾಗಿಸಿ ದುಡ್ಡು ಮಾಡುವವರು ಇರುತ್ತಾರೆ. ಈ ಮೂರನೇ ಪಾರ್ಟಿಗಳೇ ಜಾಣರು. ಅಂದ ಹಾಗೆ ಈ ಜಿರಳೆಗಳನ್ನು ರಕ್ಷಿಸಿ ಎಂದು ಆಸ್ಟ್ರೇಲಿಯದ ಜಿರಳೆಗಳು ದಂಗೆ ಎದ್ದಿದ್ದಾರೆ ಎಂಬುದು ಸುಳ್ಳು ಸುದ್ದಿಯಂತೆ.

ಸಂಪಾದಕರ ಸದ್ಯಶೋಧನೆ

ಗೇಮ್ ರಿಸರ್ವ್ ಎಂದರೇನು?

ವನ್ಯಜೀವಿಗಳ ಸಂರಕ್ಷಣೆ ಮತ್ತು ಪ್ರಕೃತಿಯ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುವ ಪ್ರದೇಶಗಳನ್ನು 'ಗೇಮ್ ರಿಸರ್ವ್' (Game Reserve) ಎಂದು ಕರೆಯುತ್ತಾರಷ್ಟೇ. ಹೀಗೆ ಕರೆಯಲು ಕಾರಣಗಳೇನು? ಈ ಹೆಸರಿನ ಹಿಂದೆ ಒಂದು ಆಸಕ್ತಿದಾಯಕ ಇತಿಹಾಸ, ಭಾಷಾ ಹಿನ್ನೆಲೆ ಮತ್ತು ವಿಕಾಸದ ಕಥೆಯಿದೆ. 'ಗೇಮ್' ಎಂದರೆ ಆಟ ಅಥವಾ ಕ್ರೀಡೆ ಎಂದು ಅರ್ಥ. ಆದರೆ ಹಳೆಯ ಇಂಗ್ಲಿಷ್‌ನಲ್ಲಿ, ವಿಶೇಷವಾಗಿ ಹತ್ತೊಂಬತ್ತನೇ ಮತ್ತು ಇಪ್ಪತ್ತನೇ ಶತಮಾನದ ಆರಂಭದಲ್ಲಿ, 'ಗೇಮ್' ಎಂದರೆ ಬೇಟೆಯಾಡಲು ಯೋಗ್ಯವಾದ ವನ್ಯಜೀವಿಗಳು ಅಥವಾ ಪ್ರಾಣಿಗಳು (ಉದಾಹರಣೆಗೆ ಸಿಂಹ, ಚಿರತೆ, ಆನೆ, ಜಿಂಕೆ ಇತ್ಯಾದಿ) ಎಂದರ್ಥವಾಗಿತ್ತು. ರಾಜರು ಮತ್ತು ಬ್ರಿಟಿಷ್ ಅಧಿಕಾರಿಗಳು ವಿನೋದಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡುವುದನ್ನು ಒಂದು ಕ್ರೀಡೆ (Sport) ಎಂದು ಪರಿಗಣಿಸುತ್ತಿದ್ದರು. ಆ ಕ್ರೀಡೆಗೆ ಬಳಕೆಯಾಗುವ ಪ್ರಾಣಿಗಳನ್ನು 'ಗೇಮ್' ಎಂದು ಕರೆಯಲಾಗುತ್ತಿತ್ತು. 'ರಿಸರ್ವ್' (Reserve) ಎಂದರೇನು? 'ರಿಸರ್ವ್' ಎಂದರೆ ಕಾಯ್ದಿರಿಸಿದ ಅಥವಾ ಸುರಕ್ಷಿತವಾಗಿಟ್ಟ ಪ್ರದೇಶ. ಆರಂಭಿಕ ದಿನಗಳಲ್ಲಿ, ಶ್ರೀಮಂತರು ಮತ್ತು ಬ್ರಿಟಿಷ್ ಪ್ರಭುಗಳು ತಮ್ಮ ವೈಯಕ್ತಿಕ ಬೇಟೆಯ ಆನಂದಕ್ಕಾಗಿ ನಿರ್ದಿಷ್ಟ ಕಾಡುಗಳನ್ನು ಗುರುತಿಸಿ, ಅಲ್ಲಿ ಸಾಮಾನ್ಯ ಜನರು ಪ್ರವೇಶಿಸದಂತೆ ಅಥವಾ ಬೇಟೆಯಾಡದಂತೆ ಕಾಯ್ದಿರಿಸಿ (Reserved) ಇಡುತ್ತಿದ್ದರು. ಅಂದರೆ, ಭವಿಷ್ಯದ ಬೇಟೆಯ ಆಟಗಳಿಗಾಗಿ ಪ್ರಾಣಿಗಳನ್ನು ಸಂರಕ್ಷಿಸಿಡುವ ಜಾಗವೇ 'ಗೇಮ್ ರಿಸರ್ವ್' ಆಯಿತು. ಕಾಲಕ್ರಮೇಣ, ವನ್ಯಜೀವಿಗಳ ಸಂಖ್ಯೆ ತೀವ್ರವಾಗಿ ಕ್ಷೀಣಿಸಿದಾಗ ಈ ಪರಿಕಲ್ಪನೆ ಸಂಪೂರ್ಣವಾಗಿ ಬದಲಾಯಿತು. ಬೇಟೆಯಾಡಲು ಪ್ರಾಣಿಗಳು ಸದಾ ಲಭ್ಯವಿರಲಿ ಎಂಬ ಸ್ವಾರ್ಥಕ್ಕಾಗಿ ಇವುಗಳನ್ನು ಕಾಯ್ದಿರಿಸಲಾಗಿತ್ತು. ಆಧುನಿಕ ಜಗತ್ತಿನಲ್ಲಿ, ಇವು ಪ್ರಾಣಿಗಳನ್ನು ಬೇಟೆಯಾಡುವುದಕ್ಕಲ್ಲ, ಬದಲಿಗೆ ಅವುಗಳನ್ನು ಸಂರಕ್ಷಿಸಲು (Conservation), ಸಂತತಿ ವೃದ್ಧಿಸಲು ಮತ್ತು ಪ್ರವಾಸೋದ್ಯಮಕ್ಕಾಗಿ (Safari) ಬಳಸಲಾಗುವ ಸುರಕ್ಷಿತ ವಲಯಗಳಾಗಿವೆ. ಭಾಷಾಶಾಸ್ತ್ರದ ಪ್ರಕಾರ ಹಳೆಯ 'ಬೇಟೆಯ ಪ್ರಾಣಿಗಳನ್ನು ಕಾಯ್ದಿರಿಸುವ ಜಾಗ' ಎಂಬ ಅರ್ಥದಿಂದ ಈ ಹೆಸರು ಬಂದಿದ್ದರೂ, ಇಂದಿನ ದಿನಗಳಲ್ಲಿ ಇದು 'ವನ್ಯಜೀವಿಗಳ ಸುರಕ್ಷಿತ ಧಾಮ' ಎಂಬ ಅತ್ಯಂತ ಸಕಾರಾತ್ಮಕ ಅರ್ಥದಲ್ಲಿ ಬಳಕೆಯಾಗುತ್ತಿದೆ. ದಕ್ಷಿಣ ಆಫ್ರಿಕಾ ಮತ್ತು ಪೂರ್ವ ಆಫ್ರಿಕಾದ ದೇಶಗಳಲ್ಲಿ (ಉದಾಹರಣೆಗೆ ಮಸಾಯಿ ಮಾರಾ, ಕ್ರುಗರ್) ಈ ಹೆಸರನ್ನು ಇಂದಿಗೂ ಹೆಚ್ಚಾಗಿ ಬಳಸಲಾಗುತ್ತದೆ. ಅಂದು ಬೇಟೆಗಾಗಿ ಇವುಗಳನ್ನು ಹುಡುಕಿಕೊಂಡು ಗೇಮ್ ರಿಸರ್ವ್‌ಗಳಿಗೆ ಹೋಗುತ್ತಿದ್ದರು. ಆದರೆ ಇಂದು, ಅದೇ ಗೇಮ್ ರಿಸರ್ವ್‌ಗಳಲ್ಲಿ ಈ ಪ್ರಾಣಿಗಳನ್ನು ಕಣ್ಣಾರೆ ಕಂಡು ಕೆಮರಾದಲ್ಲಿ ಸೆರೆಹಿಡಿಯಲು (Photo Safari) ಪ್ರವಾಸಿಗರು ಜಗತ್ತಿನಾದ್ಯಂತ ಭೇಟಿ ನೀಡುತ್ತಾರೆ. ಅಂದರೆ, ಬೇಟೆಯ ಜಾಗಗಳು ಈಗ 'ಕೆಮರಾ ಬೇಟೆ'ಯ ತಾಣಗಳಾಗಿ ಮಾರ್ಪಟ್ಟಿವೆ. ಗೇಮ್ ರಿಸರ್ವ್‌ಗಳು ಹೇಗೆ ಕಾರ್ಯನಿರ್ವಹಿಸುತ್ತವೆ? ಇವು ಕೇವಲ ಪ್ರಾಣಿಗಳನ್ನು ಕೂಡಿಹಾಕುವ ಜಾಗಗಳಲ್ಲ. ಪ್ರಾಣಿಗಳಿಗೆ ನೈಸರ್ಗಿಕವಾಗಿ ಸಿಗುವ ಆಹಾರ, ನೀರು ಮತ್ತು ವಲಸೆ ಹೋಗುವ ದಾರಿಗಳನ್ನು ಯಾವುದೇ ಮಾನವ ಹಸ್ತಕ್ಷೇಪವಿಲ್ಲದೇ ರಕ್ಷಿಸಲಾಗುತ್ತದೆ. ಇಂದು ವನ್ಯಜೀವಿಗಳ ದೊಡ್ಡ ಶತ್ರುವೆಂದರೆ ಅಕ್ರಮ ಬೇಟೆಗಾರರು. ಖಡ್ಗಮೃಗದ ಕೊಂಬು, ಆನೆಯ ದಂತಗಳಿಗಾಗಿ ನಡೆಯುವ ಬೇಟೆಯನ್ನು ತಡೆಯಲು ಗೇಮ್ ರಿಸರ್ವ್‌ಗಳು ತಮ್ಮದೇ ಆದ ಆಧುನಿಕ ಶಸ್ತ್ರಸಜ್ಜಿತ ಕಾವಲು ಪಡೆಗಳನ್ನು ಹೊಂದಿರುತ್ತವೆ. ಸ್ಥಳೀಯ ಬುಡಕಟ್ಟು ಅಥವಾ ಗ್ರಾಮೀಣ ಜನರನ್ನು ಈ ರಿಸರ್ವ್‌ಗಳ ನಿರ್ವಹಣೆಯಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಪ್ರವಾಸೋದ್ಯಮದಿಂದ ಬರುವ ಆದಾಯದ ಒಂದು ಭಾಗವನ್ನು ಸ್ಥಳೀಯರ ಅಭಿವೃದ್ಧಿಗೆ ಬಳಸುವುದರಿಂದ, ಅವರು ಕೂಡ ಪ್ರಾಣಿಗಳ ರಕ್ಷಣೆಗೆ ಕೈಜೋಡಿಸುತ್ತಾರೆ. ಗೇಮ್ ರಿಸರ್ವ್‌ಗಳ ಬಗ್ಗೆ ಜಾಗತಿಕವಾಗಿ ಒಂದು ದೊಡ್ಡ ಚರ್ಚೆ ನಡೆಯುತ್ತಿರುತ್ತದೆ. ಆಫ್ರಿಕಾದ ಕೆಲವು ಖಾಸಗಿ ಗೇಮ್ ರಿಸರ್ವ್‌ಗಳಲ್ಲಿ ಇಂದಿಗೂ 'ಟ್ರೋಫಿ ಹಂಟಿಂಗ್' (ಕಾನೂನುಬದ್ಧ ಮತ್ತು ನಿಯಂತ್ರಿತ ಬೇಟೆ) ಗೆ ಅವಕಾಶವಿದೆ. ವಯಸ್ಸಾದ ಅಥವಾ ಸಂತಾನೋತ್ಪತ್ತಿ ಸಾಮರ್ಥ್ಯ ಕಳೆದುಕೊಂಡ ಪ್ರಾಣಿಗಳನ್ನು ಬೇಟೆಯಾಡಲು ಶ್ರೀಮಂತ ವಿದೇಶಿ ಪ್ರವಾಸಿಗರಿಗೆ ಭಾರಿ ಮೊತ್ತದ ಶುಲ್ಕ ವಿಧಿಸಿ ಅನುಮತಿ ನೀಡಲಾಗುತ್ತದೆ. ಈ ಮೂಲಕ ಬರುವ ಲಕ್ಷಾಂತರ ಡಾಲರ್ ಹಣವನ್ನು ಇಡೀ ಕಾಡಿನ ಸಂರಕ್ಷಣೆ ಮತ್ತು ಉಳಿದ ಪ್ರಾಣಿಗಳ ಆರೈಕೆಗೆ ಬಳಸಲಾಗುತ್ತದೆ. ಪರಿಸರವಾದಿಗಳು ಮತ್ತು ಪ್ರಾಣಿ ಪ್ರೇಮಿಗಳು ಇದನ್ನು ಕಟುವಾಗಿ ವಿರೋಧಿಸುತ್ತಾರೆ. ವಿನೋದಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದನ್ನು ಯಾವುದೇ ರೂಪದಲ್ಲೂ ಒಪ್ಪಲು ಸಾಧ್ಯವಿಲ್ಲ ಎನ್ನುವುದು ಅವರ ವಾದ.

ಪರಿಷತ್ತಿನ ಫಲಿತಾಂಶ, ಗೆದ್ದರೂ ನಲುಗಿದ್ದ ಕಮಲ ಪಡೆ!

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
vveditoped@gmail.com

ರಾಜ್ಯ ಕಾಂಗ್ರೆಸ್‌ನಲ್ಲಿ ಸದ್ಯ ಎಲ್ಲವೂ ನೂತನ. ಅಧಿಕಾರದ ಚುಕ್ಕಾಣಿಯನ್ನು ಡಿ.ಕೆ. ಶಿವಕುಮಾರ್ ಹಿಡಿದಿದ್ದರೆ, ಪಕ್ಷದ ಚುಕ್ಕಾಣಿಯನ್ನು ಬಿ.ಕೆ.ಹರಿಪ್ರಸಾದ್ ಹಿಡಿದಿದ್ದಾರೆ. ಅಧಿಕಾರದ ಗದ್ದುಗೆ ಏರಿದ ಮೊದಲ ಸವಾಲಾಗಿ ಇಬ್ಬರೂ ನಾಯಕರಿಗೆ ವಿಧಾನಪರಿಷತ್ ಚುನಾವಣೆ ಎದುರಾಗಿತ್ತಾದರೂ, ಡಿಕೆ ಶಿವಕುಮಾರ್ ಅವರ ಐದನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವ ತಂತ್ರಕ್ಕೆ ಯಶ ಸಿಕ್ಕಿದೆ. ಕಾಂಗ್ರೆಸ್ ತನ್ನ ಐದನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವುದಷ್ಟೇ ಅಲ್ಲದೇ, ಬಿಜೆಪಿ-ಜೆಡಿಎಸ್‌ನೊಳಗಿನ ಆಂತರಿಕ ಬೇಗುದಿಯನ್ನು ಇಡೀ ರಾಜ್ಯದ ಮುಂದೆ 'ಅಡ್ಡಮತದಾನ' ಸಂಖ್ಯೆಯ ಆಧಾರದಲ್ಲಿ ಬಿಚ್ಚಿಟ್ಟಿದ್ದಾರೆ.

ಕೆಪಿಸಿಸಿ ಅಧ್ಯಕ್ಷರಾಗಿದ್ದಾಗಲೇ ವಿಧಾನಪರಿಷತ್ ಐದನೇ ಅಭ್ಯರ್ಥಿಯನ್ನು ಹಾಕುವ ಬಗ್ಗೆ ಹೈಕಮಾಂಡ್ ಜತೆ ಚರ್ಚಿಸಿದ್ದ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಯಾದ ಬಳಿಕ ತನ್ನ ಆಪ್ತ ವಿನಯ್ ಕಾರ್ತಿಕ್‌ನನ್ನು ಗೆಲ್ಲಿಸಿಕೊಂಡು ಬರುವ ಟಾಸ್ಕ್ ಕೈಗೆತ್ತಿಕೊಂಡರು. ಡಿಕೆಗೆ ಸವಾಲು ಹಾಕುವ ರೀತಿ ಜೆಡಿಎಸ್ ಸಹ ಸಂಖ್ಯಾಬಲದ ಕೊರತೆಯ ಹೊರತಾಗಿಯೂ 'ಮ್ಯಾಜಿಕ್' ನಿರೀಕ್ಷೆಯಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿತ್ತು. ಡಿಕೆಶಿ-ಎಚ್‌ಡಿಕೆ ನಡುವಿನ ಈ ಸಮರದಲ್ಲಿ ರಾಜ್ಯದ ಮುಂದೆ ಬಯಲಾಗಿದ್ದು ಮಾತ್ರ ಬಿಜೆಪಿಯಲ್ಲಿರುವ ಆಂತರಿಕ ಕಿತ್ತಾಟ!

ಏಳು ಸ್ಥಾನಕ್ಕೆ ಎಂಟು ಅಭ್ಯರ್ಥಿಗಳು ಕಣಕ್ಕೆ ಇಳಿಯುವುದು ಖಚಿತವಾಗುತ್ತಿದ್ದಂತೆ ವಿಧಾನಪರಿಷತ್ ಚುನಾವಣೆ ನಿಶ್ಚಿತವಾಗಿತ್ತು. ಕಾಂಗ್ರೆಸ್‌ನ ವಿನಯ್ ಕಾರ್ತಿಕ್ ಹಾಗೂ ಜೆಡಿಎಸ್‌ನ ಗೋವಿಂದ ರಾಜು ಇಬ್ಬರಲ್ಲಿ ಯಾರೇ ಗೆಲ್ಲಬೇಕಾದರೂ ಪಕ್ಷೇತರರ ಬೆಂಬಲ ಅನಿವಾರ್ಯವಾಗಿತ್ತು. ಸಾಮಾನ್ಯವಾಗಿ ಪಕ್ಷೇತರರು ಆಡಳಿತ ಪಕ್ಷಕ್ಕೆ ಬೆಂಬಲ ಘೋಷಿಸುವುದರಿಂದ ವಿನಯ್ ಕಾರ್ತಿಕ್‌ಗೆ ಗೆಲುವು ಸುಲಭವೆಂದೇ ವಿಶ್ಲೇಷಿಸಲಾಗಿತ್ತು. ಆದರೆ ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚಿನ ಮತಗಳು ವಿನಯ್ ಕಾರ್ತಿಕ್‌ಗೆ ಬಂದಿದ್ದು, ಅದರಲ್ಲಿಯೂ ಶಿಸ್ತಿನ ಪಕ್ಷವಾಗಿರುವ ಬಿಜೆಪಿಯ ಆರು ಶಾಸಕರಿಂದ 'ಅಡ್ಡ'ಮತದಾನವಾಗಿರುವುದು ಇದೀಗ ಬಹುಚರ್ಚಿತ ವಿಷಯ.

ಕುಮಾರಸ್ವಾಮಿ ಅವರು ತಮ್ಮ ಪಕ್ಷದ ಶಾಸಕರ ನಿಷ್ಠೆ ಪರೀಕ್ಷಿಸಲು ಮಾಡಿದ್ದ ಈ ತಂತ್ರ, ಜೆಡಿಎಸ್‌ಗಿಂತ ಹೆಚ್ಚಾಗಿ ಬಿಜೆಪಿಯ ಆಂತರಿಕ ಬೇಗುದಿಯನ್ನು ಬಹಿರಂಗಗೊಳಿಸಿದೆ. ಅದರಲ್ಲಿಯೂ ಬಿಜೆಪಿ ಶಾಸಕಾಂಗ ಪಕ್ಷದ ನಾಯಕ, ಪ್ರತಿಪಕ್ಷ ನಾಯಕ ಆರ್.ಅಶೋಕ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಈ ಚುನಾವಣಾ ಫಲಿತಾಂಶ ಬಹುದೊಡ್ಡ ಹಿನ್ನಡೆಯಾಗಿದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಜೆಡಿಎಸ್‌ಗೆ ಬಿಜೆಪಿಯಿಂದ ಆರು ಮತಗಳು ಹೋಗಬೇಕಿತ್ತು. ಆದರೆ ಮತಗಳ 'ಅಸಿಂಧು'ವಿನ ವಾಸನೆ ಬಡಿಯುತ್ತಿದ್ದಂತೆ ಬಿಜೆಪಿ ತನ್ನ ಇಬ್ಬರು ಅಭ್ಯರ್ಥಿಗಳಿಗೆ 28ರ ಬದಲು 30 ಶಾಸಕರ ಮತಗಳನ್ನು ಹಂಚಿಕೆ ಮಾಡಿದರು. ಆದರೆ ಇದರಲ್ಲಿಯೂ ರಘು ಕೌಟಿಲ್ಯ ಅವರಿಗೆ 29 ಮತಗಳು ಬಂದರೆ, ಲಿಂಗರಾಜ ಪಾಟೀಲ್ ಅವರಿಗೆ ಹಾಕಿದ್ದ ಮತಗಳ ಪೈಕಿ ಒಂದು ಮತ ಅಸಿಂಧುವಾಗಿದ್ದರಿಂದ 27 ಮತಗಳನ್ನು ಪಡೆಯಬೇಕಾಯಿತು. ಒಂದು ಮತ ಅಸಿಂಧುವಾದರೂ, ಯತ್ನಾಳ್ ಬಿಜೆಪಿ ಅಭ್ಯರ್ಥಿ ಪರ ಮತ ಹಾಕಿದ್ದರಿಂದ 56 ಮತಗಳು ಸಿಕ್ಕಿದೆ. ಅಂದರೆ, 62 ಶಾಸಕರ ಸಂಖ್ಯಾಬಲದ ಬಿಜೆಪಿ 55 ಮಂದಿ ಮಾತ್ರ ಪಕ್ಷದ ವಿಪ್‌ನ ಸೂಚನೆಯಂತೆ ಮತ ಚಲಾಯಿಸಿದ್ದು, ಒಂದು ಮತ ಅಸಿಂಧುವಾಗಿದೆ. ಒಟ್ಟಾರೆ ಆರು ಮಂದಿ ಬಿಜೆಪಿಗೆ ಕೈಕೊಟ್ಟಿದ್ದಾರೆ.

ಬಿಜೆಪಿ ಶಾಸಕರ ಈ ನಡೆ ಪಕ್ಷದಲ್ಲಿ ಎಲ್ಲವೂ ಸರಿಯಾಗಿಲ್ಲ ಎನ್ನುವ ಗಾಳಿಮಾತಿಗೆ ತುಪ್ಪ ಸುರಿದಂತಾಗಿದೆ. ಜೆಡಿಎಸ್ ತನ್ನ ಅಭ್ಯರ್ಥಿಯ ಸೋಲನ್ನು ನಿರೀಕ್ಷೆ ಮಾಡಿದ್ದರೂ, ಬಿಜೆಪಿಯಿಂದ ಸಿಗಬೇಕಿರುವ ಬೆಂಬಲ ಸಿಗಲಿಲ್ಲವೆನ್ನುವ ಆರೋಪ ದೆಹಲಿ ನಾಯಕರವರೆಗೆ ದೂರು ಹೋಗಿದೆ. ಈ ದೂರಿಗೆ ಪ್ರತಿಯಾಗಿ 'ಸ್ಪಷ್ಟೀಕರಣ' ಕೊಡಲು ಅಶೋಕ್ ಹಾಗೂ ವಿಜಯೇಂದ್ರ ದೆಹಲಿಗೆ ಹಾರಿದ್ದಾರೆ. ಜೆಡಿಎಸ್ ಅಭ್ಯರ್ಥಿಯ ಸೋಲಿನಿಂದ ಬಿಜೆಪಿಯಲ್ಲಿರುವ ಭಿನ್ನಾಭಿಪ್ರಾಯ, ಬಿಜೆಪಿ-ಜೆಡಿಎಸ್ ಮೈತ್ರಿಯಲ್ಲಿರುವ ಸಮಸ್ಯೆಯನ್ನು ಬಹಿರಂಗಪಡಿಸಿದೆ. ಇನ್ನೆರಡು ತಿಂಗಳಲ್ಲಿ ಎದುರಾಗಲಿರುವ ಜಿಬಿಎ ಚುನಾವಣೆಯ ಹೊಸ್ತಿಲಿನಲ್ಲಿ ಇಂತಹ ಬೆಳವಣಿಗೆಗಳು ಮೈತ್ರಿ ಪಕ್ಷದಲ್ಲಿ 'ನಂಬಿಕೆ'ಯನ್ನು ಕುಗ್ಗಿಸಲಿದೆ ಎನ್ನುವುದು ಬಿಜೆಪಿ ವರಿಷ್ಠರ ಆತಂಕವಾಗಿದೆ.

ಈಗಾಗಲೇ ಪಕ್ಷದಲ್ಲಿರುವ ಆಂತರಿಕ ಕಿತ್ತಾಟ, ಮನೆಯೊಂದು ಹತ್ತಾರು ಬಾಗಿಲು ಎನ್ನುವ ಪರಿಸ್ಥಿತಿಯಿಂದಾಗಿ ಬಿಜೆಪಿಯಲ್ಲಿನ ಸಂಘಟನಾ ಶಕ್ತಿ ಮೊದಲಿನಂತಿಲ್ಲ. ಇಂತಹ ಸಮಯದಲ್ಲಿ ಮೈತ್ರಿ ಪಕ್ಷದೊಂದಿಗೂ ಸಮಸ್ಯೆ ಉದ್ಭವಿಸಿದರೆ, ಮುಂದಿನ ಚುನಾವಣೆಯಲ್ಲಿ ಪಕ್ಷಕ್ಕೆ ಬಹುದೊಡ್ಡ ಹೊಡೆತ ಬೀಳಲಿದೆ. ಅದರಲ್ಲಿಯೂ ಹಳೇ ಮೈಸೂರು ಭಾಗದಲ್ಲಿ ಪಕ್ಷದ ಅಧಿಪತ್ಯ ಸಾಧಿಸುವ ಆಲೋಚನೆಯಲ್ಲಿರುವ ಬಿಜೆಪಿ ವರಿಷ್ಠರ ಲೆಕ್ಕಾಚಾರಗಳಿಗೆ ಸಮಸ್ಯೆಯಾಗಲಿದೆ ಎನ್ನುವ ಆತಂಕ ದೆಹಲಿ ನಾಯಕರಲ್ಲಿದೆ. ಆ ಕಾರಣಕ್ಕೆ ಸೋಲಾಗುತ್ತಿದ್ದಂತೆ ಜೆಡಿಎಸ್ ರಾಜ್ಯಾಧ್ಯಕ್ಷ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಕರೆ ಮಾಡಿ 'ನೀವು ಚಿಂತಿಸಬೇಡಿ. ರಾಜ್ಯ ಬಿಜೆಪಿಯನ್ನು ನಾವು ಸರಿಪಡಿಸುತ್ತೇವೆ' ಎನ್ನುವ ಮಾತುಗಳನ್ನು ಆಡಿದ್ದಾರೆ.

ಮೇಲ್ನೋಟಕ್ಕೆ ಬಿಜೆಪಿಯಲ್ಲಿನ ಸಮಸ್ಯೆ ಇಂದು ಬೃಹದಾಕಾರವಾಗಿ ಕಾಣಿಸುತ್ತಿದ್ದರೂ, ಸಮಸ್ಯೆ ವರ್ಷಗಳಿಂದಲೇ ಆಗಾಗ್ಗೆ ಸಣ್ಣದಾಗಿ ಸ್ಫೋಟವಾಗುತ್ತಿತ್ತು. ಬಿಜೆಪಿ ರಾಜ್ಯಾಧ್ಯಕ್ಷರಾಗಿ ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕರಾಗಿ ಆರ್.ಅಶೋಕ್ ಆಯ್ಕೆಯಾದಾಗಿನಿಂದಲೂ ಈ ಸಮಸ್ಯೆ ಪದೇಪದೆ ಮುನ್ನಲೆಗೆ ಬರುತ್ತಿತ್ತು. ಮುಡಾ ಪಾದಯಾತ್ರೆಯನ್ನು ವಿಜಯೇಂದ್ರ ಆರಂಭಿಸಿದಾಗ, ಹಲವು ನಾಯಕರು ದೂರ ಉಳಿದರು. ವಿಜಯೇಂದ್ರ ವಿರುದ್ಧ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ತಂಡ ನಿರಂತರವಾಗಿ ವಾಗ್ದಾಳಿ ನಡೆಸುತ್ತಿದ್ದರೂ, ಅದನ್ನು ಸರಿಮಾಡುವ ಗೋಜಿಗೆ ಬಿಜೆಪಿ ವರಿಷ್ಠರು ಹೋಗಲಿಲ್ಲ.

ಸದನದೊಳಗೂ ವಿಜಯೇಂದ್ರ, ಅಶೋಕ್ ಹಾಗೂ ಪಕ್ಷದ ಹಿರಿಯ ಶಾಸಕರ ನಡುವೆ ಸಮನ್ವಯತೆಯ ಕೊರತೆ ಪ್ರತಿಹಂತದಲ್ಲಿಯೂ ಕಾಣಿಸುತ್ತಿತ್ತು. ಈ ಎಲ್ಲ ಗೊಂದಲ, ಗೋಜಲು, ಅಸಮಾಧಾನದ ಲಾಭವನ್ನು ಬಳಸಿಕೊಂಡಿದ್ದು ಮಾತ್ರ ಕಾಂಗ್ರೆಸ್. ಸರಕಾರದ ವಿರುದ್ಧ ಹಲವು ಆರೋಪಗಳು ಕೇಳಿಬಂದರೂ, ಅವುಗಳನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವ ಸಮನ್ವಯತೆ ಬಿಜೆಪಿಯಲ್ಲಿ ಕಾಣಿಸಲಿಲ್ಲ. ಕೇಳಿಬಂದ ಆರೋಪಗಳನ್ನು ಮುಂದಿಟ್ಟುಕೊಂಡು ಜನಾಕ್ರೋಶ ಮೂಡಿಸಬೇಕಿದ್ದ ಪ್ರತಿಪಕ್ಷದಲ್ಲಿಯೇ ಅಸಮಾಧಾನ ಭುಗಿಲೆದ್ದಿದ್ದರಿಂದ ಆಡಳಿತ ಪಕ್ಷ ಕಾಂಗ್ರೆಸ್‌ಗೆ ವರವಾಯಿತು. ವಿಧಾನಪರಿಷತ್ ಚುನಾವಣೆಯಲ್ಲಿಯೂ ಬಿಜೆಪಿ-ಜೆಡಿಎಸ್‌ನಲ್ಲಿ 'ಲೋಪ'ವನ್ನು ಬಳಸಿಕೊಂಡ ಡಿಕೆಶಿ ತಮ್ಮ ಪಕ್ಷದ ಐವರನ್ನು ವಿಧಾನಪರಿಷತ್ ಪ್ರವೇಶಿಸುವಂತೆ ನೋಡಿಕೊಂಡರು. ಅದರಲ್ಲಿಯೂ ಯಾವ ಅಭ್ಯರ್ಥಿಯ (ವಿನಯ್ ಕಾರ್ತಿಕ್) ಗೆಲುವು ಅನಿಶ್ಚಿತತೆಯಿಂದ ಇತ್ತೋ ಅದೇ ಅಭ್ಯರ್ಥಿಗೆ ಅತಿಹೆಚ್ಚು ಅಂದರೆ 32 ಮತ ಸಿಗುವಂತಾಯಿತು.

ಮುಂದಿನ ಕೆಲ ತಿಂಗಳ ಅಂತರದಲ್ಲಿ ರಾಜ್ಯದಲ್ಲಿ ಸರಣಿ ಚುನಾವಣೆಗಳು ನಡೆಯಲಿವೆ. ಆಗಸ್ಟ್‌ನಲ್ಲಿ ಜಿಬಿಎ ಚುನಾವಣೆ, ಬಳಿಕ ಸ್ಥಳೀಯ ಸಂಸ್ಥೆ ಚುನಾವಣೆ, ನವೆಂಬರ್‌ನಲ್ಲಿ ಶಿಕ್ಷಕರ, ಪದವೀಧರರ ಚುನಾವಣೆಗೆ ಅಖಾಡ ಸಜ್ಜಾಗಿದೆ. ಈ ಎಲ್ಲ ಚುನಾವಣೆಗಳೂ ಒಂದಿಲ್ಲೊಂದು ರೀತಿ 2028ರ ಸಾರ್ವತ್ರಿಕ ಚುನಾವಣೆ ಎತ್ತ ಸಾಗಬಹುದು ಎನ್ನುವ ದಿಕ್ಕನ್ನು ತೋರಿಸಲಿವೆ. ಅದರಲ್ಲಿಯೂ ಅಹಿಂದ ನಾಯಕ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ, ಡಿಕೆಶಿ ಪಟ್ಟಕ್ಕೆ ಬಂದಿರುವ ಹೊಸ್ತಿಲಿನಲ್ಲಿ ಜನ ಇದನ್ನು ಯಾವ ರೀತಿ ಸ್ವೀಕರಿಸಲಿದ್ದಾರೆ ಎನ್ನುವ ಕುತೂಹಲಕ್ಕೆ ಉತ್ತರ ನೀಡುವ ಕೆಲಸವನ್ನು ಈ ಎಲ್ಲ ಚುನಾವಣೆಗಳು ಮಾಡಲಿದೆ. ಈ ಎಲ್ಲ ಚುನಾವಣೆಗೂ ಮೊದಲೇ ಎದುರಾದ ಮೊದಲ ಟಾಸ್ಕ್ ಎನ್ನುವಂತಿದ್ದ ವಿಧಾನಪರಿಷತ್ ಚುನಾವಣೆಯಲ್ಲಿ ಐದನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬಂದಿರುವುದು ಡಿ.ಕೆ.ಶಿವಕುಮಾರ್ ಅವರಿಗೆ ನೈತಿಕ ಬಲ ಹೆಚ್ಚಿಸಿರುವುದಂತೂ ಸುಳ್ಳಲ್ಲ.

ಐದನೇ ಅಭ್ಯರ್ಥಿ ಕಾಂಗ್ರೆಸ್ ಗೆದ್ದಿರುವುದರಿಂದ ಪರಿಷತ್‌ನಲ್ಲಿ ಸಂಖ್ಯಾಬಲ ಹೆಚ್ಚುವುದಷ್ಟೇ ಅಲ್ಲದೇ, ಪ್ರತಿಪಕ್ಷದೊಳಗೆ ಸೃಷ್ಟಿಸಿರುವ ಅಂತಃಕಲಹವೂ ಡಿಕೆಶಿವಕುಮಾರ್ ಹಾಗೂ ಕಾಂಗ್ರೆಸ್ ಪಾಲಿಗೆ ಪ್ಲಸ್ ಪಾಯಿಂಟ್ ಎಂದರೆ ತಪ್ಪಾಗುವುದಿಲ್ಲ. ಬಿಜೆಪಿ-ಜೆಡಿಎಸ್ ಇಬ್ಬರನ್ನೂ ಸೇರಿಸಿ 11 ಅಡ್ಡಮತದಾನ, ಒಂದು ಮತದಾನ ಅಸಿಂಧುವಾಗಿರುವುದರಿಂದ ಇದರ ಮೂಲ ಹುಡುಕುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ. ಇದಕ್ಕಾಗಿ ಸತ್ಯಶೋಧನಾ ಸಮಿತಿಯನ್ನೂ ಮಾಡಲಾಗಿದೆ. ಆದರೆ ಗೌಪ್ಯ ಮತದಾನವಾಗಿರುವುದರಿಂದ, 'ಸಾಕ್ಷ್ಯ' ಸಮೇತ ಒಬ್ಬ ಶಾಸಕರತ್ತ ಬೊಟ್ಟು ಮಾಡಲು ಸಾಧ್ಯವಿಲ್ಲದೇ ಇರುವುದರಿಂದ ಈ ಸತ್ಯಶೋಧನಾ ಸಮಿತಿಯ ವರದಿಯ ಆಧಾರದಲ್ಲಿ 'ಕಠಿಣ' ಕ್ರಮ ತೆಗೆದುಕೊಳ್ಳುವುದು ತೀರಾ ಕಠಿಣ. ಆದರೆ, ಮೈತ್ರಿಯಲ್ಲಿ ಒಬ್ಬರನ್ನೊಬ್ಬರು ನಂಬದ ಸ್ಥಿತಿಯನ್ನು ಅಂತು ಈ 11 ಮತಗಳು ಸೃಷ್ಟಿಸಿವೆ.

ಐದನೇ ಅಭ್ಯರ್ಥಿಯ ಡಿ.ಕೆ.ಶಿವಕುಮಾರ್ ಆಲೋಚನೆ ಹಾಗೂ ಸೋತರೂ ಪರವಾಗಿಲ್ಲ ತಮ್ಮ ಪಕ್ಷದ ಶಾಸಕ 'ನಿಷ್ಠೆ'ಯನ್ನು ಪರೀಕ್ಷಿಸುವ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ನಡೆ, ಇಕ್ಕಟ್ಟಿಗೆ ಸಿಲುಕಿಸಿರುವುದು ರಾಜ್ಯ ಬಿಜೆಪಿ ನಾಯಕತ್ವವನ್ನು. ಜೆಡಿಎಸ್ ಅಭ್ಯರ್ಥಿ ಗೆಲುವು ಸಾಧ್ಯವಾಗದಿದ್ದರೂ, ಬರಬೇಕಿದ್ದ ಮತಗಳು ಬಂದಿದ್ದರೆ ರಾಜ್ಯ ಬಿಜೆಪಿಯ ಮೇಲೆ ಜೆಡಿಎಸ್ ನಾಯಕರಿಗೂ ನಂಬಿಕೆ ಬರುತ್ತಿತ್ತು. ಆದರೀಗ ಅಡ್ಡಮತದಾನ ಹಾಗೂ ನಿರೀಕ್ಷೆಯಂತೆ ಮತ ಹಂಚದೇ ಇರುವುದು ರಾಜ್ಯ ಬಿಜೆಪಿ ನಾಯಕತ್ವದ ಮೇಲಿನ ಅಪನಂಬಿಕೆ ಮತ್ತಷ್ಟು ಹೆಚ್ಚಾಗುವಂತೆ ಮಾಡಿದೆ.

ಹಾಗೇ ನೋಡಿದರೆ, ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ವರಿಷ್ಠರೊಂದಿಗೆ ಕುಮಾರಸ್ವಾಮಿ, ದೇವೇಗೌಡರು ಉತ್ತಮ ಒಡನಾಟ ಹೊಂದಿದ್ದರೂ, ರಾಜ್ಯದಲ್ಲಿ ಈ ಪ್ರಮಾಣದಲ್ಲಿ ಹೊಂದಾಣಿಕೆ ಕಾಣಿಸಿಲ್ಲ. ಈ ಹಿಂದೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ನಡೆದ ಮುಡಾ ಪಾದಯಾತ್ರೆ ವೇಳೆ, ಜೆಡಿಎಸ್ ನಾಮ್‌ಕೆವಾಸ್ತೆ ಭಾಗವಹಿಸಿತ್ತು. ಇದಾದ ಬಳಿಕ ಸದನದೊಳಗೆ ನಡೆಯುವ ಹಲವು ಹೋರಾಟಗಳಿಗೆ ಬಿಜೆಪಿ-ಜೆಡಿಎಸ್ ನಡುವೆ ಸಂವಹನ ಕಾಣಿಸುತ್ತಿಲ್ಲ. ಇದಕ್ಕೂ ಮೀರಿ 2024ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಸೋಲಿಗೆ ಸ್ಥಳೀಯ ಬಿಜೆಪಿ ನಾಯಕರ 'ಕುತಂತ್ರ'ವೇ ಕಾರಣ ಎನ್ನುವ ಆರೋಪ ಈಗಲೂ ಜೆಡಿಎಸ್ ಪಾಳಯದಲ್ಲಿ ಕೇಳಿಬರುತ್ತಿದೆ. ಈ ಕಾರಣಕ್ಕೆ ಕೆಲ ತಿಂಗಳ ಹಿಂದೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೈತ್ರಿಯಿಲ್ಲ ಎನ್ನುವ ಮಾತನ್ನು ಕುಮಾರಸ್ವಾಮಿ ಅವರು ಘೋಷಿಸಿ, ಬಳಿಕ ದೇವೇಗೌಡರು ದೆಹಲಿ ನಾಯಕರೊಂದಿಗೆ ಚರ್ಚಿಸಿದ ಬಳಿಕ ಮೈತ್ರಿ ಬಗ್ಗೆ ತೀರ್ಮಾನಿಸುವುದಾಗಿ ಹೇಳಿದ್ದರು.

ಅಡ್ಡ ಮತದಾನವಾಗಿದ್ದಕ್ಕೆ ಇದೀಗ ಜೆಡಿಎಸ್ ಅಭ್ಯರ್ಥಿಗೆ ಮೈತ್ರಿ ಪಕ್ಷದಿಂದ ವಂಚನೆಯಾಗಿದೆ ಎನ್ನುವ ಅರ್ಥದಲ್ಲಿ ಮಾತುಗಳು ಕೇಳಿಬರುತ್ತಿದೆ. ಆದರೆ ಬಿಜೆಪಿಯಿಂದ ಸಿಗಬೇಕಿದ್ದ ಆರು ಮತಗಳು ಸೇರಿದಂತೆ ಜೆಡಿಎಸ್‌ನ 18 ಮತಗಳು ಜೆಡಿಎಸ್ ಅಭ್ಯರ್ಥಿಗೆ ಸಿಕ್ಕಿದ್ದರೂ, ಗೆಲ್ಲುವುದಕ್ಕೆ ಆರು ಮತಗಳ ಕೊರತೆಯಿತ್ತು. ಅಭ್ಯರ್ಥಿಯನ್ನು ಹಾಕುವಾಗಲೇ, ಪಕ್ಷೇತರರು ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸುವುದು, ಜೆಡಿಎಸ್‌ನಲ್ಲಿ ನಾಲ್ಕೈದು ಮತಗಳು ಅಡ್ಡ ಮತದಾನವಾಗುವ ಸುಳಿವಿತ್ತು. ಆದರೂ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದ್ದು, ಜೆಡಿಎಸ್ ಒಂದು ಸ್ಥಾನವನ್ನು ಗೆಲ್ಲಬೇಕು ಎನ್ನುವುದಕ್ಕಿಂತ ಹೆಚ್ಚಾಗಿ ಪಕ್ಷದಲ್ಲಿರುವ 'ಬಲ' ಹಾಗೂ ಮೈತ್ರಿ ಪಕ್ಷದ ಮೇಲಿಡಬಹುದಾದ ನಂಬಿಕೆಯನ್ನು ತಿಳಿಯಲು ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಈ ಅಂಶವನ್ನು ಸ್ವತಃ ಎಚ್.ಡಿ.ಕುಮಾರಸ್ವಾಮಿ ಅವರೇ ಒಪ್ಪಿಕೊಂಡಿದ್ದಾರೆ.

ಕುಮಾರಸ್ವಾಮಿ ಅವರು ರಾಜ್ಯ ಬಿಜೆಪಿಯನ್ನು ಎಷ್ಟರ ಮಟ್ಟಿಗೆ ನಂಬಬಹುದು ಎನ್ನುವ ಕಾರಣಕ್ಕೆ ತಮ್ಮ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದ್ದರು. ಆದರೆ ಈ ನಡೆಯಿಂದ ಚುನಾವಣೆ ನಡೆದು, ಜೆಡಿಎಸ್‌ಗಿಂತ ಹೆಚ್ಚಿನ ಸಮಸ್ಯೆ ಬಿಜೆಪಿಯಲ್ಲಿದೆ ಎನ್ನುವುದನ್ನು ಬಹಿರಂಗಪಡಿಸಿದ್ದಾರೆ. ಆರು ಮಂದಿಯ ಅಡ್ಡಮತದಾನ, ಒಬ್ಬರ ಮತ ಅಸಿಂಧುವಿನ ಬೆನ್ನಲ್ಲೇ, ಸತ್ಯಶೋಧನಾ ಸಮಿತಿ, ಆಣೆ ಪ್ರಮಾಣ, ದೆಹಲಿ ನಾಯಕರಿಗೆ ವರದಿಯ ಪ್ರಕ್ರಿಯೆಗಳನ್ನು ಆರಂಭಿಸಿರುವ ಬಿಜೆಪಿ, ಚುನಾವಣೆಗೆ ಮೊದಲು ಕಾಂಗ್ರೆಸ್ ರೀತಿಯಲ್ಲಿ ತನ್ನ ಶಾಸಕರನ್ನು ಒಗ್ಗೂಡಿಸಿಕೊಳ್ಳುವ ಪ್ರಯತ್ನವನ್ನು ಏಕೆ ಮಾಡಲಿಲ್ಲ ಎನ್ನುವ ಪ್ರಶ್ನೆ ಅನೇಕರಲ್ಲಿದೆ. ರೆಸಾರ್ಟ್‌ಗೆ ಕರೆದೊಯ್ದು ಮಾತ್ರಕ್ಕೆ, ಎಲ್ಲವೂ ಸರಿ ಹೋಗುತ್ತಿತ್ತು ಎನ್ನುವುದಕ್ಕಿಂತ ಕನಿಷ್ಠ 'ಪ್ರಯತ್ನ'ವನ್ನಾದರೂ ಮಾಡಬಹುದಾಗಿತ್ತು ಎನ್ನುವುದು ಪಕ್ಷದೊಳಗಿನ ಮಾತಾಗಿದೆ. ಪರಿಷತ್‌ನ ಅಡ್ಡಮತದಾನ ಇದೀಗ ಪಕ್ಷದೊಳಗಿದ್ದ ಬೇಗುದಿಯನ್ನು ಬಹಿರಂಗಪಡಿಸಿದೆ. ಈ ಹಿಂದೆ ಹಲವು ಬಾರಿ ಈ ಬೇಗುದಿಯ ಬಗ್ಗೆ ದೆಹಲಿ ಬಿಜೆಪಿ ನಾಯಕರ ಗಮನಕ್ಕೆ ತರುವ ಪ್ರಯತ್ನ ನಡೆದಿವೆಯಾದರೂ, ಅದ್ಯಾವುದನ್ನು ಗಂಭೀರವಾಗಿ ಪರಿಗಣಿಸದೇ 'ನೋಡೋಣ' ಎನ್ನುವ ಮನಸ್ಥಿತಿಯಲ್ಲಿ ನಾಯಕರಿದ್ದರು. ಇನ್ನಾದರೂ ಎಚ್ಚೆತ್ತು ಕರ್ನಾಟಕ ಬಿಜೆಪಿಯನ್ನು 'ಟೈಟ್' ಮಾಡುವತ್ತ ಗಮನ ಹರಿಸುವರೋ ಅಥವಾ ಈ ವಿಷಯವನ್ನೂ 'ಚುನಾವಣೆ ವೇಳೆಗೆ ನೋಡಿಕೊಳ್ಳೋಣ' ಎಂದು ಮುಂದಕ್ಕೆ ತಳ್ಳುತ್ತಾರೋ ಎನ್ನುವುದಕ್ಕೆ ಶೀಘ್ರವೇ ತೆರೆಯ ಮೇಲೆ ಉತ್ತರ ಸಿಗಲಿದೆ.

ಯುದ್ಧದ ಹೊಸ ವ್ಯಾಕರಣವನ್ನು ಭಾರತ ಓದಲೇಬೇಕು!

ಸಮರಕಣ

ಡಾ. ಜಗದೀಶ ಮಾನೆ
vveditoped@gmail.com

ಜಗತ್ತು ಬದಲಾಗುತ್ತಿದೆ. ಅದರೊಂದಿಗೆ ಯುದ್ಧಗಳ ಸ್ವರೂಪವೂ ಬದಲಾಗುತ್ತಿದೆ. ಒಂದು ಕಾಲದಲ್ಲಿ ಕತ್ತಿ ಹಿಡಿದ ಯೋಧನ ಶೌರ್ಯ ವಿಜಯವನ್ನು ನಿರ್ಧರಿಸುತ್ತಿತ್ತು. ನಂತರ ಬಂದೂಕುಗಳು, ಫಿರಂಗಿಗಳು ಮತ್ತು ಯುದ್ಧ ವಿಮಾನಗಳು ಆ ಸ್ಥಾನವನ್ನು ಪಡೆದವು. ಇಂದು ಮಾಹಿತಿ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಗುಪ್ತಚರ ಸಾಮರ್ಥ್ಯಗಳು ಹೊಸ ಯುಗದ ನಿರ್ಣಾಯಕ ಶಕ್ತಿಗಳಾಗಿವೆ. ಈ ಬದಲಾವಣೆಯನ್ನು ಅರ್ಥ ಮಾಡಿಕೊಂಡ ರಾಷ್ಟ್ರಗಳೇ ಭವಿಷ್ಯದಲ್ಲಿ ಜಾಗತಿಕ ನಾಯಕತ್ವ ವಹಿಸಲಿವೆ. ಭಾರತವು ತನ್ನ ಅಪಾರ ಮಾನವ ಸಂಪನ್ಮೂಲ, ವೈಜ್ಞಾನಿಕ ಸಾಮರ್ಥ್ಯ ಮತ್ತು ತಂತ್ರಜ್ಞಾನ ಶಕ್ತಿಯನ್ನು ರಾಷ್ಟ್ರೀಯ ಭದ್ರತೆಯೊಂದಿಗೆ ಸಮನ್ವಯಗೊಳಿಸಿದರೆ, ಅದು ಕೇವಲ ತನ್ನ ಗಡಿಗಳನ್ನು ರಕ್ಷಿಸುವ ರಾಷ್ಟ್ರವಾಗಿ ಅಷ್ಟೇ ಉಳಿಯುವುದಿಲ್ಲ; ಜಾಗತಿಕ ಭದ್ರತಾ ಸಮೀಕರಣಗಳನ್ನು ರೂಪಿಸುವ ರಾಷ್ಟ್ರವಾಗಿ ಹೊರಹೊಮ್ಮಲಿದೆ. ಭವಿಷ್ಯದ ಯುದ್ಧಗಳಲ್ಲಿ ವಿಜಯವು ಹೆಚ್ಚು ಸೈನಿಕರನ್ನು ಹೊಂದಿದ ರಾಷ್ಟ್ರಕ್ಕೆ ಸಿಗುವುದಿಲ್ಲ; ಬದಲಾಗಿ ಹೆಚ್ಚು ದೂರದೃಷ್ಟಿ, ಹೆಚ್ಚು ನಿಖರತೆ, ಹೆಚ್ಚು ಮಾಹಿತಿ ಮತ್ತು ಹೆಚ್ಚು ಸಿದ್ಧತೆಯನ್ನು ಹೊಂದಿದ ರಾಷ್ಟ್ರಕ್ಕೆ ಸಿಗುತ್ತದೆ.

ಇತ್ತೀಚಿನ ಪಶ್ಚಿಮ ಏಷ್ಯಾದ ಬೆಳವಣಿಗೆಗಳ ಸಂದರ್ಭದಲ್ಲಿ ಇಸ್ರೇಲ್ ಮತ್ತು ಅಮೆರಿಕ ಬಳಸಿದ ಕೆಲವು ತಂತ್ರಗಾರಿಕೆಗಳು ಸಾಕಷ್ಟು ಚರ್ಚೆಗೆ ಗ್ರಾಸವಾಗಿವೆ. ಇದು ಯುದ್ಧವನ್ನು ಆರಂಭಿಸುವ ಮೊದಲೇ ಯುದ್ಧದಲ್ಲಿ ಮೇಲುಗೈ ಸಾಧಿಸುವ ತಂತ್ರವಾಗಿದೆ. ಶತ್ರುವಿನ ನಿರ್ಧಾರ ಕೇಂದ್ರಗಳು, ನಾಯಕತ್ವ, ಭದ್ರತಾ ವ್ಯವಸ್ಥೆ ಹಾಗೂ ಪ್ರಮುಖ ಮೂಲ ಸೌಕರ್ಯಗಳನ್ನು ಗುರಿಯಾಗಿಸಿಕೊಂಡು ನಡೆಸುವ ನಿಖರ ಕಾರ್ಯಾಚರಣೆಗಳು ಆಧುನಿಕ ಯುದ್ಧದ ಹೊಸ ಮುಖವಾಗಿ ಕಾಣಿಸುತ್ತಿವೆ. ಇಂತಹ ಕಾರ್ಯಾಚರಣೆಗಳ ವಿಶೇಷತೆ ಏನೆಂದರೆ, ಅವುಗಳಲ್ಲಿ ಗುರಿಯಾಗುವುದು ಯಾವುದೇ ನಗರ ಅಥವಾ ಪ್ರದೇಶವಲ್ಲ; ಬದಲಾಗಿ ನಿರ್ದಿಷ್ಟ ವ್ಯಕ್ತಿಗಳು, ನಿರ್ದಿಷ್ಟ ಸ್ಥಳಗಳು ಮತ್ತು ನಿರ್ದಿಷ್ಟ ನಿರ್ಧಾರ ಕೇಂದ್ರಗಳು. ಒಬ್ಬ ವ್ಯಕ್ತಿ ಕುಳಿತಿರುವ ಸ್ಥಳ, ಆತ ಇರುವ ಕಟ್ಟಡ ಅಥವಾ ಆತ ಭಾಗವಹಿಸುತ್ತಿರುವ ಸಭೆಯ ಕುರಿತ ನಿಖರ ಮಾಹಿತಿ ಸಂಗ್ರಹಿಸಿ ಅದರ ಆಧಾರದ ಮೇಲೆ ಕಾರ್ಯಾಚರಣೆ ನಡೆಸುವ ಸಾಮರ್ಥ್ಯವೇ ಇಂದಿನ ಯುದ್ಧತಂತ್ರದ ಪ್ರಮುಖ ಅಂಶವಾಗಿದೆ. ಈ ರೀತಿಯ ಕಾರ್ಯಾಚರಣೆಗಳನ್ನು ಸಾಧ್ಯವಾಗಿಸುವುದು ಕೇವಲ ಅತ್ಯಾಧುನಿಕ ಆಯುಧಗಳಲ್ಲ; ವರ್ಷಗಳ ಕಾಲ ನಿರ್ಮಿಸಿಕೊಂಡಿರುವ ಗುಪ್ತಚರ ಜಾಲ ಮತ್ತು ಮಾಹಿತಿಯ ಸಂಗ್ರಹವೇ ಅದರ ನಿಜವಾದ ಶಕ್ತಿ. ಈ ಹಿನ್ನೆಲೆಯಲ್ಲಿ ಇಸ್ರೇಲಿನ ಗುಪ್ತಚರ ಸಂಸ್ಥೆ 'ಮೊಸ್ಸಾದ್' ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಇಂತಹ ಯಶಸ್ವಿ ಕಾರ್ಯಾಚರಣೆಗಳ ಹಿಂದೆ ದಶಕಗಳ ಕಾಲ ಸಂಗ್ರಹಿಸಲಾದ ಮಾಹಿತಿ, ಸ್ಥಳೀಯ ಮಟ್ಟದಲ್ಲಿ ನಿರ್ಮಿಸಲಾದ ಸಂಪರ್ಕಗಳು ಮತ್ತು ದೀರ್ಘಕಾಲದ ತಂತ್ರಗಾರಿಕೆ ಅಡಗಿರುತ್ತದೆ. ಒಂದು ಕಾರ್ಯಾಚರಣೆ ಕೆಲವೇ ನಿಮಿಷಗಳಲ್ಲಿ ಮುಗಿಯಬಹುದು; ಆದರೆ ಅದರ ಹಿಂದಿರುವ ಸಿದ್ಧತೆ ಹಲವಾರು ವರ್ಷಗಳದ್ದಾಗಿರುತ್ತದೆ.

ಇಸ್ರೇಲ್ ಹಲವು ವರ್ಷಗಳಿಂದ ಇರಾನ್‌ನ ಚಟುವಟಿಕೆಗಳ ಮೇಲೆ ತೀವ್ರ ನಿಗಾ ಇಟ್ಟಿತ್ತು. ಹಲವು ವರ್ಷಗಳಿಂದ ಇರಾನ್ ಮತ್ತು ಇಸ್ರೇಲ್ ನಡುವಿನ ವೈಮನಸ್ಸು, ಪರೋಕ್ಷ ಸಂಘರ್ಷಗಳು ಹಾಗೂ ಪ್ರಾದೇಶಿಕ ಪ್ರಭಾವಕ್ಕಾಗಿ ನಡೆಯುತ್ತಿರುವ ಪೈಪೋಟಿ ಪಶ್ಚಿಮ ಏಷ್ಯಾದ ರಾಜಕೀಯದ ಪ್ರಮುಖ ಭಾಗವಾಗಿದೆ. ಹೀಗಾಗಿ ತನ್ನ ಭದ್ರತೆಯ ದೃಷ್ಟಿಯಿಂದ ಇಸ್ರೇಲ್ ಇರಾನ್‌ನ ಪ್ರತಿಯೊಂದು ಹೆಜ್ಜೆಯ ಮೇಲೂ ಕಣ್ಣಿಟ್ಟಿದೆ. ಈ ರೀತಿಯ ಕಾರ್ಯಾಚರಣೆಗಳಲ್ಲಿ ತೊಡಗುವ ಗುಪ್ತಚರರು ಸಾಮಾನ್ಯ ವ್ಯಕ್ತಿಗಳಂತೆ ಶತ್ರು ರಾಷ್ಟ್ರದೊಳಗೆ ಬೆರೆತು ಬದುಕುತ್ತಾರೆ. ಅವರು ಅಲ್ಲಿನ ಜನರ ಭಾಷೆ, ಸಂಸ್ಕೃತಿ, ಜೀವನಶೈಲಿ ಹಾಗೂ ಸಾಮಾಜಿಕ ವ್ಯವಸ್ಥೆಯೊಂದಿಗೆ ಬೆರೆತು, ಸ್ಥಳೀಯರ ವಿಶ್ವಾಸ ಗಳಿಸಿಕೊಂಡು ಕಾರ್ಯನಿರ್ವಹಿಸುತ್ತಾರೆ. ಹೊರಗಿನಿಂದ ನೋಡಿದಾಗ ಅವರು ಸಾಮಾನ್ಯ ನಾಗರಿಕರಂತೆ ಕಾಣಬಹುದು; ಆದರೆ ಅವರ ಮೂಲ ಉದ್ದೇಶ ಮಾಹಿತಿಯನ್ನು ಸಂಗ್ರಹಿಸಿ ತಮ್ಮ ರಾಷ್ಟ್ರದ ಭದ್ರತಾ ವ್ಯವಸ್ಥೆಗೆ ರವಾನಿಸುವುದಾಗಿರುತ್ತದೆ. ಇಂತಹ ಕಾರ್ಯಾಚರಣೆಗಳಲ್ಲಿ ಸಮಯದ ಮಹತ್ವ ಅಪಾರ. ಒಂದು ಸಭೆ ಯಾವಾಗ ನಡೆಯುತ್ತದೆ, ಯಾರು ಭಾಗವಹಿಸುತ್ತಾರೆ, ಯಾವ ಸ್ಥಳದಲ್ಲಿ ನಡೆಯುತ್ತದೆ ಎಂಬಂತಹ ಮಾಹಿತಿಗಳು ಕೆಲವೊಮ್ಮೆ ಯುದ್ಧದ ದಿಕ್ಕನ್ನೇ ಬದಲಾಯಿಸುವ ಸಾಮರ್ಥ್ಯ ಹೊಂದಿರುತ್ತವೆ. ಈ ಕಾರಣಕ್ಕಾಗಿಯೇ ಇಂದಿನ ಯುದ್ಧಗಳಲ್ಲಿ ಮಾಹಿತಿಯೇ ಅತ್ಯಂತ ಪ್ರಬಲ ಆಯುಧವಾಗಿದೆ.

ಇತ್ತೀಚಿನ ಪಶ್ಚಿಮ ಏಷ್ಯಾದ ಬೆಳವಣಿಗೆಗಳನ್ನು ಗಮನಿಸಿದರೆ, ಆಧುನಿಕ ಯುದ್ಧಗಳಲ್ಲಿ ಆತುರಕ್ಕಿಂತ 'ನಿಖರತೆ' ಎಂಬ ತತ್ವಕ್ಕೆ ಹೆಚ್ಚಿನ ಮಹತ್ವ ಸಿಕ್ಕಿರುವುದು ಸ್ಪಷ್ಟವಾಗುತ್ತದೆ. ಹಿಂದೆ ಯುದ್ಧಗಳು

ತಿಂಗಳುಗಟ್ಟಲೆ ನಡೆಯುತ್ತಿದ್ದವು. ಆದರೆ ಇಂದು ಕೆಲವೇ ಗಂಟೆಗಳಲ್ಲಿ ಅಥವಾ ಕೆಲವೇ ನಿಮಿಷಗಳಲ್ಲಿ ಯುದ್ಧದ ದಿಕ್ಕನ್ನೇ ಬದಲಾಯಿಸುವ ಕಾರ್ಯಾಚರಣೆಗಳು ನಡೆಯುತ್ತಿವೆ. ಈ ಬದಲಾವಣೆಯ ಹಿಂದೆ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಉಪಗ್ರಹ ನಿಗಾ ವ್ಯವಸ್ಥೆಗಳು ಹಾಗೂ ಅತ್ಯಾಧುನಿಕ ಗುಪ್ತಚರ ಜಾಲಗಳ ಪಾತ್ರ ನಿರ್ಣಾಯಕವಾಗಿದೆ. ಯಶಸ್ವಿ ಗುಪ್ತಚರ ಕಾರ್ಯಾಚರಣೆಯ ನಿಜವಾದ ಶಕ್ತಿ ಅದರ ಗೌಪ್ಯತೆಯಲ್ಲಿ ಅಡಗಿರುತ್ತದೆ. ಕೆಲವೊಮ್ಮೆ ಕಾರ್ಯಾಚರಣೆ ಪೂರ್ಣಗೊಂಡ ನಂತರವೇ ಅದರ ಪರಿಣಾಮದ ಅರಿವು ಎದುರಾಳಿಗೆ ಆಗುತ್ತದೆ. ಇದೇ ಕಾರಣದಿಂದ ಇಂದಿನ ಜಗತ್ತಿನಲ್ಲಿ ಮಾಹಿತಿ ಸಂಗ್ರಹ ಮತ್ತು ಮಾಹಿತಿ ರಕ್ಷಣೆ ಎರಡೂ ಸಮಾನವಾಗಿ ಮಹತ್ವ ಪಡೆದಿವೆ.

ಸದ್ಯ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷಗಳು ಕೇವಲ ಎರಡು ರಾಷ್ಟ್ರಗಳ ನಡುವಿನ ವಿವಾದಗಳಾಗಿ ಉಳಿದಿಲ್ಲ. ಅವುಗಳ ಪರಿಣಾಮ ಇಡೀ ಪ್ರದೇಶದ ರಾಜಕೀಯ, ಭದ್ರತಾ ವ್ಯವಸ್ಥೆ ಮತ್ತು ಜಾಗತಿಕ ಶಕ್ತಿಗಳ ಸಮೀಕರಣಗಳ ಮೇಲೂ ಬೀಳುತ್ತಿದೆ. ವಿವಿಧ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳಿಗೆ ಅನುಗುಣವಾಗಿ ವಿವಿಧ ಬಣಗಳ ಪರ ನಿಂತಿರುವುದರಿಂದ ಪರಿಸ್ಥಿತಿ ಇನ್ನಷ್ಟು ಸಂಕೀರ್ಣವಾಗಿದೆ. ಇದೇ ಸಂದರ್ಭದಲ್ಲಿ ಇಸ್ರೇಲ್ ತನ್ನ ಭೌಗೋಳಿಕ ಮತ್ತು ರಾಜತಾಂತ್ರಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಿರುವ ತಂತ್ರಗಳು ಸಾಕಷ್ಟು ಚರ್ಚೆಗೆ ಕಾರಣವಾಗಿವೆ. ತನ್ನ ಸುತ್ತಲಿನ ಭದ್ರತಾ ಸವಾಲುಗಳನ್ನು ಎದುರಿಸಲು ಅದು ವರ್ಷಗಳಿಂದ ರೂಪಿಸಿಕೊಂಡಿರುವ ನೀತಿಗಳು, ಗುಪ್ತಚರ ವ್ಯವಸ್ಥೆ ಮತ್ತು ತಂತ್ರಜ್ಞಾನ ಆಧಾರಿತ ಭದ್ರತಾ ವ್ಯವಸ್ಥೆಗಳು ಇಂದು ಅದರ ಪ್ರಮುಖ ಶಕ್ತಿಯಾಗಿ ಪರಿಣಮಿಸಿವೆ.

ಆತುರಕ್ಕಿಂತ ನಿಖರತೆ ಮುಖ್ಯ

ಆಧುನಿಕ ಯುದ್ಧಗಳ ಮೂಲಮಂತ್ರಗಳಲ್ಲಿ ಒಂದು 'ಆತುರಕ್ಕಿಂತ ನಿಖರತೆ ಮುಖ್ಯ' ಎಂಬುದು. ಹಿಂದೆ ಯುದ್ಧಗಳಲ್ಲಿ ಹೆಚ್ಚಿನ ಸಂಖ್ಯೆಯ ಸೈನಿಕರನ್ನು ಬಳಸುವುದು, ವ್ಯಾಪಕ ದಾಳಿಗಳನ್ನು ನಡೆಸುವುದು ಹಾಗೂ ದೊಡ್ಡ ಮಟ್ಟದ ವಿನಾಶ ಉಂಟುಮಾಡುವುದು ಸಾಮಾನ್ಯವಾಗಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಶತ್ರುವಿನ ಸಂಪೂರ್ಣ ವ್ಯವಸ್ಥೆಯ ಮೇಲೆ ದಾಳಿ ನಡೆಸುವ ಬದಲು, ಆ ವ್ಯವಸ್ಥೆಯ ಪ್ರಮುಖ ಭಾಗಗಳನ್ನು ನಿಖರವಾಗಿ ಗುರಿಯಾಗಿಸಿಕೊಳ್ಳಲಾಗುತ್ತಿದೆ.

ಗುಪ್ತಚರ ಕಾರ್ಯಾಚರಣೆಗಳಲ್ಲಿ ಭಾಗವಹಿಸುವವರು ಪ್ರತಿದಿನ ಅಪಾಯದ ಅಂಚಿನಲ್ಲೇ ಬದುಕುತ್ತಾರೆ. ಅವರು ಶತ್ರು ರಾಷ್ಟ್ರದೊಳಗೆ ವಾಸಿಸುತ್ತಿರುವ ಕಾರಣ ಯಾವುದೇ ಕ್ಷಣದಲ್ಲಿ ಸಿಕ್ಕಿಬೀಳುವ ಸಾಧ್ಯತೆ ಇರುತ್ತದೆ. ಒಂದು ಸಣ್ಣ ತಪ್ಪು ಸಹ ಅವರ ಜೀವನವನ್ನೇ ಬದಲಾಯಿಸಬಹುದು. ಅವರಿಗೆ ಯಾವುದೇ ಸಮ್ಮಾನ, ಪ್ರಶಸ್ತಿ ಅಥವಾ ಸಾರ್ವಜನಿಕ ಗುರುತಿಸುವಿಕೆ ದೊರೆಯದೇ ಇರಬಹುದು. ಕೆಲವೊಮ್ಮೆ ಅವರು ಸಿಕ್ಕಿಬಿದ್ದರೆ ತಮ್ಮದೇ ರಾಷ್ಟ್ರ ಅವರನ್ನು ನಮ್ಮವರಲ್ಲ ಎಂದು ಹೇಳುವ ಸಂದರ್ಭಗಳೂ ಬರಬಹುದು. ಆದರೂ ರಾಷ್ಟ್ರದ ಭದ್ರತೆಯ ಹಿತಾಸಕ್ತಿಗಾಗಿ ಅವರು ಅನಾಮಧೇಯವಾಗಿ ಕೆಲಸ ಮಾಡುತ್ತಾರೆ. ನೈಜ ಜಗತ್ತಿನ ಅನೇಕ ದುರಂದರರು ಎಂದಿಗೂ ವೇದಿಕೆಯ ಮೇಲೆ ಕಾಣಿಸಿಕೊಳ್ಳುವುದಿಲ್ಲ. ಅವರು ತೆರೆಯ ಹಿಂದೆ ಉಳಿದು ಕೆಲಸ ಮಾಡುತ್ತಾರೆ. ಅವರ ಯಶಸ್ಸು ಎಂದರೆ ಅವರ ಹೆಸರು ಸುದ್ದಿಯಾಗದಿರುವುದು. ಒಂದು ಅರ್ಥದಲ್ಲಿ ಗುಪ್ತಚರ ಕಾರ್ಯಾಚರಣೆಯ ಯಶಸ್ಸು ಎಂದರೆ, ಕಾರ್ಯಾಚರಣೆ ಯಾರಿಗೂ ಗೊತ್ತಾಗದಂತೆ ಮಾಡುವುದು. ಇಸ್ರೇಲ್‌ನ ಭದ್ರತಾ ನೀತಿಯನ್ನು ವಿಶ್ಲೇಷಿಸಿದಾಗ ಒಂದು ವಿಷಯ ಸ್ಪಷ್ಟವಾಗಿ ಗೋಚರಿಸುತ್ತದೆ. ದೇಶದ ರಕ್ಷಣೆ ಎನ್ನುವುದು ಕೇವಲ ಸೇನೆಯ ಜವಾಬ್ದಾರಿಯಲ್ಲ; ಅದು ರಾಷ್ಟ್ರದ ಸಮಗ್ರ ಮನೋಭಾವದ ಭಾಗವಾಗಿದೆ. ಅಪಾಯವು ತಮ್ಮನ್ನು ಹುಡುಕಿಕೊಂಡು ಬರುವವರೆಗೆ ಕಾಯದೆ, ಅಪಾಯದ ಮೂಲವನ್ನೇ ಹುಡುಕಿ ದುರ್ಬಲಗೊಳಿಸುವ ತಂತ್ರವನ್ನು ಇಸ್ರೇಲ್ ಅನುಸರಿಸುತ್ತದೆ. ಅಂದರೆ, ಶತ್ರು ಸಂಪೂರ್ಣ ಬಲಿಷ್ಠನಾಗುವ ಮೊದಲೇ ಅವನ ಸಾಮರ್ಥ್ಯವನ್ನು ಕುಗ್ಗಿಸುವುದು ಅವರ ಭದ್ರತಾ ನೀತಿಯ ಗುರಿ. ಇದು ಕೇವಲ ಭೌತಿಕ ದಾಳಿಯಲ್ಲ; ಮಾನಸಿಕವಾಗಿ ಶತ್ರುವಿನ ಆತ್ಮವಿಶ್ವಾಸವನ್ನು ಕುಗ್ಗಿಸುವ ಪ್ರಯತ್ನವೂ ಆಗಿದೆ.

ಬದಲಾಗುತ್ತಿರುವ ಯುದ್ಧತಂತ್ರಗಳು

ಒಂದು ಕಾಲದಲ್ಲಿ ಬಿಲ್ಲು, ಕತ್ತಿ, ಕುದುರೆ ಹಾಗೂ ಆನೆಗಳು ಯುದ್ಧದ ಪ್ರಮುಖ ಸಾಧನಗಳಾಗಿದ್ದವು. ನಂತರ ಬಂದೂಕುಗಳು, ಫಿರಂಗಿಗಳು ಮತ್ತು ತೋಪುಗಳು ಪ್ರಾಮುಖ್ಯತೆ ಪಡೆದವು. ನಂತರ ವಾಯುಪಡೆಯ ಪ್ರಾಮುಖ್ಯ ಹೆಚ್ಚಾಯಿತು. ಯುದ್ಧ ವಿಮಾನಗಳು, ಬಾಂಬರ್‌ಗಳು ಮತ್ತು ಕ್ಷಿಪಣಿಗಳು ಯುದ್ಧದ ಫಲಿತಾಂಶವನ್ನು ನಿರ್ಧರಿಸುವ ಮಟ್ಟಕ್ಕೆ ಬಂದವು. ಆದರೆ ಈಗ ಮತ್ತೊಂದು ದೊಡ್ಡ ಬದಲಾವಣೆ ನಡೆಯುತ್ತಿದೆ. ಡ್ರೋನ್‌ಗಳು, ಕೃತಕ ಬುದ್ಧಿಮತ್ತೆ, ಉಪಗ್ರಹಗಳು, ಸೈಬರ್ ಯುದ್ಧ, ಮಾಹಿತಿ ವಿಶ್ಲೇಷಣೆ ಮತ್ತು ನಿಖರ ಕಾರ್ಯಾಚರಣೆಗಳು ಆಧುನಿಕ ಯುದ್ಧತಂತ್ರದ ಪ್ರಮುಖ ಅಂಶಗಳಾಗಿ ರೂಪುಗೊಂಡಿವೆ. ಭವಿಷ್ಯದ ಯುದ್ಧಗಳಲ್ಲಿ ಕೇವಲ ಭೂಸೇನೆ ಅಥವಾ ವಾಯುಪಡೆಯ ಶಕ್ತಿಯೇ ಸಾಕಾಗುವುದಿಲ್ಲ; ಮಾಹಿತಿ ಮತ್ತು ತಂತ್ರಜ್ಞಾನದ ಪ್ರಾಬಲ್ಯವೂ ಅಷ್ಟೇ ಮುಖ್ಯವಾಗಲಿದೆ.

ಇಂದಿನ ಯುದ್ಧಗಳಲ್ಲಿ ಕೇವಲ ಅತ್ಯಾಧುನಿಕ ಆಯುಧಗಳನ್ನು ಹೊಂದಿರುವುದರಿಂದ ಮಾತ್ರ ವಿಜಯ ಸಾಧಿಸಲು ಸಾಧ್ಯವಾಗುವುದಿಲ್ಲ. ರಾಷ್ಟ್ರದ ನಾಯಕತ್ವ, ಸೇನಾ ಕಮಾಂಡ್ ಕೇಂದ್ರಗಳು, ಸಂವಹನ ವ್ಯವಸ್ಥೆಗಳು ಹಾಗೂ ತಂತ್ರಜ್ಞಾನ ಮೂಲಸೌಕರ್ಯಗಳನ್ನು ಸುರಕ್ಷಿತವಾಗಿಡುವುದು ಕೂಡ ಅಷ್ಟೇ ಮುಖ್ಯವಾಗಿದೆ. ಆಧುನಿಕ ಯುದ್ಧತಂತ್ರದಲ್ಲಿ ಮಹತ್ವದ ಬದಲಾವಣೆ ಅಂದರೆ, ಯುದ್ಧದ ಆರಂಭದಲ್ಲಿಯೇ ಶತ್ರುವಿನ ನಿರ್ಧಾರ ಸಾಮರ್ಥ್ಯವನ್ನು ಕುಗ್ಗಿಸುವ ಪ್ರಯತ್ನ ನಡೆಯುತ್ತಿದೆ. ನಾಯಕತ್ವ ಮತ್ತು ಸಂವಹನ ವ್ಯವಸ್ಥೆಗಳು ಆರಂಭದಲ್ಲಿಯೇ ದುರ್ಬಲಗೊಂಡರೆ, ಎದುರಾಳಿಯ ಆತ್ಮವಿಶ್ವಾಸ ಮತ್ತು ಕಾರ್ಯಕ್ಷಮತೆ ಎರಡಕ್ಕೂ ದೊಡ್ಡ ಹೊಡೆತ ಬೀಳುತ್ತದೆ.

ಭಾರತ ಕಲಿಯಬೇಕಾದ ಪಾಠಗಳು

ಮುಂಬರುವ ದಿನಗಳಲ್ಲಿ ಯುದ್ಧಗಳು ಇದೇ ರೀತಿಯ ಹೊಸ ಮಾದರಿಗಳಲ್ಲಿ ನಡೆಯುತ್ತವೆ. ಆದ್ದರಿಂದ ಭಾರತವು ತನ್ನ ರಾಷ್ಟ್ರೀಯ ಭದ್ರತಾ ತಂತ್ರವನ್ನು ನಿರಂತರವಾಗಿ ನವೀಕರಿಸಿಕೊಳ್ಳಬೇಕಾಗಿದೆ. ಕೇವಲ ಗಡಿಯಲ್ಲಿ ಹೆಚ್ಚಿನ ಸೈನಿಕರನ್ನು ನಿಯೋಜಿಸುವುದು ಅಥವಾ ಹೆಚ್ಚಿನ ಆಯುಧಗಳನ್ನು ಖರೀದಿಸುವುದಷ್ಟೇ ಸಾಕಾಗುವುದಿಲ್ಲ. ಭಾರತವು ತನ್ನ ಪ್ರಮುಖ ವ್ಯಕ್ತಿಗಳು, ರಾಷ್ಟ್ರೀಯ ನಾಯಕತ್ವ, ಸೇನಾ ಮುಖ್ಯಸ್ಥರು, ವಿಜ್ಞಾನಿಗಳು, ತಂತ್ರಜ್ಞಾನ ತಜ್ಞರು ಮತ್ತು ಪ್ರಮುಖ ರಕ್ಷಣಾ ಕೇಂದ್ರಗಳ ಭದ್ರತೆಯತ್ತ ವಿಶೇಷ ಗಮನ ಹರಿಸಬೇಕು. ಭವಿಷ್ಯದ ಯುದ್ಧಗಳಲ್ಲಿ ಇಂತಹ ವ್ಯಕ್ತಿಗಳು ಮತ್ತು ಸಂಸ್ಥೆಗಳು ಮೊದಲ ಗುರಿಯಾಗುವ ಸಾಧ್ಯತೆ ಇರುವುದರಿಂದ ಅವರ ರಕ್ಷಣೆಗೆ ಬಹುಪದರದ ವ್ಯವಸ್ಥೆಗಳನ್ನು ರೂಪಿಸುವುದು ಅಗತ್ಯ. ಇಂದು ಶತ್ರು ರಾಷ್ಟ್ರಗಳು ಕೇವಲ ಗಡಿಗಳ ಮೂಲಕವೇ ಅಪಾಯ ಸೃಷ್ಟಿಸುವುದಿಲ್ಲ. ಸೈಬರ್ ದಾಳಿಗಳು, ಮಾಹಿತಿ ಕಳವು, ಆರ್ಥಿಕ ಒತ್ತಡಗಳು ಹಾಗೂ ಗುಪ್ತಚರ ಜಾಲಗಳ ಮೂಲಕವೂ ರಾಷ್ಟ್ರದ ಭದ್ರತೆಯನ್ನು ಸವಾಲಿಗೆ ಒಳಪಡಿಸಬಹುದು.

ಯಾವ ರಾಷ್ಟ್ರದ ಬಳಿ ಎಷ್ಟು ಫೈಟರ್ ಜೆಟ್‌ಗಳಿವೆ? ಎಷ್ಟು ಸೈನಿಕರಿದ್ದಾರೆ? ಎಷ್ಟು ಟ್ಯಾಂಕ್‌ಗಳಿವೆ? ಎಂಬ ಪ್ರಶ್ನೆಗಳು ಸಾಮಾನ್ಯವಾಗಿ ಚರ್ಚೆಗೆ ಬರುತ್ತವೆ. ಆದರೆ ಆಧುನಿಕ ಯುದ್ಧಗಳ ಸ್ವರೂಪವೇ ಬದಲಾಗುತ್ತಿರುವ ಕಾರಣ ಈ ಸಂಖ್ಯೆಗಳು ಮಾತ್ರ ಸಾಕಾಗುವುದಿಲ್ಲ. ಒಂದು ರಾಷ್ಟ್ರದ ನಿಜವಾದ ಶಕ್ತಿ ಅದರ ತಂತ್ರಜ್ಞಾನ ಸಾಮರ್ಥ್ಯ, ಮಾಹಿತಿ ಸಂಗ್ರಹಣೆ, ಸೈಬರ್ ಸುರಕ್ಷತೆ, ಗುಪ್ತಚರ ಜಾಲ ಮತ್ತು ತ್ವರಿತ ನಿರ್ಧಾರ ಸಾಮರ್ಥ್ಯದಲ್ಲಿ ಅಡಗಿರುತ್ತದೆ. ಭವಿಷ್ಯದ ಯುದ್ಧಗಳಲ್ಲಿ ಕೇವಲ ಸಂಖ್ಯೆಗಳಿಗಿಂತ ಸಾಮರ್ಥ್ಯ, ನಿಖರತೆ ಮತ್ತು ತಂತ್ರಗಾರಿಕೆಯೇ ಹೆಚ್ಚು ಮಹತ್ವ ಪಡೆಯಲಿವೆ.

ಭಾರತದ ನಿಲುವು

ಪಶ್ಚಿಮ ಏಷ್ಯಾದ ಸಂಘರ್ಷಗಳು ಜಾಗತಿಕ ಶಕ್ತಿಗಳ ನಡುವಿನ ಸಮೀಕರಣಗಳ ಮೇಲೂ ಪರಿಣಾಮ ಬೀರುತ್ತಿವೆ. ವಿವಿಧ ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿ ವಿಭಿನ್ನ ನಿಲುವುಗಳನ್ನು ತೆಗೆದುಕೊಳ್ಳುತ್ತಿವೆ. ಈ ಪರಿಸ್ಥಿತಿಯಲ್ಲಿ ಭಾರತದ ನಿಲುವು ವಿಶೇಷ ಮಹತ್ವ ಪಡೆಯುತ್ತದೆ. ಭಾರತಕ್ಕೆ ರಷ್ಯಾ, ಇರಾನ್, ಇಸ್ರೇಲ್, ಅಮೆರಿಕಾ ಹಾಗೂ ಅರಬ್ ರಾಷ್ಟ್ರಗಳೆಲ್ಲವೂ ಪ್ರಮುಖ ಪಾಲುದಾರ ರಾಷ್ಟ್ರಗಳಾಗಿವೆ. ಹೀಗಾಗಿ ಭಾರತವು ತನ್ನ ರಾಷ್ಟ್ರೀಯ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಸಮತೋಲಿತ ನಿಲುವು ಅನುಸರಿಸುವ ಸಾಧ್ಯತೆ ಹೆಚ್ಚಾಗಿದೆ.

ಭಾರತವು ಇಸ್ರೇಲ್‌ನ ಕೆಲವು ತಂತ್ರಗಾರಿಕೆಗಳಿಂದ ಪ್ರೇರಣೆ ಪಡೆಯಬೇಕಾಗಿದೆ. ಇದು ಯಾವುದಾದರೂ ರಾಷ್ಟ್ರವನ್ನು ಅಂಧಾನುಕರಣ ಮಾಡುವ ವಿಷಯವಲ್ಲ. ಬದಲಾಗಿ, ಅವರ ಯಶಸ್ಸಿನ ಹಿಂದಿರುವ ತಂತ್ರಜ್ಞಾನ, ದೂರದೃಷ್ಟಿ, ಗುಪ್ತಚರ ಸಾಮರ್ಥ್ಯ ಮತ್ತು ರಾಷ್ಟ್ರೀಯ ಭದ್ರತೆಯ ಕುರಿತ ಬದ್ಧತೆಯನ್ನು ಅರ್ಥಮಾಡಿಕೊಳ್ಳುವ ವಿಷಯವಾಗಿದೆ. ರಕ್ಷಣಾ ಕ್ಷೇತ್ರದಲ್ಲಿ ಸ್ವದೇಶಿ ಸಂಶೋಧನೆ, ಕೃತಕ ಬುದ್ಧಿಮತ್ತೆ, ಡ್ರೋನ್ ತಂತ್ರಜ್ಞಾನ, ಸೈಬರ್ ಸುರಕ್ಷತೆ ಹಾಗೂ ಗುಪ್ತಚರ ವ್ಯವಸ್ಥೆಗಳನ್ನು ಇನ್ನಷ್ಟು ಬಲಪಡಿಸಬೇಕು. ಭಾರತದ ಯುವಶಕ್ತಿಯನ್ನು ತಂತ್ರಜ್ಞಾನ ಮತ್ತು ನಾವೀನ್ಯತೆಯ ಕಡೆಗೆ ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.

ಈ 21ನೇ ಶತಮಾನದ ಯುದ್ಧಗಳು ಕೇವಲ ರಣರಂಗದಲ್ಲಿ ನಡೆಯುವುದಿಲ್ಲ. ಅವು ಡೇಟಾ ಕೇಂದ್ರಗಳಲ್ಲಿ, ಉಪಗ್ರಹಗಳಲ್ಲಿ, ಕಂಪ್ಯೂಟರ್ ಜಾಲಗಳಲ್ಲಿ, ಮಾಹಿತಿ ವ್ಯವಸ್ಥೆಗಳಲ್ಲಿ ಮತ್ತು ಮಾನಸಿಕ ಯುದ್ಧದ ರೂಪದಲ್ಲಿಯೂ ನಡೆಯುತ್ತವೆ. ಇಸ್ರೇಲ್‌ನ ಅನುಭವಗಳು ಜಗತ್ತಿಗೆ ಒಂದು ಮಹತ್ವದ ಪಾಠವನ್ನು ಹೇಳುತ್ತವೆ. ರಾಷ್ಟ್ರೀಯ ಭದ್ರತೆ ಎಂದರೆ ಕೇವಲ ಆಯುಧಗಳ ಸಂಗ್ರಹವಲ್ಲ; ಅದು ದೂರದೃಷ್ಟಿ, ಸಿದ್ಧತೆ, ಮಾಹಿತಿ, ತಂತ್ರಜ್ಞಾನ ಮತ್ತು ರಾಷ್ಟ್ರದ ಸಮಗ್ರ ಸಂಕಲ್ಪದ ಫಲಿತಾಂಶವಾಗಿದೆ. ಭಾರತವು ಈ ಬದಲಾಗುತ್ತಿರುವ ವಾಸ್ತವವನ್ನು ಎಷ್ಟು ಬೇಗ ಅರ್ಥ ಮಾಡಿಕೊಳ್ಳುತ್ತದೆಯೋ ಅಷ್ಟು ಬೇಗ ಭವಿಷ್ಯದ ಸವಾಲುಗಳಿಗೆ ಸಜ್ಜಾಗಬಹುದು. ಏಕೆಂದರೆ ಮುಂಬರುವ ಯುದ್ಧಗಳಲ್ಲಿ ಗೆಲ್ಲುವುದು ದೊಡ್ಡ ಸೇನೆ ಹೊಂದಿರುವ ರಾಷ್ಟ್ರವಲ್ಲ; ಯುದ್ಧದ ಹೊಸ ವ್ಯಾಕರಣವನ್ನು ಸರಿಯಾಗಿ ಓದಿದ ರಾಷ್ಟ್ರ.

ಭಟ್ಟರ್ ಸ್ಕಾಚ್

- **ರಾಘಣ್ಣ, ಮೈಸೂರು**
ಭಟ್ರೇ, ಸಜ್ಜನ ಸ್ವಾಮಿಗಳು ಎದುರು ಬದುರಾದರೆ ಪರಸ್ಪರ ಅರಳು ಸುರಿದುಕೊಳ್ಳುತ್ತಾರೆ ಅದೇ ದುರ್ಜನರು ಎದುರಾದರೆ?
- **ಮರಳು ಎರಚಿಕೊಳ್ಳುತ್ತಾರೆ!**

- **ಗೌರಿಮನೋಹರ, ತಿಂಡ್ಲು**
ಭಟ್ರೇ, ಮದುವೆ ಪ್ರಕ್ರಿಯೆಯಲ್ಲಿ ನಿಶ್ಚಿತಾರ್ಥ ಎನ್ನುವುದು ಎಷ್ಟನೇ ಹಂತ?
- **ಅದು ಹಂತ ಹಂತ!**

- **ಸಂಡೂರು ಭೋಗ ಶೆಟ್ಟಿ, ಮೈಸೂರು**
ಭಟ್ರೇ, ಕುಪ್ಪುಸದ ಒಳಗೆ ಹಣ ಬಚ್ಚಿಡುತ್ತಿದ್ದ ಹೆಂಗಸರು ಈಗ ಅಡಗುತಾಣವನ್ನೇಕೆ ಬದಲಿಸಿದ್ದಾರೆ?
- **ಅದು ಬೇರೆಯವರ ಕೈಗೆಟಕಿ ಸೇಫ್ ಅಲ್ಲ ಅಂತ ಅನಿಸಿರಬೇಕು!**

- **ಮನಗೂಳಿ ಭೀಮ, ಸೀತಾಪತಿ ಅಗ್ರಹಾರ**
ಭಟ್ರೇ, ಖರ್ಗೆಯವರು ತಮ್ಮ ಪಕ್ಷದ ಕಾರ್ಯಕರ್ತರನ್ನು 'ಯೂಸ್‌ಲೆಸ್ ಫೆಲೋಸ್' ಅಂತ ಅಂದ್ರೂ, ಕೇಳಿದವರಿಗೆ ಯಾಕೆ ರಕ್ತ ಕುದಿಯಲಿಲ್ಲ?
- **ಸತ್ಯವನ್ನು ಇಷ್ಟು ಓಪನ್ ಆಗಿ, ನೇರವಾಗಿ ಹೇಳುತ್ತಿದ್ದರಲ್ಲ ಅಂತ ಒಳಗೊಳಗೇ ಸಂತಸಪಟ್ಟರಂತೆ!**

- **ನಿರಂಜನ ದೀಕ್ಷಿತ್, ಹಿರಿಯೂರು**
ಭಟ್ರೇ, ಖರ್ಗೆಯವರು ತಮ್ಮ ಪಕ್ಷದ ಕಾರ್ಯಕರ್ತರನ್ನು 'ಯೂಸ್‌ಲೆಸ್ ಫೆಲೋಸ್' ಎಂದು ಬೈದಿದ್ದು ಸರಿಯಾ?
- **ರಾಷ್ಟ್ರೀಯ ಅಧ್ಯಕ್ಷರೇ ಆ ಮಾತನ್ನು ಹೇಳಿದ ನಂತರ ತೀರ್ಪು ಕೊಡಲು ನಾನ್ಯಾರು?!**

- **ಹರೀಶ ಗೌಡ, ಕನಕಪುರ**
ಭಟ್ರೇ, ಡಿಕೆ ಪದದ ಅರ್ಥವೇ ಬದಲಾಗಿದೆಯಲ್ಲ?
- **'ಡಿಕ್ಕಿ ಹೊಡೆದರು' ಎಂಬುದಕ್ಕೆ 'ಡಿಕೆ ಹೊಡೆದರು' ಎನ್ನದಿದ್ದರೆ ಸಾಕು!**

- **ಗಣೇಶ ಶೆಣೈ, ಸಾಗರ**
ಭಟ್ರೇ, ಅಡ್ಡ ಮತದಾನ ಮಾಡಿದವರನ್ನು ನೀವು ಏನಂತ ಕರೆಯುತ್ತೀರಿ?
- **ಅಡ್ಡ ಕಸುಬಿಗಳು!**

- **ಮಹಾಬಲ ಪಿ.ಮೂರ್ತಿ, ಕತ್ರಿಗುಪ್ಪೆ**
ಭಟ್ರೇ, ಪ್ರಕಾಶ ರೈ ಬಹಳ ನರ್ವಸ್ ಆದಾಗ ನಗುತ್ತಾರಲ್ಲ?
- **ಬೇರೆಯವರು ನಗುವುದಕ್ಕಿಂತ ಮುಂಚೆ ತಾನೇ ನಗುವುದು ಸೇಫ್ ಅಂತ ಭಾವಿಸಿರಬೇಕು!**

ಅಮ್ಮ ಮುಖ್ಯ, ಅಪ್ಪನೂ ಅಷ್ಟೇ ಮುಖ್ಯ!

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಸಮಾಜ ಎಷ್ಟೇ ಪುರುಷ ಪ್ರಧಾನವಾಗಿರಲಿ, ಅಮ್ಮನಿಗೆ ಸಿಕ್ಕ ಗೌರವ ಅಪ್ಪನಿಗೆ ಸಿಕ್ಕಿಲ್ಲ. ಇದು ಭಾರತ ಅಂತ ಅಲ್ಲ ಜಗತ್ತಿನ ಬಹುಪಾಲು ದೇಶಗಳ ಕತೆ. ನನಗನ್ನಿಸುತ್ತೆ ಜಗತ್ತಿನಲ್ಲಿ ಏನಿಲ್ಲದೆಯೂ ಜೀವನ ಕಳೆದು ಬಿಡಬಹುದು, ಅಮ್ಮನ ಹೊರತುಪಡಿಸಿ. ಇದೇ ಕಾರಣಕ್ಕೆ ಅಮ್ಮನಿಗೆ ಅಷ್ಟು ಬೇಡಿಕೆ, ಗೌರವ. ಜಗತ್ತಿನಾದ್ಯಂತ ಅಮ್ಮ ಎಂದರೆ ಎಮೋಷನ್! ಅಪ್ಪ ಯಾವತ್ತೂ ಅಮ್ಮನ ಆ ಪಟ್ಟ, ಆ ಎಮೋಷನ್ ಎತ್ತರಕ್ಕೆ ಏರಲಾಗಿಲ್ಲ, ಅಥವಾ ನಾವು ಸಮಾಜವಾಗಿ ಬಿಟ್ಟಿಲ್ಲ!

ಬಹಳ ಹಿಂದಿನಿಂದ ಕ್ಯಾಥೊಲಿಕ್ ದೇಶಗಳಲ್ಲಿ ಅಪ್ಪನ ದಿನ ಆಚರಣೆ ಮಾಡುತ್ತಾ ಬಂದಿದ್ದಾರೆ. ಸ್ಪ್ಯಾನಿಷ್ ಮತ್ತು ಪೋರ್ಚುಗೀಸರು ತಮ್ಮ ಈ ವಾಡಿಕೆಯನ್ನ ಲ್ಯಾಟಿನ್ ಅಮೆರಿಕಕ್ಕೆ ಕೂಡ ಕಲಿಸುತ್ತಾರೆ. ಯೂರೋಪಿನ ದೇಶಗಳಲ್ಲಿ ಇದು ಬಹಳ ಹಳೆಯ ಸಂಪ್ರದಾಯ. ಪ್ರತಿ ವರ್ಷ ಮಾರ್ಚ್ 19 ಅನ್ನು ಸಂತ ಜೋಸೆಫರ ದಿನ ಎಂದು ಆಚರಿಸಲಾಗುತ್ತದೆ. ಆ ದಿನವನ್ನೇ ಫಾದರ್ಸ್ ಡೇ ಎಂದು ಆಚರಿಸಲಾಗುತ್ತದೆ. ಇದು ಯೂರೋಪಿನ ಕಥೆ.

ಅಮೆರಿಕದ ಕತೆ ಬೇರೆಯೇ ಇದೆ. 1907ರ ಡಿಸೆಂಬರ್‌ನಲ್ಲಿ ಮನೋಂಗ ಎನ್ನುವ ವೆಸ್ಟ್ ವರ್ಜೀನಿಯದ ಊರಿನಲ್ಲಿ ಗಣಿ ಅವಘಡದಿಂದ 300ಕ್ಕೂ ಹೆಚ್ಚು ಜನ ಸಾಯುತ್ತಾರೆ. ಅವರಲ್ಲಿ 250 ಜನ ಅಪ್ಪಂದಿರು. ಇವರನ್ನ ಗೌರವಿಸಲು ಇವರ ನೆನಪಿಗಾಗಿ ಜುಲೈ 4 1908 ಪ್ರಥಮ ಬಾರಿಗೆ ಈ ದಿನವನ್ನ ಆಚರಿಸುತ್ತಾರೆ. ಅದರ ನಂತರ ಬಹಳ ವರ್ಷ ಇದು ನನೆಗುದಿಗೆ ಬೀಳುತ್ತದೆ. ಅಂದಿನಿಂದ 1966ರ ವರೆಗೆ ಫಾದರ್ಸ್ ಡೇ ಆಚರಣೆ ಮಾಡಬೇಕೆನ್ನುವ ಕೂಗು ವಿಫಲವಾಗುತ್ತದೆ. ಕೊನೆಗೆ 1966ರಲ್ಲಿ ಜೂನ್ ತಿಂಗಳ 3ನೇ ಭಾನುವಾರವನ್ನ ಅಪ್ಪನ ದಿನವನ್ನಾಗಿ ಆಚರಿಸುವುದಾಗಿ ಅಮೆರಿಕಾ ಘೋಷಣೆ ಮಾಡುತ್ತೆ. ಇದಾಗಿ ಆರು ವರ್ಷದ ಬಳಿಕ ಅಂದರೆ 1972ರಲ್ಲಿ ಇದು ಕಾನೂನಿನ ಅಧಿಕೃತ ಮನ್ನಣೆ ಪಡೆಯುತ್ತೆ.

ಅಪ್ಪನನ್ನು ನಾವು ಮನೆಯಲ್ಲಿ ಅಣ್ಣ ಎಂದು ಕರೆಯುತ್ತೇವೆ. ಅದ್ಯಾಕೆ ಕಾರಣ ಗೊತ್ತಿಲ್ಲ! ಅಣ್ಣನಿಗೆ ಹಿಂದಿ ಚಿತ್ರಗಳ ಗೀತೆಯೆಂದರೆ ಪಂಚಪ್ರಾಣ. ಮುಖೇಶ್, ಮಹಮದ್ ರಫಿ ಮತ್ತು ಕಿಶೋರ್ ಕುಮಾರನ ಗೀತೆಗಳೆಂದರೆ ಹುಚ್ಚು. ಅವರಿಗೆ ಅದೆಷ್ಟು ಈ ಗೀತೆಗಳ ಮೇಲೆ ಹುಚ್ಚು ಎಂದರೆ ಆಗಿನ ಕಾಲದಲ್ಲಿ ಹೆಚ್‌ಎಂವಿ ರೆಕಾರ್ಡ್ ಪ್ಲೇಯರ್ ತಂದು ಮನೆಯಲ್ಲಿ ಇಟ್ಟುಕೊಂಡಿದ್ದರು. ಅಂದಿನ ಸಮಯದಲ್ಲಿ ಕ್ಯಾಸೆಟ್ ಅವಿಷ್ಕಾರವಾಗಿರಲಿಲ್ಲ. ಆಗೇನಿದ್ದರೂ ಗುಂಡಾಕಾರದ ಕಪ್ಪು ತಟ್ಟೆಗಳದ್ದೆ ರಾಜ್ಯಭಾರ! ಅದನ್ನ ರೆಕಾರ್ಡ್ ಪ್ಲೇಯರ್ ಮೇಲಿಟ್ಟು ಸಣ್ಣ ಮುಳ್ಳು ತಂತಿಯಂತಹ ವಸ್ತುವನ್ನ ಅದರ ಮೇಲೆ ನಾಜೂಕಾಗಿ ಇಡಬೇಕಾಗಿತ್ತು. ಅಲ್ಲೆಲ್ಲೋ ಅವಿತಿದ್ದ ಶಬ್ದಗಳು ಹೊರಬರುತ್ತಿದ್ದವು. ಅಪ್ಪನ ಈ ಹುಚ್ಚಾಟ ನೋಡಿ ಅಜ್ಜಿ ಇಷ್ಟು ದುಡ್ಡಿನಲ್ಲಿ ಇಪ್ಪತ್ತು ತೊಲ ಬಂಗಾರ ಖರೀದಿ ಮಾಡಬಹುದಿತ್ತು ಅಂತ ಗೊಣಗಿದ್ದರಂತೆ! ಇರಲಿ. ಇದೊಂದು ಉದಾಹರಣೆಯಷ್ಟೇ. ಅಣ್ಣ ಹಣವಿರಲಿ ಬಿಡಲಿ ತನ್ನ ಇಚ್ಚೆಯನ್ನ ಪೂರ್ಣಗೊಳಿಸಿಕೊಂಡು ಬ್ಯಾಗೇಜ್ ಇಲ್ಲದೆ ತನ್ನ ರೀತಿ ನೀತಿಯಲ್ಲಿ ಬದುಕಿದ ವ್ಯಕ್ತಿ. ಅದು ಸರಿಯೋ ತಪ್ಪೋ ಅದು ಚರ್ಚಾಸ್ಪದ ವಿಷಯ.

99ರಲ್ಲಿ ಅಣ್ಣನಿಗೆ ಸ್ಟ್ರೋಕ್ ಜೊತೆಗೆ ಹಾರ್ಟ್ ಕೂಡ ಅಟ್ಯಾಕ್‌ಗೆ ಒಳಗಾಗಿತ್ತು. ನನ್ನ ದೊಡ್ಡಣ್ಣ ಔರಂಗಾಬಾದ್‌ನಲ್ಲಿ ವಿಡಿಯೋಕಾನ್ ಕಂಪನಿಯಲ್ಲಿ ಆಗತಾನೆ ಕೆಲಸಕ್ಕೆ ಸೇರಿದ್ದ. ಹೀಗಾಗಿ ಅವನಿಗೆ ರಜಾ ಸಿಗಲಿಲ್ಲ. ತಮ್ಮ ಸುರತ್ಕಲ್‌ನಲ್ಲಿ ಎಂಟೆಕ್‌ಗೆ ಸೇರಿದ್ದ



ಹೊಸತು ಕೂಡ, ಒಂದು ವಾರ ಇದ್ದು ಹೊರಟು ಹೋಗಿದ್ದ. ನಾನು ಅಮ್ಮ ಇಬ್ಬರೂ ಅಣ್ಣನಿಗೆ ಬಹಳಷ್ಟು ತೈಲಗಳ ತಿಕ್ಕಿ ಮಸಾಜ್ ಮಾಡುತ್ತಿದ್ದೆವು. ಮೂರು ತಿಂಗಳಲ್ಲಿ ಅಣ್ಣ ಇನ್ನೂ ಚೆನ್ನಾಗಿ ನಡೆಯಲು ಬಾರದ ಸಮಯದಲ್ಲಿ ನಾನು ದುಬೈ ಪಾಲಾದೆ. ಮುಂದಿನ ಐದಾರು ವರ್ಷದಲ್ಲಿ ಅಣ್ಣನಿಗೆ ಸ್ಟ್ರೋಕ್ ಆಗಿತ್ತು ಅಂತ ನಾವು ಹೇಳಿದರೆ ಮಾತ್ರ ಬೇರೆಯವರಿಗೆ ತಿಳಿಯುತ್ತಿತ್ತು, ಅಷ್ಟರಮಟ್ಟಿಗೆ ಅಣ್ಣ ಚೇತರಿಸಿಕೊಂಡರು.

2007ರ ವೇಳೆಗೆ ಬಾರ್ಸಿಲೋನಾ ಸೇರಿ ಎಂಟು ವರ್ಷವಾಗಿತ್ತು. ಜೀವನ ಮಟ್ಟ ಬದಲಾಗಿತ್ತು. ನಿಜವಾದ ಕ್ವಾಲಿಟಿ ಆಫ್ ಲೈಫ್ ಎಂದರೇನು ಎನ್ನುವುದನ್ನ ಹತ್ತಿರದಿಂದ ಕಂಡ ನನಗೆ ಅಮ್ಮ -ಅಣ್ಣನನ್ನ ಹತ್ತಾರು ದೇಶ ಸುತ್ತಿಸಬೇಕು ಎನ್ನುವ ಬಯಕೆ. ಅಮ್ಮ, ಅಣ್ಣನನ್ನ ಬಿಟ್ಟು ಬರುವುದಿಲ್ಲ ಎಂದಳು. ಹೀಗಾಗಿ 2007ರ ವರೆಗೆ ಕಾಯಬೇಕಾಯ್ತು. ಅಣ್ಣ ಫಿಟ್ ಆಗಿದ್ದಾರೆ ಅನ್ನಿಸಿದ ಮೇಲೆ ಅಮ್ಮ -ಅಣ್ಣನನ್ನ ಬಾರ್ಸಿಲೋನಾಗೆ ಕರೆಸಿಕೊಂಡೆವು. ಸ್ಪೇನ್‌ನ ವಿವಿಧ ನಗರಗಳನ್ನ ತೋರಿಸಿ, ನಂತರ ಫ್ರಾನ್ಸ್, ಇಟಲಿ ಮತ್ತು ಪೋರ್ಚುಗಲ್ ದೇಶಗಳನ್ನ ಸುತ್ತಾಡಿಸಿ, ಬೆಂಗಳೂರಿಗೆ ಹೊರಡುವ ಮುನ್ನ ಹದಿನೈದು ದಿನ ಬೇರೇನೂ ಪ್ಲಾನ್ ಮಾಡದೆ ಮನೆಯಲ್ಲಿ ಸುಧಾರಿಸಿಕೊಳ್ಳಿ ಎಂದಿದ್ದೆವು. ಅಂದಿನ ದಿನದಲ್ಲಿ ನಾನಿದ್ದ ಜಾಗ ಬಾರ್ಸಿಲೋನಾ ಸಿಟಿ ಸೆಂಟರ್‌ನಿಂದ 9 ಕಿಲೋಮೀಟರ್ ದೂರದಲ್ಲಿದ್ದ ಬಾದಲೋನಾ ಎನ್ನುವ ನಗರದಲ್ಲಿ, ಅದು ಸ್ಯಾನ್ ಜರೋಮಿ ದೆ ಲಾ ಮೊರ್ತ್ರಾ ಎನ್ನುವ ಬೆಟ್ಟಕ್ಕೆ ಬಹಳ ಹತ್ತಿರ. ಮಜಾ ಎಂದರೆ ಒಂದು ಭಾಗದಲ್ಲಿ ಬೆಟ್ಟ, ಇನ್ನೊಂದು ಭಾಗದಲ್ಲಿ ಮೆಡಿಟೇರಿಯನ್ ಸಮುದ್ರ! ಅಲ್ಲಿ ಬದುಕಿದ ಪ್ರತಿ ದಿನವೂ ರೆಸಾರ್ಟ್‌ನಲ್ಲಿ ಬದುಕಿದ ಅನುಭವ.

ಅಣ್ಣ -ಅಮ್ಮ ಬಹಳ ಖುಷಿಯಿಂದ ಓಡಾಡಿಕೊಂಡಿದ್ದರು. ಅಮ್ಮ ಸೀರೆ ಉಡುತ್ತಿದ್ದದ್ದರಿಂದ ಸ್ಥಳೀಯರಿಗೆ ಆಕೆ ಆಕರ್ಷಣೆಯ ವಸ್ತುವಾಗಿದ್ದಳು. ಅಮ್ಮನಿಗೆ ಭಾಷೆ ಬರದಿದ್ದರೂ ಸನ್ನೆಯಲ್ಲಿ ಮಾತುಕತೆ ನಡೆಯುತ್ತಿತ್ತು. ಇಂತಹ ಒಂದು ಮಧ್ಯಾಹ್ನ ಊಟ ಮಾಡಿ ಮಲಗಿದ್ದೆವು. ಸ್ಪೇನ್‌ನಲ್ಲಿ ಮಧ್ಯಾಹ್ನದ ನಿದ್ದೆ ಬಹಳ ಸಹಜ. ಇದಕ್ಕೆ ಇಲ್ಲಿ ಸಿಯಾಸ್ತ ಎನ್ನುತ್ತಾರೆ. ಅಣ್ಣ ಚಡಪಡಿಸಿ ಎದ್ದು ಮನೆಯಿಂದ ಹೊರಗೆ ಹೋದರು. ನಮಗೆಲ್ಲಾ ಆಶ್ಚರ್ಯ, ಜೊತೆಗೆ ಇದೇನಿದು ಅಣ್ಣ ಎಲ್ಲಿಗೆ ಹೋದರು ಎನ್ನುವ ಧಾವಂತ. ಹದಿನೈದು ನಿಮಿಷ. ಅಣ್ಣ ಮತ್ತೆ ಮನೆಗೆ ಬಂದರು. ರಮ್ಯಳ ಕುರಿತು 'ನಮ್ಮ ಬಿಲ್ಡಿಂಗ್ ನಲ್ಲಿ ಯಾರಾದರೂ ಇಂಡಿಯನ್ಸ್ ಇದ್ದಾರಾ?' ಎಂದು ಪ್ರಶ್ನಿಸಿದ್ದಾರೆ. ರಮ್ಯ ಇಲ್ಲವೆಂದಾಗ ಅಣ್ಣನಿಗೆ ನಂಬಿಕೆ ಬಂದಿಲ್ಲ. ನಾನು ಈಗಷ್ಟೆ 'ಜಾನೆ ಕಹಾ ಗಯೇ ವೊ ದಿನ್' ಹಾಡನ್ನ ಕೇಳಿದೆ. ನನ್ನ ರೂಮಿಗೆ ಬಹಳ ಕ್ಷೀಣವಾಗಿ ಕೇಳಿಸುತ್ತಿತ್ತು. ಅದಕ್ಕೆ ಎದ್ದು ಹೋಗಿ ಮನೆಯ ಕೆಳಗೆ ನಿಂತಿದ್ದೆ. ಬಹಳ ಚೆನ್ನಾಗಿ ಕೇಳಿಸಿತು. ಖಂಡಿತ ನಮ್ಮ ಬಿಲ್ಡಿಂಗ್‌ನಲ್ಲಿ ಇಂಡಿಯನ್ಸ್ ಇದ್ದಾರೆ, ನಿಮಗೆ ಗೊತ್ತಿಲ್ಲ ಅಂದರು. ಅಣ್ಣ ಅಷ್ಟೊಂದು ಧಾವಂತದಿಂದ ಎದ್ದು ಹೋದ ಹಿಂದಿನ ರಹಸ್ಯ ತಿಳಿಯಿತು. ರಮ್ಯ ಆ ಹಾಡನ್ನ ನಾನೇ ಹಾಕಿದ್ದು ಎಂದು ಹೇಳಿ, ಮುಂದಿನ ಹದಿನೈದು ದಿನ ಅಣ್ಣನ ಇಷ್ಟದ ಹಾಡುಗಳನ್ನ ಕೇಳಿಸಿದಳು. ಸಾಮಾನ್ಯವಾಗಿ ತನ್ನ ಭಾವನೆಗಳನ್ನ ಹೆಚ್ಚು ವ್ಯಕ್ತಪಡಿಸದ ಅಣ್ಣನ ಮುಖದಲ್ಲಿ ಮಂದಹಾಸ ಕಾಣಿಸುತ್ತಿತ್ತು.

ಅಣ್ಣನಿಗೆ ಹುರಳಿಕಾಯಿ ಟೊಮೊಟೊ ಮತ್ತು ಆಲೂಗೆಡ್ಡೆ ಹಾಕಿ ಹೋಟೆಲ್ ಶೈಲಿಯಲ್ಲಿ ಹೆಚ್ಚು ದಪ್ಪವಿಲ್ಲದ ಸಾಂಬಾರು ಬಹಳ ಇಷ್ಟ. ಹೀಗಾಗಿ ಅಣ್ಣ ಬದುಕಿರುವವರೆಗೆ ವಾರಕ್ಕೆರೆಡು ಬಾರಿ ಹುರಳಿಕಾಯಿ ಹುಳಿ ತಪ್ಪುತ್ತಿರಲಿಲ್ಲ. ಪುಣ್ಯಕ್ಕೆ ಬಾರ್ಸಿಲೋನಾದಲ್ಲಿ ಹುರಳಿಕಾಯಿ ಹೇರಳವಾಗಿ ಸಿಗುತ್ತಿತ್ತು. ಹುರಳಿಕಾಯಿಗೆ ಸ್ಪ್ಯಾನಿಷ್ ಭಾಷೆಯಲ್ಲಿ ಹೂದಿಯಾಸ್ ಎನ್ನುತ್ತಾರೆ. ಇದೊಂದು ಬಿಟ್ಟರೆ ಮಿಕ್ಕ ಯಾವುದನ್ನೂ ಅಣ್ಣ ಹೆಚ್ಚು ಇಷ್ಟ ಅಂತ ಹೇಳಿಕೊಂಡು ತಿರುಗಿದ ವ್ಯಕ್ತಿಯಲ್ಲ. ಆದರೆ ಉಪ್ಪಿಟ್ಟನ್ನ ಮಾತ್ರ ನಖಶಿಖಾಂತ ದ್ವೇಷಿಸುತ್ತಿದ್ದರು. ಅದನ್ನ ಎಂದೂ ಹೆಸರಿಡಿದು ಕರೆದವರಲ್ಲ. ಅದಕ್ಕೆ ಅವರಿಟ್ಟ ಹೆಸರು 'ಕಾಂಕ್ರೀಟ್'. ಬದುಕು ಅದೆಷ್ಟು ವಿಚಿತ್ರ ನೋಡಿ! ಬದುಕು ವಾಹ್ ಅನ್ನಿಸಿಕೊಳ್ಳುವುದೇ ವೈಚಿತ್ರ್ಯಗಳಿಂದ, ಎಲ್ಲರೂ ಎಲ್ಲವೂ ಒಂದೇ ತೆರನಾಗಿದ್ದಿದ್ದರೆ? ಬದುಕು ಬೋರ್ ಆಗಿ ಹೋಗುತ್ತಿತ್ತು ಅಲ್ವಾ? ನನಗೆ ಉಪ್ಪಿಟ್ಟು ಅಂದರೆ ಪಂಚ ಪ್ರಾಣ! 99ರಿಂದ 2005 ರಮ್ಯ ಬಾರ್ಸಿಲೋನಾಗೆ ಬಂದು ನನ್ನ ಸೇರುವವರೆಗೆ ಕಳೆದ ಬ್ಯಾಚುಲರ್ ಲೈಫ್‌ನಲ್ಲಿ ಉಪ್ಪಿಟ್ಟು ಇಲ್ಲದೆ ಒಂದು ದಿನ ಕಳೆದಿಲ್ಲ ಎಂದರೆ ನೀವು ನಂಬಬೇಕು. ಉಪ್ಪಿಟ್ಟು ಇವತ್ತಿಗೂ ನನಗೆ ಪಂಚಪ್ರಾಣ.

ಮುಂದಿನ ಆರೆಂಟು ವರ್ಷ ಒಂದೇ ಸಮನೆ ಪ್ರತಿ ವರ್ಷ ಅಣ್ಣ -ಅಮ್ಮ ಸ್ಪೇನ್‌ಗೆ ಬಂದರು. ಹತ್ತಾರು ದೇಶ ಸುತ್ತಿದರು. ಐಪಾಡ್ ಬಂದ ತಕ್ಷಣ ಅದರಲ್ಲಿ ಮುಖೇಶ್, ಮಹಮದ್ ರಫಿ, ಕಿಶೋರ್ ಜೊತೆಗೆ ಅನೇಕ ಗಜಲ್‌ಗಳನ್ನ ಕೂಡ ಸ್ಟೋರ್ ಮಾಡಿ ಕೊಟ್ಟೆವು. ಟೆಕ್ನಾಲಜಿ ಜೀವನದಲ್ಲಿ ಮಾಡಿದ ಬದಲಾವಣೆಯನ್ನ ಅಣ್ಣ ಬಹಳಷ್ಟು ಖುಷಿ ಪಟ್ಟು ಆಸ್ವಾದಿಸಿದರು. ವಿಡಿಯೋ ಗೇಮ್ ಕೂಡ ಮೊಬೈಲ್‌ಗೆ ಹಾಕಿ ಕೊಟ್ಟಿದ್ದೆವು. ವಿಡಿಯೋ ಗೇಮ್ ಆಡುವುದು ಅಣ್ಣನಿಗೆ ಇನ್ನೊಂದು ಇಷ್ಟದ ವಿಷಯವಾಗಿತ್ತು.

ಏಷ್ಯಾ ಮತ್ತು ಯೂರೋಪು ಸುತ್ತಿದ್ದ ಅಣ್ಣನಿಗೆ ಅಮೆರಿಕಾ ನೋಡಬೇಕು ಎನ್ನುವ ಬಯಕೆಯಿತ್ತು. ಅದನ್ನ ಅವರು ಎಂದೂ ನನ್ನ ಬಳಿ ಹೇಳಿಕೊಳ್ಳಲಿಲ್ಲ. ಅದು ಬಹಳ ದೂರ, ಪ್ರಯಾಣದಲ್ಲಿ ಅಣ್ಣನಿಗೆ ಹೆಚ್ಚು ಕಡಿಮೆಯಾದರೆ ಎಂದು ನಾನು 'ಬೇಡ' ಎಂದಿದ್ದೆ. ಕಾಂತ ಹುಸ್ಟೋನ್‌ನ ತನ್ನ ಮನೆಯ ಮುಂದಿನ ಕೊಳದಲ್ಲಿ ಈಜುವ ಹಂಸಗಳನ್ನ ತೋರಿಸಿದಾಗೆಲ್ಲ ಅಣ್ಣನಿಗೆ ಅಲ್ಲಿಗೆ ಹೋಗಬೇಕು ಅಂತ ಅನ್ನಿಸುತ್ತಿತ್ತಂತೆ. ಅದು ನನಗೆ ತಿಳಿಯಲಿಲ್ಲ. ಅಣ್ಣ ಅಮೆರಿಕಾ ನೋಡದೆ ಇಲ್ಲಿನ ಆಟಕ್ಕೆ ಬಾಯ್ ಹೇಳಿ ಹೊರಟೇಬಿಟ್ಟರು.

ಅಣ್ಣ ಇಂದು ನಮ್ಮೊಡನೆ ದೈಹಿಕವಾಗಿ ಇಲ್ಲ, ಆದರೆ ಅಣ್ಣನ ಇಷ್ಟವಾದ ಹಾಡು 'ಜಾನೆ ಕಹಾ ಗಯೇ ವೊ ದಿನ್' ಹಾಡು ಕೇಳುವಾಗೆಲ್ಲಾ ಅಣ್ಣ ಇಲ್ಲೇ ಎಲ್ಲೋ ಇದ್ದಾರೆ ಅನ್ನಿಸುತ್ತೆ. ಎಸೆಸೆಲ್ಸಿ ವರೆಗೆ ಜೀವನವನ್ನ ಎಂದೂ ಸೀರಿಯಸ್ಸಾಗಿ ತೆಗೆದುಕೊಳ್ಳದ ನಾನು ಆರು ವಿಷಯದಲ್ಲಿ ಐದರಲ್ಲಿ ನಪಾಸಾಗುತ್ತಿದ್ದೆ. ಫೈನಲ್ ಎಕ್ಸಾಮ್ ಹೇಗೋ ಪಾಸಾಗುತ್ತಿದ್ದೆ. ಅಣ್ಣ ಮಾತ್ರ ಎಂದಿಗೂ ನನ್ನ ಬೈದವರಲ್ಲ, ಇವತ್ತಲ್ಲ ನಾಳೆ ನಿನಗೆ ಬುದ್ದಿ ಬರುತ್ತೆ, ಸರಿಯಾಗುತ್ತೀಯ ಎನ್ನುವುದು ಅವರ ಅಚಲ ನಂಬಿಕೆಯಾಗಿತ್ತು. ಹೆದರ ಬೇಡ ಕಣಯ್ಯಾ ಭಟ್ಟ , ಏಪ್ರಿಲ್ ಅಲ್ಲದಿದ್ದರೆ ಸಪ್ಲಿಮೆಂಟರಿ ಕಟ್ಟಿ ಪಾಸಾಗು ಎನ್ನುತ್ತಿದ್ದರು. ಭಗವಂತನ ಕೃಪೆಯಿಂದ ಆ ದಿನವನ್ನ ಕಾಣುವ ಮೊದಲೇ ಎಚ್ಚೆತ್ತು ಕೊಂಡಿದ್ದೆ. ಇಂದಿನ ದಿನ ಕಾಣಲು ಅಮ್ಮನೆಷ್ಟು ಕಾರಣವೋ ಅಣ್ಣನೂ ಅಷ್ಟೇ ಕಾರಣ.

ಇಲ್ಲದಾಗ ನೆನಸಿಕೊಂಡು ಗೋಳಾಡುವುದಕ್ಕಿಂತ, ಇದ್ದಾಗ ಅವರನ್ನ ಚೆನ್ನಾಗಿ ನೋಡಿಕೊಂಡರೆ ಆಮೇಲೆ ನೆನಪುಗಳನ್ನ ಮೆಲುಕು ಹಾಕುವುದರಲ್ಲೂ ಸುಖವಿರುತ್ತದೆ. ಅಣ್ಣನನ್ನ ಅಣ್ಣ, ಅಪಾಜಿ ಎನ್ನುವುದರ ಜೊತೆಗೆ 'ರೀ ರಾಮಶೇಷ್, ಆರಾಮೆನ್ರಿ,' ಎನ್ನುವ ಸಲುಗೆ ಇತ್ತು. ಆತನನ್ನ ಎಂದಿಗೂ 'ನೀವು' ಎಂದು ಕರೆಯಲೇ ಇಲ್ಲ, ಬಹುವಚನ ಈ ವಿಷಯದಲ್ಲಿ ನಮ್ಮ ಮನೆಯಿಂದ ಬಹುದೂರ. ಅಪ್ಪನ ದಿನಾಚರಣೆಗೆ ಹಳೆಯದೆಲ್ಲಾ ನೆನಪಾಯ್ತು.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜಿರಳೆಗಳು ಬೀದಿಗೆ ಬಂದಿವೆ!

'ಮೋರಿಯಿಂದೆದ್ದು ಗೋರಿ ಸೇರಲಿರುವ ಜೆನ್ ಜಿರಳೆ' ಎಂಬ ತಲೆಬರಹ ನೀಡಿ 'ವಿಶ್ವವಾಣಿ'ಯ ಜೂನ್ 8ರ ಸಂಚಿಕೆಯಲ್ಲಿ ಅಂಕಣಬರಹ ಬರೆದಿರುವ ಅಂಕಣಕಾರರು, 'ಅಭಿಜಿತ್ ದಿಪ್ಕೆ ಎಂಬ ದೊಡ್ಡ ಜಿರಳೆ....ಜಂತರ್ ಮಂತರ್ ತಲುಪಿ ಭಾಷಣವನ್ನೂ ಮಾಡಿತು. ಸ್ವಲ್ಪ ಹೊತ್ತು ಕುಳಿತು ಅನಾರೋಗ್ಯದ ಕಾರಣ ಹೇಳಿ ಅಲ್ಲಿಂದ ಹೊರಟುಹೋಯಿತು', 'ದೇಶದ ಸಮಸ್ಯೆಯನ್ನು ಬಗೆಹರಿಸಲು ಪಣತೊಟ್ಟ ಜೆನ್ ಜಿರಳೆ ಕುಲತಿಲಕ, ಭಾರತಕ್ಕೆ ಬಂದು ಕೆಲವೇ ತಾಸಿನಲ್ಲಿ ಅಸ್ವಸ್ಥವಾಯಿತು' ಎಂದೆಲ್ಲ ಬರೆದಿದ್ದಾರೆ. ಅವರ ಲೇಖನದ ಪಕ್ಕದಲ್ಲೇ ನನ್ನ ಪತ್ರದಲ್ಲಿ ನಾನು, 'ಸಿಜೆಪಿ ಯಃಕಶ್ಚಿತ್ ಅಲ್ಲ' 'ವಿವೇಕ ಉಳ್ಳವರು ಈ ಪ್ರತಿಭಟನೆಯನ್ನು ಲಘುವಾಗಿ ಪರಿಗಣಿಸಬಾರದು' ಎಂದು ಬರೆದಿದ್ದೆ. ಈಗ ನಾನು ಬರೆದ ಮಾತುಗಳು ನಿಜವಾಗಿವೆ. ಜಿರಳೆ ಕುಲತಿಲಕ ಊರೂರು ಸುತ್ತುತ್ತ ಪ್ರತಿಭಟನೆ ಮುಂದುವರಿಸಿದೆ. ಪ್ರಧಾನ ಕಾರ್ಯದರ್ಶಿ ಸೇರಿದಂತೆ ಇತರ ಜಿರಲೆಗಳು ಸಾಥ್ ನೀಡಿವೆ. ದೆಹಲಿಯಲ್ಲಿ ರಾತ್ರಿಯೂ ಜಿರಳೆಗಳು ಧರಣಿ ಕೂತಿವೆ. ಬೆಂಗಳೂರಿನಲ್ಲಿ ಮಳೆಯಲ್ಲಿಯೂ ಮೂರುವರೆ ತಾಸು ಧರಣಿ ನಡೆಸಿವೆ. ಪ್ರತಿಭಟನೆಯಲ್ಲಿ ಭಾಗವಹಿಸುವ ಜಿರಳೆಗಳ ಸಂಖ್ಯೆ ಮತ್ತು ಉತ್ಸಾಹ ಹೆಚ್ಚುತ್ತಿದೆ. ಸಿಜೆಪಿ ಜಿರಳೆಗಳನ್ನು ಟೀಕಿಸುವವರು ಇನ್ನಾದರೂ ವಸ್ತುಸ್ಥಿತಿ ಅರಿಯುವ ಪ್ರಯತ್ನ ಮಾಡಬೇಕು. ಕೇಂದ್ರ ಶಿಕ್ಷಣ ಮಂತ್ರಿಗಳು ಪರೋಕ್ಷವಾಗಿ ಸಿಜೆಪಿಯನ್ನು ಉದ್ದೇಶಿಸಿ, 'ದಯವಿಟ್ಟು ದೇಶದ ನವ ಪೀಳಿಗೆಯ ಭವಿಷ್ಯದ ಜೊತೆ ಆಟವಾ ಡಬೇಡಿ' ಎಂದಿದ್ದಾರೆ! ವಾಸ್ತವವೆಂದರೆ, ಸಿಜೆಪಿ ಆಟವಾಡುತ್ತಿಲ್ಲ, ಗಂಭೀರವಾಗಿ ಪ್ರತಿಭಟನೆ ಮಾಡುತ್ತಿದೆ. ಆ ಪ್ರತಿಭಟನೆ ಮಕ್ಕಳಲ್ಲಿ ಪರೀಕ್ಷೆ ಬರೆಯುವ ಉತ್ಸಾಹ ಹೆಚ್ಚಿಸುತ್ತಿದೆಯೇ ಹೊರತು ಮಕ್ಕಳಿಗೆ ತೊಂದರೆ ಕೊಡುತ್ತಿಲ್ಲ. ಕೇಂದ್ರ ಸರಕಾರದ ಅಧೀನ ಸಂಸ್ಥೆಯೊಂದರ ವೈಫಲ್ಯದಿಂದಾಗಿ ಮೊದಲ ಸಲ ದೇಶದ ನವ ಪೀಳಿಗೆಯ ಭವಿಷ್ಯದ ಜೊತೆ 'ಜೂಜಾಟ' ಆಡಲಾಯಿತು. ಇದೀಗ, ಮಿಲಿಟರಿ, ಡ್ರೋನ್, ಉಡುಗೆ-ತೊಡುಗೆ-ಅಂಗಾಂಗ ತಪಾಸಣೆ ಇತ್ಯಾದಿಯಾಗಿ ಮಕ್ಕಳಿಗೆ ಅತೀವ ಮಾನಸಿಕ ತೊಂದರೆ ಕೊಡಲಾಗುತ್ತಿದೆ. ನಮ್ಮ ವ್ಯವಸ್ಥೆ ಸರಿಹೋಗಬೇಕಾಗಿದೆ.

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಪರೀಕ್ಷೆಗೆ ಅವಧಿ ಹೆಚ್ಚಿಸಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪೊಲೀಸ್ ಇಲಾಖೆಯ ಮೂರು ಸಾವಿರಕ್ಕೂ ಅಧಿಕ ಹುದ್ದೆಗಳ ನೇಮಕಾತಿ ಅಧಿಸೂಚನೆ ಹೊರಡಿಸಿ ಅಂದೇ ಲಿಖಿತ ಪರೀಕ್ಷಾ ದಿನಾಂಕ ಕೂಡ ನಿಗದಿ ಮಾಡಿದೆ. ಹಲವಾರು ವರ್ಷಗಳಿಂದ ಹುದ್ದೆ ಬಯಸಿ ಅಧ್ಯಯನದಲ್ಲಿ ತೊಡಗಿರುವ ಆಕಾಂಕ್ಷಿಗಳಿಗೆ ಖಂಡಿತ ತೊಂದರೆ ಆಗದು. ಆದರೆ, ಖಾಸಗಿ ಹುದ್ದೆಗಳಲ್ಲಿ ಇನ್ನಿತರ ಕಡೆ ಅರೆಕಾಲಿಕ ಕೆಲಸ ನಿರ್ವಹಿಸುತ್ತ ತಮ್ಮ ಕುಟುಂಬದ ಜೀವನಕ್ಕೂ ಸಹಾಯ ಮಾಡುತ ಇತ್ತ, ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಿ ನಡೆಸುವ ಅಸಂಖ್ಯಾತ ಅಭ್ಯರ್ಥಿಗಳಿಗೆ ಸಮಯಾವಕಾಶ ಇಲ್ಲದೆ ಈ ವೇಳಾಪಟ್ಟಿಯಂತೂ ಸದ್ಯ ಕಬ್ಬಿಣದ ಕಡಲೆ ಆಗಿದೆ. ಇನ್ನಾದರೂ, ಮುಂಬರುವ ಅಧಿಸೂಚನೆಗಳಲ್ಲಿ ರಾಜ್ಯ ಸರ್ಕಾರದ ಪ್ರತಿಯೊಂದು ಪರೀಕ್ಷೆಗಳಲ್ಲೂ ವಿವಿಧ ಸ್ತರದ ಅಭ್ಯರ್ಥಿಗಳನ್ನು ಪರಿಗಣಿಸಿ ಸರ್ವರಿಗೂ ಒಳಿತಾಗುವ ಹಿತದೃಷ್ಟಿಯಿಂದ ಕೆಪಿಎಸ್ಸಿ ಅಥವಾ ಕೆಇಎ ಆಗಲಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿದ ನಂತರ ಪರೀಕ್ಷೆ ಬರೆಯುವ ದಿನಾಂಕವನ್ನು ಕನಿಷ್ಠ ನೂರು ದಿನಗಳ ಕಾಲಾವಕಾಶ ಮಿತಿ ಕಡ್ಡಾಯವಾಗಿ ನೀಡಬೇಕಿದೆ.

- ಅನಿಲ್ ಕುಮಾರ್, ನಂಜನಗೂಡು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಮಾತು ಸೋತವರು ಸುಳ್ಳು ನಾಯಕರ ದೂರವಿಡಬೇಕು

ಬಹುವಚನ

ಪ್ರೊ.ಆರ್.ಜಿ ಹೆಗಡೆ
vveditoped@gmail.com

ಈ ಮಾತುಗಳಿಗೆ ಜಾಗತಿಕ ಖ್ಯಾತಿಯ ಭಾರತೀಯ ವಿಮರ್ಶಕಿ ಗಾಯತ್ರಿ ಚಕ್ರವರ್ತಿ ಸ್ಪಿವಾಕ್ ಅವರ ಬರಹ 'Can the sabaltern speak?' ದ ಹಿನ್ನೆಲೆ ಇದೆ. 'ಸಬಾಲ್ಟರ್ನ್ ಸ್ಟಡೀಸ್' ಅಂದರೆ ಹುದುಗಿಹೋದ ಧ್ವನಿಗಳ ಅಧ್ಯಯನದಲ್ಲಿ (ಉದಾ. ಮಹಿಳೆಯರ, ಆದಿವಾಸಿಗಳ, ದಲಿತರ, ಬುಡಕಟ್ಟು ಜನಾಂಗದವರ, ಊಳಿಗಮಾನ್ಯ ಪದ್ಧತಿಯ/ ವಸಾಹತುಶಾಹಿ ವ್ಯವಸ್ಥೆಯ ಅಡಿಯಲ್ಲಿದ್ದವರ ಸಂಸ್ಕೃತಿಗಳ ಅಧ್ಯಯನದಲ್ಲಿ) ಆಕೆ ಮುಂಚೂಣಿಯ ಹೆಸರು. ಮೇಲೆ ಹೇಳಲಾದ ವರ್ಗಗಳು ತಮ್ಮ ನಿಜದ ಮಾತುಗಳನ್ನು, ಅಥವಾ ಸಂಸ್ಕೃತಿಯನ್ನೇ ಕಳೆದುಕೊಂಡಿರುವುದರ ಕುರಿತು ಈ ಅಧ್ಯಯನಗಳು ಇವೆ. ತಮ್ಮ ಅಸ್ಮಿತೆಯನ್ನು ಅಂತಹವರು ಮರಳಿ ಪಡೆಯುವುದು ಹೇಗೆ ಎಂಬುದರ ಕುರಿತಾದಂತೆಯೂ ಪದ್ಮಪ್ರಶಸ್ತಿ ವಿಜೇತೆ ಸ್ಪಿವಾಕ್ ವಿಸ್ತೃತ ಅಧ್ಯಯನ ನಡೆಸಿದ್ದಾರೆ.

ಸ್ಪಿವಾಕ್ ಹೇಳುತ್ತಾರೆ. ಏನೆಂದರೆ, ಸಾಂಸ್ಕೃತಿಕವಾಗಿ ದಮನಕಾರಿ ವ್ಯವಸ್ಥೆಯ ಅಡಿಯಲ್ಲುಳಿದವರಿಗೆ ತಮ್ಮ ಮಾತನ್ನು, ಸಂಸ್ಕೃತಿಯನ್ನು ಹೇಳಿಕೊಳ್ಳುವುದು ತುಂಬ ಕಷ್ಟದ ಕೆಲಸ ಅಥವಾ ಅಸಾಧ್ಯ. ತಮ್ಮ ಕುರಿತಾಗಿ ಹೇಳಿಕೊಳ್ಳಲು, ದಾಖಲಿಸಲು ಚಾರಿತ್ರಿಕವಾಗಿ ಈ ಸಮುದಾಯಗಳಿಗೆ ಸಾಧ್ಯವಾಗಿಯೇ ಇಲ್ಲ. ಸಾಧ್ಯವಾಗಲಿಕ್ಕೂ ಇಲ್ಲ. ಇಂತಹ ಪರಿಸ್ಥಿತಿ ಹುಟ್ಟಿಕೊಳ್ಳುವುದಕ್ಕೆ ಮೂರು ಕಾರಣಗಳಿವೆ.

ಒಂದನೆಯದು. ಸುದೀರ್ಘ ಕಾಲ ಬೇರೆಯವರ ಮಾತು ಕೇಳಿದ ಅವರಿಗೆ ತಮ್ಮ ಮಾತು, ಸಂಸ್ಕೃತಿ ಈಗ ಮರೆತುಹೋಗಿದೆ. ಮತ್ತು ಆ 'ಮಾತನ್ನು' ಈಗ ಹುಡುಕಿಕೊಳ್ಳುವುದು ಅವರಿಗೆ ಬಹಳ ಕಷ್ಟದ ವಿಷಯ. ಏಕೆಂದರೆ ಅವರಿಗೆ ಅವರದ್ದೇ ಆಗಿ ಇದ್ದ ಬದುಕು, ಪರಂಪರೆ, ನೆನಪು ಎಲ್ಲವೂ ಕಳೆದುಹೋಗಿದೆ. ತಮ್ಮ ಬದುಕಿಗೆ ತಾವೇ ಅನ್ಯರಾಗಿ, ಹೊರಗಿನವರಾಗಿ ಹೋಗಿರುವವರು ಅವರು.

ಉದಾಹರಣೆಗೆ ಸಿದ್ದಿ ಗೌಳಿ, ಹಾಲಕ್ಕಿಗಳು ಇಂತಹ ಸಹಸ್ರಾರು ಆದಿವಾಸಿ, ಬುಡಕಟ್ಟು ಸಂಸ್ಕೃತಿಗಳ ಧ್ವನಿಗಳು ಕಳೆದುಹೋಗಿವೆ. ಮಾಯವಾಗಿವೆ. ಮಹಿಳೆಯರ ಧ್ವನಿಗಳನ್ನಂತೂ ಬಿಡಿ. ಅವರ ಒಳ ಮಾತುಗಳನ್ನು ಹೇಳಿಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ. ಹೊಸ್ತಿಲುಗಳೊಳಗಿನ ಕತ್ತಲಿನಲ್ಲಿ, ಕಪ್ಪು ಪರದೆಯ ಹಿಂದಿನ ಕಣ್ಣೀರಿನಲ್ಲಿ ಪಿಸುಮಾತಾಗಿ ಅವು ಕಾಣೆಯಾಗಿವೆ. ಹೀಗೆ, ಅವರಿಗೆ ಹೇಳಲು ವಿಷಯಗಳೇ ಇಲ್ಲ. ಅವರ ಬದುಕಿನ ದೊಡ್ಡ ದುರಂತ ಇದು. ಎರಡನೆಯ ವಿಷಯ. ಈ ಸಮುದಾಯಗಳಿಗೆ ಇದ್ದಬಿದ್ದ ತಮ್ಮ ಮಾತುಗಳನ್ನು ಕೂಡ ಹೇಳಲು ಬರುವುದಿಲ್ಲ. ಅಂದರೆ ಪಶ್ಚಿಮದ ಅಥವಾ ಪಾಶ್ಚಿಮಾತ್ಯರಾಗಿ ಹೋದ ಜನರಿಗೆ ತಿಳಿಯುವಂತೆ ಹೇಳಲು ಬರುವುದಿಲ್ಲ. ಈಗ ಇರುವ 'ಕೇಳುಗರು' ಹೆಚ್ಚಾಗಿ ಅಂಥವರು- ಸರಕಾರಿ ವ್ಯವಸ್ಥೆಗಳು, ವಿಶ್ವವಿದ್ಯಾಲಯಗಳು, ಮಾಧ್ಯಮ ಸಂಸ್ಥೆಗಳು ಇಂತಹ ಒಂದು ಖಡಕ್ ಆದ ಸ್ವರೂಪ (structure) ಹೊಂದಿರುವ ವ್ಯವಸ್ಥೆಗಳು. 'ತರ್ಕ' ಆಧರಿಸಿ ಅಥವಾ 'ವೈಜ್ಞಾನಿಕ' ಮಾನಸಿಕತೆಯ ಮೂಲಕ ಕೇಳುವಂತವು. ಇಂತವಕ್ಕೆ ತಿಳಿಯುವಂತೆ ಹೇಳಲು 'ಹೂತು ಹೋದ' ಸಂಸ್ಕೃತಿಗಳಿಗೆ ಸಾಧ್ಯವಾಗುವುದಿಲ್ಲ. ಏಕೆಂದರೆ ಈ ಸಂಸ್ಕೃತಿಗಳು ಪಾಶ್ಚಾತ್ಯ ಅಥವಾ ಅಂತಹ ರೀತಿಯಲ್ಲಿ ಬದುಕುವವು ಅಥವಾ ಯೋಚನೆ ಮಾಡುವವುಗಳು ಅಲ್ಲವೇ ಅಲ್ಲ. ಇವು ಬದುಕುವ, ಯೋಚಿಸುವ ವಿಧಾನ ಮತ್ತು ಲಯವೇ ಬೇರೆ. 'ತಾರ್ಕಿಕತೆ' ಮತ್ತು 'ವೈಜ್ಞಾನಿಕತೆ'ಪಾಶ್ಚಿಮಾತ್ಯ ವಿಧಾನಗಳು. ಆದರೆ ಪೌರಾತ್ಯ (ಹೆಚ್ಚು ಕಡಿಮೆ ಏಶಿಯಾದ, ಆಫ್ರಿಕಾದ) ವಿಶೇಷವಾಗಿ ಭಾರತೀಯ ಸಂಸ್ಕೃತಿಗಳು ತಮ್ಮ ಮಾತುಗಳನ್ನು ಹೇಳುವ ವಿಧಾನ ಬೇರೆಯೇ. ಅವು ತರ್ಕದ ಮೇಲೆ ಅವಲಂಬಿತವಾದವಲ್ಲ. ಈ ಸಂಸ್ಕೃತಿಗಳು 'ಕಟ್ಟುಕಥೆ', ಪುರಾಣ, (ಮಿಥ್) ಅಥವಾ 'ಜನಪದೀಯ'/ ತರ್ಕ ಆಧರಿತವಲ್ಲದ ವಿಧಾನದಲ್ಲಿ ತಮ್ಮ ಕಥಾನಕಗಳನ್ನು/ ಮಾತುಗಳನ್ನು ಕಟ್ಟಿಕೊಳ್ಳುತ್ತವೆ. ನಮ್ಮ ರಾಮಾಯಣ ಮತ್ತು ಮಹಾಭಾರತಗಳು ಕಥೆ ಹೇಳುವುದು ಹೀಗೆ. ಇಲ್ಲಿ ಕಥಾನಕಗಳಿಗೆ ಚೌಕಟ್ಟು ಇತ್ಯಾದಿ ಇರುವುದಿಲ್ಲ, ಬೇಕಿರುವುದಿಲ್ಲ. ನಮ್ಮ ಜನ ಮಾತನಾಡುವುದು ಕೂಡ ಹಾಗೆಯೇ. ಕಥೆ, ಉಪಕಥೆ, ಒಂದರೊಳಗೊಂದು ಬೆರೆತುಕೊಳ್ಳುತ್ತ ಮಾತು ಅಂಕುಡೊಂಕಾಗಿ, ಆಕೃತಿರಹಿತವಾಗಿ, ನಿರಂತರವಾಗಿ ಹರಿಯುತ್ತದೆ.

ಭಾರತೀಯ ಕಾದಂಬರಿಕಾರ ರಾಜಾರಾವ್ ಹೇಳುವಂತೆ ನಮ್ಮ ಮಾತುಗಳು ನಿಲ್ಲುವುದು ಉಸಿರು ನಿಂತಾಗ ಮಾತ್ರ. ಬ್ರಿಟಿಷ್ ಬರಹಗಾರ ಮಾರ್ಕ ಟುಲ್ಲಿ ಭಾರತದಲ್ಲಿ ಪೂರ್ಣಬಿಂದುಗಳೇ ಇಲ್ಲ ಎಂದು ಹೇಳಿದ್ದು ಕೂಡ ಈ ಹಿನ್ನೆಲೆಯಲ್ಲಿಯೇ. ನಮ್ಮ ಸಂಸ್ಕೃತಿಗಳ ಕಥೆಗಳು/ ಮಾತುಗಳು ಇಂತವು. ತಾರ್ಕಿಕತೆಯನ್ನು ಮೀರಿದ ಮಾತುಗಳು. ಉದಾಹರಣೆಗೆ ಕಾದಂಬರಿಕಾರ ರಾಜಾರಾವ್ ತಮ್ಮ ಕಾದಂಬರಿ (?) 'On the Ganga Ghat'ದಲ್ಲಿ ಹೇಳುವ ಒಂದು ಕಥೆಯನ್ನು ಗಮನಿಸಿ. ಕಲ್ಲು, ಕಟ್ಟಿಗೆ ಕಡಿಯುವ ಕೆಲಸದಲ್ಲಿರುವ ಯುವಕನೊಬ್ಬನಿಗೆ ಒಬ್ಬಳು ಪ್ರೇಯಸಿ ಇದ್ದಾಳೆ. ಹಾಗಾಗಿ ಆತನಿಗೆ ತನ್ನ ಸುತ್ತಮುತ್ತ ಇರುವ ಹುಡುಗಿಯರ ಕುರಿತು ಆಸಕ್ತಿ ಇಲ್ಲ, ಅವರಿಂದ ಬಲುದೂರ ಆತ. ಆದರೆ ವಿಷಯವೆಂದರೆ

ಅವನ ಪ್ರೇಯಸಿ ಇರುವುದು ಅವನ ಕನಸಿನಲ್ಲಿ ಮಾತ್ರ. (ನಿಜವಾಗಿ ಅವಳು ಈ ಜಗತ್ತಿನಲ್ಲಿ ಇಲ್ಲ) ಅಥವಾ ಅವನ ಕಲ್ಪನೆಯಲ್ಲಿ ಮಾತ್ರ. ಆದರೆ ವಾಸ್ತವವನ್ನು ನಂಬಲು ಆತ ಸಿದ್ದನಿಲ್ಲ. ಏಕೆಂದರೆ ವಾಸ್ತವದ ಕುರಿತಾದ ಆತನ ಗ್ರಹಿಕೆಯ ರೀತಿಯೇ ಬೇರೆ. ಅವನಿಗೆ ಅನಿಸುವಂತೆ ಆ ಹುಡುಗಿ ಇದ್ದಾಳೆ. ಏಕೆಂದರೆ ಅವಳು ಅವನ ಕನಸಿನಲ್ಲಿ ಬರುತ್ತಾಳೆ ಮತ್ತು ಅವಳು ಬಂದಾಗ ಅವನ ಮೂಗಿಗೆ ದಟ್ಟವಾದ ಮಲ್ಲಿಗೆ ಹೂವಿನ ಪರಿಮಳ ಬರುತ್ತದೆ. ಅವಳನ್ನು ಭೆಟ್ಟಿಯಾಗುವ ಸಲುವಾಗಿ ಆತ ಆದಷ್ಟು ನಿದ್ರಿಸುತ್ತಲೇ ಇರುತ್ತಾನೆ. ನಿದ್ರೆ, ಅಂದರೆ ಪರಮ ಪ್ರೀತಿ ಅವನಿಗೆ. ಏಕೆಂದರೆ ಅವಳು ಭೆಟ್ಟಿಯಾಗುವುದು ಅಲ್ಲಿ, ಆತನಿಗೆ ಅದು ವಾಸ್ತವ.

ಇಂಥಹುದೇ ಒಂದು ಕಥೆ ನಾನು ಚಿಕ್ಕವನಿದ್ದಾಗ ನೋಡಿದ ಹಾಲಕ್ಕಿ ಸಮುದಾಯದ ಯಕ್ಷಗಾನ ಒಂದರಲ್ಲಿ ಬರುತ್ತಿತ್ತು. ಅಲ್ಲಿ ಒಬ್ಬ ಕಾಡಿಗೆ ಹೋಗಿರುತ್ತಾನೆ. ಆತನನ್ನು ಹುಲಿಯೊಂದು ಅಟ್ಟಿಸಿಕೊಂಡು ಬರುತ್ತದೆ. ಆತ ಓಡಿ ಹೋಗಿ ಒಂದು ಎತ್ತರದ ಮರವನ್ನೇರಿ ಬಿಡುತ್ತಾನೆ. ಈಗ ಆ ಹುಲಿ ಆತ ಏರಿರುವ ಮರದ ಕೆಳಗೆ ಬಂದು ಜೋರಾಗಿ ಅರ್ಭಟಿಸುತ್ತದೆ. ಹೆದರಿದ ಆತನಿಗೆ ಉಚ್ಚೆ ಬಂದುಬಿಡುತ್ತದೆ. ಆದರೆ ಅವನ ಆ ಮೂತ್ರದ ಧಾರೆಯನ್ನೇ ಹಗ್ಗವಾಗಿಸಿಕೊಂಡ ಹುಲಿ ಅದನ್ನು ಹಗ್ಗದಂತೆ ಹಿಡಿದು ಮೇಲೇರಿ ಬಂದು ಆತನನ್ನು ತಿಂದುಬಿಡುತ್ತದೆ. ಅಂದರೆ ಉಚ್ಚೆಯೇ ಹಗ್ಗವಾಗಿಬಿಡುತ್ತದೆ. ನಮ್ಮ ಸಂಸ್ಕೃತಿಗಳ ಕಥೆಗಳು ಹೀಗೆ ವಾಸ್ತವಿಕ ಸತ್ಯವನ್ನು ಮೀರಿ ಹೇಳಲ್ಪಡುವವು. ನಮ್ಮ ಚರಿತ್ರೆಗಳು ಕೂಡ ಇದೇ ರೀತಿ ಹೇಳಲ್ಪಡುತ್ತವೆ. ನಮ್ಮ ಪ್ರತಿರೋಧದ, ಹೋರಾಟದ ಮಾತುಗಳು ಕೂಡ ಹೀಗೆಯೇ. ಪಶ್ಚಿಮಕ್ಕಿಂತ ವಿಭಿನ್ನವಾಗಿಯೇ ಇರುವವು.

ಗಮನಿಸಿ. ಗಾಂಧೀಜಿಯವರ 'ಹೋರಾಟ' ಆರಂಭವಾಗು ತ್ತಿದ್ದುದು ಭಜನೆಯಿಂದ. ಮತ್ತು ಅವರ ಹೋರಾಟವೆಂದರೆ ಉಪವಾಸ ಕೂಡುವುದು. ಸಹಕರಿಸದೆ ಇರುವುದು. ಇವೆಲ್ಲ ಏನು? ಹೇಗೆ ಕೆಲಸ ಮಾಡುತ್ತವೆ? ಎಂಬುದು ಪಾಶ್ಚಿಮಾತ್ಯರಿಗೆ ಅರ್ಥವಾಗದ ವಿಷಯಗಳು. ಇವೆಲ್ಲ ನೋಡಿಯೇ ಅವರು ಭಾರತ ಹಾವಾಡಿಗರ, ಮಾಂತ್ರಿಕರ ಇಂಥವರ ದೇಶ ಅಂದುಕೊಂಡಿದ್ದು. ಗಮನಿಸಿ. ಈ 'ಹುದುಗಿಹೋದ ಧ್ವನಿಗಳು' ಮತ್ತು ಮಾತುಗಳು (ಹಾಡುಗಳು) ರೂಪಕಗಳು ಮತ್ತು ಸಂಕೇತಗಳಿಂದ ತುಂಬಿಹೋಗಿವೆ. ಹಾಗಾಗಿ ಹುದುಗಿಹೋದ ಧ್ವನಿಗಳ ಮಾತುಗಳು ನಾಗರಿಕವೆಂದು ಹೇಳಿಕೊಳ್ಳುವ ಜಗತ್ತಿಗೆ ಅರ್ಥವಾಗುವುದೇ ಇಲ್ಲ. ಉದಾಹರಣೆಗೆ ಗಾನಕೋಗಿಲೆ ಅಂಕೋಲಾದ ಪದ್ಮಶ್ರೀ ಸುಕ್ರಿ ಗೌಡರ ಅದ್ಭುತ ಹಾಡುಗಳು ಏನನ್ನು ಹೇಳುತ್ತವೆ ಎನ್ನುವುದನ್ನು ಅರ್ಥೈಸುವುದು ಸುಲಭವಲ್ಲ. ನಿಗೂಢ ಸಂಸ್ಕೃತಿಯೊಂದರ ಮಾತುಗಳು ಅವು. ಸ್ಪಿವಾಕ್ ಹೇಳುವುದೆಂದರೆ, ಹೀಗೆಲ್ಲ ಆಗಿ 'ಹುದುಗಿ ಹೋದ' ಸಂಸ್ಕೃತಿಗಳಿಗೆ 'ಮಾತನಾಡಲು' ಬರುವುದಿಲ್ಲ.

ಆದರೆ ಸ್ಪಿವಾಕ್ ಹೇಳುವ ಮೂರನೆಯ ಮಾತು ಸಮಕಾಲೀನ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾದುದು. ಆಕೆ ಹೇಳುವಂತೆ ಇಂತಹ ಹೂತುಹೋದ ಸಮುದಾಯಗಳಿಗೆ ತಮ್ಮ ಮಾತನ್ನು ಆಡಲು ಎಂದೂ, ಎಂದೆಂದೂ ಸಾಧ್ಯವಾಗುವುದಿಲ್ಲ. ಏಕೆಂದರೆ ಅವರ ಮಾತುಗಳನ್ನು ಈಗ ಬೇರೆಯವರು ಕದ್ದುಬಿಟ್ಟಿದ್ದಾರೆ. ಅಂದರೆ ಅವರ ಪರವಾಗಿ ಮಾತನಾಡುವ ಪೇಟೆಂಟ್ ಪಡೆದಂತೆ, ಅವರ ಸಂಸ್ಕೃತಿಯ ಯಜಮಾನಿಕೆ ಪಡೆದಂತೆ ಇರುವ ಬೇರೆಯವರು, ವಂಚಕರು ಅವರ ಮಾತುಗಳನ್ನು ಕದ್ದುಬಿಟ್ಟಿದ್ದಾರೆ. ಅವರ ಮೂಲ ಧ್ವನಿಗಳನ್ನು ತಿರುಚಿ, ವಿರೂಪಗೊಳಿಸಿಬಿಟ್ಟಿದ್ದಾರೆ. ಮುಖ್ಯವಾಗಿ ಹೀಗಾಗಿ 'ಹೂತು ಹೋದ' ಧ್ವನಿಗಳಿಗೆ ತಮ್ಮ ಮೂಲ ಮಾತುಗಳನ್ನು ತಿರುಗಿ ಪಡೆಯಲು, ಆಡಲು ಸಾಧ್ಯವೇ ಇಲ್ಲ. ಸ್ಪಿವಾಕ್ ಹೇಳುವ ಈ ಅಪ್ಪಟ ಸತ್ಯದ ಮಾತನ್ನು ಅರ್ಥ ಮಾಡಿಕೊಳ್ಳುವುದಿದ್ದರೆ ಸಮಕಾಲೀನ ಭಾರತದ ಕೆಲವು ವಿಷಯಗಳನ್ನು ಗಮನಿಸಬೇಕು. 'ಹೂತು ಹೋದ ಮಾತು'ಗಳನ್ನು ಹೇಗೆ ಬೇರೆಯವರು ಕದ್ದುಬಿಟ್ಟಿದ್ದಾರೆ ಎಂಬುದನ್ನು ಗಮನಿಸಬೇಕು. ಉದಾಹರಣೆಗೆ ಕೆಲವು ವರ್ಷಗಳ ಹಿಂದೆ ಸಾವಿಗೀಡಾದ ಕರ್ನಾಟಕದ 'ಪತ್ರಿಕೆ'ಯೊಂದರ ಸಂಪಾದಕಿಯೊಬ್ಬರು ಮಹಿಳೆಯರ ಹಕ್ಕಿನ, ಪಿತೃಪ್ರಧಾನ ಸಮಾಜದ ಕುರಿತು 'ಮಹಿಳೆಯರ ಧ್ವನಿಯಾಗಿ' ಮಾತನಾಡುತ್ತಿದ್ದರು. ಮಹಿಳಾ ಧ್ವನಿಗಳನ್ನು ಗುತ್ತಿಗೆ ತೆಗೆದುಕೊಂಡಂತೆ ಮಾತನಾಡುತ್ತಿದ್ದರು. (ಎಂತಹ ಮಾತುಗಳು ಎಂದರೆ ಕೇಳಲು ಮಹಿಳೆಯರಿಗೇ ಮುಜುಗರವಾಗುವಂತವು.) ಆದರೆ ನಿಜವಾಗಿಯೂ ಆ ಮಾತುಗಳು ದಮನಿತರ ಧ್ವನಿಗಳ ವಿರೂಪಗೊಳಿಸಿದ ಮಾತಾಗಿದ್ದವು ಎಂಬುದು ಎಲ್ಲರಿಗೂ ಗೊತ್ತಿದೆ. ಹಾಗೆಯೇ ಸಮಾಜವಾದದ ಮಾತನಾಡುವ ಉತ್ತರ ಪ್ರದೇಶದ ಸಮಾಜವಾದಿ ಪಕ್ಷ ಮೂಲತಃ ಊಳಿಗಮಾನ್ಯ(ಫ್ಯೂಡಲ್) ಮನಸ್ಥಿತಿಯದು. ಸಂಸತ್ತು ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಸೀಟುಗಳನ್ನು ಮೀಸಲಿಡುವ ಕಾನೂನಿನ ವಿರೋಧವಾಗಿರುವ ಪಕ್ಷ ಅದು. ಅದು ನಿಜಕ್ಕೂ ಸಮಾಜವಾದಿ ಧ್ವನಿಗಳನ್ನು ಅಪಹರಿಸಿಬಿಟ್ಟಿದೆ. ಹಾಗೆಯೇ ದೇಶದಲ್ಲಿ 'ಅಲ್ಪಸಂಖ್ಯಾತರ' ರಕ್ಷಣೆಗೆ ನಿಂತಿರುವ ಬಹುತೇಕ ರಾಜಕೀಯ ಪಕ್ಷಗಳು ಆ ಸಮುದಾಯದ ಮಹಿಳೆಯರ ವಿರುದ್ಧವಾಗಿ ಇರುವಂತವು. ಅವರ ಧ್ವನಿಯನ್ನು ಹತ್ತಿಕ್ಕಿದವು. ಮಮತಾ ಬ್ಯಾನರ್ಜಿ ಅಲ್ಪಸಂಖ್ಯಾತರ ಮಾತುಗಳಿಗೆ (ನಕಲಿ) ಧ್ವನಿಯಾಗಿರುವ ಹಾಗೆ. ಇಂತಹ ನೂರಾರು ಉದಾಹರಣೆಗಳನ್ನು ಕೊಡಬಹುದು. ಆದರೆ ಬೇಡ.

ಸ್ಪಿವಾಕ್ ಹೇಳುತ್ತಿರುವುದು ಇದು. ಏನೆಂದರೆ ಹೀಗೆ ಶೋಷಿತರ ನಿಜದ ಮಾತುಗಳನ್ನು ಮುಖವಾಡ ಧರಿಸಿದವರು ಕದ್ದುಬಿಟ್ಟಿದ್ದಾರೆ. ಅಂತಹವರಿಂದ ತಮ್ಮ ಮಾತುಗಳನ್ನು ಬಿಡಿಸಿಕೊಳ್ಳಲು ದಮನಿತರಿಗೆ ಸಾಧ್ಯವಾಗುತ್ತಲೇ ಇಲ್ಲ, ದೊಡ್ಡ ಸಮಸ್ಯೆ ಇದು. ತಮ್ಮ ವಕ್ತಾರರಿಂದಲೇ, ನಾಯಕರುಗಳಿಂದಲೇ ತಮ್ಮ ಮಾತುಗಳನ್ನು ಪ್ರತ್ಯೇಕಿಸಿ ಹೇಳುವುದು. ತಮ್ಮ 'ಪರವಾಗಿ' ಮಾತನಾಡುವವರ ವಿರುದ್ಧವೇ ಬಂಡೆದ್ದು ತಮ್ಮ ಅಸಲಿ ಮಾತುಗಳನ್ನು ಹೇಳುವುದು.

ಇಂತಹ ವರ್ಗಗಳಿಗೆ ತಮ್ಮ ಮಾತನ್ನು ಕಟ್ಟಿಕೊಳ್ಳಲು ಸಾಧ್ಯವಿದೆಯೇ? ಇದು ಪ್ರಶ್ನೆ. ಅದು ಸಾಧ್ಯವಿದೆ. ಆದರೆ ಹಾಗೆ ಮಾಡುವುದಿದ್ದರೆ ಇಂತಹ ವರ್ಗಗಳು ಈಗಿರುವ ತಮ್ಮ ಸುಳ್ಳು ನಾಯಕರನ್ನು ಬದಿಗೆ ಬದಿಗೆ ಸರಿಸಿ ತಾವೇ ಮಾತನಾಡಲು ಆರಂಭಿಸಬೇಕು. ತಮ್ಮ ಧ್ವನಿಯನ್ನು ಕದ್ದಿರುವ ಸುಳ್ಳು ನಾಯಕರ ವಿರುದ್ಧವೇ ಅವರು ಬಂಡೆದ್ದಾಗ ಮಾತ್ರ ಅವುಗಳಿಗೆ ತಮ್ಮ ಒಳಗಿನ ಮಾತನ್ನು ವಾಪಸು ಪಡೆಯಲು, ಹೇಳುವುದು ಸಾಧ್ಯವಿದೆ.

ಪ್ರಸ್ತುತ

ರಮಾನಂದ ಶರ್ಮಾ

ರಾಜಕೀಯದ ಕವಲುದಾರಿಯಲ್ಲಿ ಅಣ್ಣಾಮಲೈ

ತಮಿಳುನಾಡು ರಾಜಕೀಯ ಇನ್ನಿತರ ರಾಜ್ಯಗಳಿಂದ ಹೊರತಾಗಿ ಸದಾ ಇನ್ನೊಂದು ಹಳಿಯ ಮೇಲೆಯೇ ಇರುವುದು ನಿತ್ಯಸತ್ಯ. ಊರಿಗೊಂದು ದಾರಿಯಾದರೆ, ಮಾಣಿಗೆ ಒಂದು ದಾರಿಯಂತೆ ಅವರ ಚಿಂತನೆ ಇರುತ್ತದೆ. ಸರಕಾರಿ ಕಾರ್ಯಕ್ರಮಗಳಲ್ಲಿ ತಮಿಳು ನಾಡಗೀತೆಯನ್ನು ಮೊದಲು ಹಾಡಿ ನಂತರ ವಂದೇ ಮಾತರಂ ಹಾಡುತ್ತಿರುವುದು ಈ ನಿಟ್ಟಿನಲ್ಲಿ ತೀರಾ ಇತ್ತೀಚೆಗಿನ ಉದಾಹರಣೆ. ಅವರ ರಾಜಕೀಯ ಸದಾ ತಮಿಳು ಭಾಷೆ, ದ್ರಾವಿಡ ಸಂಸ್ಕೃತಿ, ತಮಿಳು ಅಸ್ಮಿತೆ ಮತ್ತು ಹಿಂದಿ ಹೇರಿಕೆ ಸುತ್ತ ಇರುತ್ತಿದ್ದು, ಯಾವುದೇ ರಾಜಕೀಯ ಪಕ್ಷ ಅಥವಾ ರಾಜಕಾರಣಿ ಈ ಸಿದ್ಧ ಸೂತ್ರಗಳಿಂದ ದೂರವಾದರೆ ಅವರು ರಾಜ್ಯ ರಾಜಕೀಯ ನಕ್ಷೆಯಿಂದ ಕಾಣೆಯಾಗುತ್ತಾರೆ. ತಮಿಳುನಾಡಿನ ರಾಜಕೀಯ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ಸತ್ಯದ ಅರಿವು ಅಗುತ್ತದೆ. ಕಾಲಘಟ್ಟದಲ್ಲಿ ಇದಕ್ಕೆ ಸಾಕಷ್ಟು ಉದಾಹರಣೆಗಳು ಇವೆ. ಪ್ರಾದೇಶಿಕತೆ ತಮಿಳು ನಾಡಿನಲ್ಲಿ ಒಂದು ತೊಲೆ ಹೆಚ್ಚಿದೆ. ಈ ಸತ್ಯವನ್ನು ವಿದ್ಯಾವಂತರಾದ, ಅನುಭವಿಯಾದ ಅಣ್ಣಾಮಲೈ ತಿಳಿಯಲು ಪ್ರಯತ್ನ

ಮಾಡದಿರುವುದು ತೀರಾ ಆಶ್ಚರ್ಯ. ಅವರು ರಾಷ್ಟ್ರೀಯ ಪಕ್ಷವನ್ನು ಸೇರದೇ ಯಾವುದಾದರೂ ಪ್ರಾದೇಶಿಕ ದ್ರಾಮುಕ ಪಕ್ಷವನ್ನು ಸೇರಿದ್ದರೆ ಇಷ್ಟೊತ್ತಿಗೆ ಎಮ್‌ಎಲ್‌ಎ, ಎಮ್‌ಎಲ್‌ಸಿ, ರಾಜ್ಯಸಭಾ, ಲೋಕಸಭಾ ಸದಸ್ಯರಾಗಿರುತ್ತಿದ್ದರು, ರಾಜ್ಯ ಅಥವಾ ಕೇಂದ್ರದಲ್ಲಿ ಮಂತ್ರಿಯಾಗಿ ಮೆರೆಯುತ್ತಿದ್ದರು ಎನ್ನುವ ನೆಟ್ಟಿಗರ, ರಾಜಕೀಯ ವಿಶ್ಲೇಷಕರ ಅಭಿಪ್ರಾಯದಲ್ಲಿ ತೂಕವಿ ಲ್ಲದಿಲ್ಲ, ಅವರು ತಪ್ಪು ಬಸ್ಸನ್ನು ಹತ್ತಿದ್ದು, ಅವರಿಗೆ ಇನ್ನು ತಮ್ಮಗುರಿ ಸೇರಬೇಕಾದ ಬಸ್ಸು ದೊರಕುವುದು ಕಷ್ಟ ಎನ್ನಲಾಗುತ್ತದೆ.

ಅಣ್ಣಾಮಲೈ ಮೋದಿ ಮತ್ತು ಅಮಿತ್ ಶಾರ ಮೇಲಿನ ಅಪಾರ ಅಭಿಮಾನ ಮತ್ತು ಅವರು ನೀಡಿದ ಭರವಸೆಯ ಮೇಲೆ ಭಾರತೀಯ ಜನತಾಪಕ್ಷವನ್ನು ಸೇರಿದ್ದರು ಮತ್ತು ಅವರ ಚಿಂತನೆ ಮತ್ತು ನಿರೀಕ್ಷೆಯಲ್ಲಿ ಕಮಲ ತಮಿಳುನಾಡಿನಲ್ಲಿ ಅರಳಬಹುದು ಎನ್ನುವ ಆಶಾ ಭಾವನೆ ಉತ್ತುಂಗದಲ್ಲಿತ್ತು. ಹಾಗೆಯೇ ಪ್ರಾದೇಶಿಕತೆ, ಭಾಷಾ ಮತ್ತು ದ್ರಾವಿಡ ಸಂಸ್ಕೃತಿಯ ರಕ್ಷಣೆಯ ಓವರ್ ಡೋಸ್‌ನಲ್ಲಿ ನಲುಗುತ್ತಿರುವ ತಮಿಳುನಾಡು ರಾಜಕೀಯಕ್ಕೆ ಹೊಸ ಆಯಾಮ ತೋರಿಸಬಹುದು ಎನ್ನುವ ದೃಢ ವಿಶ್ವಾಸದಲ್ಲಿದ್ದರು. ಆರಂಭದಲ್ಲಿ ಅವರಿಗೆ ಈ ನಿಟ್ಟಿನಲ್ಲಿ ಸ್ವಲ್ಪ ಬಲವು ಸಿಕ್ಕಿತ್ತು. ಎನ್ ಮಣ್ ಎನ್ ಮಕ್ಕಳ್ ಅಭಿಯಾನದ ಮೂಲಕ ರಾಜ್ಯಾದ್ಯಂತ ಭಾಜಪವನ್ನು ಸಂಘಟಿಸಿ ಮೋದಿ ಮತ್ತು ಅಮಿತ್ ಶಾ ಮೆಚ್ಚುಗೆಯನ್ನೂ ಪಡೆದಿದ್ದರು. ಆದರೆ, ದಿನಗಳು ಕಳೆದಂತೆ ಭಾಜಪದ ರಾಜ್ಯ ಘಟಕ ಕೇವಲ ನೆಪಮಾತ್ರಕ್ಕೆ ಇದ್ದು ಎಲ್ಲವೂ ದೆಹಲಿಯಿಂದ ವರಿಷ್ಠರ ಹೆಸರಿನಲ್ಲಿ ನಿರ್ದೇಶಿಸಲ್ಪಡುತ್ತದೆ ಎನ್ನುವುದು ಅವರಿಗೆ ಗೋಚರಿಸತೊಡಗಿತು. ಐಪಿಎಸ್ ಅಧಿಕಾರಿಯಾಗಿ ನಿರ್ದೇಶನ ನೀಡುತ್ತಿದ್ದ ಅವರಿಗೆ ಸದಾ ನಿರ್ದೇಶನಕ್ಕೆ ಕಾಯುವುದು ನುಂಗಲಾರದ ತುತ್ತಾಗಿ ಪರಿಣಮಿಸಿತ್ತು.

ಇದು ತಮಿಳುನಾಡು ವಿಧಾನಸಭಾ ಚುನಾವಣೆಯ ಸಮಯದಲ್ಲಿ ಎಐಡಿಎಂಕೆ ಸಂಗಡ ಮೈತ್ರಿ ಮಾಡಿಕೊಳ್ಳುವಾಗ, ಟಿಕೆಟ್ ಹಂಚಿಕೆಯಲ್ಲಿ ಇವರನ್ನು ಕಡೆಗಣಿಸಿದ್ದು ಅವರಿಗೆ ಭಾಜಪದಲ್ಲಿ ಮುಂದುವರೆಯುವ ಬಗೆಗೆ ಎರಡೆರಡು ಬಾರಿ ಚಿಂತಿಸುವಂತೆ ಮಾಡಿತ್ತು. ಆಗಲೇ ಅವರು ಒಂದು ಕಾಲನ್ನು ಹೊರಗಿಟ್ಟಿದ್ದರು. ವಾಸ್ತವದಲ್ಲಿ ಅವರು ಯಾವುದೇ ದ್ರಾಮುಕ ಪಕ್ಷಗಳೊಡನೆ ಹೊಂದಾ ಣಿಕೆ ಮಾಡಿಕೊಳ್ಳದೆ ಸ್ವತಂತ್ರವಾಗಿ ಸ್ಪರ್ಧಿಸಿ ಗೆದ್ದು ರಾಷ್ಟ್ರೀಯ ಪಕ್ಷವನ್ನು ತಮಿಳುನಾಡಿನಲ್ಲಿ ಗದ್ದುಗೆಯಲ್ಲಿ ಕೂರಿಸಬೇಕು ಎನ್ನುವುದು ಅವರ ಮಹದಾಶೆಯಾಗಿತ್ತು. ಅಕಸ್ಮಾತ್ ದ್ರಾಮುಕ ಪಕ್ಷಗಳೊಡನೆ ಹೊಂದಾಣಿಕೆ ಮಾಡಿಕೊಂಡರೂ, ಮುಖ್ಯ ಭೂಮಿಕೆಯಲ್ಲಿ ತಮ್ಮ ಪಕ್ಷ ಇದ್ದು, ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ತಾವು ಗದ್ದುಗೆಯಲ್ಲಿ ವಿರಾಜಮಾನರಾಗಬೇಕು ಎನ್ನುವ ಆಸೆ ಕೂಡಾ ಅವರಿಗೆ ಇತ್ತು ಎನ್ನಲಾಗುತ್ತದೆ. ಟಿಕೆಟ್ ಹಂಚಿಕೆಯಲ್ಲಿ ಇವರನ್ನು ನಿರೀಕ್ಷೆಯಷ್ಟು ವಿಶ್ವಾಸಕ್ಕೆ ತೆಗೆದುಕೊಂಡಿರಲಿಲ್ಲ. ರಾಷ್ಟ್ರೀಯ ಪಕ್ಷಗಳನ್ನು ತಿರಸ್ಕರಿಸುವ ಗಡಿಯಾಚೆ ನಿಲ್ಲಿಸುವ ತಮಿಳುನಾಡಿನ ರಾಜಕೀಯ ಚಿಂತನೆಗೆ ಭಾಜಪ ಅಣ್ಣಾಡಿಎಂಕೆ ಬಲಿಯಾಗುತ್ತಿರುವಂತೆ ಅಣ್ಣಾ ಮಲೈ ರಾಜಕೀಯದಲ್ಲಿ ಉಳಿಯುಲು, ಬೆಳೆಯಲು, ತಮ್ಮ ಮಹತ್ವಾಕಾಂಕ್ಷೆ ಈಡೇರಿಸಿಕೊಳ್ಳಲು ಗೇಮ್‌ಚೇಂಜ್ ಮಾಡಿದ್ದಾರೆ. ತಮಿಳುನಾಡಿನಲ್ಲಿ ಚುನಾವಣೆ ಗೆಲ್ಲುವ ಸೂತ್ರವನ್ನು ಅವರು ಕಂಡುಕೊಂಡಂತೆ ಕಾಣುತ್ತಿದ್ದು ಇದಕ್ಕೆ ಮುನ್ನುಡಿಯಾಗಿ ಬಿಜೆಪಿಗೆ ರಾಜೀನಾಮೆ ನೀಡಿ ಪ್ರಾದೇಶಿಕ ಪಕ್ಷ ರಾಜಕಾರಣದತ್ತ ಹೊರಳುತ್ತಿದ್ದಾರೆ.

ಮೇಲು ನೋಟಕ್ಕೆ ಅವರು ರಾಷ್ಟ್ರೀಯವಾದಿಗಳಾಗಿ ಕಂಡರೂ, ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅವರು ತಮಿಳರಲ್ಲಿ ಗಟ್ಟಿಯಾಗಿರುವ ಪ್ರಾದೇಶಿಕತೆ ತಮ್ಮಲ್ಲೂ ಇದೆ ಎನ್ನುವುದನ್ನು ತೋರಿಸುತ್ತಿದ್ದಾರೆ. ಇದರಲ್ಲಿ ಅವರ ಭವಿಷ್ಯದ ಚಿಂತನೆಯೂ ಇರಬಹುದು. ಇದಕ್ಕೆ ಪೂರಕವಾಗಿ ಅವರು ಕೇಂದ್ರ ಸರಕಾರದ ನೀಟ್ ಪರೀಕ್ಷೆಯಲ್ಲಿನ ಅಕ್ರಮವನ್ನು ಖಂಡಿಸಿದ್ದಾರೆ. ಹಾಗೆಯೇ ಸಿಬಿಎಸ್‌ಇ ಭಾಷಾ ನೀತಿಯನ್ನೂ ಕಟುವಾಗಿ ಟೀಕಿಸಿದ್ದಾರೆ. ತಮಿಳುನಾಡಿನಲ್ಲಿ ಸ್ಥಳೀಯರ ಮೇಲೆ ವಲಸಿಗರು ಮುಖ್ಯವಾಗಿ ಉತ್ತರ ಭಾರತೀಯರು ನಡೆಸಿದ ಹಲ್ಲೆ ಪ್ರಕರಣವನ್ನು ಉಲ್ಲೇಖಿಸಿ ಉತ್ತರ-ದಕ್ಷಿಣ ಭಾರತ ವೈಮನ ಸ್ಯಗಳ ಬಗೆಗೆ ಏರುಧ್ವನಿಯಲ್ಲಿ ಮಾತನಾಡುತ್ತಿದ್ದಾರೆ. ಅವರು ದಿನಗಳು ಕಳೆದಂತೆ ತಮಿಳುನಾಡಿನ ವಿಶೇಷತೆಗೆ ಅನುಗುಣವಾಗಿ ಬದಲಾಗುತ್ತಿದ್ದಾರೆ. ತಮಿಳರಿಗೆ ಇಷ್ಟವಾದ ವಿಷಯಗಳನ್ನೇ ಒಂದೊಂದಾಗಿ ಎತ್ತುತ್ತಿದ್ದಾರೆ. ಒಬ್ಬ ಸಿನೆಮಾ ನಟ ಪಕ್ಷ ಕಟ್ಟಿ ಎರಡು ವರ್ಷದಲ್ಲಿ ಅಧಿಕಾರಕ್ಕೆ ಬಂದಿರುವ ದೃಶ್ಯ ಅವರ ಕಣ್ಣ ಮುಂದೆ ಭರತನಾಟ್ಯವಾಡುತ್ತಿದ್ದು ಅವರು ಈ ನಿಟ್ಟಿನಲ್ಲಿ ಮೌನವಾಗಿ ಕಾರ್ಯೋನ್ಮುಖರಾಗಿದ್ದಾರೆ.

ಮೊದಲ ಹಂತದಲ್ಲಿ ಅವರು ಜನತಾ ಚಳವಳಿ ರೂಪಿಸುತ್ತಿದ್ದು, ಅವರ ಹಿಂದೆಯೇ ಭಾಜಪವನ್ನು ತೊರೆದ ಸಾವಿರಾರು ಕಾರ್ಯಕರ್ತರು ಅವರ ಜೊತೆಗೂಡುತ್ತಿದ್ದು ಮುಂದಿನ ದಿನಗಳಲ್ಲಿ ಹೊಸ ರಾಜಕೀಯ ಪಕ್ಷವನ್ನು ಹುಟ್ಟು ಹಾಕುವ ಚಿಂತನೆಯಲ್ಲಿದ್ದಾರೆ. ಸದ್ಯ ಅವರಿಗೆ ಯಾವುದೇ ಚುನಾವಣೆ ಇರದಿರುವುದು, 2029 ಮತ್ತು 2031ವರೆಗೆ ಕಾಲಾವಕಾಶ ಇದ್ದು, ಅವರು ಸದ್ರಢವಾಗಿ ಪಕ್ಷವನ್ನು ಕಟ್ಟಿ ಬೆಳೆಸಿ ಚುನಾವಣೆಗೆ ಸಿದ್ಧವಾಗಬಹುದು. ರಾಜಕೀಯ ವಿಶ್ಲೇಷಕರ ಪ್ರಕಾರ ಮುಂದಿನ ದಿನಗಳಲ್ಲಿ ತಮಿಳುನಾಡಿನಲ್ಲಿ ದ್ರಾಮುಕ ಪಕ್ಷಗಳ ಬದಲಿಗೆ ಟಿವಿಕೆ ವಿಜಯ್ ವರ್ಸಸ್ ಅಣ್ಣಾಮಲೈ ಸಂಘರ್ಷವಾಗುವ ಸಾಧ್ಯತೆ ಇದ್ದು, ಅರು ದಶಕಗಳಿಂದ ರಂಗಸ್ಥಳದಲ್ಲಿದ್ದ ದ್ರಾಮುಖ ಪಕ್ಷಗಳು ಮತ್ತು ನೆಪಮಾತ್ರಕ್ಕೆ ಇರುವ ರಾಷ್ಟ್ರೀಯ ಪಕ್ಷಗಳು ಒಂದು ಸೈಡ್‌ನಲ್ಲಿ ನಿಂತು ಹೋರಾಟವನ್ನು ನೋಡಬೇಕಾಗಬಹುದೇನೋ.

ಭಾಜಪದ ವರಿಷ್ಠರು ಅಣ್ಣಾಮಲೈಯವರನ್ನು ನಡೆಸಿಕೊಳ್ಳುವಲ್ಲಿ ತಮ್ಮ ಎಂದಿನ ಕಾರ್ಯವೈಖರಿ ಬಿಟ್ಟು ಸ್ವಲ್ಪ ಉದಾರತೆ ತೋರಿಸಿದ್ದರೆ ತಮಿಳು ನಾಡಿನಲ್ಲಿ ಕಮಲವನ್ನು ಸ್ವಲ್ಪವಾದರೂ ಅರಳಿಸಬಹುದಿತ್ತು. ಮುಂದಿನ ದಿನಗಳಲ್ಲಿ ತಮಿಳುನಾಡು ರಾಜಕೀಯ ಕ್ಲೈಮಾಕ್ಸ್ ಮುದ ನೀಡುವುದಂತೂ ಸತ್ಯ.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914

VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:158

ಸಮಾಚಾರ ಸಣ್ಣದಲ್ಲಿ

ನಟ ಪಂಕಜ್ ತ್ರಿಪಾಠಿ ಅಣ್ಣನಿಗೆ ಕೊಡಲಿ ಏಟು

ಬಿಹಾರ: ಬಿಹಾರ ಮೂಲದ ಪಂಕಜ್ ತ್ರಿಪಾಠಿ ಬಹುಭಾಷಾ ಚಿತ್ರಗಳ ಖ್ಯಾತ ನಟ-ಖಳನಟ. ಅವರ ಕುಟುಂಬದ ಹಿರಿಯರ ಮೇಲೆಯೂ ಸಿನಿಮಾ



ರೀತಿಯಲ್ಲೇ ಮಾರಣಾಂತಿಕ ಹಲ್ಲೆಯಾಗಿದೆ. ಅಣ್ಣ ವಿಜಯೇಂದ್ರ ನಾಥ್ ತಿವಾರಿ ಅವರ ಮೇಲೆ ನೆರೆಮನೆಯ ರಾಜೇಶ್ ಸಹಾ ಎಂಬಾತ ಬಿಹಾರದ ಮಾಧೋಪುರದ ಬೆಲ್ಸಂದ್ ಗ್ರಾಮದಲ್ಲಿ ಸೋಮವಾರ ಹಾಡಹಗಲೇ ಮರ ಕತ್ತರಿಸುವ ಕೊಡಲಿಯಿಂದ ಮಾರಣಾಂತಿಕವಾಗಿ ದಾಳಿ ಮಾಡಿದ್ದಾನೆ. ತಕ್ಷಣವೇ ಕುಟುಂಬವರು, ಗ್ರಾಮದ ಜನರು ವಿಜಯೇಂದ್ರರನ್ನು ಗೋಪಾಲ್ ಗಂಜ್ ಸದರ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಪ್ರಾಥಮಿಕ ಚಿಕಿತ್ಸೆ ನಂತರ ಅವರ ಆರೋಗ್ಯ ಸ್ಥಿತಿ ಮತ್ತಷ್ಟು ಹದಗೆಟ್ಟಿದ್ದರಿಂದ ವೈದ್ಯರ ಸಲಹೆ ಮೇರೆಗೆ ಪಟನಾ ನಗರದ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಗ್ರಾಮದಲ್ಲಿ ಸದ್ಯ ಉದ್ವಿಗ್ನತೆ ನೆಲೆಸಿದ್ದು, ಪೊಲೀಸ್ ಕಾವಲು ಹಾಕಲಾಗಿದೆ. ಕೊಲೆಯತ್ನ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದು, ಪ್ರಮುಖ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ರಕ್ತಸಿಕ್ತ ಕೊಡಲಿ ಮತ್ತು ಆರೋಪಿಯ ರಕ್ತಸಿಕ್ತ ವಸ್ತ್ರಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಕರಣ ಗಂಭೀರವಾಗಿರುವುದರಿಂದ ವಿಧಿವಿಜ್ಞಾನ ಪ್ರಯೋಗಾಲಯ ತಜ್ಞರ ತಂಡವನ್ನೂ ಕರೆಸಿ ಘಟನೆ ನಡೆದ ಸ್ಥಳದಲ್ಲಿ ಸಾಕ್ಷ್ಯ ಕಲೆಹಾಕಲಾಗಿದೆ. ವಿಜಯೇಂದ್ರ ಮೇಲೆ ಭೂವಿವಾದದ ಹಿನ್ನೆಲೆ ದಾಳಿ ನಡೆದಿದೆ ಎನ್ನಲಾಗಿದೆ.

ಮತದಾನ ಮೂಲಭೂತ ಹಕ್ಕಾಗಲಿ: ಕೈ ಆಗ್ರಹ

ದೆಹಲಿ: ದೇಶದ ವಿವಿಧ ರಾಜ್ಯಗಳಲ್ಲಿ ಮತದಾರರ ಪಟ್ಟಿಯ 'ವಿಶೇಷ ಕ್ಷಿಪ್ರ ಪರಿಷ್ಕರಣೆ' ನಡೆದಿರುವ ಮಧ್ಯೆಯೇ, ಕಾಂಗ್ರೆಸ್ ಪಕ್ಷ ಮತದಾನವನ್ನು



ಮೂಲಭೂತ ಹಕ್ಕು ಎಂದು ಪರಿಗಣಿಸಬೇಕು. ಅದಕ್ಕೆ ಸಂವಿಧಾನದಲ್ಲಿಯೇ ಮೂಲಭೂತ ಹಕ್ಕಿನ ಸ್ಥಾನಮಾನ ಸಿಗುವಂತಾಗಬೇಕು ಎಂದು ಆಗ್ರಹಿಸಿದೆ. ಕಾಲುದಾರಿಯಲ್ಲಿ ನಡೆಯುವುದು ಪ್ರತಿಯೊಬ್ಬರ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ನೀಡಿದ ಮಹತ್ವದ ತೀರ್ಪನ್ನು ಉಲ್ಲೇಖಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಮತದಾನಕ್ಕೂ ಮೂಲಭೂತ ಹಕ್ಕಿನ ಸ್ಥಾನಮಾನ ನೀಡಿದರೆ ಆಗ ಮತದಾನಕ್ಕೆ ಅತ್ಯುನ್ನತ ನ್ಯಾಯಾಂಗ ರಕ್ಷಣೆ ದೊರೆಯುತ್ತದೆ ಎಂದಿದ್ದಾರೆ.

ತುಷಾರ್ 3ನೇ ಬಾರಿ ಸಾಲಿಸಿಟರ್ ಜನರಲ್

ದೆಹಲಿ: ಹಿರಿಯ ನ್ಯಾಯವಾದಿ ತುಷಾರ್ ಮೆಹ್ತಾ ಅವರನ್ನು ಮತ್ತೊಮ್ಮೆ ಭಾರತದ ಸಾಲಿಸಿಟರ್ ಜನರಲ್ ಹುದ್ದೆಗೆ (ಜು.1ರಿಂದ) 3 ವರ್ಷಗಳ ಅವಧಿಗೆ ಮರು

ನೇಮಕ ಮಾಡಲಾಗಿದೆ. ಈ ನೇಮಕಕ್ಕೆ ನೇಮಕಕ್ಕೆ ಸಂಬಂಧಿಸಿದ ಕೇಂದ್ರ ಸಚಿವ ಸಂಪುಟ ಸಮಿತಿ(ಎಸಿಸಿ) ಅನುಮೋದನೆ ನೀಡಿದೆ. ಅದಲ್ಲದೇ ಸುಪ್ರೀಂ ಕೋರ್ಟ್‌ನಲ್ಲಿ ಸರಕಾರದ ಪರ ವಕಾಲತು ವಹಿಸಲು ಅನುಭವಿ ವಕೀಲರಾದ ವಿಕ್ರಂಜಿತ್ ಬ್ಯಾನರ್ಜಿ, ಕೆ.ಎಂ.ನಟರಾಜ್, ಸೂರ್ಯಪ್ರಕಾಶ್ ವಿ.ರಾಜು, ಎನ್. ವೆಂಕಟರಾಮನ್ ಮತ್ತು ಐಶ್ವರ್ಯ ಭಾಟಿ ಅವರನ್ನು ಹೆಚ್ಚುವರಿ ಸಾಲಿಸಿಟರ್ ಜನರಲ್‌ಗಳು(3 ವರ್ಷ ಅವಧಿಗೆ) ಮತ್ತು ಚೇತನ್ ಶರ್ಮಾ ಅವರನ್ನು(6 ತಿಂಗಳ ಅವಧಿ) ಮರು ನೇಮಕಗೊಳಿಸಲಾಗಿದೆ.

ವಿಜಯ್ ಜನ್ಮದಿನ: ಗಣ್ಯರ ಶುಭಾಶಯ

ಚೆನ್ನೈ: ಸೋಮವಾರ ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರ 52ನೇ ಜನ್ಮದಿನ.

ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರಿಗೆ ಹುಟ್ಟುಹಬ್ಬದ ಶುಭಾಶಯ. ದೀರ್ಘ-ಆರೋಗ್ಯಕರ ಜೀವ ನಕ್ಕಾಗಿ ಪ್ರಾರ್ಥಿಸುವೆ ಎಂದು ಪ್ರಧಾನಿ ನರೇಂದ್ರ ಮೋದಿ 'ಎಕ್ಸ್' ಸಂದೇಶ ರವಾನಿಸಿದ್ದಾರೆ. ಸಿಎಂ ಜೋಸೆಫ್ ವಿಜಯ್‌ಗೆ ಹುಟ್ಟುಹಬ್ಬದ ಶುಭಾಶಯ. ಉತ್ತಮ ಆರೋಗ್ಯ ನಿಮ್ಮದಾಗಲಿ, ನಿಮ್ಮ ಎಲ್ಲಾ ಪ್ರಯತ್ನಗಳಲ್ಲಿ ಯಶಸ್ಸು ಸಿಗಲಿ ಎಂದು ಹಾರೈಸುವೆ. ತಮಿಳುನಾಡಿನ ಪ್ರಗತಿಗಾಗಿ, ತಮಿಳರ ಘನತೆ-ಆಕಾಂಕ್ಷೆಗಳನ್ನು ಕಾಪಾಡುವುದಕ್ಕೆ ವಿಜಯ್ ಜತೆ ಸದಾ ಇರುವೆ ಎಂದು ಲೋಕಸಭೆ ಪ್ರತಿಪಕ್ಷ ನಾಯಕ-ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ 'ಎಕ್ಸ್' ಸಂದೇಶ ಬರೆದಿದ್ದಾರೆ. ಡಿಎಂಕೆ ಅಧ್ಯಕ್ಷ-ಮಾಜಿ ಸಿಎಂ ಸ್ಟಾಲಿನ್, ನಟ-ರಾಜ್ಯಸಭೆ ಸದಸ್ಯ ಕಮಲಹಾಸನ್, ನಟಿ-ಬಿಜೆಪಿ ನಾಯಕಿ ಖುಷ್ಬೂ ಸುಂದರ್ ಮತ್ತಿತರ ಗಣ್ಯರು ವಿಜಯ್‌ಗೆ ಹುಟ್ಟುಹಬ್ಬದ ಶುಭಾಶಯ ಕೋರಿದ್ದಾರೆ.

{ ಆದಿತ್ಯ ಠಾಕ್ರೆ } ಶಿವಸೇನೆ(ಯುಬಿಟಿ)

ಪಕ್ಷಾಂತರಿಗಳೇ, ದುರಾಸೆ ಸಂಸದರೇ, ರಾಜಕೀಯ ಲಾಭಕ್ಕಾಗಿ ನಿಮ್ಮ ನಿಷ್ಠೆ, ಗೌರವವನ್ನು ಅತ್ಯಂತ ನಿರ್ಲಜ್ಜವಾಗಿ ಮಾರಿಬಿಟ್ಟಿದ್ದೀರಿ. ಪಕ್ಷ ಬದಲಿಸಿದ ಶಿವಸೇನೆ(ಉದ್ಧವ್ ಬಣ) ಸಂಸದರೇ, ಮಹಾ ವಿಕಾಸ್ ಅಘಾಡಿ ಮತ್ತು 'ಇಂಡಿಯ' ಒಕ್ಕೂಟದ ಹೆಸರು-ಚಿಹ್ನೆಯಡಿ ನಿಮ್ಮನ್ನು ಆಯ್ಕೆ ಮಾಡಿದ ಮತದಾರರ ಆದೇಶ-ನಂಬಿಕೆಗೆ ದ್ರೋಹ ಬಗೆದಿದ್ದೀರಿ.

ಅಮೆರಿಕದಿಂದ ಕಚ್ಚಾತೈಲ ಖರೀದಿ ಶೇ.64ರಷ್ಟು ತಗ್ಗಿಸಿದ ಭಾರತ | ಭಾರತ ಕಚ್ಚಾತೈಲ ಆಮದು: ಪರಮಾಪ್ತ ರಷ್ಯಾಕ್ಕೇ ಮೊದಲ ಆದ್ಯತೆ | ನಂತರದಲ್ಲಿ ಯುಎಇ, ಸೌದಿ, ವೆನೆಜುವೆಲ: ಅಮೆರಿಕಕ್ಕೆ ಕಡೆ ಸ್ಥಾನ | ಇದೇ ವಾರ ಭಾರತಕ್ಕೆ ಅಮೆರಿಕ ವ್ಯಾಪಾರ ಪ್ರತಿನಿಧಿ

ಹಳಸಿಬಿಟ್ಟಿತೇ ಅಮೆರಿಕ-ಭಾರತ ಸಂಬಂಧ?

ದೆಹಲಿ: ಇತ್ತೀಚಿನ ದಿನಗಳಲ್ಲಿ ಭಾರತ-ಅಮೆರಿಕದ ಸಂಬಂಧ ಹಳಸಲಾರಂಭಿಸಿದೆ. ಬದಲಾಗಿ ರಷ್ಯಾ, ಫ್ರಾನ್ಸ್, ಯುಎಇ, ಆಸ್ಟ್ರೇಲಿಯ, ಇಟಲಿ, ಬ್ರೆಜಿಲ್, ಬ್ರಿಟನ್, ಯೂರೋಪ್ ಒಕ್ಕೂಟ, ಕೊಲ್ಲಿ ಭಾಗದ ಕೆಲವು ಮುಸ್ಲಿಂ ರಾಷ್ಟ್ರಗಳು ಮತ್ತು ಆಫ್ರಿಕಾ ದೇಶಗಳಿಗೆ ಭಾರತ ಬಹಳ ಹತ್ತಿರವಾಗಿದೆ.

ಆಮದು-ರಫ್ತು ವ್ಯಾಪಾರ ವಹಿವಾಟು, ರಕ್ಷಣಾ ಸಹಕಾರ, ಕಾರ್ಯತಂತ್ರ ಮಟ್ಟದ ಸಂಬಂಧ, ಸಂಕಷ್ಟ ಕಾಲದಲ್ಲಿ ನೆರವಾಗುವುದು ಮೊದಲಾದ ವಿಚಾರಗಳಲ್ಲಿಯೂ ಭಾರತ ಇತ್ತೀಚೆಗೆ ಅಮೆರಿಕಕ್ಕಿಂತಲೂ ಈ ಮಿತ್ರ ದೇಶಗಳನ್ನೇ ಹೆಚ್ಚು ನಂಬುತ್ತಿದೆ. ಹಾಗಾಗಿಯೇ ಅಮೆರಿಕದ ಜತೆಗಿನ ಸಮಗ್ರ ವ್ಯಾಪಾರ ಒಪ್ಪಂದ ವರ್ಷಗಳೇ ಕಳೆದರೂ ಈವರೆಗೂ ಅಂತಿಮಗೊಂಡಿಲ್ಲ.

ಬದಲಾಗಿ ಬ್ರಿಟನ್ ಜತೆಗೆ ಅದಾಗಲೇ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಬಿದ್ದಿದ್ದು, ಜು.15ರಿಂದಲೇ ಜಾರಿಗೆ ಬರಲಿದೆ. ಯೂರೋಪ್ ಒಕ್ಕೂಟವಂತೂ ಭಾರತವನ್ನು ಬಲವಾಗಿ ಆಲಂಗಿಸಿಕೊಂಡಿದೆ. ಪರಿಣಾಮವಾಗಿ ಎರಡೂ ಪಕ್ಷಗಳ ಮಧ್ಯೆ 'ಮದರ್ ಆಫ್ ಆಲ್ ಅಗ್ರೀಮೆಂಟ್' (ಒಪ್ಪಂದಗಳ ಮಹಾತಾಯಿ) ರಚನೆಯಾಗಿದ್ದು, ಈ ವರ್ಷಾಂತ್ಯ ವೇಳೆಗೆ ಸಹಿ ಬೀಳಲಿದೆ. ಕೊಲ್ಲಿಯ ಮುಸ್ಲಿಂ ರಾಷ್ಟ್ರಗಳ ಜತೆಗಂತೂ ಭಾರತದ ಕೊಡು-ಕೊಳ್ಳುವಿಕೆ ಮೊದಲಿಗಿಂತಲೂ ಹೆಚ್ಚಿದೆ.

ಗ್ಲೋಬಲ್ ಸೌತ್ ಪರಿಕಲ್ಪನೆಗೆ ಭಾರತ ಒತ್ತು ನೀಡಿದ ಬಳಿಕವಂತೂ ಆಫ್ರಿಕಾ ಖಂಡ ಸೇರಿದಂತೆ ಸಣ್ಣ ಪುಟ್ಟ ದೇಶಗಳಿಗೆ ಭಾರತವೇ ಪರಮಾಪ್ತ ದೇಶವಾಗಿದೆ. ಆಪರೇಷನ್ ಸಿಂಧೂರ್ ಬಳಿಕ ಭಾರತದ ಶಸ್ತ್ರಾಸ್ತ್ರಗಳು, ಕ್ಷಿಪಣಿಗಳ ಖರೀದಿಗೆ ಹಲವು ದೇಶಗಳು ಮುಂದಾಗಿರುವುದೇ ಇದಕ್ಕೆ ಸಾಕ್ಷಿ.

ಕಚ್ಚಾತೈಲ ಖರೀದಿ: ಎಲ್ಲಾ ಬಗೆಯ ವಾಹನಗಳು, ರೈಲು-ಹಡಗು, ಕೈಗಾರಿಕೆಗಳಲ್ಲಿ ಬಳಕೆಯಾಗುವ ಇಂಧನ ದ್ರವ್ಯಗಳಿಗೆ ಭಾರತ ಆಮದು ಮೇಲೆ ಅವಲಂಬಿತ. ದೇಶಕ್ಕೆ ಅಗತ್ಯವಾದ ಕಚ್ಚಾತೈಲದಲ್ಲಿ ಶೇ.88ರಷ್ಟನ್ನು, ನೈಸರ್ಗಿಕ ಅನಿಲದಲ್ಲಿ ಶೇ.50ರಷ್ಟು ಮತ್ತು ಎಲ್‌ಪಿಜಿ ಬೇಡಿಕೆಯ ಶೇ.65ರಷ್ಟನ್ನು ಭಾರತ ಆಮದು ಮಾಡಿಕೊಳ್ಳುವ ಮೂಲಕವೇ ದೇಶದ ಮಾರುಕಟ್ಟೆಗೆ ಪೂರೈಸುತ್ತಿದೆ. ಇಷ್ಟೊಂದು ದೊಡ್ಡ ಮಟ್ಟದ ಇಂಧನ ದ್ರವ್ಯಗಳ ಆಮದು ಕಾರಣವಾಗಿಯೇ ಹಲವು ಮಿತ್ರ ದೇಶಗಳನ್ನು ಭಾರತ ಹೆಚ್ಚು ಆಶ್ರಯಿಸಬೇಕಾಗಿದೆ.

ಭಾರತ ಕಚ್ಚಾತೈಲ ಖರೀದಿಸುವ ದೇಶಗಳಲ್ಲಿ ಈಗ ಮೊದಲ ಆದ್ಯತೆ ನೀಡುತ್ತಿರುವುದು ಪರಮಾಪ್ತ ದೇಶ ರಷ್ಯಾಕ್ಕೆ. ರಷ್ಯಾದಿಂದ ಮೇ ತಿಂಗಳಲ್ಲಿ ಪ್ರತಿನಿತ್ಯ 19.10 ಲಕ್ಷ ಬ್ಯಾರೆಲ್ ಕಚ್ಚಾತೈಲ ಖರೀದಿಸುತ್ತಿದ್ದ ಭಾರತ, ಜೂ.19ರವರೆಗಿನ ದಿನಗಳಲ್ಲಿ ತೈಲ ಖರೀದಿ ಪ್ರಮಾಣವನ್ನು ದಿನಕ್ಕೆ 26.60 ಲಕ್ಷ ಬ್ಯಾರೆಲ್‌ಗಳಿಗೆ ಹೆಚ್ಚಿಸಿದೆ. ಗಮನಾರ್ಹ ಸಂಗತಿಯೆಂದರೆ, ಇದೇ ಅವಧಿಯಲ್ಲಿ ಅಮೆರಿಕದಿಂದ ಕಚ್ಚಾತೈಲ ಖರೀದಿಸುವುದನ್ನು ಭಾರತ ಗಣನೀಯವಾಗಿ (ಶೇ.64ರಷ್ಟು) ಕಡಿಮೆ ಮಾಡಿದೆ.

ಮೇ ತಿಂಗಳಲ್ಲಿ ಅಮೆರಿಕದಿಂದ ಪ್ರತಿನಿತ್ಯ 2.52 ಲಕ್ಷ ಬ್ಯಾರೆಲ್ ಖರೀದಿಸುತ್ತಿದ್ದ ಭಾರತ, ಜೂನ್ ತಿಂಗಳಲ್ಲಿ ದಿನದ ಖರೀದಿ ಪ್ರಮಾಣವನ್ನು ಕೇವಲ 91 ಸಾವಿರ ಬ್ಯಾರೆಲ್‌ಗೆ ತಗ್ಗಿಸಿದೆ. ಅಂದರೆ, ಅಮೆರಿಕದಿಂದ ಕಚ್ಚಾತೈಲ ಖರೀದಿಸುವ ಪ್ರಮಾಣವನ್ನು ಶೇ.64ರಷ್ಟು ಕಡಿಮೆ ಮಾಡಿದೆ. ಮೇ ತಿಂಗಳಲ್ಲಿನ ಖರೀದಿ ಪ್ರಮಾಣಕ್ಕೆ ಹೋಲಿಸಿದರೆ ಜೂನ್‌ನಲ್ಲಿ ಅಮೆರಿಕದಿಂದ ಕಚ್ಚಾತೈಲ ಖರೀದಿ ಶೇ.36ಕ್ಕೆ ಕುಸಿದಿದೆ ಎಂಬುದು 'ಕೆಪ್ಲರ್ ಡೇಟಾ' ಮೂಲಕ ತಿಳಿದುಬಂದಿದೆ. ಈ ದಿಢೀರ್ ಕುಸಿತಕ್ಕೆ ಕಾರಣ, ಅಮೆರಿಕ ಸರಕಾರದ ನಕಾರಾತ್ಮಕ ನೀತಿಗಳು, ಅಧ್ಯಕ್ಷರ ನಡವಳಿಕೆಗಳು ಎಂಬುದು ಸ್ಪಷ್ಟ.

ದೊಡ್ಡ ಕಂದಕ: ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ರಾಜಸ್ಥಾನ ಮೂಲದ ಪತ್ನಿ ಮಕ್ಕಳ ಸಮೇತ 4-5 ದಿನ ಭಾರತ ಪ್ರವಾಸ ಮಾಡಿಹೋದರು. ವಿದೇಶಾಂಗ ಸಚಿವ ಮಾರ್ಕ್ ರುಬಿಯೊ ಕೋಲ್ಕತ್ತದಿಂದ ಆರಂಭಿಸಿ ಭಾರತ ಪ್ರವಾಸ ನಡೆಸಿದರು. ಭಾರತ ಸರಕಾರದ ಜತೆಗಿನ ಸ್ನೇಹ ಹೆಚ್ಚಿಸಲೆಂದೇ ಶ್ವೇತಭವನ ರಷ್ಯಾ ಮೂಲದ ಗೋರ್ ಅವರನ್ನೇ ಭಾರತಕ್ಕೆ ರಾಯಭಾರಿಯಾಗಿ ಕಳುಹಿಸಿಕೊಟ್ಟಿದೆ. ಹಾಗಿದ್ದರೂ ಭಾರತ-ಅಮೆರಿಕ ನಡುವಿನ ಸದ್ಯ ಮೂಡಿರುವ ಕಂದಕ ಮುಚ್ಚಲು ಡೊನಾಲ್ಡ್ ಟ್ರಂಪ್ ಅವರಿಗೆ ಸಾಧ್ಯವಾಗುತ್ತಿಲ್ಲ ಎಂಬುದು ಗಮನಾರ್ಹ.

ಪ್ರಧಾನಿ ಮೋದಿ-ರಷ್ಯಾ ಅಧ್ಯಕ್ಷ ಪುಟಿನ್ ಆತ್ಮೀಯತೆ.

ಮೋದಿ-ಟ್ರಂಪ್ ದೂರ ದೂರ

ಡೊನಾಲ್ಡ್ ಟ್ರಂಪ್ 2025ರ ಜ.20ರಂದು ಎರಡನೇ ಅವಧಿಗೆ ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಭಾರತ-ಅಮೆರಿಕ ಸಂಬಂಧ ಈ ಹಿಂದೆಂದಿಗಿಂತಲೂ ಉನ್ನತ ಮಟ್ಟಕ್ಕೇರಲಿದೆ ಎಂದೇ ನಿರೀಕ್ಷಿಸಲಾಗಿತ್ತು. ಹಾಗೊಂದು ಭಾವ ಮೂಡುವಂತೆಯೇ ಟ್ರಂಪ್ ಭಾರತದ ಬಗ್ಗೆ, ಪ್ರಧಾನಿ ಮೋದಿ ಬಗ್ಗೆ ಅಭಿಮಾನ ತೋರಿದ್ದರು. ಉಕ್ರೇನ್-ರಷ್ಯಾ ಯುದ್ಧದ ಕಾಲದಲ್ಲಿ ಅಮೆರಿಕ ಮತ್ತು ಯೂರೋಪ್ ದೇಶಗಳು ರಷ್ಯಾ ಮೇಲೆ ಆರ್ಥಿಕ ದಿಗ್ಬಂಧನ ಹೇರಿದರೂ ಭಾರತ ಮಾತ್ರ ರಷ್ಯಾದಿಂದ ಕಚ್ಚಾತೈಲ ಖರೀದಿ ಮುಂದುವರಿಸಿತು. ಆಪತ್ಕಾಲದಲ್ಲಿ ನೆರವಾಗಿದ್ದಕ್ಕೆ ರಷ್ಯಾ, ಭಾರತಕ್ಕೆ ಅತ್ಯಂತ ಕಡಿಮೆ ಬೆಲೆಗೆ ತೈಲ ಪೂರೈಸಿತು. ನಂತರದಲ್ಲಿ ಟ್ರಂಪ್ ವರ್ತನೆಯಲ್ಲಿ ಆಕ್ರಮಣಕಾರಿ ನಿಲುವು ಕಾಣಲಾರಂಭಿಸಿದ ಬಳಿಕ, ದಂಡ ಸುಂಕ ವಿಧಿಸಲಾರಂಭಿಸಿದ ಬಳಿಕ ಅಮೆರಿಕದಿಂದ ಭಾರತ ದೂರವಾಗಲಾರಂಭಿಸಿತು. ಮೊನ್ನೆ ಫ್ರಾನ್ಸ್‌ನಲ್ಲಿ ಜಿ-7 ಶೃಂಗಸಭೆ ವೇಳೆ ಟ್ರಂಪ್-ಮೋದಿ ಮುಖಾಮುಖಿಯಾದರೂ ಅಪ್ಪುಗೆ, ಮುಕ್ತ ನಗೆ ಇಲ್ಲವಾಗಿತ್ತು. ಮಾತುಕತೆ ನಡೆದರೂ ಅದು ಬಹಳ ಔಪಚಾರಿಕವಾಗಿಯಷ್ಟೇ ಇತ್ತು. ಇತ್ತೀಚೆಗೆ ಹೊರ್ಮುಜ್ ಜಲಸಂಧಿ ಬಳಿ 3 ಭಾರತದ ನಾವಿಕರ ಸಾವಿಗೆ ಅಮೆರಿಕದ ನೌಕಾಪಡೆಯ ದಾಳಿ ಕಾರಣವಾಗಿದ್ದನ್ನು ಪ್ರಧಾನಿ ಮೋದಿ ಪ್ರಸ್ತಾಪಿಸಿ ನಿಷ್ಠುರವಾಗಿಯೇ ಮಾತನಾಡಿದ್ದು ಚಿತ್ರ ಸಮೇತ ವೈರಲ್ ಆಗಿತ್ತು.

ಫ್ರಾನ್ಸ್‌ನಲ್ಲಿ ಜಿ-7 ಶೃಂಗಸಭೆ ವೇಳೆ ಜೂ.17ರಂದು ಅಮೆರಿಕ ಅಧ್ಯಕ್ಷ ಟ್ರಂಪ್ ಜತೆ ಪ್ರಧಾನಿ ಮೋದಿ ಕಠಿಣ ಮಾತುಕತೆ. ಈ ಚಿತ್ರ ವೈರಲ್ ಆಗಿತ್ತು.

ಕಚ್ಚಾತೈಲ ಆಮದು: ಭಾರತಕ್ಕೆ 3ನೇ ಸ್ಥಾನ



ಕಚ್ಚಾತೈಲ ಆಮದು ಮಾಡಿಕೊಳ್ಳುವುದರಲ್ಲಿ ಭಾರತ ಇಡೀ ವಿಶ್ವದಲ್ಲೇ 3ನೇ ಸ್ಥಾನದಲ್ಲಿದೆ. ಚೀನಾ ಅತ್ಯಧಿಕ ಪ್ರಮಾಣದಲ್ಲಿ ಕಚ್ಚಾತೈಲ ಮಾಡಿಕೊಳ್ಳುವ ಮೂಲಕ ಮೊದಲ ಸ್ಥಾನದಲ್ಲಿದೆ. ಸ್ವತಃ ದೊಡ್ಡ ಪ್ರಮಾಣದ ಕಚ್ಚಾತೈಲ ಉತ್ಪಾದಕ ರಾಷ್ಟ್ರವೇ ಆಗಿದ್ದರೂ ಅಮೆರಿಕ, ಕೆನಡಾ, ಮೆಕ್ಸಿಕೊ ಮತ್ತು ಸೌದಿ ಅರೇಬಿಯದಿಂದ ಹೆಚ್ಚು ತೈಲ ಖರೀದಿಸುತ್ತಿದ್ದು, ತೈಲ ಆಮದು ಮಾಡಿಕೊಳ್ಳುವುದರಲ್ಲಿ ವಿಶ್ವದಲ್ಲಿ 2ನೇ ಸ್ಥಾನದಲ್ಲಿದೆ. ಕಚ್ಚಾತೈಲ ಸಂಪನ್ಮೂಲ ಬಹಳ ಕಡಿಮೆ ಇರುವ ಜಪಾನ್, ಆಮದು ಮೇಲೆಯೇ ಅವಲಂಬಿತವಾಗಿದೆ. ತೈಲ ಆಮದು ವಹಿವಾಟಿನಲ್ಲಿ ವಿಶ್ವದಲ್ಲಿ 4ನೇ ಸ್ಥಾನದಲ್ಲಿದೆ. ಸೌದಿ ಅರೇಬಿಯ ಮತ್ತು ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತದೆ. 5ನೇ ಸ್ಥಾನದಲ್ಲಿರುವ ದಕ್ಷಿಣ ಕೊರಿಯ ಮಧ್ಯಪ್ರಾಚ್ಯ ದೇಶಗಳಿಂದ ಹೆಚ್ಚು ತೈಲ ಖರೀದಿಸುತ್ತದೆ. ಈ ದೇಶದ ಕೈಗಾರಿಕೆಗಳಿಗೆ ಆಮದು ತೈಲವೇ ಆಧಾರವಾಗಿದೆ.

ಕಚ್ಚಾತೈಲ: ಭಾರತ ನಿತ್ಯ ಖರೀದಿ★

ದೇಶ	ಮೇ	ಜೂನ್★
ರಷ್ಯಾ	19.1	26.6
ಯುಎಇ	6.44	6.36
ಸೌದಿ	-	3.84
ವೆನೆಜುವೆಲ	-	2.09
ಅಮೆರಿಕ	2.52	0.91

★ ಲಕ್ಷ ಬ್ಯಾರಲ್ ★ ಜೂ.19ವರೆಗೆ

ಕೆಲ ಗಂಟೆ ಹಿಂದಷ್ಟೇ ಜನ್ಮದಿನ ಆಚರಿಸಿಕೊಂಡಿದ್ದ ಯುವಕ-ಮಿತ್ರ ದುರ್ಮರಣ

251 ಕಿಮೀ ವೇಗ, ಬಿಎಂಡಬ್ಲ್ಯು ಛಿದ್ರ, 2 ಸಾವು

ಮುಂಬೈ-ವಡೋದರಾ ಹೆದ್ದಾರಿಯಲ್ಲಿ ಅಪಘಾತಕ್ಕೀಡಾಗಿರುವ ಬಿಎಂಡಬ್ಲ್ಯು ಕಾರು.



ಡಿಕ್ಕಿಯ ರಭಸಕ್ಕೆ ಕಾರಿನಿಂದ ಹಾರಿಹೋಗಿ ದೂರಕ್ಕೆ ಬಿದ್ದಿರುವ ಎಂಜಿನ್.

ಮುಂಬೈ: ಮುಂಬೈ-ವಡೋದರಾ ರಾಷ್ಟ್ರೀಯ ಹೆದ್ದಾರಿಯಲ್ಲಿ 251 ಕಿಮೀ ವೇಗದಲ್ಲಿ ಸಾಗುತ್ತಿದ್ದ ಬಿಎಂಡಬ್ಲ್ಯು ಜೆಡ್-4 ಕಾರು ಮಹಾರಾಷ್ಟ್ರದ ಬದ್ಲಾಪುರ ಬಳಿ ರಸ್ತೆ ವಿಭಜಕಕ್ಕೆ ನೇರ ಡಿಕ್ಕಿ ಹೊಡೆದ ಪರಿಣಾಮ ಕಾರು ತುಂಡು ತುಂಡಾಗಿದೆ. ಕಾರಿನಲ್ಲಿದ್ದ ಯುವಕರಲ್ಲಿ ಇಬ್ಬರ ದೇಹಗಳೂ ಛಿದ್ರವಾಗಿವೆ. ಮತ್ತೊಬ್ಬ ಗಂಭೀರವಾಗಿ ಗಾಯಗೊಂಡು ಪ್ರಜ್ಞಾಹೀನನಾಗಿದ್ದ. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬದ್ಲಾಪುರ ನಿವಾಸಿಗಳಾದ ಯೋಗೇಶ್ ಕಿಶನ್ ನೇಗಿ(24) ಮತ್ತು ರೆಬೆಕ್ಕಾ ಬಾಬು ಜಾಕೋಬ್(22) ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಆನಂದ್ ಗಿಲ್(26) ಎಂಬಾತ ಗಂಭೀರವಾಗಿ ಗಾಯಗೊಂಡಿದ್ದಾನೆ.

ಟಿಟ್ವಾಲಾದಲ್ಲಿ ಯೋಗೇಶ್ ಕಿಶನ್ ನೇಗಿಯ 24ನೇ ಜನ್ಮದಿನ ನಿಮಿತ್ತ ಆಯೋಜಿಸಿದ್ದ ತಡರಾತ್ರಿ ಪಾರ್ಟಿ ಮುಗಿಸಿಕೊಂಡು ಗೆಳೆಯರು ಬದ್ಲಾಪುರಕ್ಕೆ ವಾಪಸಾಗುತ್ತಿದ್ದರು. ಖುಷಿಯ ಉಮೇದಿನಲ್ಲಿ ಗಂಟೆಗೆ 251 ಕಿಮೀ ವೇಗದಲ್ಲಿ ಕಾರು ಚಲಾಯಿಸಿಕೊಂಡು ಬರುತ್ತಿದ್ದರು. ಚಾಲಕನ ನಿಯಂತ್ರಣ ತಪ್ಪಿದ ಕಾರು ಭಾನುವಾರ ನಸುಕಿನ 2 ಗಂಟೆಯಲ್ಲಿ ಅಪಘಾತಕ್ಕೀಡಾಗಿದೆ. ಅಪಘಾತದ ತೀವ್ರತೆಗೆ ಐಶಾರಾಮಿ ಕಾರು ಸಂಪೂರ್ಣ ಛಿದ್ರ, ಛಿದ್ರವಾಗಿದೆ. ಡಿಕ್ಕಿಯ ರಭಸಕ್ಕೆ ಬಾನೆಟ್ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಎಂಜಿನ್ ಹಲವು ಮೀಟರ್ ದೂರಕ್ಕೆ ಹಾರಿ ಬಿದ್ದಿದೆ. ಛಿದ್ರವಾಗಿರುವ ಕಾರಿನ ಭಾಗಗಳು ರಸ್ತೆಯಲ್ಲೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಅಪಘಾತಕ್ಕೀಡಾದ ಕಾರು ಬಿಎಂಡಬ್ಲ್ಯು ಜೆಡ್-4 ಓಪನ್ ರೂಫ್ ಮಾದರಿಯದ್ದಾಗಿದೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ ಅದರ ರೂಫ್ ತೆರೆದುಕೊಂಡಿದೆ. ಕಾರಿನೊಳಗಿದ್ದವರಲ್ಲಿ ಇಬ್ಬರು ಕಾರಿನಿಂದಾಚೆಗೆ ಎಸೆಯಲ್ಪಟ್ಟಿದ್ದಾರೆ. ಎತ್ತರಕ್ಕೆ ಹಾರಿ ನೆಲಕ್ಕೆ ಅಪ್ಪಳಿಸಿದ ರಭಸಕ್ಕೆ ದೇಹಗಳು ಛಿದ್ರವಾಗಿವೆ. ದೇಹದ ತುಣುಕುಗಳು ಹಲವು ಮೀಟರ್‌ಗಳಷ್ಟು ದೂರದವರೆಗೂ ಹಾರಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಚಾಲಕನ ಆಸನದಲ್ಲಿದ್ದ ಯುವಕ ಸೀಟ್ ಬೆಲ್ಟ್ ಕಾರಣಕ್ಕೆ ಆಸನದಲ್ಲೇ ಉಳಿದಿದ್ದು, ಗಂಭೀರವಾಗಿ ಗಾಯಗೊಂಡಿದ್ದಾನೆ. ಆತನನ್ನು ಕಲ್ಯಾಣ್ ನಗರದ ಫೋರ್ಟಿಸ್ ಆಸ್ಪತ್ರೆಯ ಐಸಿಯು ವಿಭಾಗದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ.

ಕಾರು ಚಲಾಯಿಸುತ್ತಿದ್ದ ಯುವಕ ಸೇರಿದಂತೆ ಕಾರಿನಲ್ಲಿದ್ದವರೆಲ್ಲರೂ ಜನ್ಮದಿನ ಪಾರ್ಟಿಯಲ್ಲಿಯೇ ಮದ್ಯಪಾನ ಮಾಡಿದ್ದರು ಎನಿಸುತ್ತದೆ. ಹಾಗಾಗಿಯೆ ಅತಿ ವೇಗವಾಗಿ ಕಾರು ಚಲಾಯಿಸಿಕೊಂಡು ಬಂದಿದ್ದಾರೆಂದು ಅಂದಾಜಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅತಿವೇಗ-ನಿರ್ಲಕ್ಷ್ಯದಿಂದ ಕಾರು ಚಾಲನೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, 2 ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾರೆ. ಕಾರಿನಲ್ಲಿದ್ದ ಮೂವರ ಕುಟುಂಬದವರಿಗೂ ಮಾಹಿತಿ ನೀಡಿದ್ದಾರೆ.

ಎಲ್‌ಪಿಜಿ ಖರೀದಿಗಾಗಿ ಬೇರೆ ದೇಶಗಳತ್ತ ನೋಟ

ದೆಹಲಿ: 108 ದಿನಗಳ ಕಾಲ ಪಶ್ಚಿಮ ಏಷ್ಯಾದಲ್ಲಿನ ಸೇನಾ ಸಂಘರ್ಷ ಹಾಗೂ ಹೊರ್ಮುಜ್ ಜಲಸಂಧಿಯನ್ನು ಕೆಲ ಕಾಲ ಇರಾನ್ ಮತ್ತೆ ಕೆಲವು ಸಂದರ್ಭ ಅಮೆರಿಕದ ನೌಕಾಪಡೆ ಮುಚ್ಚಿದ್ದು ಮೊದಲಾದ ಕಾರಣಗಳಿಂದ ಭಾರತ ಸೇರಿದಂತೆ ಹಲವಾರು ದೇಶಗಳು ತಿಂಗಳುಗಳ ಕಾಲ ಕಚ್ಚಾತೈಲ, ಎಲ್‌ಪಿಜಿ, ನೈಸರ್ಗಿಕ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಿ ಪರಿತಪಿಸಿದವು. ಮುಖ್ಯವಾಗಿ ಭಾರತ ಎಲ್‌ಪಿಜಿ ಕೊರತೆಯಿಂದ ಬಹಳ ಸಂಕಷ್ಟ ಅನುಭವಿಸಿತು.

ಇದೆಲ್ಲದರಿಂದ ಎಚ್ಚೆತ್ತುಕೊಂಡಿರುವ ಭಾರತ, ಈಗ ಎಲ್‌ಪಿಜಿ ಖರೀದಿ ಮೂಲಗಳನ್ನು ಬದಲಿಸಿ ಬೇರೆ ದೇಶಗಳಿಂದಲೂ ಖರೀದಿಗೆ ಯೋಜಿಸಿದೆ. ಮುಂಬರುವ ದಿನಗಳಲ್ಲಿ ಗಲ್ಫ್ ಪ್ರದೇಶದ ಮೇಲಷ್ಟೇ ಇಂಧನಕ್ಕಾಗಿ ಹೆಚ್ಚು ಅವಲಂಬಿತವಾಗಬಾರದು ಎಂಬ ನಿರ್ಧಾರಕ್ಕೆ ಬಂದಿರುವ ಭಾರತ, ಇಂಧನ ದ್ರವ್ಯಗಳ ಖರೀದಿಯ ಮೂಲಗಳನ್ನು ಮತ್ತಷ್ಟು ವೈವಿಧ್ಯಗೊಳಿಸಲು ನಿರ್ಧರಿಸಿದೆ ಎಂದು ಪೆಟ್ರೋಲಿಯಂ ಸಚಿವಾಲಯದ ಮೂಲಗಳಿಂದ ತಿಳಿದುಬಂದಿದೆ.

ಫೆ.28ರಂದು ಅಮೆರಿಕ-ಇಸ್ರೇಲ್ ಒಟ್ಟಾಗಿ ಇರಾನ್ ಮೇಲೆ ಯುದ್ಧ ಸಾರುವುದಕ್ಕೆ ಮೊದಲು ಭಾರತ ಎಲ್‌ಪಿಜಿಗೆ ಹೆಚ್ಚು ಗಲ್ಫ್ ದೇಶಗಳನ್ನು ಆಶ್ರಯಿಸಿತ್ತು. ಅಮೆರಿಕದಿಂದ ಕೇವಲ ಶೇ.8ರಷ್ಟು ಎಲ್‌ಪಿಜಿ ಆಮದು ಮಾಡಿಕೊಳ್ಳುತ್ತಿತ್ತು. ಯುದ್ಧ ಆರಂಭವಾದ ಬಳಿಕ ಏಪ್ರಿಲ್‌ನಲ್ಲಿ ಭಾರತದ ಒಟ್ಟು ಎಲ್‌ಪಿಜಿ ಖರೀದಿಯ ಮೂರನೇ ಒಂದು ಭಾಗ ಅಮೆರಿಕದಿಂದಲೇ ಬರಲಾರಂಭಿಸಿದೆ.

ಉಳಿದಂತೆ ಒಟ್ಟು ಎಲ್‌ಪಿಜಿ ಆಮದಿನ ಮೂರನೇ ಎರಡು ಭಾಗ ಇರಾನ್ ಅಲ್ಲದೇ, ಅರ್ಜೆಂಟೀನಾ, ಚಿಲಿ, ಫ್ರಾನ್ಸ್, ನೆದರ್ ಲೆಂಡ್ ದೇಶಗಳಿಂದಲೂ ಎಲ್‌ಪಿಜಿ ಖರೀದಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ದೆಹಲಿ 26ನೇ ಅಖಿಲ ಭಾರತ ಬೆರಳಚ್ಚು ಸಮ್ಮೇಳನದಲ್ಲಿ ಶಾ ಬಿಡುಗಡೆ

35 ಸೆಕೆಂಡಲ್ಲಿ ಅಪರಾಧಿ ಪತ್ತೆಗೆ ಅಭಿಜ್ಞಾನ್

ದೆಹಲಿ: ಭಾರತೀಯ ಪೊಲೀಸ್ ವ್ಯವಸ್ಥೆ ಪೂರ್ಣ ಹೈಟೆಕ್ ಸ್ವರೂಪ ಪಡೆದುಕೊಳ್ಳುತ್ತಿದೆ. ಶಂಕಿತ ವ್ಯಕ್ತಿ ಅಪರಾಧಿಯೇ ಅಲ್ಲವೇ ಎಂಬುದನ್ನು ಪೊಲೀಸರು 35 ಸೆಕೆಂಡ್‌ಗಳಲ್ಲಿ ಪತ್ತೆಹಚ್ಚಲು ಸಾಧ್ಯವಾಗುವಂತಹ ಹೊಸ ಅಪ್ಲಿಕೇಷನ್ 'ಅಭಿಜ್ಞಾನ್' ಅನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ(ಎನ್‌ಸಿಆರ್‌ಬಿ) ಅಭಿವೃದ್ಧಿಪಡಿಸಿದೆ. ಪೊಲೀಸ್ ಇಲಾಖೆಗೆ, ತನಿಖಾ ಸಂಸ್ಥೆಗಳ ಪಾಲಿಗೆ ಹೊಸ ಬ್ರಹ್ಮಾಸ್ತ್ರದಂತಿರುವ 'ಅಭಿಜ್ಞಾನ್' ಆಪ್ ಅನ್ನು ಕೇಂದ್ರ ಸರಕಾರ ಬಿಡುಗಡೆ ಮಾಡಿದೆ. ದೇಶಾದ್ಯಂತ ಸಂಗ್ರಹವಾಗಿರುವ 1.3 ಕೋಟಿಗೂ ಹೆಚ್ಚು ಅಪರಾಧಿಗಳ ಬೆರಳಚ್ಚು ಮತ್ತು ದತ್ತಾಂಶಗಳನ್ನು ಪೊಲೀಸರ ಸ್ಮಾರ್ಟ್‌ಫೋನ್‌ಗೆ ಕ್ಷಣ ಮಾತ್ರದಲ್ಲಿ ತಂದುಕೊಟ್ಟು ಅಪರಾಧಿಗಳ ಪತ್ತೆಗೆ ಈ ಅತ್ಯಾಧುನಿಕ 'ಅಭಿಜ್ಞಾನ್' ಆ್ಯಪ್ ನೆರವಾಗಲಿದೆ.

ಅಭಿಜ್ಞಾನ್ ಮೊಬೈಲ್ ಅಪ್ಲಿಕೇಶನನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ದೆಹಲಿಯಲ್ಲಿ ನಡೆದ 26ನೇ ಅಖಿಲ ಭಾರತ ಬೆರಳಚ್ಚು ಸಮ್ಮೇಳನದಲ್ಲಿ ಲೋಕಾರ್ಪಣೆಗೊಳಿಸಿದ್ದಾರೆ. ಈ ಅಪ್ಲಿಕೇಷನ್ ರಾಷ್ಟ್ರೀಯ ಸ್ವಯಂಚಾಲಿತ ಬೆರಳಚ್ಚು ಗುರುತಿನ ವ್ಯವಸ್ಥೆಗೆ ಸಂಪರ್ಕ ಹೊಂದಿದೆ. ಒಂದು ರಾಜ್ಯದಿಂದ ಬೇರೊಂದು ರಾಜ್ಯಕ್ಕೆ ಓಡಿಹೋಗುವ, ಹೆಸರು, ರೂಪ ಬದಲಿಸಿಕೊಂಡು ಅಪರಾಧ ಕೃತ್ಯ ಮುಂದುವರಿಸುವ ಹಳೆಯ ಅಪರಾಧಿಗಳನ್ನು ತಕ್ಷಣವೇ ಗುರುತಿಸಲು ಅಭಿಜ್ಞಾನ್ ಆಪ್ ನೆರವಾಗುತ್ತದೆ. ಮನುಷ್ಯನ ಬೆರಳಚ್ಚು ಮತ್ತು ಇತರೆ ದತ್ತಾಂಶಗಳನ್ನು ಆಧರಿಸಿಯೇ ಈ ಅಪ್ಲಿಕೇಷನ್ ಹಳೆಯ ಅಪರಾಧಿಗಳನ್ನು ಗುರುತಿಸಿ ಪೊಲೀಸರಿಗೆ ಸ್ಪಷ್ಟ ಮಾಹಿತಿ ನೀಡುತ್ತದೆ.



3 ವಿಶಿಷ್ಟ ಡಿಜಿಟಲ್ ಸೌಲಭ್ಯ ಪರಿಚಯ

ಇದಲ್ಲದೇ ಅಪರಾಧ ಮುಕ್ತ ಭಾರತ ನಿರ್ಮಾಣಕ್ಕಾಗಿ ಇನ್ನೂ 3 ಪ್ರಮುಖ ಡಿಜಿಟಲ್ ಸೌಲಭ್ಯಗಳನ್ನೂ ಅಮಿತ್ ಶಾ ಬಿಡುಗಡೆ ಮಾಡಿದ್ದಾರೆ. ತನಿಖಾ ಪ್ರಕ್ರಿಯೆ ಸುಲಭಗೊಳಿಸುವ 'ಸಿಆರ್‌ಪಿಐ' ಆಪ್, ನ್ಯಾಯಾಲಯದಲ್ಲಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸುವ ಪೊಲೀಸ್ ಪ್ರಕ್ರಿಯೆ ವೇಗಗೊಳಿಸಲು ಸಹಾಯಕವಾದ ಇ-ಪ್ರಾಸಿಕ್ಯೂಷನ್ 2.0 ಆಪ್, ವಿಧಿವಿಜ್ಞಾನ ಮತ್ತು ತಂತ್ರಜ್ಞಾನ ಮೂಲಕ ಅಪರಾಧ ಕೃತ್ಯದ ಪುರಾವೆಗಳನ್ನು ವೇಗವಾಗಿ ಕಲೆಹಾಕಲು ನೆರವಾಗುವ ಇ-ಫೋರೆನ್ಸಿಕ್ 2.0 ಆಪ್‌ಗಳನ್ನೂ ಬಿಡುಗಡೆ ಮಾಡಲಾಗಿದೆ. ಈ ಅಪ್ಲಿಕೇಶನ್‌ಗಳು ಪೊಲೀಸ್ ಮತ್ತು ತನಿಖಾ ಸಂಸ್ಥೆಗಳ ಬಳಕೆಗಷ್ಟೇ ಸೀಮಿತಿ. ಸಾರ್ವಜನಿಕರ ಬಳಕೆಗೆ ಲಭ್ಯವಿರುವುದಿಲ್ಲ ಎಂದು ಗಮನಾರ್ಹ.

ಹೊಸ ನ್ಯಾಯಮಂಡಳಿ ರಚನೆಯಾದರೂ ರಾಜ್ಯಕ್ಕೆ ಅಪಾಯವಿಲ್ಲ: ಆನಂದ್

ಮೇಕೆದಾಟು ಅಣೆಕಟ್ಟೆ ಕಟ್ಟಲು ತ.ನಾ. ಬಿಡಲ್ಲ

ಚೆನ್ನೈ: ಕಾವೇರಿ ನೀರು ಹಂಚಿಕೆ ವಿಷಯದಲ್ಲಿ ತಮಿಳಗ ವೆಟ್ರಿ ಕಳಗಂ ಪಕ್ಷದ ಸರಕಾರ ಯಾವ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ.

ಮೇಕೆದಾಟು ಅಣೆಕಟ್ಟೆ ನಿರ್ಮಾಣವನ್ನು ವಿರೋಧಿಸಿ ರಾಜ್ಯ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿ ಅದರ ಪ್ರತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಳುಹಿಸಿಕೊಡಲಾಗಿದೆ. ರಾಷ್ಟ್ರೀಯ ಪರಿಸರ ನ್ಯಾಯಮಂಡಳಿ ಪ್ರಧಾನ ಪೀಠಕ್ಕೆ ಅರ್ಜಿಯನ್ನೂ ಸಲ್ಲಿಸಲಾಗಿದೆ ಎಂದು ಸಚಿವ ಎನ್.ಆನಂದ್ ಹೇಳಿದ್ದಾರೆ.

ವಿಧಾನಸಭೆಯ ಪ್ರಸಕ್ತ ಅಧಿವೇಶನದಲ್ಲಿ ಸದನಕ್ಕೆ ಸೋಮವಾರ ಹೇಳಿಕೆ ನೀಡಿದ ಅವರು, ಕರ್ನಾಟಕ ಸರಕಾರ ಮೇಕೆದಾಟು ಅಣೆಕಟ್ಟೆ ನಿರ್ಮಾಣದ ವಿಷಯ ಪ್ರಸ್ತಾಪ ಮಾಡಿದ ತಕ್ಷಣವೇ ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಕಾನೂನು ತಜ್ಞರ ಜತೆ ಸಮಾಲೋಚನೆ ನಡೆಸಿ ಮರುದಿನವೇ(ಮೇ 26) ಪ್ರಧಾನಿ ಅವರಿಗೆ ಪತ್ರ ಬರೆದರು. ಸಾಲದೆಂಬಂತೆ ದೆಹಲಿಗೆ ತೆರಳಿ ಖುದ್ದು ಭೇಟಿಯಾಗಿ, ಮೇಕೆದಾಟು ಅಣೆಕಟ್ಟೆ ನಿರ್ಮಾಣ ಯೋಜನೆಗೆ ಅನುಮತಿ ನೀಡಬಾರದು ಎಂದು ಒತ್ತಾಯಿಸಿದ್ದಾರೆ ಎಂದು ವಿವರಿಸಿದರು. ಮೇಕೆದಾಟು ಅಣೆಕಟ್ಟೆ ವಿವಾದ ಬಗೆಹರಿಸಲು ಹೊಸ ನ್ಯಾಯಮಂಡಳಿ ರಚನೆಯ ಅಗತ್ಯವಿಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಒಂದೊಮ್ಮೆ ಹೊಸ ನ್ಯಾಯ ಮಂಡಳಿ ರಚನೆಯಾದರೂ ತಮಿಳುನಾಡಿಗೆ ಯಾವ ಹಾನಿಯೂ ಆಗುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೇಕೆದಾಟು ಅಣೆಕಟ್ಟು ವಿಷಯದಲ್ಲಿ ರಾಜ್ಯಕ್ಕೆ ಎದುರಾಗಿರುವ ಅಪಾಯ ಇನ್ನೂ ದೂರವಾಗಿಲ್ಲ. ಅಣೆಕಟ್ಟೆ ನಿರ್ಮಾಣ ಕುರಿತು ಸಮಗ್ರ ಯೋಜನಾ ವರದಿಯನ್ನು ಕಾವೇರಿ ಪ್ರಾಧಿಕಾರ ತಿರಸ್ಕರಿಸಿಲ್ಲ. ಬದಲಾಗಿ ಅದನ್ನು ಜಲಸಂಪನ್ಮೂಲ ಇಲಾಖೆ ಪ್ರಾಧಿಕಾರಕ್ಕೆ ಕಳುಹಿಸಿಕೊಟ್ಟಿದೆ ಎಂದು ಸದನಕ್ಕೆ ವಿವರಿಸಿದರು. ಸಿಎಂ ಜೋಸೆಫ್ ವಿಜಯ್ ಪಕ್ಕದ ಆಸನದಲ್ಲಿ ಬಹಳ ಗಂಭೀರವಾಗಿದ್ದರು. ಸದನವೂ ಗಮನವಿಟ್ಟು ಆಲಿಸುತ್ತಿತ್ತು.

ನಾಸಿಕ್: ಶಿವಸೇನೆ ವಿರುದ್ಧ ಬಿಜೆಪಿ ಬಂಡಾಯಗಾರನಿಗೆ ಜಯ

ಒಂದು ಸ್ಥಾನವನ್ನೂ ಗೆಲ್ಲದ ಉದ್ಧವ್, ಶರದ್ ಪಕ್ಷಕ್ಕೆ ಮುಖಭಂಗ

ಮಹಾರಾಷ್ಟ್ರ ಪರಿಷತ್: ಮಹಾಯುತಿಗೆ 16

ಮುಂಬೈ: ಸ್ಥಳೀಯ ಸಂಸ್ಥೆ ಕ್ಷೇತ್ರಗಳ ಮೂಲಕ ಮಹಾರಾಷ್ಟ್ರ ವಿಧಾನ ಪರಿಷತ್‌ನ 17 ಸ್ಥಾನಗಳಿಗೆ ಜೂ.18ರಂದು ನಡೆದ ಚುನಾವಣೆಯ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, 16 ಸ್ಥಾನಗಳಲ್ಲಿ ಆಡಳಿತಾರೂಢ ಮಹಾಯುತಿ ಮೈತ್ರಿಕೂಟ ಭರ್ಜರಿ ಗೆಲುವು ಸಾಧಿಸಿದೆ.

ಮಹಾಯುತಿ ಮಿತ್ರಪಕ್ಷಗಳಾದ ಬಿಜೆಪಿ-11, ಶಿವಸೇನೆ-4 ಮತ್ತು ಎನ್‌ಸಿಪಿ(ಅಜಿತ್ ಬಣ)-2 ಸ್ಥಾನಗಳಲ್ಲಿ ಸ್ಪರ್ಧಿಸಿದ್ದವು. ಮತದಾನಕ್ಕೂ ಮುನ್ನವೇ ಮೈತ್ರಿಕೂಟದ 6 ಅಭ್ಯರ್ಥಿಗಳು ಅವಿರೋಧ ಗೆಲುವು ಸಾಧಿಸಿದ್ದರು. 11 ಸ್ಥಾನಗಳಿಗಷ್ಟೇ ಮತದಾನ ನಡೆದಿತ್ತು. ನಾಸಿಕ್‌ನಲ್ಲಷ್ಟೇ ಮಹಾಯುತಿಗೆ ಸೋಲಾಗಿದೆ. ಅಲ್ಲಿ ಮೈತ್ರಿಕೂಟದ ಅಧಿಕೃತ ಅಭ್ಯರ್ಥಿ ಶಿವಸೇನೆಯ ನರೇಂದ್ರ ದರಡೆ ಅವರನ್ನು ಬಿಜೆಪಿಯ ಬಂಡಾಯ ಅಭ್ಯರ್ಥಿ ಗೋಕುಲ್ ಗೀತೆ ಸೋಲಿಸಿದ್ದಾರೆ.

ಬಿಜೆಪುಯ ಅರುಣ್ ಲಖಾನಿ(ವಾರ್ಧಾ-ಗಡ್ಚಿರೋಲಿ-ಚಂದ್ರಾಪುರ) ಮತ್ತು ಪ್ರಜಕ್ತ್ ತಾನ್ಪುರೆ(ಅಹಲ್ಯಾನಗರ) ಹಾಗೂ ಎನ್‌ಸಿಪಿಯ ಅನಿಕೇತ್ ತತ್ಕರೆ(ರಾಯಗಡ-ರತ್ನಗಿರಿ-ಸಿಂಧುದುರ್ಗ) ಮತ್ತು ವಿಕ್ರಮ್ ಕಾಕಡೆ(ಪುಣೆ) ಹಾಗೂ ಶಿವಸೇನೆಯ ರವೀಂದ್ರ ಫಾಟಕ್(ಥಾಣೆ) ಮತ್ತು ದುಶ್ಯಂತ್ ಚತುರ್ವೇದಿ(ಯವತ್ಮಾಲ್) ಅವಿರೋಧ ಆಯ್ಕೆಯಾಗಿದ್ದರು.

ಬಿಜೆಪಿಯ ಸುಹಾಸ್ ಶಿರ್ಸಾತ್(ಛತ್ರಪತಿ ಸಂಭಾಜಿನಗರ-ಜಲ್ನಾ), ಅವಿನಾಶ್ ಬ್ರಹ್ಮಂಕರ್(ಭಂಡಾರ-ಗೊಂಡಿಯ), ಧೈರ್ಯಶೀಲ ಕದಮ್(ಸಾಂಗ್ಲಿ-ಸತಾರಾ), ರಾಜೇಂದ್ರ ರಾವತ್(ಸೋಲಾಪುರ), ಬಸವರಾಜ್ ಪಾಟೀಲ್(ಧಾರಶಿವ-ಲಾತೂರ್-ಬೀಡ್), ರಾಜೀವ್ ಪೋತ್ದಾರ್(ನಾಗಪುರ), ನಂದಕಿಶೋರ್ ಮಹಾಜನ್(ಜಲಗಾಂವ್), ಪ್ರವೀಣ್ ಪೋಟೆ(ಅಮರಾವತಿ) ಮತ್ತು ಅಮರ್ ರಾಜೂರ್‌ಕರ(ನಾಂದೇಡ್) ಹಾಗೂ ಶಿವಸೇನೆಯ ಸಯೀದ್ ಖಾನ್(ಪರ್ಭಾನಿ-ಹಿಂಗೋಲಿ) ಅಧಿಕ ಮತ ಪಡೆದು ಗೆದ್ದಿದ್ದಾರೆ.

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ(ಯುಬಿಟಿ) ಮತ್ತು ಹಿರಿಯ ರಾಜಕಾರಣಿ ಶರದ್ ಪವಾರ್ ನೇತೃತ್ವದ ಎನ್‌ಸಿಪಿ(ಶರದ್ ಬಣ) ಒಂದು ಸ್ಥಾನವನ್ನೂ ಗೆಲ್ಲಲಾಗದೇ ಆಘಾತ ಅನುಭವಿಸಿವೆ.

ಯಾವುದೇ ತೊಂದರೆ ಇಲ್ಲದೆ ನೀಟ್ ಮುಗಿದಿದ್ದಕ್ಕೆ ಪೋಷಕರ ನಿಟ್ಟುಸಿರು

ಆದಷ್ಟು ಬೇಗ ನೀಟ್ ಮರುಪರೀಕ್ಷೆ ಫಲಿತಾಂಶ: ಸಿಂಗ್

ದೆಹಲಿ: ದೇಶದ 551 ನಗರಗಳಲ್ಲಿನ 5440ಕ್ಕೂ ಅಧಿಕ ಪರೀಕ್ಷಾ ಕೇಂದ್ರಗಳು ಮತ್ತು ವಿವಿಧ ದೇಶಗಳಲ್ಲಿನ 14 ಕೇಂದ್ರಗಳಲ್ಲಿ 20 ಲಕ್ಷಕ್ಕೂ ಹೆಚ್ಚು

ಅಭ್ಯರ್ಥಿಗಳು ನೀಟ್-ಯುಜಿ ಮರುಪರೀಕ್ಷೆ ಬರೆದಿದ್ದಾರೆ. ಯಾವುದೇ ತಾಂತ್ರಿಕ ತೊಂದರೆಗಳಿಲ್ಲದೆ ಮರು ಪರೀಕ್ಷೆ ನಡೆಸಲಾಗಿದೆ. ನಿರೀಕ್ಷೆಗಿಂತಲೂ ಮೊದಲೇ, ಆದಷ್ಟು ಬೇಗ ಫಲಿತಾಂಶ ಪ್ರಕಟಿಸಲಾಗುವುದು ಎಂದು 'ಎನ್‌ಟಿಎ' ಮಹಾ ನಿರ್ದೇಶಕ ಅಭಿಷೇಕ್ ಸಿಂಗ್ ಸುದ್ದಿಸಂಸ್ಥೆಗೆ ಸೋಮವಾರ ತಿಳಿಸಿದ್ದಾರೆ.

ಉತ್ತರ ಪ್ರದೇಶ, ಬಿಹಾರದಲ್ಲಿ ಕೆಲವು ನಕಲಿ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಯತ್ನಿಸಿ ಸಿಕ್ಕಿಬಿದ್ದಿದ್ದಾರೆ. ಕೆಲವು ವೈದ್ಯಕೀಯ ವಿದ್ಯಾರ್ಥಿಗಳೇ ನಕಲಿ ಪ್ರವೇಶ ಪತ್ರ-ನಕಲಿ ಆಧಾರ್ ಕಾರ್ಡ್ ಬಳಸಿ ನೈಜ ಅಭ್ಯರ್ಥಿಗಳ ಪರವಾಗಿ ಪರೀಕ್ಷೆ ಬರೆಯಲು ಯತ್ನಿಸಿ ಸಿಕ್ಕಿಬಿದ್ದಿದ್ದಾರೆ. ಬಯೋಮೆಟ್ರಿಕ್ ಪರಿಶೀಲನೆ-ಮುಖ ಚಹರೆ ಗುರುತಿಸುವ ತಂತ್ರಜ್ಞಾನದಿಂದ ನಕಲಿ ಅಭ್ಯರ್ಥಿಗಳ ಸಂಚು ವಿಫಲವಾಯಿತು ಎಂದು ವಿವರಿಸಿದರು.

ಭದ್ರತಾ ವ್ಯವಸ್ಥೆಗಳನ್ನು ಹೆಚ್ಚಿಸಿದ ಹಿನ್ನೆಲೆಯಲ್ಲಿ ನೀಟ್-ಯುಜಿ ಮರುಪರೀಕ್ಷೆಯನ್ನು ಯಾವುದೇ ಅಡೆತಡೆ, ತೊಂದರೆ ಇಲ್ಲದೇ ಭಾನುವಾರ ಬಲು ಯಶಸ್ವಿಯಾಗಿ ನಡೆಸಲಾಗಿದೆ. ವಾಯುಪಡೆ, ಪೊಲೀಸರು, ಪರೀಕ್ಷಾ ವೀಕ್ಷಕರು ಮತ್ತು ಪರೀಕ್ಷಾ ಕೊಠಡಿ ಸಿಬ್ಬಂದಿ ಸೇರಿದಂತೆ 7 ಲಕ್ಷ ಸಿಬ್ಬಂದಿ ಶ್ರಮದಿಂದ ಮರು ಪರೀಕ್ಷೆ ಯಶಸ್ವಿಯಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ತಿಳಿಸಿದೆ.

ಪ್ರಶ್ನೆಪತ್ರಿಕೆ ಕಠಿಣ: ರದ್ದುಪಡಿಸಲಾದ ಮೇ 3ರ ನೀಟ್-ಯುಜಿ ಪರೀಕ್ಷೆಗಿಂತಲೂ ಭಾನುವಾರ ನಡೆದ ಮರು ಪರೀಕ್ಷೆಯ ಪ್ರಶ್ನೆಪತ್ರಿಕೆ ಹೆಚ್ಚು ಕಠಿಣವಾಗಿತ್ತು. ವಿಶೇಷವಾಗಿ ಭೌತಶಾಸ್ತ್ರ ಪರೀಕ್ಷೆ ಕಠಿಣವಾಗಿತ್ತು ಎಂದು ವಿದ್ಯಾರ್ಥಿಗಳು ಪ್ರತಿಕ್ರಿಯಿಸಿದ್ದಾರೆ. ಆದರೆ, ಮರು ಪರೀಕ್ಷೆಯಲ್ಲಿ ಹೆಚ್ಚುವರಿ 15 ನಿಮಿಷಗಳನ್ನು ನೀಡಿದ ಎನ್‌ಟಿಎ ಕ್ರಮಕ್ಕೆ ಎಲ್ಲಾ ವಿದ್ಯಾರ್ಥಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

5ನೇ ಬಾರಿ ಪರೀಕ್ಷೆಗೆ ಹಾಜರಾಗಿರುವ ವೈದ್ಯಕೀಯ ಶಿಕ್ಷಣದ ಆಕಾಂಕ್ಷಿ ದೀಪಕ್ ಕುಮಾರ್, ಜೀವಶಾಸ್ತ್ರ ಸುಲಭವಾಗಿತ್ತು, ಆದರೆ ಭೌತಶಾಸ್ತ್ರ ಕಠಿಣವಾಗಿತ್ತು. ಎಷ್ಟು ಅಂಕ ಪಡೆಯುವೆನೋ

ಗೊತ್ತಿಲ್ಲ ಎಂದು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ. ಆದರೆ, ಮರು ಪರೀಕ್ಷೆ ಯಾವುದೇ ವ್ಯತ್ಯಯಗಳಿಲ್ಲದೆ ನಡೆದಿರುವುದಕ್ಕೆ ವಿದ್ಯಾರ್ಥಿಗಳು ಮತ್ತು ಪೋಷಕರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ನೀಟ್-ಯುಜಿ ಮರು ಪರೀಕ್ಷೆ ಪ್ರಶ್ನೆ ಪತ್ರಿಕೆ ಕಠಿಣವಾಗಿತ್ತು. ಹಾಗಾಗಿ ಈ ಬಾರಿ ಅಂಕಗಳ ಕಟ್ ಆಫ್ 600ಕ್ಕಿಂತ ಕೆಳಕ್ಕಿಳಿಯುವ ಸಾಧ್ಯತೆ ಇದೆ ಎಂದು ಕೋಚಿಂಗ್ ಸೇವೆಗಳ ಸಂಸ್ಥೆಯೊಂದು ಅಂದಾಜು ಮಾಡಿದಿದೆ.

ಸಮಾಚಾರ ಸಣ್ಣದಲ್ಲ

ಅನುಪಯುಕ್ತ ವಸ್ತುಗಳ ಹರಾಜು

ದಾವಣಗೆರೆ: ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಉಗ್ರಾಣದಲ್ಲಿ ದಾಸ್ತಾನು ಇರುವ ಅನುಪಯುಕ್ತ ವಸ್ತುಗಳು ಮತ್ತು ಪೀಠೋಪಕರಣಗಳ ವಿಲೇವಾರಿಯನ್ನು ಜುಲೈ 16 ರಂದು ಬೆಳಗ್ಗೆ 11 ಗಂಟೆಗೆ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಬಹಿರಂಗ ಹರಾಜು ಮಾಡಲಾಗುವುದು ಎಂದು ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ: ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ 2025-2026ನೇ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಯಲ್ಲಿ ಅತಿಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ಜಿಲ್ಲೆಯ ಪಂಚಮಸಾಲಿ ಸಮಾಜದ ವಿದ್ಯಾರ್ಥಿ/ವಿದ್ಯಾರ್ಥಿನಿಗಳಿಂದ ''ಸ್ವಾಭಿಮಾನ ಪ್ರತಿಭಾ ಪುರಸ್ಕಾರ''ಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.. ಎಸ್.ಎಸ್.ಎಲ್.ಸಿ.ಯಲ್ಲಿ 85% ಹಾಗೂ ಅಃಖಇಯಲ್ಲಿ ಮತ್ತು ಪಿಯುಸಿಯಲ್ಲಿ 80% ಮತ್ತು ಪಿ.ಯು.ಸಿ. ಯಲ್ಲಿ ಶೇಕಡಾ 85%, ಕ್ಕಿಂತಹೆಚ್ಚು ಅಂಕಗಳಿಸಿದ ಸಮಾಜದ ವಿದ್ಯಾರ್ಥಿಗಳು ದಾವಣಗೆರೆ ನಗರದ ಜಿಲ್ಲಾ ಪಂಚಮಸಾಲಿ ಸಮಾಜದ ಕಚೇರಿ 477, 5ನೇ ಮೇನ್ 7ನೇ ಕ್ರಾಸ್, ಪಿ.ಜೆ. ಬಡಾವಣೆ, ಚೇತನಾ ಹೋಟೇಲ್ ರಸ್ತೆ, ದಾವಣಗೆರೆ ಕಛೇರಿಯಲ್ಲಿ ಅರ್ಜಿ ಪಡೆದು, ಅಗತ್ಯ ಮಾಹಿತಿಗಳೊಂದಿಗೆ ಮೇಲ್ಕಂಡ ಕಛೇರಿಗೆ ದಿನಾಂಕ : 2026-ಜೂನ್-30 ರೊಳಗಾಗಿ ಸಲ್ಲಿಸತಕ್ಕದ್ದು ನಂತರ ಬಂದ ಅರ್ಜಿ ಸ್ವೀಕರಿಸಲಾಗುವುದಿಲ್ಲ. ಮಾಹಿತಿಗಾಗಿ ದೂ: - 8762732010, 9448155159, 9448533713, ಕಚೇರಿ: 08192-222008 ಸಂಪರ್ಕಿಸಿ.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ಚಿತ್ರದುರ್ಗ: ಪ್ರವಾಸೋದ್ಯಮ ಇಲಾಖೆ ವತಿಯಿಂದ ಎಸ್ಸಿಎಸ್ಪಿ, ಟಿಎಸ್ಪಿ ಯೋಜನೆ ಅಡಿಯಲ್ಲಿ ಪ್ರವಾಸೋದ್ಯಮ ಆತಿಥ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ ತರಬೇತಿ ನೀಡಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಜೂನ್ 30 ಅರ್ಜಿ ಸಲ್ಲಿಸಲು ಕೊನೆಯ ದಿನ. 10ನೇ ತರಗತಿ ಉತ್ತೀರ್ಣರಾದವರಿಗೆ ಆಹಾರ ಮತ್ತು ಪಾನೀಯಗಳ ವಿತರಣೆ-4 ತಿಂಗಳು ತರಬೇತಿ, 5ನೇ ತರಗತಿ ಉತ್ತೀರ್ಣರಾದವರಿಗೆ ಕೊಠಡಿ ನಿರ್ವಹಣೆ-4 ತಿಂಗಳ ತರಬೇತಿ, 8ನೇ ತರಗತಿ ಉತ್ತೀರ್ಣರಾದವರಿಗೆ ವಿವಿಧ ಆಹಾರ ತಯಾರಕರಿಗೆ 5 ತಿಂಗಳ ತರಬೇತಿ ನೀಡಲಾಗುವುದು. ಕೇಂದ್ರ ಹಾಗೂ ರಾಜ್ಯ ಸರಕಾರ ಆತಿಥ್ಯ ಕ್ಷೇತ್ರದ ಸಂಸ್ಥೆಗಳಾದ ಮೈಸೂರಿನ ಎಫ್.ಸಿ.ಐ (ಫುಡ್ ಕ್ರಾಫ್ಟ್ ಇನ್‌ಸ್ಟಿಟ್ಯೂಟ್) ಹಾಗೂ ಬೆಂಗಳೂರಿನ ಐಹೆಚ್‌ಎಂ (ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜಮೆಂಟ್) ಮೂಲಕ ವಸತಿ ಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 20 ರಿಂದ 45 ವರ್ಷದೊಳಗಿರಬೇಕು. ಅರ್ಜಿಯನ್ನು ಇದೇ ಜೂನ್ 19 ರಿಂದ 30 ರವರೆಗೆ ಸಹಾಯಕ ನಿರ್ದೇಶಕರು ಕಚೇರಿ, ಪ್ರವಾಸೋದ್ಯಮ ಇಲಾಖೆ, ಕೋಟೆ ಮುಂಭಾಗ, ಚಿತ್ರದುರ್ಗ ಕಚೇರಿಯಿಂದ ಅರ್ಜಿಗಳನ್ನು ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಚಿತ್ರದುರ್ಗ ರವರ ಕಚೇರಿ ಹಾಗೂ ದೂರವಾಣಿ ಸಂಖ್ಯೆ 08194-234466 ಕರೆ ಮಾಡುವಂತೆ ಪ್ರಕಟಣೆ ತಿಳಿಸಿದೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ದಾವಣಗೆರೆ: 66/11 ಕೆ.ವಿ. ವಿದ್ಯುತ್ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಮತ್ತು ತುರ್ತು ನಿರ್ವಹಣಾ ಕಾಮಗಾರಿಗಳ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಜೂನ್ 23 ರಂದು ಬೆಳಿಗ್ಗೆ 10 ರಿಂದ ಸಂಜೆ 5.30 ರವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಮಾಮಾಸ್ ಜಾಯಿಂಟ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಎಮ್.ಸಿ.ಸಿ.ಬಿ : ಶಾಬನೂರು ರಸ್ತೆ, ಎಸ್.ಎಸ್. ಲೇಔಟ್, ಎ ಬ್ಲಾಕ್, ಕುವೆಂಪು ನಗರ, ಬಾಟ್ಲಿ ಬಿಲ್ಡಿಂಗ್ ಸುತ್ತ ಮುತ್ತ, ಸಿದ್ದವೀರಪ್ಪ ಬಡಾವಣೆ, 1ನೇ ಅಡ್ಡ ರಸ್ತೆ ಯಿಂದ 7ನೇ ಅಡ್ಡರಸ್ತವರೆಗೆ, ಗ್ಲಾಸ್ ಹೌಸ್, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗದ ಪ್ರದೇಶ , ಬಿ.ಐ.ಇ.ಟಿ. ಕಾಲೇಜು ಹಾಗೂ ಸುತ್ತ ಮುತ್ತ ಪ್ರದೇಶಗಳು. ಮಂಡಿಪೇಟೆ, ಬೆನ್ನೆ ಕಂಪನಿ ರಸ್ತೆ, ಎಮ್ ಜಿ ರಸ್ತೆ, ಎನ್ ಆರ್‌ರಸ್ತೆ, ಬೆಲ್ಲೊಡಿಹಳ್ಳಿ, ಮಹಾವೀರ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಬಿ.ಟಿ.: ಮಂಡಕ್ಕಿ ಬಟ್ಟಿ, 1 ರಿಂದ 10 ನೇ ಕ್ರಾಸ್, ಇಂದಿರಾ ನಗರ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್ ಮಾರ್ಸ್ ನಗರ, ಕೋಳಿ ಚನ್ನಪ್ಪ ಬಡಾವಣೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು, ಮೌನೇಶ್ವರ : ಕೆ.ಇ.ಬಿ ಕಾಲೋನಿ, ನಿಟುವಳ್ಳಿ,ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ, ಪ್ರದೇಶದಲ್ಲಿ ವ್ಯತ್ಯಯವಾಗಲಿದೆ.

{ರಮೇಶ ಜಾರಕಿಹೊಳಿ} ಮಾಜಿ ಸಚಿವ

ರಾಜ್ಯದಲ್ಲಿ ಯಾವ ಪಕ್ಷವೇ ಇರಲಿ, ಅದನ್ನು ಅಧಿಕಾರಕ್ಕೆ ತರುವ ಅಥವಾ ಗದ್ದುಗೆಯಿಂದ ಕೆಳಗಿಳಿಸುವ ರಾಜಕೀಯ ಶಕ್ತಿಯನ್ನು ದೇವರು ನಮ್ಮ ಸಮಾಜಕ್ಕೆ ಕೊಟ್ಟಿದ್ದಾನೆ. 1970ರ ದಶಕದಲ್ಲೇ ನಾವು ಕೇವಲ ಮೂರ್ನಾಲ್ಕು ಸೀಟುಗಳನ್ನು ಗೆದ್ದು, ಇಡೀ ಅಧಿಕಾರದ ಚುಕ್ಕಾಣಿಯನ್ನು ನಮ್ಮ ಕೈಯಲ್ಲಿ ಹಿಡಿದುಕೊಳ್ಳುತ್ತಿದ್ದೆವು. ನಾವು ಈಗ ಮತ್ತಷ್ಟು ಪ್ರಬಲವಾಗಿ ಸಂಘಟನೆ ಮಾಡಬೇಕಿದೆ.



ದಾವಣಗೆರೆಯಲ್ಲಿ ರಾಜ್ಯ ರೈತ ಸಂಘದಿಂದ ಪ್ರತಿಭಟನೆ | ಬೆಸ್ಕಾಂಗೆ ಮನವಿ ಸಲ್ಲಿಕೆ

ವಿದ್ಯುತ್ ಖಾಸಗೀಕರಣಕ್ಕೆ ಆಕ್ರೋಶ

ದಾವಣಗೆರೆ: ರಾಜ್ಯದಲ್ಲಿ ವಿದ್ಯುತ್ ಖಾಸಗೀಕರಣ ಮಾಡಬಾರದು ಎಂದು ಆಗ್ರಹಿಸಿ ರಾಜ್ಯ ರೈತ ಸಂಘದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿತು.

ನಗರದ ಜಯದೇವ ಸರ್ಕಲ್‌ನಿಂದ ಅಂಬೇಡ್ಕರ್‌ವೃತ್ತದ ಬಳಿಯ ಬೆಸ್ಕಾಂನ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಅರುಣ್ ಕುಮಾರ್‌ಕುರುಡಿ ಮಾತನಾಡಿ, ಸಾರ್ವಜನಿಕ ವಲಯದ ವಿದ್ಯುತ್ ವಿತರಣಾ ಸಂಸ್ಥೆಗಳಾದ ಬೆಸ್ಕಾಂ, ಎಸ್ಕಾಂ ಹಾಗೂ ಚೆಸ್ಕಾಂಗೆ ಸಂಬಂಧಿಸಿದ ವಿದ್ಯುತ್ ವಿತರಣಾ ಸೇವೆಯನ್ನು ಖಾಸಗಿ ಕಂಪನಿಗೆ ನೀಡುವ ನಿರ್ಧಾರ ಜನವಿರೋಧಿ ಎಂದು ಆರೋಪಿಸಿದರು.

ವಿದ್ಯುತ್ ಕ್ಷೇತ್ರವು ಸಾರ್ವಜನಿಕ ಸೇವಾ ವಲಯವಾಗಿದ್ದು, ಸರಕಾರದ ಅಧೀನದಲ್ಲಿರುವ ಸಂಸ್ಥೆಗಳು ಗ್ರಾಹಕರಿಗೆ ಸಮರ್ಪಕ ಸೇವೆ ನೀಡುತ್ತಿವೆ. ಇಂತಹ ಸಂದರ್ಭದಲ್ಲಿ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಪ್ರಯತ್ನಗಳು ರೈತರು ಹಾಗೂ ಸಾಮಾನ್ಯ ಜನರ ಹಿತಾಸಕ್ತಿಗೆ ಧಕ್ಕೆ ಉಂಟುಮಾಡಲಿವೆ ಎಂದು ಹೇಳಿದರು.

ಖಾಸಗಿ ಕಂಪನಿಗೆ ವಿದ್ಯುತ್ ವಿತರಣಾ ಜವಾಬ್ದಾರಿ ನೀಡಿದಲ್ಲಿ ಗ್ರಾಹಕರಿಗೆ ಹೆಚ್ಚುವರಿ ಹೊರೆ ಬೀಳುವ ಸಾಧ್ಯತೆ ಇದ್ದು, ರೈತರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ಮೇಲೂ ಪರಿಣಾಮ ಬೀಳಬಹುದು. ಜೊತೆಗೆ ವಿದ್ಯುತ್ ಸಂಸ್ಥೆಗಳ ನೌಕರರ ಸೇವಾ ಭದ್ರತೆಯೂ ಅಪಾಯಕ್ಕೆ ಸಿಲುಕಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ವಿದ್ಯುತ್ ಕ್ಷೇತ್ರದ ಖಾಸಗೀಕರಣದಿಂದ ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಿಗೆ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದ್ದು, ಕೇಂದ್ರ ಮತ್ತು ರಾಜ್ಯ ಸರಕಾರಗಳು ಖಾಸಗೀಕರಣದ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಎಎಪಿ ಮತ್ತಿತರ ಸಂಘಟನೆಗಳು ಪ್ರತಿಭಟನೆ ಗೆ ಬೆಂಬಲ ವ್ಯಕ್ತಪಡಿಸಿದವು. ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಅಧ್ಯಕ್ಷ ಬುಳ್ಳಾಪುರದ ಹನುಮಂತಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕರಿಲಕ್ಕೇನಹಳ್ಳಿ ರೇವಣಸಿದ್ದಪ್ಪ, ತಾಲೂಕು ಅಧ್ಯಕ್ಷ ಪರಮೇಶಪ್ಪ ಬುಳ್ಳಾಪುರ, ಮುಖಂಡರಾದ ಭೀಮಾನಾಯ್ಕ ಚಿನ್ನಸಮುದ್ರ, ನಯನ ಈಚಘಟ್ಟ ಮತ್ತಿತರರಿದ್ದರು.

ರಾಜ್ಯದಲ್ಲಿ ವಿದ್ಯುತ್ ಖಾಸಗೀಕರಣ ಮಾಡಬಾರದು ಎಂದು ಆಗ್ರಹಿಸಿ ರಾಜ್ಯ ರೈತ ಸಂಘದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿತು.

ರೈತರಿಗೆ ಸಂಕಷ್ಟ

ಸರಕಾರ ಖಾಸಗಿ ಕಂಪನಿಗಳಿಗೆ ಇದನ್ನು ವಹಿಸಿದರೆ ಅವು ಅವರ ಲಾಭ, ನಷ್ಟದ ವಿಚಾರದ ಬಗ್ಗೆ ಚಿಂತಿಸುತ್ತಾರೆಯೇ ಹೊರತು ರೈತರು, ಸಾರ್ವಜನಿಕರ ಸಮಸ್ಯೆ ಆಲಿಸುವುದಿಲ್ಲ. ಅಲ್ಲದೇ, ಸರಕಾರ ಈ ನಡೆಯಿಂದ ವಿದ್ಯುತ್ ದರ ಹೆಚ್ಚಳವಾಗಿ ರೈತರು ಕೃಷಿ ಚಟುವಟಿಕೆಯಿಂದ ವಿಮುಖರಾಗುವ ಸಾಧ್ಯತೆ ಇದೆ. ಇದರಿಂದ ಆಹಾರ ಮತ್ತು ನಿರುದ್ಯೋಗ ಸಮಸ್ಯೆ ತಲೆದೋರುವ ಅಪಾಯವು ಇದೆ ಎಂದು ಅರುಣ್ ಕುಮಾರ್‌ಕುರುಡಿ ಆತಂಕ ವ್ಯಕ್ತಪಡಿಸಿದರು.

ಯೋಗ ನಮ್ಮ ಭಾರತೀಯ ಅಸ್ಮಿತೆ

ಹರಿಹರ ನಗರದ ಬಿಜೆಪಿ ಪಕ್ಷದ ಕಚೇರಿಯಲ್ಲಿ ನಡೆದ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಹರಿಹರ: ಯೋಗ ಈ ನೆಲದ ಅಸ್ಮಿತೆ, ಜಗತ್ತಿಗೆ ಈ ನೆಲವು ಕೊಟ್ಟ ಅಪೂರ್ವವಾದ ಕೊಡುಗೆ, ಇದು ಕೇವಲ ಕಸರತ್ತಲ್ಲ, ಪ್ರಕೃತಿಯೊಡನೆ ಸಮೀಕರಿಸಿಕೊಂಡು ನಮ್ಮನ್ನು ನಾವು ಕಂಡುಕೊಳ್ಳುವ ಪರಿಯಾಗಿದೆ ಎಂದು ಶಾಸಕ ಬಿ.ಪಿ.ಹರೀಶ್ ಹೇಳಿದರು. ನಗರದ ಶಿವಮೊಗ್ಗ ರಸ್ತೆಯ ಬಿಜೆಪಿ ಪಕ್ಷದ ಕಚೇರಿಯಲ್ಲಿ ಹಮ್ಮಿಕೊಂಡಿದ್ದ 12ನೇ ಯೋಗಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರತಿನಿತ್ಯ ಒಂದು ಗಂಟೆ ಯೋಗ ಧ್ಯಾನ ಮತ್ತು ಪ್ರಾಣಾಯಾಮಗಳಿಗೆ ಮೀಸಲಿಟ್ಟಾಗ ದೇಹದ ಅಂಗಾಂಗಗಳ ಶಕ್ತಿಯುತವಾಗುವ ಜೊತೆಗೆ ಮಾನಸಿಕ ಏಕಾಗ್ರತೆ ಸಾಧ್ಯ. ನಾವು ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರೆಯದಿದ್ದರೂ ನಮ್ಮ ಪ್ರಾಚೀನ ಪದ್ಧತಿಯಂತೆ ಜೀವನ ನಡೆಸುವುದು ಅವಶ್ಯಕ ಎಂದರು. ಈ ವೇಳೆ ನಗರಸಭಾ ಮಾಜಿ ಸದಸ್ಯೆ ಅಶ್ವಿನಿ ಕೃಷ್ಣ, ಬಿಜೆಪಿ ಪಕ್ಷದ ನಗರಾಧ್ಯಕ್ಷ ಅಜೀತ್ ಸಾವಂತ್, ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ, ಪ್ರದಾನ ಕಾರ್ಯದರ್ಶಿಗಳಾದ ಮಂಜನಾಯ್ಕ, ತುಳಜಪ್ಪ ಭೂತೆ, ಸಂತೋಷ್ ಗುಡಿಮನಿ ಇತರರಿದ್ದರು.

ಅಧ್ಯಕ್ಷರಾಗಿ ಅಹಮದ್ ಅಲಿ ಆಯ್ಕೆ

ಜಗಳೂರು: ಕೆಚ್ಚೇನಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆಳಗೋಟೆ ಅಹಮದ್ ಅಲಿ ಸೋಮವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಅಧ್ಯಕ್ಷರಾಗಿದ್ದ ಬಸವರಾಜ್ ಗೌಡ ರಾಜೀನಾಮೆ ನೀಡಿದ್ದರಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಜೂ.22ರಂದು ಚುನಾವಣೆ ನಿಗದಿಯಾಗಿತ್ತು. ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ 11 ಮಂದಿ ಸದಸ್ಯರಿದ್ದಾರೆ. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಸಂಘದ ಉಪಾಧ್ಯಕ್ಷ ಜಿ.ಆರ್‌ಹರೀಶ್, ಜಿ.ಎಸ್ ಬಸವರಾಜ ಇದ್ದರು.

ಯೋಗ ಒಂದು ದಿನದ ಆಚರಣೆಯಲ್ಲ

ನಗರದ ತುಳಸಿ ರಾಮರಾಜು ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯ ಆವರಣದಲ್ಲಿ 12ನೇ ಅಂತರಾಷ್ಟ್ರೀಯ ಯೋಗ ದಿನ ಅರ್ಥಪೂರ್ಣವಾಗಿ ಆಚರಿಸಲಾಯಿತು.

ದಾವಣಗೆರೆ: ಆರೋಗ್ಯಕರ ವೃದ್ಧಾಪ್ಯಕ್ಕೆ ಯೋಗ ಎಂಬ ಈ ವರ್ಷದ ಧ್ಯೇಯವಾಕ್ಯದೊಂದಿಗೆ ನಗರದ ತುಳಸಿ ರಾಮರಾಜು ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯ ಆವರಣದಲ್ಲಿ 12ನೇ ಅಂತರಾಷ್ಟ್ರೀಯ ಯೋಗ ದಿನ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಉದ್ಘಾಟಕರಾಗಿದ್ದ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ತಜ್ಞ ವೈದ್ಯ ಡಾ. ಗಂಗಾಧರ ವರ್ಮ ಬಿ.ಆರ್‌ಮಾತನಾಡಿ, ಯೋಗವು ಕೇವಲ ಒಂದು ದಿನದ ಆಚರಣೆಯಲ್ಲ, ಜೀವನಪರ್ಯಂತ ಆರೋಗ್ಯ ಕಾಪಾಡುವ ಸಾಧನೆಯಾಗಿದೆ ಎಂದು ಹೇಳಿದರು.

ಮಹರ್ಷಿ ಪತಂಜಲಿಯವರ ಅಷ್ಟಾಂಗ ಯೋಗದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಹಾಗೂ ಸಮಾಧಿಗಳ ಮಹತ್ವವನ್ನು ವಿವರಿಸಿದ ಅವರು, ಇಂದಿನ ಜೀವನಶೈಲಿ ಸಂಬಂಧಿತ ರೋಗಗಳು ಮತ್ತು ಮಾನಸಿಕ ಒತ್ತಡದಿಂದ ಮುಕ್ತರಾಗಲು ಯೋಗವು ಅತ್ಯುತ್ತಮ ಮಾರ್ಗವಾಗಿದೆ ಎಂದು ತಿಳಿಸಿದರು.

ಆಸ್ಪತ್ರೆಯ ಮೆಡಿಕಲ್ ಡೈರೆಕ್ಟರ್‌ಡಾ. ವಿಂಧ್ಯಾ ಮಾತನಾಡಿ, ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಮೂಲಕ ಪಾರ್ಶ್ವವಾಯು, ಸಯಾಟಿಕ, ಮಂಡಿನೋವು, ಆರ್ಥರೈಟಿಸ್, ಮಧುಮೇಹ, ರಕ್ತದೊತ್ತಡ, ಸ್ಥೂಲಕಾಯ, ಬೆನ್ನು ನೋವು, ಅಜೀರ್ಣ, ನಿದ್ರಾಹೀನತೆ ಸೇರಿದಂತೆ ಅನೇಕ ಜೀವನಶೈಲಿ ಸಂಬಂಧಿತ ಕಾಯಿಲೆ ಪರಿಣಾಮಕಾರಿಯಾಗಿ ನಿಯಂತ್ರಿಸಿ ಉತ್ತಮ ಆರೋಗ್ಯ ಹೊಂದಲು ಸಾಧ್ಯವಿದೆ ಎಂದು ವಿವರಿಸಿದರು.

ಪುತ್ತೂರು ಶಲ್ಯ ವೈದ್ಯರು ಮಾತನಾಡಿ, ಯೋಗವು ಕೇವಲ ವ್ಯಾಯಾಮವಲ್ಲ, ದೇಹ-ಮನಸ್ಸಿನ ಸಮತೋಲನವನ್ನು ಸಾಧಿಸುವ ಜೀವನ ಪದ್ಧತಿ ಎಂದು ತಿಳಿಸಿದರು.

ಅಧ್ಯಕ್ಷತೆಯನ್ನು ತುಳಸಿ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ಸಿಬ್ಬಂದಿ ನಾಗಣ್ಣ, ಸಾಧಕರು, ಯೋಗಾಸಕ್ತರು ಇದ್ದರು.

ಆರೋಗ್ಯದ ಕಡೆ ಗಮನ ಹರಿಸಿ

ನಾಯಕನಹಟ್ಟಿ ಸಮೀಪದ ಹಾಯ್ಕಲ್ ಗ್ರಾಮದಲ್ಲಿ ಶಾರದ ಜ್ಞಾನ ವಿಕಾಸ ಕೇಂದ್ರ ಉಚಿತ ಆರೋಗ್ಯ ಶಿಬಿರದ ಕಾರ್ಯಕ್ರಮವನ್ನು ಒಕ್ಕೂಟದ ಅಧ್ಯಕ್ಷೆ ಗೌರಮ್ಮ ಉದ್ಘಾಟಿಸಿದರು.

ನಾಯಕನಹಟ್ಟಿ: ಕಣ್ಣು ಮನುಷ್ಯನ ದೇಹದ ಪ್ರಮುಖ ಅಂಗ ಇದನ್ನು ಜೋಪಾನವಾಗಿ ಕಾಪಾಡಿಕೊಳ್ಳಬೇಕು ಎಂದು ಒಕ್ಕೂಟದ ಅಧ್ಯಕ್ಷೆ ಗೌರಮ್ಮ ಹೇಳಿದರು.

ನಾಯಕನಹಟ್ಟಿ ಸಮೀಪದ ಹಾಯ್ಕಲ್ ಗ್ರಾಮದಲ್ಲಿ ಶಾರದ ಜ್ಞಾನ ವಿಕಾಸ ಕೇಂದ್ರ ಉಚಿತ ಆರೋಗ್ಯ ಶಿಬಿರದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕಲುಷಿತ ಆಹಾರ, ನೀರು, ಗಾಳಿ ಹಾಗೂ ರಾಸಾಯನಿಕಯುಕ್ತ ಆಹಾರ ಸೇವನೆಯಿಂದ ರೋಗಗಳು ಹೆಚ್ಚಾಗುತ್ತವೆ. ಎಲ್ಲರೂ ಆರೋಗ್ಯ ಕಡೆ ಗಮನ ಹರಿಸಬೇಕೆಂದು ಸಲಹೆ ನೀಡಿದರು. ಬಡ ಜನರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರಗಳು ಹಮ್ಮಿಕೊಂಡಿರುವುದು ಅನುಕೂಲವಾಗಿದೆ ಎಂದು ಹೇಳಿದರು.

ಸರಕಾರ ಮಾಡದ ಕೆಲಸಗಳನ್ನು ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆ ಸಂಘ ಮಾಡುತ್ತಿದ್ದು ಇದು ಎಲ್ಲಾರಿಗೂ ತುಂಬಾ ಸಹಾಯವಾಗಿದೆ. ಆರೋಗ್ಯವೆ ಭಾಗ್ಯ ಎಂಬಂತೆ ಎಲ್ಲಾರೂ ತಪಾಸಣೆ ಮಾಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಜಿಲ್ಲಾ ನಿರ್ದೇಶಕರಾದ ಕಮಲಾಕ್ಷ, ಮತ್ತು ಬಸಾಪಟ್ಟಣ ಯೋಜನಾ ಗ್ರಾಮ ಪಂಚಾಯತಿ ಸದಸ್ಯರು ಮಂಜುನಾಥ್, ಹಿರಿಯ ಆರೋಗ್ಯ ಕಣ್ಣಿನ ವೈದ್ಯರು ದರ್ಶನ್ ಹಾಗೂ ಸಿಬ್ಬಂದಿಗಳು, ದೃಷ್ಟಿ ಕಣ್ಣಿನ ಆಸ್ಪತ್ರೆ ಚಿತ್ರದುರ್ಗ ಮತ್ತು ಸಿಬ್ಬಂದಿ ವರ್ಗ ಹಾಗೂ ಅಕ್ಷಯ ಗ್ಲೋಬಲ್ ಆಸ್ಪತ್ರೆ ಚಿತ್ರದುರ್ಗ ಡಾಕ್ಟರ್‌ರವೀಂದ್ರ ಮತ್ತು ಸಿಬ್ಬಂದಿ ವರ್ಗ ಮದಕರಿಪುರ ವಲಯದ ಮೇಲ್ವಿಚಾರಕರು ನಿಜಲಿಂಗಪ್ಪ, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಚಂದ್ರಮ್ಮ, ವಿಮಾ ಸಮನ್ವಧಿಕಾರಿ ರಾಜು ಕೆ.ಎಸ್ ಸಮನ್ವಯಧಿಕಾರಿ ಮಂಜುನಾಥ್, ಕಾರ್ಯಕ್ಷೇತ್ರದ ಸೇವಾ ಪ್ರತಿನಿಧಿ ರೂಪ ಕೇಂದ್ರದ ಸದಸ್ಯರು ಊರಿನ ಗ್ರಾಮಸ್ಥರು ಉಪಸ್ಥಿತರಿದ್ದರು.

ರೈಲ್ವೆ ಪರೀಕ್ಷೆ ಕನ್ನಡದಲ್ಲಿ ಬರೆಸದಿದ್ದರೆ ಮುತ್ತಿಗೆ

ದಾವಣಗೆರೆ: ಜೂ.25ರಂದು ನಡೆಯಲಿರುವ ರೈಲ್ವೆ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಲು ಅವಕಾಶ ನೀಡದಿದ್ದರೆ, ಆ ಪರೀಕ್ಷೆಯನ್ನೇ ತಡೆಯಲು ಕರ್ನಾಟಕ ರಕ್ಷಣಾ ವೇದಿಕೆ ಸಿದ್ಧವಾಗಿದೆ ಎಂದು ಜಿಲ್ಲಾ ಕರವೇ ಅಧ್ಯಕ್ಷ ಎಂ.ಎಸ್. ರಾಮೇಗೌಡ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೈರುತ್ಯ ರೈಲ್ವೆ ವ್ಯಾಪ್ತಿಯಲ್ಲಿ ಗೂಡ್ಸ್ ಟ್ರೇನ್ ಮ್ಯಾನೇಜರ್ ಹುದ್ದೆಗಳ ಪದೋನ್ನತಿಗಾಗಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಪರೀಕ್ಷೆ ನಡೆಸಲು ಮುಂದಾಗಿದ್ದಾಗ, ಕರವೇ ಪ್ರತಿಭಟನೆಗೆ ಮಣಿದ ರೈಲ್ವೆ ಖಾತೆಯ ರಾಜ್ಯ ಸಚಿವ ವಿ.ಸೋಮಣ್ಣ ಕೇಂದ್ರ ಸರಕಾರ ಪರೀಕ್ಷೆ ಮುಂದುಡಿದ್ದು, ಮುಂದೆ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ, ಈಗ ಅದೇ ಪರೀಕ್ಷೆಯು ಜೂ.25ಕ್ಕೆ ನಿಗದಿಯಾಗಿದೆ. ಇದನ್ನು ಸಹ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿಯೇ ನಡೆಸಲು ರೈಲ್ವೆ ಇಲಾಖೆ ಮುಂದಾಗಿದೆ. ಹಾಗಾದರೆ, ಕೇಂದ್ರ ಸಚಿವರ ಮಾತಿಗೆ ಕಿಮ್ಮತ್ತು ಇಲ್ಲವೇ? ಎಂದು ಪ್ರಶ್ನಿಸಿದರು. ನೈರುತ್ಯ ರೈಲ್ವೆ ವ್ಯಾಪ್ತಿಯ ಹುಬ್ಬಳ್ಳಿ, ಬೆಂಗಳೂರು ಹಾಗೂ ಮೈಸೂರು ವಿಭಾಗಗಳಲ್ಲಿ 430 ಹುದ್ದೆಗೆ ಪರೀಕ್ಷೆ ನಡೆಯುತ್ತಿದೆ. ನಮ್ಮ ನಾಡಿನ ಕನ್ನಡಿಗ ನೌಕರರಿಗೆ ಕನ್ನಡದಲ್ಲಿ ಪರೀಕ್ಷೆ ಬರೆಸಲು ಉದ್ದೇಶ ಪೂರ್ವಕವಾಗಿಯೇ ನಿರಾಕರಿಸಲಾಗಿದೆ. ಈ ಪರೀಕ್ಷೆ ಕನ್ನಡ ಭಾಷೆಯಲ್ಲಿಯೂ ಬರೆಯಲು ರೈಲ್ವೆ ಇಲಾಖೆ ಅವಕಾಶ ನೀಡದಿದ್ದರೆ, ರೈಲ್ವೆ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸಿ, ಈ ಪರೀಕ್ಷೆಯನ್ನು ನಿಲ್ಲಿಸುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಕರವೇ ಪದಾಕಾರಿಗಳಾದ ಬಸಮ್ಮ, ಮಂಜುಳಮ್ಮ ಇದ್ದರು.

ಬಸವ ಭವನ ನಿರ್ಮಾಣಕ್ಕೆ ಭೂಮಿ ಪೂಜೆ

ವಿಠ್ಠಲ ನಗರದಲ್ಲಿ ವೀರಶೈವ ಸಮಾಜ ಸೇವಾ ಸಂಘದ ವತಿಯಿಂದ ಬಸವ ಭವನ ನಿರ್ಮಾಣ ಕಾಮಗಾರಿಗೆ ಶಾಸಕ ಟಿ. ರಘುಮೂರ್ತಿ ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಚಳ್ಳಕೆರೆ: ನಗರದ ವಿಠ್ಠಲ ನಗರದಲ್ಲಿ ವೀರಶೈವ ಸಮಾಜ ಸೇವಾ ಸಂಘದ ವತಿಯಿಂದ ಬಸವ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಸ್ಥಳೀಯ ಶಾಸಕ ಟಿ. ರಘುಮೂರ್ತಿ ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ವಿಶೇಷ ನಿಧಿಯಡಿ ಸುಮಾರು 1 ಕೋಟಿ ವೆಚ್ಚದಲ್ಲಿ ವಿಶ್ವಗುರು ಬಸವಣ್ಣನವರ ಮಂಟಪ ಹಾಗೂ ಬಸವ ಭವನ ನಿರ್ಮಾಣಗೊಳ್ಳಲಿದ್ದು, ಸಮಾಜದ ಜನರಿಗೆ ಇದು ಶಾಶ್ವತ ಸೌಲಭ್ಯವಾಗಿ ಪರಿಣಮಿಸಲಿದೆ ಎಂದು ತಿಳಿಸಿದರು. ಬಸವಣ್ಣನವರ ತತ್ವ, ಆದರ್ಶಗಳು ಹಾಗೂ ಸಾಮಾಜಿಕ ಸಂದೇಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ ಈ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು. ಸಮಾಜದ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಗೆ ಈ ಭವನ ಉಪಯುಕ್ತವಾಗಲಿದೆ ಎಂದರು. ವೀರಶೈವ ಸಮಾಜ ಸೇವಾ ಸಂಘದ ಅಧ್ಯಕ್ಷ ಕೆ.ಸಿ. ನಾಗರಾಜ್ ಮಾತನಾಡಿ, ಸಮಾಜದ ಬಹುದಿನಗಳ ಕನಸಾಗಿದ್ದ ಬಸವ ಭವನ ನಿರ್ಮಾಣಕ್ಕೆ ಇದೀಗ ಚಾಲನೆ ದೊರೆತಿರುವುದು ಸಂತಸದ ವಿಷಯವಾಗಿದೆ. ಕಾಮಗಾರಿಯನ್ನು ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ಸಂಘ ಬದ್ಧವಾಗಿದ್ದು, ಅಗತ್ಯ ಸಹಕಾರ ಹಾಗೂ ಸಮಾಜದ ವತಿಯಿಂದಲೂ ಅನುದಾನ ನೀಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರಾದ ಪ್ರಭುದೇವ್, ಡಾ. ಜಯಕುಮಾರ್, ಪ್ರಕಾಶ್, ಮಾತೃಶ್ರೀ ಮಂಜುನಾಥ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಪೌರಾಯುಕ್ತೆ ನಾಗವೇಣಿ, ನಿರ್ಮಿತಿ ಕೇಂದ್ರದ ಇಂಜಿನಿಯರ್, ವಿವಿಧ ಇಲಾಖೆಗಳ ಅಧಿಕಾರಿಗಳು, ಮಹಿಳಾ ಸಂಘದ ಸದಸ್ಯರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜನರ ಕಲ್ಯಾಣಕ್ಕಾಗಿ ಶ್ರಮಿಸುವೆ: ಸುಹಾಸ್

ಖಂಡೇನಹಳ್ಳಿ ಗ್ರಾಮದ ಶ್ರೀಶನಿಮಹಾತ್ಮ ದೇವಸ್ಥಾನಕ್ಕೆ ಭೇಟಿ ನೀಡಿ, ಚುನಾವಣಾ ಪ್ರಚಾರದ ಅಂಗವಾಗಿ ಕುಟುಂಬದವರೊಂದಿಗೆ ದೇವರಿಗೆ ವಿಶೇಷ ಪೂಜೆಯನ್ನು ಸುಹಾಸ್ ಸುಧಾಕರ್‌ಸಲ್ಲಿಸಿದರು.

ಹಿರಿಯೂರು: ಈ ಮಣ್ಣಿನ ಜನರ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದವೇ ನಮ್ಮ ಕುಟುಂಬದ ಅತಿದೊಡ್ಡ ಶಕ್ತಿ. ನಮ್ಮ ತಂದೆಯವರು ತೋರಿದ ಜನಸೇವೆಯ ಹಾದಿಯಲ್ಲಿ ನಡೆದು, ಪ್ರತಿಯೊಂದು ಕುಟುಂಬದ ನೋವು-ನಲಿವುಗಳಲ್ಲಿ ಜೊತೆಯಾಗಬೇಕೆಂಬ ದೃಢ ಸಂಕಲ್ಪದೊಂದಿಗೆ ನಿಮ್ಮ ಮುಂದೆ ಬಂದಿದ್ದೇವೆ. ನನ್ನನ್ನು ಹರಸಿ, ಆಶೀರ್ವದಿಸಬೇಕು ಎಂದು ಸುಹಾಸ್ ಸುಧಾಕರ್‌ಹೇಳಿದರು. ತಾಲೂಕಿನ ಖಂಡೇನಹಳ್ಳಿ ಗ್ರಾಮದ ಶ್ರೀಶನಿಮಹಾತ್ಮ ದೇವಸ್ಥಾನಕ್ಕೆ ಭೇಟಿ ನೀಡಿ, ಚುನಾವಣಾ ಪ್ರಚಾರದ ಅಂಗವಾಗಿ ಕುಟುಂಬದವರೊಂದಿಗೆ ದೇವರಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ, ದೇವರ ಆಶೀರ್ವಾದದೊಂದಿಗೆ ಪ್ರಚಾರಕ್ಕೆ ಚಾಲನೆ ನೀಡಿ, ಅವರು ಮಾತನಾಡಿ, ನಿಮ್ಮ ಮನೆಯ ಮಗನಾಗಿ, ಸದಾ ನಿಮ್ಮ ಕಷ್ಟ-ಸುಖಗಳಲ್ಲಿ ಭಾಗಿಯಾಗುತ್ತೇನೆ. ನೀವು ನಮ್ಮ ಕುಟುಂಬದ ಮೇಲೆ ಇಟ್ಟಿರುವ ವಿಶ್ವಾಸವನ್ನು ಉಳಿಸಿಕೊಂಡು, ಗ್ರಾಮದ ಅಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿಸುವುದು ನನ್ನ ಕರ್ತವ್ಯವಾಗಿದೆ ಎಂದರಲ್ಲದೆ,

ಗ್ರಾಮದ ಹಿರಿಯರು, ತಾಯಂದಿರು, ಯುವಕರು ಹಾಗೂ ಸಾರ್ವಜನಿಕರು ತೋರಿದ ಪ್ರೀತಿ ಮತ್ತು ಆತ್ಮೀಯತೆ ನಮ್ಮ ಮನಸ್ಸನ್ನು ತುಂಬಿತು. ನಿಮ್ಮ ಆಶೀರ್ವಾದ, ಮಾರ್ಗದರ್ಶನ ಮತ್ತು ಬೆಂಬಲ ಸದಾ ನಮ್ಮ ಕುಟುಂಬದೊಂದಿಗೆ ಇರಲಿ ನಿಮ್ಮ ಆಶೀರ್ವಾದವೇ ನಮ್ಮ ಗೆಲುವು ಎಂಬುದಾಗಿ ಹೇಳಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು, ಪಕ್ಷದ ಕಾರ್ಯಕರ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಲಿಂಗಮೂರ್ತಿ ಜನ್ಮದಿನ ಸಂಭ್ರಮ

ಹೊಸದುರ್ಗ: ರಾಜ್ಯ ಖನಿಜ ನಿಗಮದ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಎಸ್.ಲಿಂಗಮೂರ್ತಿ ಅವರ ಜನ್ಮದಿನವನ್ನು ಸೋಮವಾರ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಮುಖಂಡರು ಆಚರಿಸಿ, ಶುಭಕೋರಿದರು. ಈ ವೇಳೆ ಎಸ್.ಲಿಂಗಮೂರ್ತಿ ಮಾತನಾಡಿ, ಜನರ ಪ್ರೀತಿ ಮತ್ತು ವಿಶ್ವಾಸವೇ ತಮ್ಮ ಸಾರ್ವಜನಿಕ ಜೀವನದ ದೊಡ್ಡ ಶಕ್ತಿಯಾಗಿದೆ. ತಾಲೂಕಿನ ಜನರೊಂದಿಗೆ ನಿಕಟ ಸಂಪರ್ಕ ಹೊಂದಿ, ಜನರ ಸಮಸ್ಯೆಗಳಿಗೆ ಸ್ಪಂದಿಸಿ, ತಾಲೂಕಿನ ಅಭಿವೃದ್ಧಿ ಕಾರ್ಯಕ್ಕೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಪಲ್ಸ್ ಪೋಲಿಯೋ ಅಭಿಯಾನ 28ರಿಂದ

ಚಿತ್ರದುರ್ಗ: ಜಿಲ್ಲೆಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಇದೇ ಜೂನ್ 28 ರಿಂದ ಜುಲೈ 01ರ ವರೆಗೆ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕಾಗಿ ಒಟ್ಟು 1,162 ತಂಡಗಳನ್ನು ರಚಿಸಿಕೊಳ್ಳಲಾಗಿದೆ. ಕಳೆದ ಬಾರಿ ನಡೆಸಿದ ಲಸಿಕಾ ಕೇಂದ್ರಗಳಲ್ಲಿಯೇ ಈ ಬಾರಿಯೂ ಸಹ ಎರಡು ಹನಿಗಳ ಪೋಲಿಯೋ ಲಸಿಕೆಯನ್ನು ಹಾಕಲಾಗುವುದು. ಈ ಮಹತ್ವಾಕಾಂಕ್ಷಿ ಕಾರ್ಯಕ್ರಮದ ಯಶಸ್ವಿ ಮೇಲ್ವಿಚಾರಣೆಗಾಗಿ 235 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಜಿಲ್ಲೆಯಲ್ಲಿ 0-5 ವರ್ಷದೊಳಗಿನ ಒಟ್ಟು 1,27,641 ಮಕ್ಕಳನ್ನು ಲಸಿಕೆ ಹಾಕಲು ಗುರುತಿಸಲಾಗಿದೆ. ಈ ಹಿಂದೆ ಮಕ್ಕಳಿಗೆ ಎಷ್ಟೇ ಬಾರಿ ಪೋಲಿಯೋ ಹನಿ ಹಾಕಿಸಿದ್ದರೂ ಸಹ, ಜೂನ್ 28 ರಿಂದ ಜುಲೈ 01 ರವರೆಗೆ ನಡೆಯುವ ಅಭಿಯಾನದಲ್ಲಿ ಪೋಷಕರು ಕಡ್ಡಾಯವಾಗಿ ಮತ್ತೊಮ್ಮೆ ಪೋಲಿಯೋ ಲಸಿಕೆ ಹಾಕಿಸಬೇಕು. ಪಲ್ಸ್ ಪೋಲಿಯೋ ಕಾರ್ಯಕ್ರಮವ ಯಶಸ್ವಿಗೊಳಿಸಲು ಸಾರ್ವಜನಿಕರು, ಸರ್ಕಾರೇತರ ಸಂಘ ಸಂಸ್ಥೆಗಳು, ಧಾರ್ಮಿಕ ಮುಖಂಡರುಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ಇತರ ಅಧಿಕಾರಿ ವರ್ಗದವರು, ಅದರಲ್ಲೂ ಮುಖ್ಯವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ಸಹಕಾರ ನೀಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಕಾಶೀ ತಿಳಿಸಿದ್ದಾರೆ.

3 ನೇ ಪೂರ್ವಭಾವಿ ಸಭೆ | ಯಶಾ ದಿನೇಶ್ ಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಹೊಣೆ

ಜಿಲ್ಲಾ ಮಹಿಳಾ ಕನ್ನಡ ಸಾಹಿತ್ಯ ಸಮ್ಮೇಳನ ಆ.8ರಿಂದ

ದಾವಣಗೆರೆ: ಆಗಸ್ಟ್ 8 ಮತ್ತು 9 ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಪ್ರಪ್ರಥಮ ಬಾರಿಗೆ ಆಯೋಜಿಸಲು ಉದ್ದೇಶಿಸಿರುವ ಪ್ರಥಮ ಜಿಲ್ಲಾ ಮಹಿಳಾ ಕನ್ನಡ ಸಾಹಿತ್ಯ ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕ್ರಮಗಳ ಹೊಣೆಯನ್ನು ಜಿಲ್ಲೆಯ ಸಾಂಸ್ಕೃತಿಕ ಸಂಘಟಕಿ ಹಾಗೂ ಸುಶ್ರಾವ್ಯ ಸಂಗೀತ ವಿದ್ಯಾಲಯದ ಸಂಸ್ಥಾಪಕಿ ಯಶಾ ದಿನೇಶ್ ಗೆ ವಹಿಸಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ತೊಗಲೇರಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ನಡೆದ ಸಮ್ಮೇಳನದ ಮೂರನೇ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಸಭೆಯಲ್ಲಿ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ಅಗತ್ಯವಿರುವ ವಿಷಯಗಳ ಬಗ್ಗೆ ವಿಸ್ತ್ರತವಾದ ಚರ್ಚೆ ನಡೆಸಲಾಯಿತು ಎಂದು ಪೂರ್ವಸಿದ್ಧತೆಗಳ ಬಗ್ಗೆ ಸಮ್ಮೇಳನದ ಸಂಚಾಲಕಿ ವೀಣಾ ಕೃಷ್ಣಮೂರ್ತಿ ಮಾಹಿತಿ ನೀಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯ ಮರಿಯಾಚಾರ್ ಮಾತನಾಡಿ ಸಮ್ಮೇಳನಕ್ಕೆ ಅಗತ್ಯ ಸಹಕಾರ ನೀಡುವುದಾಗಿ ವಾಗ್ದಾನವಿತ್ತರು.

ಸಭೆಯಲ್ಲಿ ಹಿರಿಯರಾದ ಜಯಮ್ಮ ನೀಲಗುಂದ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ ಮಹೇಶ್, ದಾವಣಗೆರೆ ತಾಲೂಕು ಕಸಾಪ ಅಧ್ಯಕ್ಷೆ ಸುಮತಿ ಜಯಪ್ಪ, ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ಹೇಮಾ ಗಣೇಶ್ ಶೇಟ್, ಕದಳಿ ವೇದಿಕೆಯ ಅಧ್ಯಕ್ಷೆ ನಿರ್ಮಲಾ ಶಿವಕುಮಾರ್, ಸಾಂಸ್ಕೃತಿಕ ಸಂಘಟಕಿ ಹೇಮಾ ಶಾಂತಪ್ಪ ಪೂಜಾರಿ, ಯಶಾ ದಿನೇಶ್, ಕೋಮಲ ವಸಂತಕುಮಾರ್, ಕನ್ನಡಪರ ಹೋರಾಟಗಾರ್ತಿ ಸುವರ್ಣಮ್ಮ ಶಿವಮೂರ್ತಿ, ಶಕುಂತಲಮ್ಮ, ಮಲ್ಲಮ್ಮ ನಾಗರಾಜ್, ಸಾಹಿತಿ ಓಂಕಾರಮ್ಮ ರುದ್ರಮುನಿಸ್ವಾಮಿ, ಅಖಿಲ ಭಾರತ ವೀರಶೈವ ಮಹಾಸಭಾದ ಕುಸುಮ ಲೋಕೇಶ್, ಪತ್ರಕರ್ತೆ ರುದ್ರಮ್ಮ, ಪತ್ರಕರ್ತೆ ದೇವಿಕಾ ಸುನೀಲ್, ಪತ್ರಕರ್ತೆ ಸುನಿತಾ ಪ್ರಕಾಶ್, ಸಾಹಿತಿ ಡಾ.ರೂಪಶ್ರೀ ಶಶಿಕಾಂತ್, ಸಾಹಿತಿ ಜಿ.ಎಸ್. ಗಾಯತೆ, ಸುನಂದಾ ವರ್ಣೇಕರ್ ಇದ್ದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ನಡೆದ ಸಮ್ಮೇಳನದ ಮೂರನೇ ಪೂರ್ವಭಾವಿ ಸಭೆ ನಡೆಯಿತು.

ಹಣಕಾಸು ಸಂಪನ್ಮೂಲ ಸಂಗ್ರಹಣೆಯತ್ತ ಗಮನಹರಿಸಿ

ಜಿಲ್ಲಾ ಕಸಾಪ ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ಮಾತನಾಡಿ, ಸಮ್ಮೇಳನ ಯಶಸ್ವಿಯಾಗಿ ನಡೆಯಲು ಹಣಕಾಸು ಸಂಗ್ರಹಣೆ ಅತೀ ಮುಖ್ಯ. ಹಾಗಾಗಿ, ಎಲ್ಲರೂ ಹಣಕಾಸು ಸಂಪನ್ಮೂಲ ಸಂಗ್ರಹಣೆಯತ್ತ ಗಮನ ಕ್ರೋಡೀಕರಿಸಬೇಕು ಎಂದು ಕರೆ ನೀಡಿದರು.

ಸಮಾಚಾರ ಸಣ್ಣದಲ್ಲ

ಆಹಾರ ಇಲಾಖೆ ತುರ್ತು ಸಭೆ: ಪ್ರಗತಿ ಪರಿಶೀಲನೆ

ಶಿವಮೊಗ್ಗ: ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಅರ್ಹ ಬಡ ಕುಟುಂಬಗಳ ಹಲವಾರು ಬಿಪಿಎಲ್ ಪಡಿತರ ಚೀಟಿಗಳು ಏಕಾಏಕಿ ರದ್ದಾಗುತ್ತಿರುವುದರಿಂದ ಜನಸಾಮಾನ್ಯರ ಜೀವನ ನಿರ್ವಹಣೆ ಅತ್ಯಂತ ಕಷ್ಟಕರ ಎಂದು ಶಾಸಕರಾದ ಎಸ್.ಎನ್. ಚನ್ನಬಸಣ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರೇಷನ್ ಕಾರ್ಡ್ ರದ್ದತಿಯಿಂದ ತೊಂದರೆಗೊಳಗಾದ ನೂರಾರು ನಾಗರೀಕರು ಶಾಸಕರ ಕಚೇರಿಗೆ ಭೇಟಿ ನೀಡಿ ಅಹವಾಲು ಸಲ್ಲಿಸಿದ ಹಿನ್ನೆಲೆಯಲ್ಲಿ, ಶಾಸಕರು ತಮ್ಮ ಅಧಿಕೃತ ಕಾರ್ಯಾಲಯದಲ್ಲಿ ಆಹಾರ ಇಲಾಖೆಯ ಅಧಿಕಾರಿಗಳ ತುರ್ತು ಸಭೆ ಕರೆದು ಪ್ರಗತಿ ಪರಿಶೀಲನೆ ನಡೆಸಿದರು. ಸಭೆಯಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕರು, ಯಾವುದೇ ತಪ್ಪುಗಳಿಲ್ಲದಿದ್ದರೂ ಅರ್ಹ ಬಡವರ ಪಡಿತರ ಚೀಟಿಗಳನ್ನು ರದ್ದುಪಡಿಸಿರುವುದು ಅತ್ಯಂತ ಬೇಜವಾಬ್ದಾರಿತನದ ಪರಮಾವಧಿಯಾಗಿದೆ. ನಿಯಮಾವಳಿಗಳ ಹೆಸರಿನಲ್ಲಿ ನೈಜ ಫಲಾನುಭವಿಗಳಿಗೆ ಅನ್ಯಾಯವಾಗದಂತೆ ಇಲಾಖೆಯು ಮುನ್ನೆಚ್ಚರಿಕೆ ವಹಿಸಬೇಕು ಎಂದು ಕಟ್ಟುನಿಟ್ಟಾಗಿ ತಿಳಿಸಿದರು. ದೂರುಗಳ ಕುರಿತು ತಳಮಟ್ಟದಲ್ಲಿ ಸಮಗ್ರ ಮರುಪರಿಶೀಲನೆ ನಡೆಸಿ, ಅರ್ಹ ಕುಟುಂಬಗಳಿಗೆ ತಕ್ಷಣವೇ ಪಡಿತರ ಚೀಟಿಗಳನ್ನು ಮರುಸ್ಥಾಪಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಶಾಸಕರು ನಿರ್ದೇಶನ ನೀಡಿದ್ದಾರೆ.

ಕುಮದ್ವತಿ ಪ್ರೌಢಶಾಲೆ: ವಿಶ್ವ ಯೋಗ ದಿನಾಚರಣೆ

ಶಿಕಾರಿಪುರ: ನಿರಂತರ ಯೋಗಾಭ್ಯಾಸದಿಂದ ಆರೋಗ್ಯಪೂರ್ಣ ಜೀವನ ಸಾಧ್ಯ ಎಂದು ಪಟ್ಟಣದ ಭವಾನಿ ರಾವ್ ಕೇರಿಯ ಕುಮದ್ವತಿ ಪ್ರೌಢಶಾಲೆ ಮುಖ್ಯಶಿಕ್ಷಕ ವಿಶ್ವನಾಥ ಪಿ ತಿಳಿಸಿದರು. ಶಾಲೆಯಲ್ಲಿ ನಡೆದ 12 ನೇ ವಿಶ್ವ ಯೋಗ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪ್ರತಿವರ್ಷ ಜೂನ್ 21 ರಂದು ಯೋಗ ದಿನವನ್ನಾಗಿ ಜಗತ್ತಿನಾದ್ಯಂತ ಅತ್ಯಂತ ಉತ್ಸಾಹ,ಸಂಭ್ರಮ ದಿಂದ ಆಚರಿಸಲಾಗುತ್ತದೆ. ಮನುಷ್ಯನ ದೇಹಕ್ಕೆ ಯೋಗವು ಶಕ್ತಿಯನ್ನು ನೀಡುವುದಲ್ಲದೆ ಮನಸ್ಸನ್ನು ಸಮತೋಲನದಲ್ಲಿರಿಸಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು. ಶಾಲಾ ಪ್ರಭಾರಿ ಮುಖ್ಯ ಶಿಕ್ಷಕ ಪ್ರಶಾಂತ ಕುಬಸದ ಮಾತನಾಡಿ, ಯೋಗ ಎಂದರೆ ಕೇವಲ ದೈಹಿಕ ವ್ಯಾಯಾಮ ಎಂದುಕೊಳ್ಳುವುದು ತಪ್ಪು.ಅದು ಆರೋಗ್ಯಯುತ ಬದುಕಿನ ಸಿದ್ದಸೂತ್ರ ಎಂದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಸಾಮೂಹಿಕ ಯೋಗ ಪ್ರದರ್ಶನ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಕನಿಷ್ಠವೇತನ ದರಗಳ ತಕ್ಷಣ ಅನ್ವಯವಾಗಿಸಿ

ಶಿವಮೊಗ್ಗ: ಅರಣ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ಮತ್ತು ಹೊರಗುತ್ತಿಗೆ ನೌಕರರಿಗೆ ಕನಿಷ್ಠವೇತನ ನೀಡಬೇಕು ಎಂದು ರಾಜ್ಯ ಅರಣ್ಯ ಇಲಾಖೆ ದಿನಗೂಲಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ನೌಕರರ ಸಂಘದ ರಾಜ್ಯಾಧ್ಯಕ್ಷ ಚಂದ್ರಪ್ಪ ಹೆಚ್. ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ವಿವಿಧ ಅನುಸೂಚಿತ ಏಕರೂಪದ ಕರಡು ಅಧಿಸೂಚನೆಯಲ್ಲಿ ಕನಿಷ್ಠವೇತನ ದರಗಳನ್ನು ಪರಿಷ್ಕರಿಸಿದೆ. ಎಲ್ಲಾ ವರ್ಗದ ಕಾರ್ಮಿಕರಿಗೂ ಕನಿಷ್ಠವೇತನ ದೊರೆಯಬೇಕು ಎಂದು ಉಚ್ಚ ನ್ಯಾಯಾಲಯ ಕೂಡ ತೀರ್ಪು ನೀಡಿದೆ. ಈ ತೀರ್ಪಿನ ಅನ್ವಯ ದಿನಗೂಲಿ ಹಾಗೂ ಹೊರಗುತ್ತಿಗೆ ನೌಕರರಿಗೆ ಕನಿಷ್ಠವೇತನ ನೀಡಬೇಕು ಎಂದು ಆಗ್ರಹಿಸಿದರು. ಅರಣ್ಯ ಇಲಾಖೆಯ ಪ್ರಾದೇಶಿಕ, ಸಾಮಾಜಿಕ ಹಾಗೂ ವನ್ಯಜೀವಿ ವಿಭಾಗಗಳಲ್ಲಿ ರಾಜ್ಯಾದ್ಯಂತ ಸುಮಾರು 8000 ಸಿಬ್ಬಂದಿ ಇದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 400 ಹೊರಗುತ್ತಿಗೆ ನೌಕರರಿದ್ದಾರೆ. ಕನಿಷ್ಠವೇತನ ದರಗಳನ್ನ ತಕ್ಷಣದಿಂದಲೇ ಅನ್ವಯವಾಗುವಂತೆ ನೀಡಬೇಕು ಎಂದು ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ವೆಂಕಟೇಶ್, ವಿಜಯಮ್ಮ, ಜ್ಞಾನಮೂರ್ತಿ, ಸಂದೀಪ್, ಬಸವರಾಜ್, ರಮೇಶ್ ಮತ್ತಿತರರಿದ್ದರು.

ರೈಲ್ವೆ ಪರೀಕ್ಷಾ ಕೇಂದ್ರಕ್ಕೆ ಕರವೇ ಮುತ್ತಿಗೆ 25ಕ್ಕೆ

ಶಿವಮೊಗ್ಗ: ರೈಲ್ವೆ ಇಲಾಖೆಯ ದ್ರೋಹವನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆಯು ಜೂ. 25ರಂದು ಹುಬ್ಬಳ್ಳಿಯಲ್ಲಿ ನಡೆಯುವ ರೈಲ್ವೆ ಇಲಾಖೆಯ ಮುಂಬಡ್ತಿ ಪರೀಕ್ಷಾ ಕೇಂದ್ರಕ್ಕೆ ಮುತ್ತಿಗೆಹಾಕಿ ಪರೀಕ್ಷೆಗೆ ತಡೆ ಒಡ್ಡಲಾಗುವುದು ಎಂದು ಕರವೇ ಜಿಲ್ಲಾಧ್ಯಕ್ಷ ಮಂಜು ಹೇಳಿದರು. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಬೆಂಗಳೂರು, ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ಮುಂಬಡ್ತಿ ಪರೀಕ್ಷೆಗಳನ್ನು ನಡೆಸಲು ತೀರ್ಮಾನಿಸಿದೆ. ಆದರೆ ಈ ಪರೀಕ್ಷೆಗಳು ಹಿಂದಿ ಮತ್ತು ಇಂಗ್ಲಿಷಿನಲ್ಲಿ ನಡೆಯುತ್ತಿವೆ ಎಂದರು.

{ಕೆ.ಎಸ್.ಈಶ್ವರಪ್ಪ } ಮಾಜಿ ಡಿಸಿಎಂ

ಯಾವುದೇ ಸಂಘದ ನೋಂದಣಿ ಮಾಡಿಸುವುದು-ಬಿಡುವುದು ಆಯಾ ಸಂಸ್ಥೆಗೆ ಸೇರಿದ್ದಾಗಿದೆ. ಒಂದು ಸ್ವಯಂಪ್ರೇರಿತ ವ್ಯಕ್ತಿಗಳ ಸಮೂಹ ಸಂವಿಧಾನದಡಿ ಸಂಘ ರಚಿಸುವ ಮೂಲಭೂತ ಹಕ್ಕನ್ನು ಹೊಂದಿರುತ್ತದೆ. ನೋಂದಣಿ ಮಾಡಿಸಲೇಬೇಕೆಂಬ ನಿಯಮವೂ ಇಲ್ಲ. ಸರಕಾರದ ಅನುದಾನ ಪಡೆಯಲು ಬಯಸಿದಾಗ ಮಾತ್ರ ನೋಂದಣಿ ಬೇಕಾಗುತ್ತದೆ. ಇದು ಪ್ರಿಯಾಂಕ್ ಖರ್ಗೆಯವರಿಗೆ ಗೊತ್ತಿರಬೇಕು.

ಖಾಸಗಿ ಬಸ್ ನಿಲ್ದಾಣಕ್ಕೆ ಶಾಸಕ ಚನ್ನಬಸಣ್ಣ ಭೇಟಿ, ಪರಿಶೀಲನೆ | ಅಧಿಕಾರಿಗಳಿಗೆ ಕಠಿಣ ಎಚ್ಚರಿಕೆ

ಪಬ್ಲಿಕ್ ಶೌಚಾಲಯ ತಕ್ಷಣ ದುರಸ್ತಿ ಆಗಲಿ

ಶಿವಮೊಗ್ಗ: ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಾಣವಾಗುವ ಮೂಲಸೌಕರ್ಯಗಳಿಲ್ಲದೇ ಜನಸಾಮಾನ್ಯರಿಗೇ ತೊಂದರೆ ನೀಡುವುದನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ. ಇಂತಹ ಬೇಜವಾಬ್ದಾರಿತನಕ್ಕೆ ತಕ್ಷಣವೇ ಬ್ರೇಕ್ ಬೀಳಬೇಕು ಎಂದು ಶಿವಮೊಗ್ಗ ನಗರ ಕ್ಷೇತ್ರದ ಶಾಸಕ ಎಸ್.ಎನ್. ಚನ್ನಬಸಪ್ಪ ಅಧಿಕಾರಿಗಳಿಗೆ ಕಠಿಣ ಎಚ್ಚರಿಕೆ ನೀಡಿದ್ದಾರೆ.

ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಮೂಲಸೌಕರ್ಯಗಳ ಕೊರತೆ, ಸ್ವಚ್ಛತೆಯ ವೈಫಲ್ಯ ಹಾಗೂ ಸಾರ್ವಜನಿಕರು ಎದುರಿಸುತ್ತಿರುವ ತೀವ್ರ ತೊಂದರೆಗಳ ಕುರಿತು ದೂರುಗಳು ಬಂದ ಬಳಿಕ ಶಾಸಕರು ಮಹಾನಗರ ಪಾಲಿಕೆಯ ಉನ್ನತಾಧಿಕಾರಿಗಳು ಹಾಗೂ ರಕ್ಷಣಾ ಇಲಾಖೆಯ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪ್ರಯಾಣಿಕರು ಹಾಗೂ ಸ್ಥಳೀಯರರನ್ನು ನೇರವಾಗಿ ಭೇಟಿಯಾಗಿ ಅಹವಾಲು ಆಲಿಸಿದ ಶಾಸಕರು, ದೀರ್ಘಕಾಲದಿಂದ ನನೆಗುದಿಗೆ ಬಿದ್ದಿರುವ ಹತ್ತಾರು ಲೋಪಗಳ ಕುರಿತು ಸ್ಥಳದಲ್ಲೇ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪಾದಚಾರಿ ಮಾರ್ಗಗಳ ಅನಧಿಕೃತ ಅತಿಕ್ರಮಣ, ವಿಶ್ರಾಂತಿ ಗೃಹಗಳ ಕಳಪೆ ನಿರ್ವಹಣೆ, ಗಲೀಜಾದ

ಶಾಸಕ ಎಸ್.ಎನ್. ಚನ್ನಬಸಪ್ಪ ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಮೂಲಸೌಕರ್ಯಗಳ ಕೊರತೆ, ಸ್ವಚ್ಛತೆ ಪರಿಶೀಲಿಸಿದರು.

ಆಸನಗಳು, ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸದೆ ಬೀಗ ಹಾಕಲಾಗಿರುವ ಶೌಚಾಲಯಗಳು ಹಾಗೂ ಶುದ್ಧ ಕುಡಿಯುವ ನೀರಿನ ವ್ಯತ್ಯಯಗಳ ಕುರಿತು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಸಾರ್ವಜನಿಕರ ದಿನನಿತ್ಯದ ಸಂಚಾರಕ್ಕೆ ಅಡ್ಡಿಪಡಿಸುತ್ತಿರುವ ಇಂತಹ ಧೋರಣೆ ಖಂಡಿಸಿದ ಅವರು, ತಕ್ಷಣವೇ ಕಾರ್ಯಪ್ರವೃತ್ತರಾಗುವಂತೆ ಇಲಾಖೆಗಳಿಗೆ ಗಡುವು ವಿಧಿಸಿದರು.

ಶಾಸಕರ ನಿರ್ದೇಶನ:

ನಿಲ್ದಾಣದ ಎಲ್ಲಾ ಶೌಚಾಲಯಗಳನ್ನು ತ್ವರಿತವಾಗಿ ದುರಸ್ತಿಗೊಳಿಸಬೇಕು ಹಾಗೂ ನಿರ್ವಹಣಾ ಸಿಬ್ಬಂದಿಗಳಿಗೆ ಪ್ರತ್ಯೇಕ ಕೌಂಟರ್‌ನಿರ್ಮಿಸಬೇಕು. ಕುಡಿಯುವ ನೀರಿನ ಫಿಲ್ಟರ್‌ಗಳನ್ನು ತಕ್ಷಣ ಪುನಶ್ಚೇತನಗೊಳಿಸಬೇಕು ಮತ್ತು ಅಲ್ಲಿನ ''ಕರ್ನಾಟಕ ಒನ್'' ಕೇಂದ್ರಕ್ಕೆ ಪೀಠೋಪಕರಣಗಳನ್ನು ಪೂರೈಸಬೇಕು. ಪ್ರಯಾಣಿಕರ ಹಿತದೃಷ್ಟಿಯಿಂದ ಬಸ್ ನಿಲ್ದಾಣದ ಆವರಣದಲ್ಲಿ ತಕ್ಷಣವೇ ಸುಧಾರಿತ ಸಿಸಿಟಿವಿ, ಕ್ಯಾಮೆರಾಗಳನ್ನು ಅಳವಡಿಸಬೇಕು. ಯಾವುದೇ ಕಾರಣಕ್ಕೂ ದ್ವಿಚಕ್ರವಾಹನ, ಇತರ ವಾಹನಗಳು ಖಾಸಗಿ ನಿಲ್ದಾಣದ ಒಳಗೆ ಪ್ರವೇಶಿಸಬಾರದು. ತಿಂಡಿಗಾಡಿಗಳಿಗೆ ಪಕ್ಕದಲ್ಲೇ ಸ್ಥಳ ಗುರುತಿಸಲಾಗಿದ್ದು, ಅವರನ್ನು ಸ್ಥಳಾಂತರಿಸಬೇಕು. ಹೂವಿನ ಮಳಿಗೆಗಳನ್ನು ಕೂಡ ಸ್ಥಳಾಂತರಿಸಿ ಅಲ್ಲಿ ದ್ವಿಚಕ್ರ ವಾಹನ ನಿಲುಗಡೆಗೆ ಅವಕಾಶ ನೀಡಬೇಕು. ಒಂದು ವಾರದೊಳಗೆ ಶೌಚಾಲಯದೊಳಗೆ ಸೌಲಭ್ಯ ಕಲ್ಪಿಸಬೇಕು ಎಂದು ತಾಕೀತು ಮಾಡಿದರು.

ಈ ಪರಿಶೀಲನಾ ಭೇಟಿಯ ವೇಳೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ನಾಗರಾಜ್, ನಗರ ಉಪಾಧ್ಯಕ್ಷ ಪ್ರಭಾಕರ್‌ಪಿ., ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಜಗನ್ನಾಥ್, ನಾಗರೀಕ ಹಿತರಕ್ಷಣಾ ವೇದಿಕೆಗಳ ಒಕ್ಕೂಟದ ವಸಂತ್‌ಕುಮಾರ್, ಸೀತಾರಾಮ್, ಸೇರಿದಂತೆ ಮಹಾನಗರ ಪಾಲಿಕೆಯ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ರಕ್ಷಣಾ ಇಲಾಖೆಯ ದೊಡ್ಡಪೇಟೆ ಠಾಣೆಯ ಇನ್‌ಸ್ಪೆಕ್ಟರ್ ಸತ್ಯನಾರಾಯಣ್, ಸಂಚಾರಿ ಠಾಣಾ ಇನ್‌ಸ್ಪೆಕ್ಟರ್ ದೇವರಾಜ್ ಉಪಸ್ಥಿತರಿದ್ದರು.

ಮಳೆಗಾಲ ಮುನ್ನ ಶಿವಮೊಗ್ಗದ ಒಳಚರಂಡಿ ಹೂಳೆತ್ತಬೇಕು

ಮುಂಬರುವ ಮಳೆಗಾಲದಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಒಳಚರಂಡಿಗಳ ಸಮರ್ಪಕ ಹೂಳೆತ್ತುವಿಕೆ ಮತ್ತು ನಿರ್ವಹಣಾ ಕಾಮಗಾರಿಗಳನ್ನು ಈ ಕೂಡಲೇ ಕೈಗೊಳ್ಳಬೇಕು. ನೂತನ ಸಾರ್ವಜನಿಕ ಶೌಚಾಲಯಗಳ ಟೆಂಡರ್‌ಪ್ರಕ್ರಿಯೆ ತಿಂಗಳೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಿ, ಜನ ಸೇವೆಗೆ ಮುಕ್ತಗೊಳಿಸಬೇಕು. ಮಹಿಳಾ ಸುರಕ್ಷತೆ: ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಸುರಕ್ಷತೆಯನ್ನು ಖಾತರಿಪಡಿಸುವಲ್ಲಿ ಪ್ರಮುಖ ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಹೆಚ್ಚಿನ ಪೊಲೀಸ್ ಸಿಬ್ಬಂದಿ ಹಾಗೂ ಗಸ್ತು ವಾಹನಗಳನ್ನು ನಿಯೋಜಿಸಬೇಕು. ಮುಂದಿನ ಬಾರಿ ನಾನು ನಿಲ್ದಾಣಕ್ಕೆ ಮರು ಭೇಟಿ ನೀಡುವ ವೇಳೆಗೆ ಈ ಎಲ್ಲಾ ನಿಗದಿತ ಕೆಲಸಗಳು ಕಡ್ಡಾಯವಾಗಿ ಪೂರ್ಣಗೊಂಡಿರಬೇಕು, ಇಲ್ಲದಿದ್ದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ' ಎಂದು ಅಧಿಕಾರಿಗಳಿಗೆ ಶಾಸಕರು ಎಚ್ಚರಿಸಿದ್ದಾರೆ.

ಶಿವಗಂಗಾ ಯೋಗ ಕೇಂದ್ರದಲ್ಲಿ ಯೋಗ ದಿನ | ಸಾಮೂಹಿಕ ಯೋಗಾಭ್ಯಾಸ

ಒತ್ತಡ ಮುಕ್ತ ಜೀವನಕ್ಕೆ ಯೋಗ, ಧ್ಯಾನ ಅಗತ್ಯ

ಶಿವಗಂಗಾ ಯೋಗ ಕೇಂದ್ರದಲ್ಲಿ ಯೋಗ ದಿನಾಚರಣೆ ನಿಮಿತ್ತ ಶಿಬಿರಾರ್ಥಿಗಳಿಂದ ಯೋಗಾಭ್ಯಾಸ ನೆರವೇರಿತು.

ಶಿವಮೊಗ್ಗ: ಪ್ರತಿನಿತ್ಯ ನಾವು ಒತ್ತಡದ ಪ್ರಪಂಚದಲ್ಲಿ ಬದುಕುತ್ತಿದ್ದೇವೆ. ತಂತ್ರಜ್ಞಾನ ಎಷ್ಟೇ ಬದಲಾದರೂ ಸಹ ನಮ್ಮ ದೇಹ ಹಾಗೂ ಮನಸ್ಸನ್ನು ನಾವು ಸದೃಢವಾಗಿ ಇಟ್ಟುಕೊಳ್ಳಲು ಯೋಗ ಪ್ರಾಣಾಯಾಮ ಧ್ಯಾನ ನಮಗೆ ತುಂಬಾ ಸಹಕಾರಿ ಎಂದು ಶಿವಗಂಗಾ ಯೋಗ ಕೇಂದ್ರದ ಅಧ್ಯಕ್ಷರಾದ ಎಸ್.ರುದ್ರೇಗೌಡ ರವರು ಅಭಿಮತ ವ್ಯಕ್ತಪಡಿಸಿದರು.

ಶಿವಗಂಗಾ ಯೋಗ ಕೇಂದ್ರದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಚಿಕ್ಕ ವಯಸ್ಸಿನಲ್ಲೇ ಸಾಕಷ್ಟು ಕಾಯಿಲೆಗಳಿಂದ ಬಳಲುತ್ತಿರುವುದನ್ನ ನೋಡುತ್ತಿದ್ದೇವೆ. ಸದಾ ಆರೋಗ್ಯವಂತರಾಗಿ ಇರಲು ಪ್ರತಿನಿತ್ಯ ನಾವು ನೀವೆಲ್ಲರೂ ಮನೆಗಳಲ್ಲೂ ಸಹ ಯೋಗಭ್ಯಾಸ ಮಾಡೋಣ ಎಂದು ಹೇಳಿದರು.

ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಯೋಗಚಾರ್ಯ ಸಿ.ವಿ.ರುದ್ರಾರಾಧ್ಯರು ಮಾತನಾಡಿ, ನಮ್ಮ ಶಿವಗಂಗಾ ಯೋಗ ಕೇಂದ್ರ ಇಂದು ಎರಡು ಹೊಸ ಶಾಖೆಗಳನ್ನು ಉದ್ಘಾಟಿಸುತ್ತಿದ್ದೇವೆ. ಎಲ್ಲಾ ಯೋಗ ಬಂಧುಗಳ ಸಹಕಾರದಿಂದ ನಮ್ಮ ಸಂಸ್ಥೆ ಸದೃಢವಾಗಿದೆ. ಇಂದು ನಮ್ಮ ಶಿವಗಂಗಾ ಯೋಗ 40 ಕೇಂದ್ರಗಳಲ್ಲಿ ಸಂಪೂರ್ಣವಾಗಿ ಉಚಿತವಾಗಿ ಯೋಗ, ಪ್ರಾಣಾಯಾಮ ಧ್ಯಾನ ಹಾಗೂ ಸಂಸ್ಕಾರ ಪ್ರತಿನಿತ್ಯ ನಮ್ಮ ನುರಿತ ಶಿಕ್ಷಕರಿಂದ ನಡೆಯುತ್ತಿದೆ. ಈ ಎಲ್ಲಾ ಮಹತ್ಕಾರ್ಯಗಳಿಗೆ ನಮ್ಮ ಟ್ರಸ್ಟಿಗಳು ಪೋಷಕರು ಹಾಗೂ ಶಿಕ್ಷಕರ ಸಹಕಾರ ಮರೆಯುವಂತಿಲ್ಲ. ಯೋಗ ಮತ್ತು ಪ್ರಾಣಾಯಾಮ ಧ್ಯಾನ ಅದು ವ್ಯಾಯಾಮವಲ್ಲ, ದೇಹ ಮನಸ್ಸನ್ನು ಒಂದುಗೂಡಿಸಿ ಸುಸ್ಥಿರವಾಗಿ ಇಡುವುದೇ ಯೋಗವಾಗಿದೆ ಎಂದು ನುಡಿದರು.

ಮಾಜಿ ಸೂಡಾ ಅಧ್ಯಕ್ಷ ಎಸ್.ಎಸ್.ಜ್ಯೋತಿ ಪ್ರಕಾಶ್ ರವರು ಮಾತನಾಡಿ, ಕರ್ನಾಟಕದಲ್ಲಿ ಇಷ್ಟೊಂದು ಜನರಿಗೆ ಯೋಗಭ್ಯಾಸ, ಪ್ರಾಣಯಾಮ, ಧ್ಯಾನವನ್ನು ಉಚಿತವಾಗಿ ನೀಡುತ್ತಿರುವ ಏಕೈಕ ಸಂಸ್ಥೆ ಶಿವಗಂಗಾ ಯೋಗ ಕೇಂದ್ರವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ರಾಷ್ಟ್ರಭಕ್ತ ಬಳಗದ ಹಾಗೂ ಟ್ರಸ್ಟಿಗಳಾದ ಕೆ.ಎ.ಕಾಂತೇಶ್ ರವರು ಶಿವಗಂಗಾ ಯೋಗ ಕೇಂದ್ರದ ಸಮಗ್ರ ಅಭಿವೃದ್ಧಿಗೆ ಹಾಗೂ ನಿರ್ವಹಣೆಗೆ ಮೊದಲ ದೇಣಿಗೆಯಾಗಿ 10 ಲಕ್ಷ ರೂ.ಗಳನ್ನು ಕೊಡುವುದಾಗಿ ಘೋಷಣೆ ಮಾಡಿದರು. ನಂತರ ನಮ್ಮ ಎಲ್ಲಾ ಟ್ರಸ್ಟಿಗಳು ಹಾಗೂ ಪೋಷಕರು ಸೇರಿ ಒಂದು ಕೋಟಿ ರೂ. ಕಾರ್ಪಸ್ ಫಂಡ್ ಮಾಡಿ ಇಡುವುದಾಗಿ ತಿಳಿಸಿದರು. ನಂತರ ಶಿವಗಂಗಾ ಯುವ ಕೇಂದ್ರದ ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಶೇಖರ ಯೋಗ ದಿನಾಚರಣೆಯ ಮಹತ್ವವನ್ನು ಕುರಿತು ಮಾಹಿತಿ ನೀಡಿದರು. ಸಮಾರಂಭದಲ್ಲಿ ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಉಪಾಧ್ಯಕ್ಷ ಜಿ. ವಿಜಯಕುಮಾರ್, ಟ್ರಸ್ಟಿಗಳಾದ ಆನಂದಮೂರ್ತಿ, ವಿಜಯ ಬಾಯರ್, ಪ್ರೊಫೆಸರ್ ಎ.ಎಸ್. ಚಂದ್ರಶೇಖರ್, ದೇವೇಂದ್ರಪ್ಪ, ಕಾಟನ್ ಜಗದೀಶ್ ಹಾಗೂ ಎಲ್ಲಾ ಶಾಖೆಗಳ ಶಿಕ್ಷಕರು ಮತ್ತು ಸಾವಿರಕ್ಕೂ ಹೆಚ್ಚು ಜನ ಯೋಗ ಶಿಬಿರಾರ್ಥಿಗಳು, ಯೋಗ ಬಂಧುಗಳು ಉಪಸ್ಥಿತರಿದ್ದರು. ಇದೇ ಸಂದರ್ಭ ಶಿಬಿರಾರ್ಥಿಗಳಿಂದ ಯೋಗಾಭ್ಯಾಸ ನೆರವೇರಿತು.

ಪವಿತ್ರ ಗೋಮಾತೆಯಲ್ಲಿ ಮುಕ್ಕೋಟಿ ದೇವತೆಗಳು

ಶಿವಮೊಗ್ಗ ಕೋಟೆ ಶ್ರೀ ಮಾರಿಕಾಂಬ ದೇವಸ್ಥಾನದ ಹತ್ತಿರ ಗೋವರ್ಧನಾ ಟ್ರಸ್ಟಿನ ಕಛೇರಿ ಹಾಗೂ ಗೋ ಉತ್ಪನ್ನಗಳ ಮಾರಾಟ ಕೇಂದ್ರವನ್ನು ಶ್ರೀ ನಾದಮಯಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಶಿವಮೊಗ್ಗ: 87ಲಕ್ಷ ಜೀವರಾಶಿಗಳಲ್ಲಿ ಗೋವನ್ನು ಮಾತ್ರ ಜಗನ್ಮಾತೆ ಎಂದು ಭಾರತದಲ್ಲಿ ಪೂಜಿಸಿಕೊಂಡು ಬಂದಿದ್ದೇವೆ ಎಂದು ಆದಿಚುಂಚನಗಿರಿ ಶಾಖಾ ಮಠ ಶಿವಮೊಗ್ಗದ ಶ್ರೀ ನಾದಮಯಾನಂದನಾಥ ಸ್ವಾಮೀಜಿ ಹೇಳಿದ್ದಾರೆ.

ಅವರು ಎಸ್ಪಿಎಂ ರಸ್ತೆಯ ಕೋಟೆ ಶ್ರೀ ಮಾರಿಕಾಂಬ ದೇವಸ್ಥಾನದ ಹತ್ತಿರ ಗೋವರ್ಧನಾ ಟ್ರಸ್ಟಿನ ಕಛೇರಿ ಹಾಗೂ ಗೋ ಉತ್ಪನ್ನಗಳ ಮಾರಾಟ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಕೃತಿಯನ್ನೇ ಸಂರಕ್ಷಿಸುವ ಜವಾಬ್ದಾರಿ ಗೋಮಾತೆ ಹೊಂದಿದ್ದಾಳೆ. ಶುದ್ಧ ಗಾಳಿಯನ್ನು ನೀಡುವ ಪ್ರಾಣಿ ಗೋಮಾತೆ ಒಂದೇ. ಗೋಮಾತೆಯ ಕೆಚ್ಚಲನ್ನು ನಾಲ್ಕು ವೇದಗಳಿಗೆ ಹೋಲಿಸುತ್ತಾರೆ. ಪ್ರತಿ ರೋಮದಲ್ಲೂ ಮುಕ್ಕೋಟಿ ದೇವತೆಗಳು ಗೋವಿನಲ್ಲಿ ಇರುತ್ತಾರೆ ಎಂಬುದು ಪ್ರತೀತಿ. ತಾಯಿ ಹೆತ್ತ ಮಗುವಿಗೆ 2 ವರ್ಷಗಳ ಕಾಲ ಹಾಲು ಉಣಿಸಿದರೆ ಗೋಮಾತೆ ಸದಾ ನಮಗೆ ಹಾಲು ನೀಡುತ್ತಾಳೆ. ಅಂತಹ ಗೋಮಾತೆ ವಧೆ ಮಾಡಿದಾಗ ಗೋವಿನ ಸಂತತಿ ಸಂರಕ್ಷಿಸಲು ಗೋವರ್ಧನ ಟ್ರಸ್ಟ್ ಜನ್ಮ ತಾಳಿದೆ ಎಂದರು.

ಮನುಷ್ಯನ ಆರೋಗ್ಯಕ್ಕೆ ಗೋವಿನ ಹಾಲು ಮುಖ್ಯವಾಗಿದೆ. ಇಂದಿನ ಪ್ರಪಂಚದಲ್ಲಿ ಸೇವಿಸುವ ಆಹಾರದಿಂದ ಹಿಡಿದು ಗಾಳಿಯವರೆಗೆ ಎಲ್ಲವೂ ಕಲುಷಿತವಾಗಿದೆ. ಸನಾತನ ಧರ್ಮದಲ್ಲಿ ಅಗ್ನಿಹೋತ್ರ ಎಂದು ಮಾಡುತ್ತೇವೆ. ಅದಕ್ಕೆ ಗೋಮಾತೆಯ ತುಪ್ಪ ಮತ್ತು ಬೆರಣಿಯನ್ನು ಉಪಯೋಗಿಸಿ ಮಾಡಿದ ಹೋಮದಿಂದ ಬರುವ ಧೂಪ ವಾತಾವರಣವನ್ನೇ ಶುದ್ಧಿಗೊಳಿಸುತ್ತದೆ. ಒಳ್ಳೆಯ ಉದ್ದೇಶದಿಂದಲೇ ಗೋವಿನ ಉತ್ಪನ್ನಗಳನ್ನು ತಯಾರಿಸಲಾಗಿದೆ. ದಿನನಿತ್ಯ ಇದರ ಬಳಕೆ ಮಾಡಿರಿ. ಒಗ್ಗಟ್ಟಿನಿಂದ ಎಲ್ಲರೂ ಸೇರಿದರೆ ಗೋಸಂರಕ್ಷಣೆ ಮಾಡಬಹುದು ಎಂದರು.

ಗೋವರ್ಧನ ಟ್ರಸ್ಟ್ನ ಮಹಾಪೋಷಕರಾದ ಕೆ.ಎಸ್. ಈಶ್ವರಪ್ಪ ಮಾತನಾಡಿ, ಗೋವರ್ಧನಾ ಟ್ರಸ್ಟ್ ಸಹಯೋಗದಲ್ಲಿ ಗೋಉತ್ಪನ್ನಗಳ ಮಾರಾಟ ಕೇಂದ್ರ, ಪ್ರಾರಂಭವಾಗಿದೆ. ಇದರ ಲಾಭ-ನಷ್ಟ ಎಲ್ಲವೂ ಗೋವರ್ಧನ ಟ್ರಸ್ಟಿನದ್ದಲ್ಲ. ಅದೇ ರೀತಿ ವಿಶ್ವಬಂಧು ಗೋಶಾಲೆ, ನಿರ್ಮಾಣವಾಗಿದೆ. ಗೋವರ್ಧನ ಟ್ರಸ್ಟ್ ಮುಖಾಂತರ ನಗರದ ಪ್ರಮುಖ ಗೋಶಾಲೆಗಳಿಗೆ ಶೆಡ್ ನಿರ್ಮಾಣ, ಮೇವು ವಿತರಣೆಗೆ ಟ್ರಸ್ಟ್ ನೆರವು ನೀಡುತ್ತದೆ. ಈ ಮಾರಾಟ ಮಳಿಗೆಯಲ್ಲಿ ಯತ್ನಾಳ್ ಗ್ರೂಪ್ ಗೋಶಾಲೆ, ಸುರಭಿ ಗೋಶಾಲೆ, ಕನ್ನೇರಿ ಮಠದ ಗೋಶಾಲೆ, ರಾಮಚಂದ್ರಾಪುರ ಮಠದ ಗೋಶಾಲೆಯ ಉತ್ಪನ್ನಗಳು ಮಾರಾಟಕ್ಕಿವೆ ಎಂದರು.

ಈ ಸಂದರ್ಭದಲ್ಲಿ ಟ್ರಸ್ಟಿನ ಅಧ್ಯಕ್ಷ ಕೆ.ಇ. ಕಾಂತೇಶ್, ಉಮೇಶ್ ಆರಾಧ್ಯ, ಖಜಾಂಚಿ ಎಸ್.ಕೆ.ಶೇಷಾಚಲ, ರಮೇಶ್ಬಾಬು, ಕುಬೇರಪ್ಪ, ಯತ್ನಾಳ್ ಗ್ರೂಪ್ನ ಸುನೀಲ್, ಸುರಭಿ ಗೋಶಾಲೆಯ ನಟರಾಜ್ ಭಾಗವತ್, ಕನ್ನೇರಿ ಮಠದ ಸುನೀಲ್, ರಾಮಚಂದ್ರಾಪುರ ಮಠದ ಶ್ರೀಪಾದ್ ಭಟ್ ಹಾಗೂ ಗೋವರ್ಧನ ಟ್ರಸ್ಟ್ನ ಪ್ರಮುಖರು ಉಪಸ್ಥಿತರಿದ್ದರು.

ಮುಕ್ತ ಮತದಾನ ಪದ್ಧತಿ ಜಾರಿಗೆ ತರಲಿ

ಶಿವಮೊಗ್ಗ : ರಾಜ್ಯದಲ್ಲಿ ಇತ್ತೀಚೆಗೆ ನಡೆದ ವಿಧಾನಪರಿಷತ್ ಚುನಾವಣೆಯ ಸಂದರ್ಭದಲ್ಲಿ ಕೇಳಿ ಬಂದಿರುವ ಅಡ್ಡ ಮತದಾನ, ರೆಸಾರ್ಟ್ ರಾಜಕೀಯದಂತಹ ಬೆಳವಣಿಗೆಗಳು ಹಾಗೂ ರಾಜಕೀಯ ಭ್ರಷ್ಟಾಚಾರದ ಮೂಲಕ ಜನಪ್ರತಿನಿಧಿಗಳನ್ನು ಸೆಳೆಯುವ ಕುತಂತ್ರಗಳು ಪ್ರಜಾಪ್ರಭುತ್ವದ ಆಶಯಗಳಿಗೆ ಧಕ್ಕೆ ತರುತ್ತಿವೆ. ಪಾರದರ್ಶಕತೆ ತರಲು ರಾಜ್ಯಸಭಾ ಚುನಾವಣೆಗಳ ಮಾದರಿಯಲ್ಲೇ ವಿಧಾನ ಪರಿಷತ್ ಸದಸ್ಯರನ್ನು ಆಯ್ಕೆ ಮಾಡುವ ಚುನಾವಣಾ ಪ್ರಕ್ರಿಯೆಯಲ್ಲೂ ಮುಕ್ತ ಮತದಾನ ಪದ್ಧತಿ ಜಾರಿಗೆ ತರಬೇಕು ಎಂದು ವಿಧಾನಪರಿಷತ್ ಶಾಸಕರಾದ ಡಿ.ಎಸ್.ಅರುಣ್ ಅವರು ಪ್ರಬಲವಾಗಿ ಒತ್ತಾಯಿಸಿದ್ದಾರೆ.

ಹಿಂದೆ ರಾಜ್ಯಸಭಾ ಚುನಾವಣೆಗಳಲ್ಲೂ ರಹಸ್ಯ ಮತದಾನ ಪದ್ಧತಿ ಇದ್ದಾಗ ಇಂತಹದ್ದೇ ಪಕ್ಷದ್ರೋಹ ಹಾಗೂ ಆಮಿಷಗಳ ದೂರುಗಳು ಕೇಳಿಬರುತ್ತಿದ್ದವು. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು 2003ರ ಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಕೇಂದ್ರ ಸರಕಾರ ಜನಪ್ರತಿನಿಧಿಗಳ ಕಾಯ್ದೆಗೆ ಐತಿಹಾಸಿಕ ತಿದ್ದುಪಡಿ ತಂದು ಮುಕ್ತ ಮತದಾನ ಪದ್ಧತಿಯನ್ನು ಜಾರಿಗೆ ತಂದಿತು. ಅಷ್ಟೇ ಅಲ್ಲದೆ, 2006ರಲ್ಲಿ ಸುಪ್ರೀಂ ಕೋರ್ಟ್ ಸಹ ಈ ಮುಕ್ತ ಮತದಾನ ವ್ಯವಸ್ಥೆಯನ್ನು ಎತ್ತಿಹಿಡಿಯಿತು. ಈ ಪದ್ಧತಿಯು ಚುನಾವಣಾ ಪ್ರಕ್ರಿಯೆ ಕಾಯ್ದುಕೊಳ್ಳಲು ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟಲು ಅತ್ಯಗತ್ಯ ಎಂದು ದೇಶದ ಅತ್ಯುನ್ನತ ನ್ಯಾಯಾಲಯವೇ ಸ್ಪಷ್ಟಪಡಿಸಿದೆ ಎಂದು ನೆನಪಿಸಿದರು. ಇತ್ತೀಚಿಗಷ್ಟೇ ನಡೆದ ವಿಧಾನ ಪರಿಷತ್ತಿನಂತಹ ಚುನಾವಣೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಅಧಿಕಾರದಲ್ಲಿರುವ ಪಕ್ಷಗಳು ತಮ್ಮ ಅಧಿಕಾರ ಬಲವನ್ನು ಬಳಸಿ ವಿರೋಧ ಪಕ್ಷದ ಜನಪ್ರತಿನಿಧಿಗಳಿಗೆ ಆಮಿಷ ಒಡ್ಡುವುದು ಅಥವಾ ಅವರ ಮೇಲಿರುವ ಪ್ರಕರಣಗಳನ್ನು ಮುಂದಿಟ್ಟುಕೊಂಡು ಬ್ಲಾಕ್ಮೇಲ್ ಮಾಡುವ ಸಾಧ್ಯತೆಗಳಿರುತ್ತವೆ. ಇಂತಹ ಸಂದರ್ಭಗಳಲ್ಲಿ ಜನಪ್ರತಿನಿಧಿಗಳು ಕೇವಲ ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ಪಕ್ಷದ ವಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಒಟ್ಟಾರೆ ವ್ಯವಸ್ಥೆಯ ಸುಧಾರಣೆ ಯಾವುದೇ ಒಬ್ಬ ಜನಪ್ರತಿನಿಧಿ ಪಕ್ಷದ ಚಿಹ್ನೆಯಡಿ ಗೆದ್ದು ಬಂದ ಮೇಲೆ, ಆ ಪಕ್ಷದ ಸಿದ್ಧಾಂತ ಹಾಗೂ ಶಿಸ್ತಿಗೆ ಬದ್ಧನಾಗಿರಬೇಕು. ಮುಕ್ತ ಮತದಾನ ಪದ್ಧತಿ ಜಾರಿಗೆ ಬಂದರೆ, ಮತದಾನದ ವೇಳೆ ತಮ್ಮ ಪಕ್ಷದ ಅಧಿಕೃತ ಏಜೆಂಟರಿಗೆ ಮತಪತ್ರವನ್ನು ತೋರಿಸಿ ಮತ ಚಲಾಯಿಸಬೇಕಾಗುತ್ತದೆ. ಇದರಿಂದ ಆಮಿಷಗಳಿಗೆ ಒಳಗಾಗುವ ಅಥವಾ ಬ್ಲಾಕ್ಮೇಲ್ಗೆ ಹೆದರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದು ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯ ಮತ್ತು ಜನಪ್ರತಿನಿಧಿಗಳ ಗೌರವವನ್ನು ಕಾಪಾಡುತ್ತದೆ ಎಂದು ತಿಳಿಸಿದ್ದಾರೆ.

ವಾರಸುದಾರರಿಗೆ 100 ಮೊಬೈಲ್ ವಾಪಸ್

ಶಿವಮೊಗ್ಗ: ನಗರದ ದೊಡ್ಡಪೇಟೆ ಪೊಲೀಸ್ ಠಾಣಾ ಆವರಣದಲ್ಲಿ ಸಾರ್ವಜನಿಕರಿಗಾಗಿ ನಿರ್ಮಿಸಿರುವ ಸಂದರ್ಶಕರ ಕೊಠಡಿಯನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ನಿಖಿಲ್ ಬಿ. ಅವರು ಉದ್ಘಾಟಿಸಿದರು. ಸಿಇಐಆರ್ ಪೋರ್ಟಲ್ ಬಳಸಿ ಪತ್ತೆಮಾಡಲಾದ 100 ಮೊಬೈಲ್ ಫೋನ್ಗಳನ್ನು ದೊಡ್ಡಪೇಟೆ ಪೊಲೀಸ್ ಠಾಣಾ ಆವರಣದಲ್ಲಿಯೇ ವಾರಸುದಾರರಿಗೆ ಹಿಂತಿರುಗಿಸಲಾಯಿತು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪೊಲೀಸ್ ಅಧೀಕ್ಷಕ ಬಿ.ನಿಖಿಲ್ ಅವರು, ರಾಜ್ಯ ಪೊಲೀಸ್ ಮಹಾನಿರ್ದೇಶಕರ ಆದೇಶದಂತೆ ಸಂದರ್ಶಕರ ಕೊಠಡಿಯನ್ನು ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಇದರಿಂದ ದೂರುದಾರರಿಗೆ ಅನುಕೂಲವಾಗಲಿದೆ. ಅಲ್ಲದೆ ಜನವರಿ 2026ರಿಂದ ಇದೂವರೆಗೆ ಜಿಲ್ಲೆಯ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ 1000ಕ್ಕೂ ಹೆಚ್ಚು ಮೊಬೈಲ್ಗಳನ್ನು ವಾರಸುದಾರರಿಗೆ ವಿತರಿಸಲಾಗಿದೆ. ದೊಡ್ಡಪೇಟೆ ಠಾಣಾ ವ್ಯಾಪ್ತಿಯಲ್ಲಿ 100 ಮೊಬೈಲ್ಗಳನ್ನು ನೀಡಲಾಯಿತು. ಸಾರ್ವಜನಿಕರು ಸಿಇಐಆರ್ ಪೋರ್ಟಲ್ ಮೂಲಕ ತಮ್ಮ ಮನೆಯಿಂದಲೇ ದೂರು ದಾಖಲಿಸಬಹುದು. ಅದು ಸಿಕ್ಕಿದಾಗ ಠಾಣೆಯಿಂದಲೇ ಅವರಿಗೆ ಮೇಸೇಜ್ ಬರುತ್ತದೆ. ಇದೊಂದು ದೊಡ್ಡ ಸಾಧನೆ . ಸಾವಿರಾರು ಸಾರ್ವಜನಿಕರಿಗೆ ಇದರಿಂದ ಅನುಕೂಲವಾಗಿದೆ ಎಂದರು.

ಸಿಇಐಆರ್ ಪೋರ್ಟಲ್ ಬಳಸಿ ಪತ್ತೆಮಾಡಲಾದ 100 ಮೊಬೈಲ್ ಫೋನ್ ಗಳನ್ನು ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿಯೇ ವಾರಸುದಾರರಿಗೆ ಹಿಂತಿರುಗಿಸಲಾಯಿತು.

ಕುಂಸಿ ಠಾಣಾ ವ್ಯಾಪ್ತಿಯ ಸುತ್ತುಕೋಟೆಯಲ್ಲಿ ಮೂರು ದಿನಗಳ ಹಿಂದೆ ಪ್ರವೀಣ್ ಎಂಬ ಯುವಕನ ಕೊಲೆಯಾಗಿತ್ತು. ಆರೋಪಿ ಪತ್ತೆಗೆ ಈಗಾಗಲೇ ಎರಡು ತಂಡ ರಚನೆ ಮಾಡಿದ್ದು, ಶೀಘ್ರದಲ್ಲೇ ಬಂಧಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಪೊಲೀಸ್ ಉಪಾಧೀಕ್ಷಕರಾದ ಗಂಗಾಧರ್, ದೊಡ್ಡಪೇಟೆ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸತ್ಯನಾರಾಯಣ್, ಕೋಟೆ ಪಿಐ ಹರೀಶ್ ಕೆ. ಪಾಟೀಲ್‌ಉ ಪಸ್ಥಿತರಿದ್ದರು.

ಅತಿ ಹೆಚ್ಚು ಮನ್ ಕಿ ಬಾತ್ ವೀಕ್ಷಣೆ



ಸೊರಬದಲ್ಲಿ ಬಿಜೆಪಿ ಸಂಚಾಲಕ ಸಂದೀಪ್ ಮಳಲಗದ್ದೆ ಅವರನ್ನು ತಾಲೂಕು ಬಿಜೆಪಿ ಮಂಡಲದ ವತಿಯಿಂದ ಸನ್ಮಾನಿಸಲಾಯಿತು.

ಸೊರಬ: ಪ್ರಧಾನಮಂತ್ರಿ ನರೇಂದ್ರ ಮೋದಿಯವರ 'ಮನ್ ಕೀ ಬಾತ್' ಕಾರ್ಯಕ್ರಮದ ಪ್ರಸಾರವನ್ನು ತಾಲೂಕಿನಲ್ಲಿ 239 ಬೂತ್ ಗಳಲ್ಲಿ ವೀಕ್ಷಿಸಿ ಸರಳ ಆಪ್ ಅಪ್ಲೋಡ್ ಮಾಡಿದ ತಾಲೂಕು ಸಂಚಾಲಕ ಸಂದೀಪ್ ಮಳಲಗದ್ದೆ ಇವರನ್ನು ತಾಲೂಕು ಮಂಡಲದ ವತಿಯಿಂದ ಸನ್ಮಾನಿಸಲಾಯಿತು. ತಾಲೂಕು ಮಂಡಲದ ಅಧ್ಯಕ್ಷ ಪ್ರಕಾಶ್ ಅಗಸನಹಳ್ಳಿ ಅವರು ಸನ್ಮಾನಿಸಿ ಮಾತನಾಡಿ, ಬಿಜೆಪಿ ಹೈಕಮಾಂಡ್ ಆದೇಶದ ಮೇರೆಗೆ ಸಂದೀಪ್ ಮಳಲಗದ್ದೆ ಅವರು ತಾಲೂಕಿನಲ್ಲಿ ಅತಿ ಹೆಚ್ಚು ಮನ್ ಕಿ ಬಾತ್ ಕಾರ್ಯಕ್ರಮವನ್ನು ವೀಕ್ಷಿಸಿ 239 ಬೂತ್ ಅಧ್ಯಕ್ಷರುಗಳಿಗೆ ಕರೆ ಮಾಡಿ ಸರಳ ಆಪ್ ನಲ್ಲಿ ಅತಿ ಹೆಚ್ಚು ಅಪ್ಲೋಡ್ ಮಾಡಿಸಿರುತ್ತಾರೆ. ಹೈಕಮಾಂಡ್ ಆದೇಶದ ಮೇರೆಗೆ ಸಂದೀಪ್ ಮಳಲಗದ್ದೆ ಅವರನ್ನು ಸನ್ಮಾನಿಸಿರುತ್ತೇವೆ ಎಂದರು.

ಡಾ..ಎಚ್. ಜ್ಞಾನೇಶ್ ಮಾತನಾಡಿ, ಸಂದೀಪ್ ಮಲ್ಗದ್ದೆ ಇವರು ತಾಲೂಕಿನಲ್ಲಿ ಕ್ರಿಯಾಶೀಲವಾಗಿ ಅತಿ ಹೆಚ್ಚು ಮನ್ ಕಿ ಬಾತ್ ಗಳನ್ನು ಬೂತ್ ಅಧ್ಯಕ್ಷರುಗಳಿಂದ ಅಪ್ಲೋಡ್ ಮಾಡಿಸಿ ನರೇಂದ್ರ ಮೋದಿ ಅವರ ಮನ್ ಕಿ ಬಾತ್ ಹೆಚ್ಚು ಜನಪ್ರಿಯತೆಗೆ ಕಾರಣರಾಗಿರುತ್ತಾರೆ. ಇವರು ಇತರೆ ಬಿಜೆಪಿ ಕಾರ್ಯಕರ್ತರಿಗೆ ಮಾದರಿಯಾಗಿರುತ್ತಾರೆ ಎಂದರು. ಜಡೆ ಸಂಸ್ಥಾನ ಮಠದ ಶ್ರೀ ಕುಮಾರ ಕೆಂಪಿನ ಸಿದ್ದವೃಷಭೇಂದ್ರ ಸ್ವಾಮಿ, ಗಂಗಾಧರ ದೇವರು, ಸುರೇಶ್ ಉದ್ರಿ, ಜಾನಕಪ್ಪ ಯಲಸಿ, ಸುಧಾ ಶಿವಪ್ರಸಾದ ಇದ್ದರು.

ಹವ್ಯಕ ಸಮಾಜ ಸಾಮರಸ್ಯಕ್ಕೆ ಮಾದರಿ

ಸಾಗರ: ಮಾತೃ ಗೌರವ ಸಂಸ್ಕೃತಿಯನ್ನು ಹೊಂದಿರುವ ಹವ್ಯಕ ಸಮಾಜ ಹಿಂದಿನಿಂದಲೂ ತಾರತಮ್ಯವಿಲ್ಲದೆ ಸಾಮರಸ್ಯದ ಜೀವನಕ್ಕೆ ಮಾದರಿ ಎಂದು ಶ್ರೀ ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ. ಗಿರಿಧರ ಕಜೆ ಹೇಳಿದರು.

ಅಗ್ರಹಾರದ ಶ್ರೀರಾಘವೇಶ್ವರ ಸಭಾಭವನದಲ್ಲಿ ಸಾಗರ,ಸೊರಬ ಪ್ರಾಂತ್ಯ ಹವ್ಯಕ ಪ್ರತಿಭೆಗಳ ಸಾಂಸ್ಕೃತಿಕ ಸ್ಪರ್ಧೆ ಪ್ರತಿಬಿಂಬದಲ್ಲಿ ಆಯೋಜಿಸಿದ್ದ ಮಹಾಸಭಾದ ಮಹಿಳಾ ವೇದಿಕೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶ್ರೀ ಅಖಿಲ ಹವ್ಯಕ ಮಹಾಸಭಾ ಸ್ವಾತಂತ್ರಪೂರ್ವದಲ್ಲಿಯೇ ಅಧಿಕೃತ ನೊಂದಾಯಿತವಾಗಿದ್ದ ಸಂಸ್ಥೆ. ಆ ಕಾಲಘಟ್ಟದಲ್ಲಿ ಮಹಿಳೆ ಮನೆಯ ನಾಲ್ಕು ಗೋಡೆಯೊಳಗೆ ಸೀಮಿತ ಎನ್ನುವಂತ್ತಿತ್ತು ಆದರೆ ನಮ್ಮ ಸಂಸ್ಥೆಯ 3 ನೇ ಅಧ್ಯಕ್ಷರು ಹಾಗೂ 5 ನೇ ಅಧ್ಯಕ್ಷರು ಮಹಿಳೆ ಎನ್ನುವ ಇತಿಹಾಸವನ್ನು ಗಮನಿಸಿದರೆ ಹವ್ಯಕ ಸಮಾಜ ಮಹಿಳೆಯರಿಗೆ ಕೊಟ್ಟಿರುವ ಆದ್ಯತೆ ಅರ್ಥವಾಗಲಿದೆ. ವೃಕ್ಷವೊಂದಕ್ಕೆ ತಾಯಿ ಬೇರು ಎಷ್ಟು ಮುಖ್ಯವೋ ಹಾಗೆ ಸಮಾಜಕ್ಕೂ ತಾಯಿ ಬೇರು ಮುಖ್ಯ ಎಂದರು.

ವೇದಿಕೆ ಉದ್ಘಾಟಿಸಿದ ಉಪನ್ಯಾಸಕಿ ಡಾ. ವಿಜಯಲಕ್ಷ್ಮಿ ಹೆಗಡೆ ಕಂಪ್ಲಿ ಮಾತನಾಡಿ, ವೇದ, ಉಪನಿಷತ್ ಸ್ಮೃತಿಪುರಾಣಗಳು ಕೂಡ ಮಹಿಳೆಯನ್ನು ನಿರ್ಲಕ್ಷಿಸಿಲ್ಲ. ನಮ್ಮ ಸಂಸ್ಕೃತಿ ಉಳಿಯಬೇಕು ಎಂದರೆ ಮಹಿಳೆ ಸಂಘಟಿತರಾಗಿರಲೇಬೇಕು ಎಂದರು. ಹವ್ಯಕ ಮಹಿಳಾ ಕೇಂದ್ರದ ಸಂಚಾಲಕಿ ಮಧುರಾ ಗಾಂವ್ಕರ್ ಮಹಿಳಾ ವೇದಿಕೆ ಕುರಿತು ಮಾತನಾಡಿದರು.

ಸಾಗರದಲ್ಲಿ ನಡೆದ ಅಖಿಲ ಹವ್ಯಕ ಮಹಾಸಭಾದ ಪ್ರತಿಬಿಂಬ ಕಾರ್ಯಕ್ರಮದಲ್ಲಿ ಮಹಿಳಾ ವೇದಿಕೆಯನ್ನು ಡಾ. ವಿಜಯಲಕ್ಷ್ಮಿ ಹೆಗಡೆ ಕಂಪ್ಲಿ ಉದ್ಘಾಟಿಸಿದರು. ಡಾ. ಗಿರಿಧರ ಕಜೆ ಮತ್ತಿತರರು ಇದ್ದರು.

ಇದಕ್ಕೂ ಮುನ್ನ ಬೆಳಗ್ಗೆ ನಡೆದ ಪತ್ರಿಬಿಂಬ ಕಾರ್ಯಕ್ರಮವನ್ನು ಸಾಗರ ಹವ್ಯಕ ಮಂಡಲದ ಉಪಾಧ್ಯಕ್ಷ ಸಂಪ ಲಕ್ಷ್ಮೀನಾರಾಯಣ ಉದ್ಘಾಟಿಸಿ, ಸಂಸ್ಕಾರಯುತ ಬದುಕು ಗೌರವ ತಂದು ಕೊಡಲಿದೆ ಎಂದರು.

ಯೋಗ ದಿನದಂದು ಕಾನುಗೋಡು ಗುರುಕುಲಮ್ ಯೋಗ ಕೇಂದ್ರದಿಂದ ಯೋಗ ಪ್ರದರ್ಶನ ನಡೆಯಿತು. ಅಖಿಲ ಹವ್ಯಕದ ಕಾರ್ಯದರ್ಶಿ ಆದಿತ್ಯ ಹೆಗಡೆ, ಮಾಜಿ ನಿರ್ದೇಶಕ ರಾಜಾರಾಮ ಹೊಸಬಾಳೆ, ಹಾಲಿ ನಿರ್ದೇಕರಾದ ಹು.ಬ. ಅಶೋಕ್, ಕೆ.ಎನ್. ಶ್ರೀಧರ, ರಮೇಶ್ ಹಾರೆಗೊಪ್ಪ, ಪ್ರಸನ್ನ ಹೆಗಡೆ ಕೆರೆಕೈ, ರಘುನಂದನ ಪಟೇಲ್, ಶ್ರೀಧನ್, ಮಂಜುನಾಥ ಭೀಮನಕೋಣೆ, ಅರ್ಚನಾ, ಸ್ಮಿತಾ, ಮಮತಾ ಹೆಗಡೆ ಮತ್ತಿತರರು ಇದ್ದರು.

ವಿಶ್ವವಾಣಿ ಬೆಂಗಳೂರು 23-06-2026 ಮಂಗಳವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಮನದೊಳಗಣ ಕಿಚ್ಚು ಮನೆಯ ಸುಟ್ಟೀತು!

• ಡಾ. ಮೈತ್ರಿ ಭಟ್, ವಿಟ್ಲ

ಒಂದು ಕಿಡಿ ಸಾಕು... ವರುಷಗಳ ಕಾಲ ಕಂಡ ಕನಸ ನನಸು ಮಾಡುವಂತೆ ಕಟ್ಟಿದ ಮನೆಯ ಸುಟ್ಟು ಕೆಡವಲು. ಒಂದೇ ಒಂದು ಮಾತು ಸಾಕು... ಬೆಸೆದು ಹೊಸೆದ ಬದುಕ ಬಾಂಧವ್ಯವ ಮುರಿಯಲು, ಜೀವಮಾನವಿಡೀ ಉಳಿಯುವ ನೋವನ್ನು ಹುಟ್ಟಿಸಲು. ಹೌದು ಒಂದೇ ಒಂದು ಕ್ಷಣದ ಆವೇಗ ಸಾಕು. ನಮ್ಮ ಬದುಕಿನ ದಿಕ್ಕನ್ನೇ ಬದಲಾಯಿಸಲು ಇನ್ನೆತ್ತಲೋ ಕೊಂಡೊಯ್ಯಲು. ಈ ಆವೇಗ, ಆವೇಶದ ಹಿಂದಿನ ಶಕ್ತಿಯೇ 'ಕೋಪ'.

ಈ ಕೋಪ ಎನ್ನುವುದು ಮನುಷ್ಯನ ಶತ್ರುವಲ್ಲ. ಅದು ಒಂದು ಭಾವನೆ. ಆದರೆ ಆ ಭಾವನೆಗೆ ನಾವು ಗುಲಾಮರಾದಾಗ ಅದುವೇ ನಮ್ಮ ಶತ್ರುವಾಗಿ ಪರಿಣಮಿಸುತ್ತದೆ. ಅದಕ್ಕಾಗಿಯೇ ಜಗತ್ತಿನ ಎಲ್ಲಾ ಧರ್ಮಗಳು, ಸಂಸ್ಕೃತಿಗಳು ಮತ್ತು ತತ್ವಜ್ಞಾನಿಗಳು ಹೇಳಿದ್ದು ಒಂದೇ – ಕೋಪವನ್ನು ಗೆಲ್ಲು; ಇಲ್ಲವಾದಲ್ಲಿ ಅದು ನಿನ್ನನ್ನೇ ಕೊಲ್ಲುತ್ತದೆ.

ಇಂದು ನಾವು ತಂತ್ರಜ್ಞಾನದ ಹಾದಿಯಲ್ಲಿ ಸಾಗಿ ಕೃತಕ ಬುದ್ಧಿಮತ್ತೆಯ ಕರಾಮತ್ತಿನೊಳಗೆ ಸಿಲುಕಿದ್ದೇವೆ, ಆಗಸವನ್ನು ಮುಟ್ಟಿದ್ದೇವೆ. ಆದರೆ ನಮ್ಮದೇ ಮನಸ್ಸಿನ ಕೋಪವನ್ನು ನಿಯಂತ್ರಿಸುವ ಕಲೆಯನ್ನು ಮಾತ್ರ ಇನ್ನೂ ಸಂಪೂರ್ಣವಾಗಿ ಕಲಿತಿಲ್ಲ (ಅನ್ನುವುದಕ್ಕಿಂತ ಕಲಿತೇ ಇಲ್ಲ ಅನ್ನುವುದೇ ಸರಿಯೇನೋ). ಪರಿಣಾಮವಾಗಿ ಮನೆಯಲ್ಲಿ, ಕಚೇರಿಯಲ್ಲಿ, ರಸ್ತೆಯಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಹೀಗೆ ಎಲ್ಲೆಂದರಲ್ಲಿ ನಮ್ಮ ಮಾತು-ವರ್ತನೆಗಳಲ್ಲಿ ಕೋಪದ ಜ್ವಾಲೆ ಸಿಡಿಯುವುದು ಸಾಮಾನ್ಯವಾಗಿದೆ.

ಯಾರಿಗೇ ಆಗಲಿ, ಸಾಮಾನ್ಯವಾಗಿ ಕೋಪವು ಕಾರಣವಿಲ್ಲದೆ ಬರುವುದಿಲ್ಲ. ಅದರ ಹಿಂದೆ ಗಾಯಗೊಂಡ ಸ್ವಯಂ/ಅಹಂ, ಕಳಚಿದ ನಿರೀಕ್ಷೆ, ನಿರಾಕರಣೆಯ ನೋವು ಅಥವಾ ಅಸಹಾಯಕತೆಯ ಭಾವನೆಯು ಇದ್ದೇ ಇರುತ್ತದೆ. ಒಬ್ಬ ವಿದ್ಯಾರ್ಥಿಯು ಕಡಿಮೆ ಅಂಕಗಳು ಬಂದಾಗ ಕೋಪಗೊಳ್ಳುತ್ತಾನೆ. ಪೋಷಕರು ಮಕ್ಕಳು ತಮ್ಮ ಮಾತುಗಳನ್ನು ಕೇಳದಿದ್ದಾಗ ಸಿಡಿಮಿಡಿಗೊಳ್ಳುತ್ತಾರೆ. ಉದ್ಯೋಗಿಯು ತನ್ನ ಪರಿಶ್ರಮಕ್ಕೆ ತಕ್ಕ ಮೌಲ್ಯವು ಸಿಗದಿದ್ದಾಗ ಸಿಟ್ಟಾಗುತ್ತಾನೆ. ರಾಜಕಾರಣಿಯು ಟೀಕೆಗಳನ್ನು ಸಹಿಸಲಾಗದೇ ಹೋದಾಗ ತನ್ನ ಆಕ್ರೋಶವನ್ನು ವ್ಯಕ್ತಪಡಿಸುತ್ತಾನೆ. ಹೀಗೆ ಹೆಚ್ಚಿನ ಸಂದರ್ಭಗಳಲ್ಲಿ ಕೋಪವು ಹೊರಗಿನ ಘಟನೆಗೆ ಪ್ರತಿಕ್ರಿಯೆಯಾಗಿರದೆ ಅದು ನಮ್ಮೊಳಗಿನ ಅಪೂರ್ಣ ನಿರೀಕ್ಷೆಗಳ ಪ್ರತಿಧ್ವನಿಯಾಗಿರುತ್ತದೆ.

ಒಮ್ಮೆ ಯೋಚಿಸಿ ನೋಡಿ. ಅದೆಷ್ಟು ಕುಟುಂಬಗಳು ಒಂದು ಕ್ಷಣದ ಕೋಪದ ಕಾರಣಕ್ಕೆ ಒಡೆದು ಹೋಗಿವೆ? ಅದೆಷ್ಟು ಸ್ನೇಹಗಳು ಒಂದೇ ಒಂದು ಮಾತಿನ ಕಾರಣದಿಂದ ಮುರಿದು ಹೋಗಿವೆ? ಅದೆಷ್ಟು ಪ್ರತಿಭಾವಂತರು ತಮ್ಮ ಆವೇಗದ ಕಾರಣದಿಂದ ಅವಕಾಶಗಳನ್ನು ಕಳೆದುಕೊಂಡಿದ್ದಾರೆ?

ಈ ಕೋಪದ ಕ್ಷಣದಲ್ಲಿ ವ್ಯಕ್ತಿ ಮಾತನಾಡುವುದಿಲ್ಲ; ಬದಲಾಗಿ ಕೋಪವೇ ಮಾತನಾಡುತ್ತದೆ. ರಸ್ತೆಯಲ್ಲಿ ಸಣ್ಣ ಅಪಘಾತವಾದಾಗ ಉಂಟಾಗುವ ಜಗಳಗಳು, ಸಾಮಾಜಿಕ ಜಾಲತಾಣಗಳಲ್ಲಿ ನಡೆಯುವ ಅನಗತ್ಯ ವಾದಗಳು, ಕುಟುಂಬಗಳಲ್ಲಿ ಕೇಳಿಬರುವ ಕಟುವಾದ ಮಾತುಗಳು ಇವೆಲ್ಲವೂ ಒಂದೇ ಸತ್ಯವನ್ನು ನೆನಪಿಸುತ್ತವೆ: ಕೋಪಕ್ಕೆ ದೂರದೃಷ್ಟಿ ಇರುವುದಿಲ್ಲ. ಅದು ಮೊದಲು ವ್ಯಕ್ತಿಯ ವಿವೇಕವನ್ನು ಸುಡುತ್ತದೆ, ನಂತರ ಸಂಬಂಧಗಳನ್ನು ನಾಶ ಮಾಡುತ್ತದೆ.

ನಮ್ಮ ಸಮಾಜದಲ್ಲಿಯೂ ಒಂದು ವಿಚಿತ್ರ ತಪ್ಪು ಕಲ್ಪನೆಯಿದೆ. ಅದು ಗಟ್ಟಿಯಾಗಿ ಕೂಗುವವನನ್ನು ಧೈರ್ಯಶಾಲಿ ಎಂದೂ, ಕೋಪದಿಂದ ವರ್ತಿಸುವವನನ್ನು ಪ್ರಭಾವಶಾಲಿ ಎಂದೂ ಭಾವಿಸುತ್ತದೆ. ಆದರೆ ನಿಜವಾದ ಶಕ್ತಿ ಇರುವುದು ತನ್ನ ಕೋಪವನ್ನು ಇತರರ ಮೇಲೆ ಸುರಿಸುವವನಲ್ಲಿ ಅಲ್ಲ, ತನ್ನ ಕೋಪವನ್ನು ಅರ್ಥಮಾಡಿಕೊಂಡು ನಿಯಂತ್ರಿಸುವವನಲ್ಲಿ ಮಾತ್ರ.

ಸಿಂಹವು ತಾನು ಕಾಡಿನ ರಾಜನೆಂದು ಕಂಡ ಕಂಡ ಪ್ರಾಣಿಯನ್ನು ನೋಡಿ ಗರ್ಜಿಸುವುದಿಲ್ಲ. ಜೊತೆಗೆ ತನ್ನ ಶಕ್ತಿಯ ಅರಿವು ಇರುವುದರಿಂದ ಅದು ಅನಗತ್ಯವಾಗಿ ಆಕ್ರೋಶಗೊಳ್ಳುವುದೂ ಇಲ್ಲ. ಅಂತೆಯೇ, ಆತ್ಮವಿಶ್ವಾಸವಿರುವ ವ್ಯಕ್ತಿಗೆ ತನ್ನ ಕೋಪವನ್ನು ಪ್ರದರ್ಶಿಸುವ ಅಗತ್ಯ ಕಡಿಮೆಯಿರುತ್ತದೆ.

ಹಾಗೆಂದು ಮನುಷ್ಯ ತನ್ನ ಕೋಪವನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಿಲ್ಲ. ಅದರ ಅಗತ್ಯವೂ ಅಲ್ಲ. ಅನ್ಯಾಯದ ವಿರುದ್ಧ ಧ್ವನಿ ಎತ್ತಲು, ಸಮಾಜದಲ್ಲಿ ಬದಲಾವಣೆ ತರಲು ಮತ್ತು ತಪ್ಪುಗಳನ್ನು ಪ್ರಶ್ನಿಸಲು ಕೋಪದ ಶಕ್ತಿಯೇ ಬೇಕಾಗುತ್ತದೆ. ಆದರೆ ಆ ಕೋಪವು ಬೆಂಕಿಯಂತೆ ಸುಡಬಾರದು; ಬೆಳಕಿನಂತೆ ದಾರಿ ತೋರಬೇಕು ಅಷ್ಟೇ.

ಒಬ್ಬ ಶಿಕ್ಷಕನು ವಿದ್ಯಾರ್ಥಿಯ ತಪ್ಪಿನ ಬಗ್ಗೆ ಕೋಪಗೊಂಡಾಗ ಅವನನ್ನು ಅವಮಾನಿಸಿದರೆ ಅದು ವಿನಾಶಕಾರಿ. ಅದೇ ಕೋಪವನ್ನು ಮಾರ್ಗದರ್ಶನವಾಗಿ ಪರಿವರ್ತಿಸಿದರೆ ಅದು ಶಿಕ್ಷಣವಾಗುತ್ತದೆ. ಅಂತೆಯೇ, ಒಬ್ಬ ನಾಗರೀಕನು ಭ್ರಷ್ಟಾಚಾರದ ವಿರುದ್ಧ ಕೋಪಗೊಂಡಾಗ ಹಿಂಸೆಗೆ ಇಳಿದರೆ ಅದು ಸಮಸ್ಯೆಯೆನಿಸುತ್ತದೆ. ಆದರೆ ಆ ಕೋಪವನ್ನು ಜಾಗೃತಿಯಾಗಿ ಪರಿವರ್ತಿಸಿದರೆ ಅದು ಸಾಮಾಜಿಕ ಪರಿವರ್ತನೆಯ ಶಕ್ತಿಯಾಗುತ್ತದೆ.

ನಮ್ಮ ಬದುಕಿನಲ್ಲಿ ಕೋಪವನ್ನು ನಿಯಂತ್ರಿಸಲು ಪಂಚ ಸೂತ್ರಗಳು ಸಹಕಾರಿ:

ಮೊದಲನೆಯದು– ಕೋಪ ಬಂದಾಗ ಉತ್ತರಿಸಲು ಹೋಗಬೇಡಿ. ಬಹುತೇಕ ಪಶ್ಚಾತ್ತಾಪಗಳಿಗೆ ತಕ್ಷಣದ ಪ್ರತಿಕ್ರಿಯೆಗಳೇ ಕಾರಣ. ಕೋಪದ ಕ್ಷಣದಲ್ಲಿ ವಹಿಸುವ ಮೌನಕ್ಕೆ ಯುದ್ಧವನ್ನೇ ತಡೆಯುವ ಶಕ್ತಿಯಿದೆ.

ಎರಡನೆಯದು– ಉಸಿರಿನತ್ತ ಗಮನ ಕೊಡಿ. ದೀರ್ಘ ಉಸಿರಾಟವು ನಮ್ಮ ಮನಸ್ಸಿನ ಆವೇಗವನ್ನು ಕಡಿಮೆಗೊಳಿಸುತ್ತದೆ. ಕೆಲವೇ ಕ್ಷಣಗಳ ವಿರಾಮ ಅನೇಕ ತಪ್ಪುಗಳನ್ನು ತಡೆಯುತ್ತದೆ.

ಮೂರನೆಯದು– ಗಮನಿಸಬೇಕಾಗಿರುವುದು ವ್ಯಕ್ತಿಯನ್ನು ಅಲ್ಲ, ಸಮಸ್ಯೆಯನ್ನು ಎಂಬುದು ನೆನಪಿರಲಿ. ಏಕೆಂದರೆ ವ್ಯಕ್ತಿಯ ಮೇಲೆ ದಾಳಿಯನ್ನು ಮಾಡಿದರೆ ಸಂಬಂಧವು ಹಳಸುತ್ತದೆ. ಬದಲಾಗಿ ಸಮಸ್ಯೆಯ ಬಗ್ಗೆ ಚರ್ಚಿಸಿದರೆ ಪರಿಹಾರವು ಸಿಗುತ್ತದೆ.

ನಾಲ್ಕನೆಯದು– ದೃಷ್ಟಿಕೋನವನ್ನು ಬದಲಿಸಿ. ನಮ್ಮ ಎದುರಿನಲ್ಲಿರುವ ವ್ಯಕ್ತಿಯ ಸ್ಥಾನದಲ್ಲಿ ನಿಂತು ಯೋಚಿಸಿದಾಗ ಅದೆಷ್ಟೋ ಸಲ ನಮ್ಮ ಕೋಪದ ತೀವ್ರತೆ ಬಹಳಷ್ಟು ಕಡಿಮೆಯಾಗುತ್ತದೆ.

ಐದನೆಯದು– ಕ್ಷಮಿಸುವುದನ್ನು ಕಲಿಯಿರಿ. ಕ್ಷಮೆ ಎನ್ನುವುದು ನಮ್ಮ ಎದುರಿನಲ್ಲಿರುವ ವ್ಯಕ್ತಿಗೆ ನೀಡುವ ಉಡುಗೊರೆಯಲ್ಲ; ಬದಲಿಗೆ ಅದು ನಮ್ಮ ಮನಸ್ಸಿಗೆ ನಾವೇ ನೀಡುವ ಬಿಡುಗಡೆ.

ಇತಿಹಾಸವನ್ನು ಅವಲೋಕಿಸಿ ನೋಡಿದರೆ ಜಗತ್ತಿನಲ್ಲಿ ಸಾವಿರಾರು ಯುದ್ಧಗಳು ನಡೆದಿವೆ. ಲಕ್ಷಾಂತರ ಜನರು ಇತರರನ್ನು ಸೋಲಿಸಿದ್ದಾರೆ. ಆದರೆ ಯಾರು ತಮ್ಮನ್ನು ತಾವು ಗೆದ್ದಿದ್ದಾರೋ ಅವರು ಮಾತ್ರ ಮಹನೀಯರಾಗಿದ್ದಾರೆ. ಹಾಗಾಗಿ ಒಬ್ಬ ವ್ಯಕ್ತಿ ಇಡೀ ಜಗತ್ತನ್ನೇ ಗೆದ್ದರೂ ತನ್ನ ಕೋಪವನ್ನು ತಾನು ಗೆಲ್ಲದಿದ್ದರೆ ಅವನ ವಿಜಯ ಅಪೂರ್ಣ. ಅದೇ ತನ್ನ ಕೋಪವನ್ನು ಗೆದ್ದ ವ್ಯಕ್ತಿ ಹೊರಗೆ ಸೋತವನಂತೆ ಕಂಡರೂ ಅಂತರಂಗದಲ್ಲಿ ಜಯಶಾಲಿಯಾಗಿರುತ್ತಾನೆ.

ಒಟ್ಟಿನಲ್ಲಿ, ಈ ಕೋಪ ಎಂಬುದು ಬೆಂಕಿಯಂತೆ. ಅದು ಮನೆಯನ್ನೂ ಸುಡಬಹುದು ಅಥವಾ ಜಗವನ್ನೂ ಬೆಳಗಬಹುದು. ಅದು ನಮ್ಮ ಕೈಯಲ್ಲಿರುವ ಶಕ್ತಿ; ಅದನ್ನು ನಾವು ಹೇಗೆ ಬಳಸುತ್ತೇವೆ ಎಂಬುದೇ ಮುಖ್ಯ. ಇಂದು ಜೀವನದಲ್ಲಿ ಅತ್ಯಂತ ಕಠಿಣ ಯುದ್ಧ ಏರ್ಪಡುವುದು ಹೊರಗಿನವರ ವಿರುದ್ಧವಲ್ಲ; ನಮ್ಮ ಅಂತರಂಗದೊಳಗೆ ಭುಗಿಲೇಳುವ ಕೋಪದ ಅಲೆಯ ವಿರುದ್ಧ.

ಭಾವುಕತೆ

ಪ್ರೀತಿ ಎಂದರೆ

'ಗುರುಗಳೇ, ನಿಜವಾದ ಪ್ರೀತಿ ಎಂದರೇನು?' ಎಂದು ಹತಾಶಗೊಂಡ ಯುವಕ ಕೇಳಿದ. ಜೆನ್ ಗುರು ತಮ್ಮ ಆಶ್ರಮದ ಹಿಂಭಾಗದಲ್ಲಿದ್ದ ಹೂವಿನ ತೋಟಕ್ಕೆ ಅವನನ್ನು ಕರೆದೊಯ್ದರು. ಈ ತೋಟದ ಆರಂಭದಿಂದ ಕೊನೆಯವರೆಗೂ ನಡೆದು ಹೋಗು. ನಿನಗೆ ಅತ್ಯಂತ ಸುಂದರವಾದ ಹೂವು ಕಂಡರೆ ಕಿತ್ತುಕೊಂಡು ಬಾ. ಆದರೆ ಒಂದು ಷರತ್ತು– ಹಿಂದಕ್ಕೆ ತಿರುಗಿ ಬರಬಾರದು.

ಯುವಕ ನಡೆಯತೊಡಗಿದ. ಸ್ವಲ್ಪ ದೂರದಲ್ಲಿ ಸುಂದರವಾದ ಹೂವು ಕಂಡಿತು. ಇದಕ್ಕಿಂತ ಚೆನ್ನಾದ ಹೂವು ಮುಂದೆ ಸಿಗಬಹುದು ಎಂದು ಮುಂದೆ ಹೋದ. ಮತ್ತೊಂದು ಹೂವು ಇನ್ನೂ ಸುಂದರ ವಾಗಿ ಕಾಣಿಸಿತು. ಇದಕ್ಕಿಂತಲೂ ಉತ್ತಮವಾದದ್ದು ಇರಬಹುದು ಎಂದು ಅದನ್ನೂ ಬಿಟ್ಟು ಮುಂದೆ ಸಾಗಿದ. ಹೀಗೆ ಕೊನೆಯವರೆಗೂ ಹೋಗುವಷ್ಟರಲ್ಲಿ ಎಲ್ಲ ಹೂವುಗಳೂ ಹಿಂದೆ ಉಳಿದಿದ್ದವು. ಕೈಯಲ್ಲಿ ಒಂದೂ ಹೂವಿಲ್ಲದೆ ಗುರುಗಳ ಬಳಿಗೆ ಹಿಂದಿರುಗಿದ.

ಗುರುಗಳು ನಗುತ್ತಾ ಹೇಳಿದರು: 'ನಿನ್ನ ಮುಂದೆ ಇರುವ ಒಳ್ಳೆಯ ವ್ಯಕ್ತಿಯನ್ನು ಅರ್ಥಮಾಡಿ ಕೊಳ್ಳದೆ, ಇನ್ನೂ ಉತ್ತಮ ವ್ಯಕ್ತಿಯ ಹುಡುಕಾಟ ದಲ್ಲಿ ಹೋದರೆ ಕೊನೆಗೆ ಖಾಲಿ ಕೈಯಾಗುವ ಸಾಧ್ಯತೆ ಇದೆ. ಪ್ರೀತಿ ಎಂದರೆ ಪರಿಪೂರ್ಣ ವ್ಯಕ್ತಿಯನ್ನು ಹುಡುಕುವುದಲ್ಲ; ನಮ್ಮ ಮುಂದೆ ಇರುವ ವ್ಯಕ್ತಿಯನ್ನು ಪೂರ್ಣ ಹೃದಯದಿಂದ ಸ್ವೀಕರಿಸುವುದು.'

ಸುತ್ತಮುತ್ತ

ಅರ್ಜುನ ಫಲ್ಗುಣ

ಮಳೆಗಾಲದಲ್ಲಿ ಜೋರಾಗಿ ಸಿಡಿಲು ಗುಡುಗು ಮಿಂಚು ಬಾರಿಸತೊಡಗಿದರೆ, ಭಾರತದ ಗ್ರಾಮೀಣ ಪ್ರದೇಶಗಳ ಜನ 'ಅರ್ಜುನ ಫಲ್ಗುಣ ಧನಂಜಯ ನರ ವಿಜಯ ಬಿಭತ್ಸು...' ಎಂದು ಪಾಂಡವನಾದ ಅರ್ಜುನನ ಹತ್ತು ಹೆಸರುಗಳನ್ನು ಹೇಳಲು ಶುರು ಮಾಡುತ್ತಾರೆ. ಇದ್ಯಾಕೆ ಹೀಗೆ? ಇದೊಂದು ಜಾನಪದ ನಂಬಿಕೆ. ಈ ಪದ ಗುಚ್ಛವನ್ನು ಪಠಿಸುವುದರಿಂದ ಗುಡುಗು ಸಹಿತ ಮಳೆಯ ಸಮಯದಲ್ಲಿ ಭಯಭೀತರಾದ ಮಕ್ಕಳು ಮತ್ತಿತರರನ್ನು ಶಾಂತಗೊಳಿಸಲು ಸಹಾಯ ಮಾಡುತ್ತದೆ. ಕಾರಣ, ಅರ್ಜುನ ಎಂದರೆ ಧೈರ್ಯ. ಅವನು ಮಳೆ ತರಿಸುವ ದೇವರಾದ ಇಂದ್ರನ ಮಗನೂ ಹೌದು. ಮಹಾಭಾರತದ ವಿರಾಟ ಪರ್ವದಲ್ಲಿ, ಕೌರವ ಸೇನೆಯನ್ನು ಕಂಡು ಹೆದರಿ ನಡುಗುತ್ತಿದ್ದ ಉತ್ತರ ಕುಮಾರನನ್ನು ಶಾಂತಗೊಳಿಸಲು ಅರ್ಜುನ ಇದೇ ಮಂತ್ರವನ್ನು ಉಪದೇಶಿಸಿದನಂತೆ.

ಮಾತು ಗೀತೆ

ದೇವರಿಗೆ ಇದು ಮೆಚ್ಚುಗೆ

'ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು | ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ' ಎನ್ನುತ್ತಾನೆ ಶ್ರೀಕೃಷ್ಣ ಭಗವದ್ಗೀತೆಯಲ್ಲಿ. ಅಂದರೆ, ನಿನ್ನ ಮನಸ್ಸನ್ನು ನನ್ನಲ್ಲಿ ನೆಲೆಗೊಳಿಸು, ನನ್ನನ್ನು ಪ್ರೀತಿಸು, ನನ್ನನ್ನು ಆರಾಧಿಸು. ಆಗ ನೀನು ನನ್ನನ್ನು ಸೇರುವೆ. ಭಕ್ತಿ ಎಂದರೇನು, ಭಕ್ತಿ ಮಾಡುವುದು ಹೇಗೆ ಎಂದು ಕೇಳುವವರಿಗೆ ಇದು ಉತ್ತರ. ದೇವರಲ್ಲಿ ಪ್ರೀತಿ ಎಂದರೆ ಸಂಪೂರ್ಣ ಸಮರ್ಪಿಸಿಕೊಳ್ಳುವುದು. ಪ್ರೀತಿ ಎಂದರೆ ಕರುಣೆ ಮತ್ತು ಸ್ವೀಕಾರ. ನೀನು ನನಗೆ ಅತ್ಯಂತ ಪ್ರಿಯನು ಎನ್ನುತ್ತಾನೆ ಭಗವಂತ. ಆದರೆ ನಾವು ಭಗವಂತನಿಗೆ ಪ್ರಿಯರು ಎಂಬುದು ನಮಗೇ ಗೊತ್ತಿಲ್ಲ. ಅವನನ್ನು ಮೆಚ್ಚಿಸಲು ನಾವು ಪ್ರಯತ್ನಿಸ ಬೇಕಿಲ್ಲ, ನಮ್ಮ ಪ್ರಜ್ಞೆಯೇ ಆಗಿರುವ ಈ ಹೊರಜಗತ್ತಿನ ದೀನದಲಿತರನ್ನು ಸುಖವಾಗಿಡುವ, ಸಂಕಟದಲ್ಲಿರುವ ದೀನದರಿದ್ರರನ್ನು ಮೇಲೆತ್ತುವ ಯತ್ನ ಮಾಡುವುದು ಭಗವಂತನಿಗೆ ಅತ್ಯಂತ ಮೆಚ್ಚುಗೆ ಆಗುವ ಕಾಯಕ.

ಹನಿ ಹನಿ ಕವಿತೆ

ಹಂಬಲಿಕೆ

ಕೊಡುವ ಜೀವ ಇಡುವುದಿಲ್ಲ
ತುತ್ತು ಮುತ್ತುಗಳ ಎಣಿಕೆ
ಪಡೆದ ಜೀವಕ್ಕೆ ಅದು
ಕೊನೆಯುಸಿರವರೆಗಿನ ಹಂಬಲಿಕೆ

-ನೀತಾ ಶೆಣೈ ಮಂಗಳೂರು

ಮನೆಯಾಗಲಿ ಕಲಕಲ ನಂದಗೋಕುಲ

• ಶಂಕರನಾರಾಯಣ ಭಟ್, ಹೊನ್ನಾವರ

ಈ ಹಿಂದೆಲ್ಲ ಮಧ್ಯಮ ವರ್ಗದವರ ಜೀವನ ಶೈಲಿ ಹೇಗಿತ್ತು? ಬ್ರೆಡ್ ತಿನ್ನಬೇಕು ಅಂದ್ರೆ ಜ್ವರ ಬರಲೇ ಬೇಕು. ಹೊಸ ಬಟ್ಟೆ ತೊಡಬೇಕೆಂದ್ರೆ ಹಬ್ಬಗಳೇ ಬರಬೇಕು. ಹಿರಿಯರ ಬಟ್ಟೆ, ಪಠ್ಯ-ಪುಸ್ತಕ ಕಿರಿಯರು ಬಳಸಲೇ ಬೇಕು. ಹೋಳಿಗೆ ತಿನ್ನಬೇಕೆಂದ್ರೆ ಯುಗಾದಿ, ಕಜ್ಜಾಯ ತಿನ್ನೋಕೆ ಮಹಾಲಯ ಬರಲೇ ಬೇಕು. ದ್ರಾಕ್ಷಿ – ಗೋಡಂಬಿ ತಿನ್ನಬೇಕೆಂದ್ರೆ, ಹಬ್ಬಕ್ಕೆ ಪಾಯಸ ಮಾಡಬೇಕು. ನೆಂಟರ ಊರಿಗೆ ಹೋಗಬೇಕೆಂದ್ರೆ ಸಂಬಂಧಿಕರ ಮನೆಯಲ್ಲಿ ಮದುವೆ, ಮುಂಜಿ ಇತರೆ ಕಾರ್ಯಕ್ರಮ ಇರಲೇಬೇಕು. ಹೊಸ ಪೇಸ್ಟ್ ಬಳಸಬೇಕು ಅಂದ್ರೆ, ಹಳೆಯದು ಸಂಪೂರ್ಣ ಮುಗಿದು, ಅದನ್ನೂ ಕತ್ತರಿಸಿ ಅದರೊಳಗೆ ಹುದುಗಿದ್ದ ಪೇಸ್ಟನ್ನೂ ಹೊರಗೆಳೆದು ಖರ್ಚು ಮಾಡಬೇಕು. ಹೊಸ ಸ್ಲಿಪರ್ ಬೇಕೆಂದರೆ ಹಳೆಯದು ಇನ್ನೇನು ಉಪಯೋಗಕ್ಕೇ ಬಾರದು ಎನ್ನುವಂತಾಗಬೇಕು.(ಚಪ್ಪಲ್ಲೇ ಇರುತ್ತಿರಲಿಲ್ಲ, ಅದು ಬೇರೆ). ಹಳೆ ಬಟ್ಟೆ, ಕಾಲೊರೆಸುವ ಮ್ಯಾಟ್ ಆದ ಮೇಲೇ ಹೊಸ ಬಟ್ಟೆ ಪ್ರವೇಶ. ಅಕ್ಕ ಪಕ್ಕದವರಿಂದ ಈರುಳ್ಳಿ, ಬಟಾಟೆ, ಬೆಳ್ಳುಳ್ಳಿ ಕೈಗಡ, ಅನಿವಾರ್ಯದಲ್ಲಿ ನೂರು – ಇನ್ನೂರು ರುಪಾಯಿ ಸಾಲ, ಅದೇ ಭಾರ.



ಇಷ್ಟಾದರೂ 'ಇಲ್ಲ' ಎಂಬ ಕೊರಗಿಲ್ಲ; 'ಬೇಕು' ಎಂಬ ಆಸೆಯೂ ಇಲ್ಲ. ಇದ್ದಿದ್ದರಲ್ಲೇ ಸಂತೃಪ್ತಿ ಪಟ್ಟುಕೊಳ್ಳುವ ಆ ದಿನಗಳು. ಆದರೆ ...ಇಂದು? ಮನೆಗಳಾಗುತ್ತಿವೆ ಮಹಡಿಗಳಿಂದ ಎತ್ತರ.. ಎತ್ತರ, ಮನಸುಗಳೇ ಆಗುತ್ತಿಲ್ಲ ಹತ್ತಿರ... ಹತ್ತಿರ! ಸಂತೃಪ್ತಿ ಎಂಬುದಕ್ಕೇ ಸಿಗುತ್ತಿಲ್ಲ ಉತ್ತರ. ಇಂದು, ಮನೆಯಲ್ಲಿ ಅನ್ನವೇ ಬೇಯುತ್ತಿಲ್ಲ; ಮನಸುಗಳು ಮಾತ್ರ ಕುದಿಯುತ್ತಿವೆ. ಅಡುಗೆ ಮನೆ ಸದಾ ಖಾಲಿ ಖಾಲಿ. ಬಂಧುಗಳೇ ಬಾರದ, ಸ್ನೇಹಿತರೂ ಸೇರದ ಮನೆಗಳ ಮುಂದೆ ಕಾವಲುಗಾರ, ಮನೆಸುತ್ತ ಗೇಟು ಭದ್ರ; ಒಳಗಿರುವ ಮನಸು ಮಾತ್ರ ಛಿದ್ರ – ಛಿದ್ರ!

ಅಂದು, ಕಣಜದ ತುಂಬಾ ದವಸ- ಧಾನ್ಯ ತುಂಬಿರುತ್ತಿತ್ತು. ಬಂಧು – ಬಳಗದ ನಡುವೆ ಅನುಬಂಧವಿತ್ತು. ಎಲ್ಲರೊಟ್ಟಿಗೆ ಮನೆಯೂ ನಗೆಯಾಡುತ್ತಿತ್ತು. ಮನೆ ಚಿಕ್ಕದಾದರೂ, ಮನ ಚೊಕ್ಕವಾಗಿತ್ತು. ಅಂದು ಅಜ್ಜ ಕಟ್ಟಿದ ಮಣ್ಣಿನ ಗೋಡೆ ಮನೆಯಲ್ಲಿ ನಲಿವಿತ್ತು, ಒಲವಿತ್ತು, ಸಂತಸದ ಸೆಲೆಯಿತ್ತು. ಮುಖ್ಯ ಬಾಗಿಲು ಚಿಕ್ಕದಿತ್ತು, ತಲೆ ಬಾಗಬೇಕಿತ್ತು. ಮಾಡು ಚಿಕ್ಕದು, ಬದುಕು ದೊಡ್ಡದು. ಚಾಪೆಯಾದರೂ ಸರಿ, ನಿದ್ದೆ ಬರುತ್ತಿತ್ತು. ಅಂದು ಮದುವೆಯೂ ಮನೆಯಲ್ಲಿ, ಮಗುವೂ ಮನೆಯಲ್ಲಿ! ಮಕ್ಕಳ ಸಂಭ್ರಮವಿತ್ತು, ಅವರ ಬಾಲ್ಯದ ಸವಿನೆನಪಿತ್ತು. ಕಷ್ಟಗಳ ಗೆದ್ದಗೆಲುವಿನ ದ್ಯೋತಕವಿತ್ತು. ಬದುಕಿನ ಸಾಧಕ – ಬಾಧಕಗಳೆಲ್ಲವೂ ಇತ್ತು. ಇಂದು, ಮನೆ ಎಂದರೆ ರಾಜನಿಲ್ಲದ ಅರಮನೆ, ನೆರೆಮನೆ ಹಂಗಿಲ್ಲದ ಸೆರೆಮನೆ! ಬಂಧುತ್ವಗಳು ಬಂಧನದಲ್ಲಿವೆ. ಸ್ನೇಹ, ಸಂಬಂಧಗಳಲ್ಲೂ ತೋರಿಕೆ, ತಾತ್ಸಾರ. ನಂಬಿಕೆ, ಒಗ್ಗಟ್ಟು ಬಹು ದೂರ.

ಮತ್ತೆ ಬರಲಿ ಆ ಕಾಲ, ಆಗಲಿ ಮನೆ ಮನೆಗಳೂ ನಂದಗೋಕುಲ. ಆಗಲಿ ದ್ವೇಷ, ಸ್ವಾರ್ಥ, ಮತ್ಸರಗಳಿಗೆ ಸೋಲು, ಸ್ಪಷ್ಟವಾಗಲಿ ಶ್ರೀಮಂತಿಕೆಗಿಂತ ಹೃದಯವಂತಿಕೆ ಮೇಲು!

ಅಮ್ಮನಿಗೆ ಎಡೆಯಿಟ್ಟು ಕಳಿಸೋದು!

• ಕೆ. ಶ್ರೀನಿವಾಸ ರಾವ್, ಹರಪನಹಳ್ಳಿ

ಕಾಲ ಎಷ್ಟೇ ಬದಲಾದರೂ ಎಐ ಯುಗ ಬಂದರೂ, ನಮ್ಮ ನಡೆ ನುಡಿಗಳಲ್ಲಿ ವ್ಯತ್ಯಾಸ ಕಂಡರೂ ನಮ್ಮ ಜನರ ನಂಬಿಕೆಗಳು ಮಾತ್ರ ಎಂದಿಗೂ ಬದಲಾಗುವುದಿಲ್ಲ. ಪೂಜೆ ಪುನಸ್ಕಾರ, ಹರಕೆ ಇತರೆ ಆಚರಣೆಗಳು ನಿಲ್ಲುವುದಿಲ್ಲ. ಕೆಲವೊಂದು ವಿಶಿಷ್ಟವೂ ಕೂಡಾ! ಉದಾಹರಣೆಗೆ ಕಟ್ಟಿಗೆಯ ಪುಟ್ಟ ವಿಕಾರ ಗೊಂಬೆಯನ್ನು ಸಣ್ಣ ತಳ್ಳುವ ಗಾಡಿಯ ಮೇಲೆ ಕೂರಿಸಿ ಒಂದೂರಿಂದ ಮುಂದಿನ ಊರಿಗೆ ತಳ್ಳಿಕೊಂಡು ಹೋಗಿ ಬಿಟ್ಟು ಬರುವ ವಿಚಿತ್ರ ಆಚರಣೆಯೊಂದಿದೆ. ಇದರಿಂದ ತಮ್ಮ ಊರಿಗೆ ಬರ, ಮಳೆಯ ಅಭಾವ, ರೋಗ ರುಜಿನಗಳ ಸಮಸ್ಯೆ ಬರದೇ ಜನರು ಕ್ಷೇಮದಿಂದ ಇರುವರೆಂಬ ನಂಬಿಕೆ. ಹಾಗಾಗಿ ಅದು ಪಕ್ಕದ ಊರಿಗೆ ಹೋಗಲಿ ಎಂದು ಗಾಡಿಯಲ್ಲಿನ ಗೊಂಬೆಯನ್ನು ಆ ಊರಿಗೆ ಸಾಗಿಸುತ್ತಾರೆ. ಪಕ್ಕದ ಊರಿನವರು ಮುಂದಿನ ಊರಿಗೆ ಪಾರ್ಸೆಲ್ ಮಾಡುತ್ತಾರೆ. ಹಾಗಾಗಿ ಆ ಗೊಂಬೆ ಯಾವುದೋ ಕಾರಣದಿಂದ ನಾಶವಾಗುವವರೆಗೂ ಟ್ರಾವೆಲ್ ಮಾಡುತ್ತಲೇ ಇರುತ್ತದೆ. ಇದು ಮಲೆನಾಡಿನ ಭಾಗದಲ್ಲಿ ಅಧಿಕ!

ಇದೇ ರೀತಿಯ ಮತ್ತೊಂದು ಆಚರಣೆ ಬಯಲುಸೀಮೆ ಭಾಗದಲ್ಲಿ ಕಾಣಸಿಗುತ್ತದೆ. ಇಲ್ಲಿ ಜನಸಂಖ್ಯೆ ಕಡಿಮೆಯಿರುವ ಊರಾದರೆ ಅಲ್ಲಿನ ಪ್ರತಿಯೊಂದು ಮನೆಯವರು ಪ್ರತ್ಯೇಕವಾಗಿ ಹೋಳಿಗೆಗಳನ್ನು ತಯಾರಿಸಿ ಮೊರವೊಂದರಲ್ಲಿ ಬಾಳೆಎಲೆಯ ಮೇಲಿಟ್ಟು ಜೊತೆಗೆ ಬೇವಿನ ಸೊಪ್ಪು, ಅನ್ನ, ಪೂರಿ, ಕರ್ಜಿಕಾಯಿ ಪಲ್ಯ ಇಟ್ಟು ಅರಿಶಿನ, ಕುಂಕುಮ, ವೀಳ್ಯದೆಲೆ, ಅಡಿಕೆ, ಹೂವು ಹಾಕಿ ಭಕ್ತಿಯಿಂದ ಪೂಜಿಸಿ ಊರ ಹೊರಗೆ ಸಾಲಾಗಿ ತಂದು ಇಡುತ್ತಾರೆ. ಕೆಲವೆಡೆ ತಂದಿಡುವವರೆಗೂ ಮಾತನಾಡುವುದಿಲ್ಲ. ವಿಶೇಷವೆಂದರೆ ಬಡವ, ಶ್ರೀಮಂತ, ಆ ಜಾತಿ, ಈ ಜಾತಿ ಎಂಬ ಯಾವುದೇ ಭೇದಕ್ಕೆ ಇಲ್ಲಿ ಅವಕಾಶವಿಲ್ಲ. ಎಲ್ಲರೂ ತಂದಿಟ್ಟ ನಂತರ ಹಿಂದೆ ನೋಡದೇ ಮನೆಗೆ ತೆರಳುತ್ತಾರೆ. ಅದನ್ನು ಯಾರೂ ಸೇವಿಸುವುದಿಲ್ಲ. ದನಕರುಗಳು, ಪ್ರಾಣಿ ಪಕ್ಷಿಗಳ ಪಾಲಿಗೆ ಭೂರಿ ಭೋಜನ! ಈ ಆಚರಣೆಯಿಂದ ಊರಮ್ಮ ದೇವಿ ಸಂತುಷ್ಟಳಾಗಿ ಉತ್ತಮ ಮಳೆ ಬೆಳೆ, ಸುಖ, ಸಮೃದ್ಧಿ, ಶಾಂತಿ ಒದಗುವುದೆಂದು ಜನರ ನಂಬಿಕೆ. ಇದು ಬಹುತೇಕ ವಾಸ್ತವವೂ ಆಗಿದೆ. ಈ ಆಚರಣೆಯಲ್ಲಿ ವಿಶ್ವಕರ್ಮ ಜನಾಂಗದವರೇ ಮೊದಲ ಪೂಜೆ ಮಾಡಬೇಕೆಂಬ ನಿಯಮವಿದೆ! ಮಧ್ಯ ಕರ್ನಾಟಕದ ಭಾಗಗಳಲ್ಲಿ ಇದಕ್ಕೆ ಅಜ್ಜಿಯನ್ನು ಕಳಿಸುವುದು ಎನ್ನುತ್ತಾರೆ.

• ಬಿ.ಕೆ.ಮೀನಾಕ್ಷಿ, ಮೈಸೂರು

ಅಧ್ಯಾತ್ಮದ ತುಡಿತ ಕಲೆಯ ಮಿಡಿತ

ಸರಕಾರದ ಕೆಲಸ ಬೇಡ, ಅಧ್ಯಾತ್ಮವೇ ಅದಕ್ಕಿಂತ ಮುಖ್ಯ ಎಂದ ಮಧುರ ಚೆನ್ನ ಅವರ ಕುರಿತ ನಾಟಕವು, ಪ್ರೇಕ್ಷಕರ ಮನ ಸೆಳೆಯಿತು.

ಮಧುರಚೆನ್ನರ ಜೀವನದ ಕುರಿತಾದ ಒಂದು ಪ್ರದರ್ಶನ ಇತ್ತೀಚೆಗೆ ಮೈಸೂರಿನ ಪ್ರೇಕ್ಷಕರ ಮನಸೆಳೆಯಿತು. ನವಿರಾದ ನಿರೂಪಣೆ, ಮೃದುವಾದ ಮಾತುಗಾರಿಕೆ, ಹದವಾದ ಹಾಡುಗಾರಿಕೆಯಿಂದ ನೋಡುಗರನ್ನು ಸೆಳೆದುಕೊಂಡಿತು. ಇದರಲ್ಲಿ, ಅಭಿನಯವಾಗಲೀ ನಾಟಕೀಯತೆಯಾಗಲೀ ಮನರಂಜನೆಗಾಗಿ ಹೆಣೆದ ಕತೆಯಾಗಲೀ ಇಲ್ಲದಿದ್ದರೂ, ಮಧುರಚೆನ್ನರು ಬದುಕಿದ ರೀತಿಯನ್ನು, ಅವರ ಅಧ್ಯಾತ್ಮದ ಒಲವನ್ನು, ಗೆಳೆಯರ ಬಂಧವನ್ನು ಸೊಗಸಾಗಿ ಬಿಡಿಸಿಟ್ಟ ಜಗದೇವ ಗಲಗಲಿಯವರ ಪ್ರಸ್ತುತಿ ಅಭಿನಂದನಾರ್ಹ.

ಮಧುರಚೆನ್ನರ ಬಡತನದ ಬಾಲ್ಯದಿಂದ, ಅಂತ್ಯಕಾಲದವರೆಗೂ ಹೇಗೆ ಬದುಕಿದ್ದರೆಂಬುದನ್ನು ಧ್ವನಿಗಳ ಏರಿಳಿತದಲ್ಲೇ ಪ್ರೇಕ್ಷಕರ ಮುಂದೆ ತೆರೆದಿಟ್ಟ ಜಗದೇವ ಗಲಗಲಿಯವರ ಪ್ರತಿಭೆ ಅನುಮಪಮವಾದದ್ದು. ಇವರ ಮಾತಿಗೆ ಮೆರುಗು ನೀಡುವಂತೆ ಬಿ. ಆರ್. ಬನಸೋಡೆಯವರ ಸಂಗೀತ ಆಹ್ಲಾದ ನೀಡಿತು. ಮೂಲ್ಕಿ ಪರೀಕ್ಷೆಯನ್ನು ಆಗಿನ ಮುಂಬಯಿ ಕರ್ನಾಟಕ ಪ್ರಾಂತ್ಯಕ್ಕೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದ ಮಧುರಚೆನ್ನರನ್ನು ಅನೇಕ ಉದ್ಯೋಗಗಳು ಅರಸಿಬಂದರೂ ಯಾವುದನ್ನೂ ಒಪ್ಪದೆ, 'ಸರ್ಕಾರದ ಸೇವೆ ಬೇಡ, ದೇವರ ಸೇವೆ ಬೇಕ'ು ಎಂದು ಎಲ್ಲವನ್ನೂ ತಿರಸ್ಕರಿಸಿದರಂತೆ. ಇಂಗ್ಲಿಷ್ ಮತ್ತು ಸಂಸ್ಕೃತ ಕಲಿಕೆಗಾಗಿ ಹುಟ್ಟಿದೂರು ತೊರೆದು ಹೋದವರು, ಬಾಲ್ಯವಿವಾಹವಾಗಿದ್ದ ವಧು, ಋತುಮತಿಯಾದ ಕಾರಣ ಸಂಸಾರಜೀವನಕ್ಕೆ ಕಾಲಿಡಲು ಅಜ್ಜಿ ಅಂಬವ್ವನ ಒತ್ತಾಯದಿಂದ ಎರಡೇ ತಿಂಗಳಿಗೆ ಹಿಂದಿರುಗಿದರು.

ಮುಲ್ಕಿ ಪರೀಕ್ಷೆ ಮಾತ್ರ ಪಾಸಾಗಿದ್ದ ಚೆನ್ನಬಸಪ್ಪನವರು ಇಪ್ಪತ್ತೆರಡು ಭಾಷೆಗಳನ್ನು ಮಾತನಾಡುತ್ತಿದ್ದರು. ದೇವರನ್ನು ಕಾಣುವ ಅಭೀಪ್ಸೆ, ಕೇವಲ ಹನ್ನೆರಡನೇ ವರ್ಷದಲ್ಲೇ ಇವರಲ್ಲಿ ಮೊಳೆತು, ದೇವರ ಬಗ್ಗೆ ತಿಳಿಯುವ ಕುತೂಹಲದಿಂದ ಭಾಷೆಗಳನ್ನು ಕಲಿತು ಎಲ್ಲೆಡೆಯೂ ಭಗವಂತನನ್ನರಸುವ ಪ್ರವೃತ್ತಿ ಬೆಳೆಯಿತು; ಇವರ ಲೇಖನಿಯಿಂದ ಹೊರಬಂದ ಕೃತಿಗಳೂ ಕೂಡ ಭಗವಂತನ ಕುರಿತಾದದ್ದೇ ಹೆಚ್ಚು.

ಸಿಂಪಿ ಲಿಂಗಣ್ಣ, ಪಿ. ಧೂಲಾ, ಮಾದಣ್ಣ ಒಲೆಕಾರ ಮುಂತಾದ ಅನೇಕ ಆತ್ಮೀಯ ಗೆಳೆಯರೊಂದಿಗೆ ಸ್ನೇಹ ಹೊಂದಿದ್ದ ಚೆನ್ನಬಸಪ್ಪನವರು, 'ಮಧುರಚೆನ್ನ' ಎಂಬ ಕಾವ್ಯನಾಮವನ್ನಿಟ್ಟುಕೊಂಡಿದ್ದಕ್ಕೂ ಗೆಳೆಯರ ಮೇಲಿನ ಪ್ರೇಮವೇ ಕಾರಣವಾಗಿದೆ. ನಮ್ಮ ಬೇಂದ್ರೆಯಜ್ಜನವರ ಜೊತೆಗಿನ ಇವರ ಅನುಪಮವಾದ ಸ್ನೇಹ ಕೊನೆಕೊನೆಗೆ ಸಹೋದರತ್ವಕ್ಕೆ ತಿರುಗಿ, ಮಧುರಚೆನ್ನರು ಮರಣ ಹೊಂದಿದಾಗ ಮೊದಲ ಹಿಡಿಮಣ್ಣನ್ನು ಬೇಂದ್ರೆಯವರೇ ಮಧುರಚೆನ್ನರ ಪಾರ್ಥಿವಶರೀರಕ್ಕೆ ಹಾಕಿದ್ದರು.

ಗಣೇಶ ಅ್ಯಾನಗಡ ಅವರ ನಿರ್ದೇಶನದಲ್ಲಿ ಪ್ರಸ್ತುತಗೊಂಡ ಈ ಏಕವ್ಯಕ್ತಿ ಪ್ರದರ್ಶನದಲ್ಲಿ ಎಲ್ಲಿಯೂ ವಿಜೃಂಭಣೆಯಿಲ್ಲ, ಪಾತ್ರದ ವೈಭವೀಕರಣವಿಲ್ಲ; ಸರಳ ವೇದಿಕೆ; ಸಂಭಾಷಣೆ ಕೂಡಾ ಆಪ್ತವಾಗಿದೆ. ಜಗದೇವ ಗಲಗಲಿಯವರ ಶಾಂತಮುಖಮುದ್ರೆ. ಮಾತಿನ ಮೃದುತ್ವ, ಬಳಸಿದ ಭಾಷಾ ತಿರುಳು ಮನೋಹರವಾಗಿದೆ.

ವಿಶೇಷವೆಂದರೆ, ಪಾತ್ರವನ್ನು ನಿರ್ವಹಿಸಿದ ಜಗದೇವರು, ಮಧುರಚೆನ್ನರ ಮೊಮ್ಮಗ. ಈ ನಾಟಕದ ಮೂಲ ಕತೆ, ಮೈಸೂರು ವಾಸಿಯಾದ ದೇವಪ್ರಿಯ ಗಲಗಲಿಯವರು, ಮಧುರಚೆನ್ನರ ಪುತ್ರರು. ವೈದ್ಯರಾದ ದೇವಪ್ರಿಯರು ತೊಂಭತ್ತನಾಲ್ಕು ವರ್ಷದ ವಯೋ-ಜ್ಞಾನವೃದ್ಧರು. ಕರ್ನಾಟಕದ ಹಲವು ಕಡೆ ಪ್ರದರ್ಶನ ಕಾಣುತ್ತಿರುವ ಈ ಏಕವ್ಯಕ್ತಿ ಪ್ರದರ್ಶನ, ಮಧುರಚೆನ್ನರ ಬದುಕನ್ನು, ಅಧ್ಯಾತ್ಮದತ್ತ ಅವರಿಗಿದ್ದ ಹಂಬಲವನ್ನು ನೋಡುಗರ ಮುಂದಿಟ್ಟು, ಅವರನ್ನು ಜನತೆಯೆಡೆಗೆ ಕೊಂಡೊಯ್ಯುತ್ತಿದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ತಿರುಗಿ ಬಂದಿರುವ ನೋವು (2)
3. ತೀಕ್ಷ್ಣ ಬುದ್ಧಿಯವನನ್ನು ಹೀಗೆನ್ನುವರು (5)
5. ಹಕ್ಕಿಗಳೆಲ್ಲ ಗೂಡಿಗೆ ಮರಳುವ ಸಂಜೆಯ ಹೊತ್ತು (4)
6. ಹೆದರಿಕೆ ಎನ್ನಲು ಎರಡಕ್ಷರ ಸಾಕು (2)
7. ಪತಿಯ ಜೊತೆಗೆ ಬಂದ ಹೆಂಡತಿ (2)
8. ಒರೆ ಅಥವಾ ಡೊಂಕು (2)
10. ಕೂಲಂಕಷವಾಗಿ ನಡೆಸುವ ವಿಚಾರಣೆ (4)
12. ಸೋಲು ಎನ್ನಲು ಮತ್ತೊಂದು ಪದ (4)
16. ಅಮಲು ಅಥವಾ ಸೊಕ್ಕು (2)
17. ಪ್ರಾಣಿ, ಪಕ್ಷಿಗಳನ್ನು ಹಿಡಿಯುವ ಜಾಲ (2)
18. ಎಲ್ಲರಿಗೂ ಇಷ್ಟವಾಗುವ ಅವರವರ ಗೃಹ (2)
19. ನಮ್ಮಿಂದ ದೂರದಲ್ಲಿರುವವರ ಜೊತೆಗೆ ಮಾತನಾಡಲು

ಮೇಲಿಂದ ಕೆಳಕ್ಕೆ

2. ಹೊಲಗದ್ದೆಗಳಲ್ಲಿ ಮಾಡುವ ಕೃಷಿ (3)
3. ವಿಶ್ವವಿದ್ಯಾಲಯದ ಮುಖ್ಯಸ್ಥ (4)
4. ಮನದನ್ನೆಯ ಪ್ರೀತಿಗೆ ಪಾತ್ರನಾದವನು (5)
6. ಶ್ರೀರಾಮನ ವನವಾಸ ಮುಗಿಯುವ ತನಕ ಅವನ ಪಾದುಕೆಯನ್ನಿಟ್ಟುಕೊಂಡೇ ರಾಜ್ಯಭಾರ ನಡೆಸಿದವನು (3)
9. ಊರುಭಂಗ, ಕರ್ಣಭಾರ ಮೊದಲಾದ ಪ್ರಸಿದ್ಧ ಸಂಸ್ಕೃತ ನಾಟಕಗಳ ರಚನೆಕಾರ (2)
11. ತನ್ನ ಮೂಲಕ ಬೆಳಕನ್ನು ಹರಿಯಲು ಬಿಡುವ ಎಂದರ್ಥ (5)
13. ಮಣ್ಣಿನೊಡನೆ ನೀರು ಬೆರೆತು ಉಂಟಾದ ಕೆಸರು (2)
14. ಮಾನವನ ಚಾರಿತ್ರ್ಯವೂ ಆಗಬಲ್ಲ ರೂಢಿ (3)
15. ಸಮ್ಮತಿ ಅಥವಾ ಮೆಚ್ಚಿಗೆಯಿಂದ ಶಿರವನ್ನು ಅಲ್ಲಾಡಿಸು ಎಂದರ್ಥ (4)
18. ಸೋಲಿಸು ಎನ್ನುವುದು ಬೆಲೆಬಾಳುವ ರತ್ನದೊಂದಿಗೆ ಬಂದಿದೆ (3)

ಸರಿಯುತ್ತರಗಳು

[illegible]

ಹರಿಭಕ್ತಿಸಾರ: ಕಾಗಿನೆಲೆಯ ಆದಿಕೇಶವನ ಸಾಕ್ಷಾತ್ಕಾರ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕನಕದಾಸರು ಕಾಗಿನೆಲೆಯ ಆದಿಕೇಶವನ ದೇವಸ್ಥಾನವನ್ನು ಹಂತ ಹಂತವಾಗಿ ಜೀರ್ಣೋದ್ಧಾರ ಮಾಡಿ ಗರ್ಭಗುಡಿಯೊಳಗೆ ನಿಂತು ಭಗವಂತನ ವಿಶ್ವರೂಪವನ್ನು ಕಣ್ತುಂಬಿ ಕೊಳ್ಳುತ್ತಿದ್ದಂತೆ ಹೊರಗೆ ನಿಂತಿದ್ದ ಜನರಲ್ಲಿ ಗಲಾಟೆ ಹೆಚ್ಚಾಯಿತು. ದಾಸನೇ, ಗರ್ಭಗುಡಿಯಿಂದ ಹೊರಗೆ ಬಾ, ನೀನು ಕೆಳಜಾತಿಯವನು, ಮೂರ್ತಿಯನ್ನು ಮುಟ್ಟಿ ಮೈಲಿಗೆ ಮಾಡಬೇಡ ಎಂದು ಕೆಲವರು ಕೂಗಾಡಿದರು.

ಆಗ ಕನಕದಾಸರು ಶಾಂತವಾಗಿ ಹೊರಬಂದು, ನಿಮ್ಮ ಆಕ್ಷೇಪಣೆ ಮೂರ್ತಿಯನ್ನು ನಾನು ಮುಟ್ಟ ಬಾರದು ಎಂದಷ್ಟೇ ತಾನೇ? ಹಾಗಾದರೆ ಭ'ಗವಂತನೇ ಬಂದು ತನ್ನ ಸ್ಥಾನದಲ್ಲಿ ಕುಳಿತುಕೊಳ್ಳಲಿ ಎಂದು ನುಡಿದರು. ಅವರು ಕಾಗಿನೆಲೆಯ ಲಕ್ಷ್ಮಿ ನರಸಿಂಹ ಮತ್ತು ಆದಿಕೇಶವನ ವಿಗ್ರಹಗಳ ಮುಂದೆ ನಿಂತು, ತಮ್ಮ ತಂಬೂರಿ ಮೀಟುತ್ತಾ ಕಣ್ಣೀರ ಕಡಲಲ್ಲಿ ಮುಳುಗಿದರು.

ಅವರ ಭಕ್ತಿಯ ಆರ್ದ್ರತೆಗೆ ಕರಗಿದ ಕಾಗಿನೆಲೆಯ ಆದಿಕೇಶವನ ಕಲ್ಲಿನ ಮೂರ್ತಿಯಲ್ಲಿ ಜೀವಕಳೆ ಮೂಡಿತು! ಇಡೀ ಸಭೆಯು ಕಣ್ಣಿಕ್ಕಿ ನೋಡುತ್ತಿರುವಾಗಲೇ, ಆ ದಿವ್ಯ ಮೂರ್ತಿಯು ಕನಕದಾಸರು ತೋರಿದ ಪೀಠದ ಕಡೆಗೆ ತಾನಾಗಿಯೇ ನಡೆದು ಬಂದು ಪ್ರತಿಷ್ಠಾಪಿತವಾಯಿತು! ಆ ಕ್ಷಣದಲ್ಲಿ ಇಡೀ ಕಾಗಿನೆಲೆಯಲ್ಲಿ ದಿವ್ಯ ಬೆಳಕು ಮೂಡಿ, ಹೂವಿನ ಮಳೆಯಾಯಿತು. ದಾಸರನ್ನು ನಿಂದಿಸಿದವರೆಲ್ಲಾ ಆ ದೃಶ್ಯವನ್ನು ಕಂಡು ಪ್ರಜ್ಞೆ ತಪ್ಪಿದವರಂತೆ ನಿಂತರು. ಅವರ ಕಣ್ಣೆದುರೇ ಒಬ್ಬ ಪರಮ ಭಕ್ತನಿಗಾಗಿ ಭಗವಂತನು ಕಲ್ಲಿನ ಮೂರ್ತಿಯಿಂದ ಚೇತನ ರೂಪಿಯಾಗಿ ಎದ್ದು ಬಂದಿದ್ದನು.

ಈ ಅದ್ಭುತ ಘಟನೆಯಿಂದ ಇಡೀ ಜನಸಮೂಹಕ್ಕೆ ಜ್ಞಾನೋದಯವಾಯಿತು. ಜಾತಿ, ವರ್ಣ, ಲಿಂಗಗಳ ಭೇದವಿಲ್ಲದೆ ಎಲ್ಲರೂ ಕನಕದಾಸರ ಕಾಲಿಗೆ ಬಿದ್ದು ಕ್ಷಮೆ ಯಾಚಿಸಿದರು. ಭಗವಂತನು ತನ್ನ ಭಕ್ತರ ರಕ್ಷಣೆಗಾಗಿ ಮತ್ತು ಅಜ್ಞಾನಿಗಳ ಅಹಂಕಾರ ಅಳಿಸಲು ಸದಾ ಜಾಗೃತನಾಗಿದ್ದಾನೆ ಎಂಬುದನ್ನು ಕಣ್ಣಾರೆ ಕಂಡ ಕನಕದಾಸರು, ಆ ಪರಮಾತ್ಮನ ಅನಂತ ಲೀಲೆಗಳನ್ನು ಕೊಂಡಾಡುತ್ತಾ, ಲೌಕಿಕ ಜಗತ್ತಿನ ಕಷ್ಟಗಳಿಂದ ತಮಗೆ ಮುಕ್ತಿ ನೀಡಬೇಕೆಂದು ಪ್ರಾರ್ಥಿಸಿದರು.

'ಹರಿಭಕ್ತಿಸಾರ'ದ ಆರನೇ ಪದ್ಯದ ಸಾರ ಮನಮುಟ್ಟುವಂತಿದೆ..

ಅಜನ ಹಡೆದವನೀ ಯಗಣಿತ ಭು-
ವನವನೆಲ್ಲವ ಕಾಯ್ವ ಕರ್ತನು
ತ್ರಿಜಗದೊಡೆಯನು ನೀನೆ ಸಕಲ
ಪ್ರಾಣಿಗಳ ತಂದೆ ||
ಭಜಿಸಬಲ್ಲಡೆ ಮುಕ್ತಿ ಪಾಲಿಸು
ಕುಜನರನು ಸಂಹರಿಸಿ ಕಾಯೊ
ಕೃ- ಪಾಜಲಧಿ ಯೆನ್ನನು ಸಲಹು
ಬಾಡದಾದಿಕೇಶ || 6 ||

ಪದ್ಯದ ಭಾವಾರ್ಥ: ಕಾಗಿನೆಲೆಯ ಆದಿಕೇಶವನ ದಿವ್ಯ ಪವಾಡಕ್ಕೆ ಸಾಕ್ಷಿಯಾದ ಕನಕದಾಸರು, ಆ ಜಗನ್ನಾಥನ ಸರ್ವಶಕ್ತತೆಯನ್ನು ಶರಣಾಗತಿಯ ಭಾವದಲ್ಲಿ ಹೀಗೆ ಕೊಂಡಾಡುತ್ತಾರೆ:

ಭಾಗ 6

ಸೃಷ್ಟಿಕರ್ತನಾದ ಬ್ರಹ್ಮದೇವನನ್ನು ತನ್ನ ಹೊಕ್ಕಳ ಕಮಲದಿಂದ ಹೆತ್ತವನು (ಅಜನ ಹಡೆದವನು) ನೀನೇ ಪ್ರಭು. ಲೆಕ್ಕವಿಲ್ಲದಷ್ಟು ಬ್ರಹ್ಮಾಂಡಗಳನ್ನು (ಅಗಣಿತ ಭುವನವನೆಲ್ಲವ) ಸೃಷ್ಟಿಸಿ, ರಕ್ಷಿಸುವ ಏಕೈಕ ಒಡೆಯನು (ಕರ್ತನು) ನೀನೇ ಆಗಿದ್ದೀಯೆ. ಸ್ವರ್ಗ, ಮರ್ತ್ಯ ಪಾತಾಳ ಎಂಬ ಮೂರು ಲೋಕಗಳಿಗೂ (ತ್ರಿಜಗದೊಡೆಯನು) ನೀನೇ ರಾಜ ಮತ್ತು ಈ ಸೃಷ್ಟಿಯ ಸಕಲ ಜೀವರಾಶಿಗಳಿಗೂ ನೀನೇ ಹೆತ್ತ ತಂದೆ. ಯಾರು ನಿನ್ನನ್ನು ಯಾವುದೇ ಕಪಟವಿಲ್ಲದೆ, ಅಹಂಕಾರವನ್ನು ತೊರೆದು ಅನನ್ಯವಾಗಿ ಭಜಿಸುತ್ತಾರೋ, ಅವರಿಗೆ ಮುಕ್ತಿಯನ್ನು ಪಾಲಿಸುವವನು ನೀನೇ. ನಮ್ಮೊಳಗಿರುವ ಮತ್ತು ಸಮಾಜದಲ್ಲಿರುವ ದುಷ್ಟ ಆಲೋಚನೆಗಳನ್ನು (ಕುಜನರನು) ಸಂಹರಿಸಿ ನಮ್ಮನ್ನು ಸನ್ಮಾರ್ಗದಲ್ಲಿ ಮುನ್ನಡೆಸು. ಕರುಣೆಯ ಸಾಗರನೇ (ಕೃಪಾಜಲಧಿ), ನಿನ್ನನ್ನೇ ನಂಬಿದ ಈ ದಾಸನನ್ನು ಸದಾ ನಿನ್ನ ಕೃಪಾದೃಷ್ಟಿಯಿಂದ ಸಲಹು ಬಾಡದಾದಿಕೇಶ!

ನಾವು ಕೆಲವೊಮ್ಮೆ ಭಗವಂತನನ್ನು ಒಂದು ಜಾತಿಗೋ, ಧರ್ಮಕ್ಕೋ ಅಥವಾ ದೇವಸ್ಥಾನದ ಗರ್ಭಗುಡಿಗೋ ಸೀಮಿತಗೊಳಿಸಿಬಿಡುತ್ತೇವೆ. ಆದರೆ ಭಗವಂತನು ಯಾವುದೇ ಬಾಹ್ಯ ನಿಯಮಗಳಿಗೆ ಬದ್ಧನಲ್ಲ; ಅವನು ಕೇವಲ ಪ್ರೀತಿ ಮತ್ತು ಭಕ್ತಿಗೆ ಮಾತ್ರ ಒಲಿಯುತ್ತಾನೆ.

ನಾವು ಸಮಾಜದಲ್ಲಿ ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ, ನಮ್ಮ ಆಲೋಚನೆಗಳು ಭೇದಭಾವದಿಂದ ಕೂಡಿದ್ದರೆ ಭಗವಂತ ನಮಗೆ ಒಲಿಯಲಾರ. ಆದ್ದರಿಂದಲೇ ಸರ್ವೇ ಜನ ಸುಖಿನೋ ಭವಂತು ಎನ್ನುವ ಹಾರೈಕೆ ಎಲ್ಲರಿಗೂ ಎಲ್ಲರಿಗೂ ಒಳಿತನ್ನು ಬಯಸುವ ಮೂಲ ಮಂತ್ರ. ಮನಸ್ಸಿನಲ್ಲಿ ಕಪಟವಿಲ್ಲದೆ ಎಲ್ಲರಿಗೂ ಒಳಿತನ್ನು ಹಾರೈಸುವ ದೊಡ್ಡ ಗುಣವನ್ನು ಬೆಳೆಸಿಕೊಂಡಾಗ ನಮ್ಮೊಳಗಿರುವ ಭಗವಂತನ ಸಾಕ್ಷಾತ್ಕಾರ ನಮಗಾಗುತ್ತದೆ. ಹೊರಗಿನ ಕಲ್ಲಿನ ಮೂರ್ತಿಗಿಂತ ಒಳಗಿನ ಚೇತನ ಮುಖ್ಯ ಎಂಬುದೇ ಹರಿಭಕ್ತಿಸಾರದ ಈ ಭಾಗದ ಪರಮ ಸತ್ಯ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ರೆಫರಿ ವಾಚ್ ಕದ್ದ ಪರಾಗ್ವೆ ಸ್ಟಾರ್ ಆಟಗಾರ

ಸಾನ್‌ಫ್ರಾನ್ಸಿಸ್ಕೋ: ಪಂದ್ಯದ ಸಮಯದಲ್ಲಿ ಪರಾಗ್ವೆ ಖ್ಯಾತ ಆಟಗಾರನೊಬ್ಬ ರೆಫರಿಯ ವಾಚ್ ಕಳ್ಳತನ ಮಾಡಿದ ಆರೋಪ ಹೊತ್ತು ಸುದ್ದಿಯಲ್ಲಿದ್ದಾರೆ. ಟರ್ಕಿಯ ವಿರುದ್ಧದ ಪಂದ್ಯದಲ್ಲಿ ಪರಾಗ್ವೆ ಫುಟ್ಬಾಲ್ ಆಟಗಾರ ಮಟಿಯಾಸ್ ಗಲಾರ್ಜಾ ಈ ವಿಶ್ವಕಪ್‌ನಲ್ಲಿ ಅತ್ಯಂತ ವೇಗದ ಗೋಲು ಗಳಿಸುವ ಮೂಲಕ ಸುದ್ದಿಯಾದರು. ಅದು ಅಂತಿಮವಾಗಿ ಅವರ ತಂಡಕ್ಕೆ ವಿಜಯದ ಗೋಲಾಯಿತು. ಆದರೆ ಪಂದ್ಯದ ಸಮಯದಲ್ಲಿ ವಿಚಿತ್ರವಾದ ವಿವಾದಕ್ಕೆ ಅವರು ಸಿಲುಕಿದ್ದಾರೆ. ಆನ್ ಪಿಚ್ ಎಫೆರಿ ಇವಾನ್ ಬಾರ್ಟನ್ ಅವರು ಪಂದ್ಯದ ವೇಳೆ ಆಟಗಾರರನ್ನು ಬೇರ್ಪಡಿಸಲು ಪ್ರಯತ್ನಿಸುವಾಗ ತನ್ನ ವಾಚ್ ಕಳೆದುಕೊಂಡರು. ಅದು ಮೈದಾನದಲ್ಲಿ ಬಿದ್ದಿತ್ತು. ಗಲಾರ್ಜಾ ಅದನ್ನು ಎತ್ತಿಕೊಂಡು ತನ್ನ ಕೈಗೆ ಕಟ್ಟಿಕೊಳ್ಳುತ್ತಿರುವ ದೃಶ್ಯ ಸೆರೆಯಾಗಿದೆ. ಮೈದಾನದಲ್ಲಿ ಸಿಕ್ಕ ವಾಚನ್ನು ರೆಫರಿಗೆ ಹಿಂದಿರುಗಿಸುವ ಬದಲು, ಗಲಾರ್ಜಾ ಅದನ್ನು ತೆಗೆದುಕೊಂಡು ತಾನೇ ಕೈಗೆ ಹಾಕಿಕೊಂಡಿದ್ದಾರೆ. ಅವರ ನಡೆ ಸೋಷಿಯಲ್ ಮೀಡಿಯಾದಲ್ಲಿ ತೀವ್ರ ಟೀಕೆಗೆ ಗುರಿಯಾಗಿದೆ.

92 ವರ್ಷಗಳ ಬಳಿಕ ದೊರೆತ ಮೊತ್ತ ಮೊದಲ ಜಯ

ಈಜಿಪ್ಟ್‌ಗೆ ಐತಿಹಾಸಿಕ ಗೆಲುವು

ವ್ಯಾಂಕೋವರ್ (ಕೆನಡಾ): ಮೊಹಮ್ಮದ್ ಸಲಾಹ್ ನಾಯಕತ್ವದ ಈಜಿಪ್ಟ್ ತಂಡವು ಫಿಫಾ ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ಅನ್ನು 3-1 ಅಂತರದ ಗೋಲುಗಳಿಂದ ಸೋಲಿಸುವ ಮೂಲಕ ಸೋಮವಾರ ಹೊಸ ಇತಿಹಾಸ ನಿರ್ಮಿಸಿತು.

1934ರಲ್ಲಿ ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ ಈಜಿಪ್ಟ್ ತಂಡವು 92 ವರ್ಷಗಳ ದೀರ್ಘ ಕಾಯುವಿಕೆಯ ನಂತರ ಪಂದ್ಯಾವಳಿಯಲ್ಲಿ ತನ್ನ ಮೊದಲ ಗೆಲುವನ್ನು ದಾಖಲಿಸಿತು. ಈ ಗೆಲುವಿನೊಂದಿಗೆ ಈಜಿಪ್ಟ್ ಗ್ರೂಪ್-ಜಿ ಯಲ್ಲಿ ಅಗ್ರಸ್ಥಾನ ಪಡೆದು ನಾಕೌಟ್ ಹಂತ ತಲುಪುವ ತನ್ನ ಭರವಸೆಯನ್ನು ಬಲಪಡಿಸಿಕೊಂಡಿದೆ.

ಪಂದ್ಯದಲ್ಲಿ ಫಿನ್ ಸೆರ್ಮನ್ (15ನೇ ನಿಮಿಷ) ಅವರ ಗೋಲಿನಿಂದ ನ್ಯೂಜಿಲೆಂಡ್ ಆರಂಭಿಕ ಮುನ್ನಡೆ ಸಾಧಿಸಿತು, ಆದರೆ ದ್ವಿತೀಯಾರ್ಧದಲ್ಲಿ ಈಜಿಪ್ಟ್ ಬಲಿಷ್ಠವಾಗಿ ಪುನರಾಗಮನ ಮಾಡಿತು. 52ನೇ ನಿಮಿಷದಲ್ಲಿ ಮುಸ್ತಫಾ ಜಿಕೊ ಗೋಲು ಗಳಿಸುತ್ತಿದ್ದಂತೆ ಈಜಿಪ್ಟ್ ಸಮಬಲ ಸಾಧಿಸಿತು, ಅದಾದ ಬೆನ್ನಲ್ಲೆ ನಾಯಕ ಮೊಹಮ್ಮದ್ ಸಲಾಹ್ 62ನೇ ನಿಮಿಷದಲ್ಲಿ ಜಿಕೊ ಅವರೊಂದಿಗೆ ಅತ್ಯುತ್ತಮ ಸಮನ್ವಯ ಸಾಧಿಸಿ, ಅದ್ಭುತ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ಒದಗಿಸಿ ದರು. ಅಂತಿಮವಾಗಿ 82ನೇ ನಿಮಿಷದಲ್ಲಿ ಟ್ರೆಜೆಗುಟ್ ಮೂರನೇ ಗೋಲು ಗಳಿಸಿ ಈಜಿಪ್ಟ್ ತಂಡದ ಗೆಲುವನ್ನು ಖಚಿತ ಪಡಿಸಿದರು.

ಸಲಾಹ್ ಗೆಲುವಿನ ಹೀರೊ: ನಾಯಕ ಮೊಹಮ್ಮದ್ ಸಲಾಹ್ ಈಜಿಪ್ಟ್‌ನ ಐತಿಹಾಸಿಕ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು ಒಂದು ಗೋಲು ಗಳಿಸಿದರು ಮತ್ತು ಒಂದು ಅಸಿಸ್ಟ್ ನೀಡಿದರು.

ಪಂದ್ಯದ ಮುಗಿದು ಅವರು ಮೈದಾನದಿಂದ ನಿರ್ಗಮಿಸುವಾಗ, ಇಡೀ ಕ್ರೀಡಾಂಗಣವು ಅವರಿಗೆ ಎದ್ದು ನಿಂತು ಚಪ್ಪಾಳೆ ತಟ್ಟಿತು. ಈಜಿಪ್ಟ್ ಅಭಿಮಾನಿಗಳು ವರ್ಷಗಳಿಂದ ಗೆಲುವೊಂದಕ್ಕಾಗಿ ನಿರೀಕ್ಷಿಸಿ ನಾಯಕ ಸಲಾಹ್ ಅವರ ಅದ್ಭುತ ಪ್ರದರ್ಶನ ಮೂಲಕ ತಮ್ಮ ಕನಸನ್ನು ನನಸಾಗಿಸಿದರು

ನ್ಯೂಜಿಲೆಂಡ್ ಭರವಸೆ ಇನ್ನೂ ಜೀವಂತ: ಪಂದ್ಯದಲ್ಲಿ ಸೋಲಿನ ಹೊರತಾಗಿಯೂ ನ್ಯೂಜಿಲೆಂಡ್ ಕೋಚ್ ಡ್ಯಾರೆನ್ ಬಾಜೆಲಿ ಅವರು ಭರವಸೆಯನ್ನು ಕಳೆದುಕೊಂಡಿಲ್ಲ. ಪಂದ್ಯದ ಬಳಿಕ ಮಾತನಾಡಿ, 'ಈಜಿಪ್ಟ್ ವಿರುದ್ಧದ ಪಂದ್ಯ ನಿರಾಶಾದಾಯಕವಾಗಿತ್ತು. ನಾವು ಮೊದಲಾರ್ಧದಲ್ಲಿ ಅದ್ಭುತವಾಗಿ ಆಡಿದ್ದೆವು ಮತ್ತು ಅನೇಕ ಉತ್ತಮ ಅವಕಾಶಗಳನ್ನು ಸೃಷ್ಟಿಸಿದ್ದೇವೆ. ದ್ವಿತೀಯಾರ್ಧದಲ್ಲಿ ಎದುರಾಳಿ ಈಜಿಪ್ಟ್ ತಂಡವು ಆಟದ ವೇಗವನ್ನು ಹೆಚ್ಚಿಸಿದ ಕಾರಣ ನಮಗೆ ಪೈಪೋಟಿ ನೀಡಲು ಸಾಧ್ಯವಾಗಲಿಲ್ಲ. ನಾವು ಬೆಲ್ಜಿಯಂ ಅನ್ನು ಮುಂದಿನ ಪಂದ್ಯದಲ್ಲಿ ಸೋಲಿಸಿ ನಾಕೌಟ್ ಹಂತಕ್ಕೆ ಏರಲಿದ್ದೇವೆ' ಎಂದಿದ್ದಾರೆ.

ಐತಿಹಾಸಿಕ ಗೆಲುವಿನ ಸಂಭ್ರಮದಲ್ಲಿ ಈಜಿಪ್ಟ್ ಆಟಗಾರರು.

ಲಾಸ್ ಏಂಜಲಿಸ್‌ನಲ್ಲಿ ನಡೆದ ಪಂದ್ಯದಲ್ಲಿ ಕಂಡುಬಂದ ಬೆಲ್ಜಿಯಂ-ಇರಾನ್ ತಂಡಗಳ ನಡುವಿನ ಜಿದ್ದಾಜಿದ್ದಿನ ಹೋರಾಟ.

ಗೋಲು ಗಳಿಸಲು ಎರಡೂ ತಂಡಗಳೂ ವಿಫಲ

ಬೆಲ್ಜಿಯಂ-ಇರಾನ್ ಡ್ರಾ

ಲಾಸ್ ಏಂಜಲೀಸ್: ಜಿ-ಗುಂಪಿನಲ್ಲಿರುವ ಬೆಲ್ಜಿಯಂ ಮತ್ತು ಇರಾನ್ ನಡುವಿನ ಪಂದ್ಯವು ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು. ಪಂದ್ಯದಲ್ಲಿ ಎರಡೂ ತಂಡಗಳಿಗೆ ಹಲವಾರು ಅವಕಾಶಗಳು ಸಿಕ್ಕಿದರೂ ಗೋಲು ಗಳಿಸಲು ಸಾಧ್ಯವಾಗಲಿಲ್ಲ. 66ನೇ ನಿಮಿಷದಲ್ಲಿ ನಾಥನ್ ನ್ಗೋಯ್ ಕೆಂಪು ಕಾರ್ಡ್ ಪಡೆಯುವ ಮೂಲಕ ಬೆಲ್ಜಿಯಂ ಭಾರೀ ಹಿನ್ನಡೆ ಅನುಭವಿಸಿತು, ಇದರಿಂದಾಗಿ ತಂಡವು ಉಳಿದ ಪಂದ್ಯವನ್ನು 10 ಆಟಗಾರರೊಂದಿಗೆ ಆಡಬೇಕಾಯಿತು. ಆದರೆ ಇದರ ಹೊರತಾಗಿಯೂ ಇರಾನ್ ಮುನ್ನಡೆ ಸಾಧಿಸಲು ಸಾಧ್ಯವಾಗಲಿಲ್ಲ, ಹಾಗಾಗಿ ಎರಡೂ ತಂಡಗಳು ತಲಾ ಒಂದು ಪಾಯಿಂಟ್‌ಗೆ ತೃಪ್ತಿಪಡಬೇಕಾಯಿತು.

ಬೆಲ್ಜಿಯಂ ಪಂದ್ಯದ ಬಹುಪಾಲು ಸಮಯವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿತು ಮತ್ತು ಇರಾನಿನ ಗೋಲಿನ ಮೇಲೆ ನಿರಂತರವಾಗಿ ದಾಳಿ ಮಾಡಿತು. ದೀರ್ಘಕಾಲದ ಅನುಪಸ್ಥಿತಿಯ ನಂತರ ವಿಶ್ವಕಪ್‌ಗೆ ವಾಪಸ್ ಆಗಿ ಆರಂಭಿಕ ಹನ್ನೊಂದರಲ್ಲಿ ಸ್ಥಾನ ಪಡೆದಿದ್ದ ರೊಮೆಲು ಲುಕಾಕು ಅವರ ಮೇಲೆ ತಂಡ ಹೆಚ್ಚಿನ ಭರವಸೆಯನ್ನು ಹೊಂದಿತ್ತು, ಆದರೆ ಇರಾನ್‌ನ ಗೋಲ್‌ಕೀಪರ್ ಅಲಿರೆಜಾ ಬೈರಾನ್‌ವಾಂಡ್ ಅವರ ಎಲ್ಲಾ ಪ್ರಯತ್ನಗಳನ್ನೂ ವಿಫಲಗೊಳಿಸಿದರು.

ಮತ್ತೊಂದೆಡೆ ರಕ್ಷಣಾತ್ಮಕ ತಂತ್ರವನ್ನು ಬಳಸಿದ ಇರಾನ್ ತಂಡವು ಪ್ರತಿದಾಳಿಗಳೊಂದಿಗೆ ಬೆಲ್ಜಿಯಂ ಅನ್ನು ಒತ್ತಡಕ್ಕೆ ಸಿಲುಕಿಸಲು ಪ್ರಯತ್ನಿಸಿತು. ಮೊದಲಾರ್ಧದಲ್ಲಿ ನಾಯಕ ತರೆಮಿ ಮತ್ತು ಹುಸೇನ್ ಕನಾನಿ ಕೂಡ ಬೆಲ್ಜಿಯಂ ರಕ್ಷಣೆ ಪಡೆಯ ಮೇಲೆ ಒತ್ತಡ ಹೇರಿದರು.

ಹೆಚ್ಚುವರಿ ಆಟಗಾರನಿದ್ದರೂ ಇರಾನ್ ನಿರ್ಣಾಯಕ ಗೋಲು ಗಳಿಸುವಲ್ಲಿ ವಿಫಲವಾಯಿತು. ಬೆಲ್ಜಿಯಂ ದಿಟ್ಟ ಹೋರಾಟ ನಡೆಸಿ ಪಂದ್ಯವನ್ನು ಡ್ರಾದಲ್ಲಿ ಕೊನೆಗೊಳಿಸಿತು.

ಮಹಾರಾಜ ಟಿ20: ತವರಿನಲ್ಲಿ ಮೈಸೂರು ವಾರಿಯರ್ಸ್‌ಗೆ ಸತತ 2ನೇ ಸೋಲು

ಹುಬ್ಬಳ್ಳಿ ಟೈಗರ್ಸ್‌ಗೆ ಸುಲಭ ಜಯ

ಕೆ.ಜಿ. ಲೋಕೇಶ್ ಬಾಬು ಮೈಸೂರು

ಮಹಾರಾಜ ಟ್ರೋಫಿ ಟಿ20 ಪಂದ್ಯಾವಳಿಯಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ತಂಡವು ಪ್ರಸ್ತುತ ಟೂರ್ನಿಯ ಮೊದಲ ಗೆಲುವು ಕಂಡರೆ, ಮೈಸೂರು ವಾರಿಯರ್ಸ್ ತಂಡವು ತವರಿನಲ್ಲಿ ಸತತ 2ನೇ ಸೋಲಿನ ಮರ್ಮಾಘಾತ ಅನುಭವಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಂಘಟಿತ ಪ್ರದರ್ಶನದ ಮೂಲಕ ಹುಬ್ಬಳ್ಳಿ ತಂಡ 7 ವಿಕೆಟ್‌ಗಳ ನಿರಾಯಾಸದ ಗೆಲುವು ಸಾಧಿಸಿತು.

ಮೈಸೂರು ವಾರಿಯರ್ಸ್ 19.2 ಓವರ್‌ಗಳಲ್ಲಿ 161 ರನ್‌ಗಳ ಪೈಪೋಟಿಯ ಮೊತ್ತ ಕಲೆ ಹಾಕಿತು. ಈ ಗುರಿ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 17.3 ಓವರ್‌ಗಳಲ್ಲಿ 3 ವಿಕೆಟ್‌ಗೆ 162 ರನ್‌ಗಳಿಸಿ ಜಯದ ನಗೆ ಬೀರಿತು.

ಅಬ್ಬರಿಸಿದ ತಾಹ-ಗೌತಮ್: ಮೈಸೂರು ತಂಡದ ಗುರಿ ಬೆನ್ನತ್ತಿದ ಹುಬ್ಬಳ್ಳಿ ತಂಡಕ್ಕೆ ಮೊಹಮ್ಮದ್ ತಾಹ (57 ರನ್, 38 ಬಾಲ್, 5 ಬೌಂಡರಿ, 3 ಸಿಕ್ಸ್) ಸೊಗಸಾದ ಅರ್ಧಶತಕ ಬಾರಿಸಿ ತಂಡದ ಜಯದ ಹಾದಿ ಸುಗಮಗೊಳಿಸಿದರು. ಮಯಾಂಕ್ ಅಗರ್ವಾಲ್ 19 ರನ್ ಗಳಿಸಿದರು. ತಾಹ ಔಟಾದ ಬಳಿಕ ನಾಯಕ ಅನೀಶ್ವರ್ ಗೌತಮ್(60 ರನ್-ಅಜೇಯ, 41 ಬಾಲ್) ಮಿಂಚಿದರೆ. ಅಭಿನವ್ ಮನೋಹರ್(16 ಅಜೇಯ) ಉಪಯುಕ್ತ ರನ್‌ಗಳಿಸಿ ತಂಡದ ಗೆಲುವಿಗೆ ಕಾರಣರಾದರು. ಮೈಸೂರು ಪರ ಮಾಧವ್ 2, ಭಟ್ಕಳ್ 1 ವಿಕೆಟ್ ಪಡೆದರು.

ಭಟ್ಕಳ್ ಮತ್ತು ಕಾರ್ತಿಕ್ ಆಸರೆ: ಮೊದಲು ಬ್ಯಾಟ್ ಮಾಡಿದ ಮೈಸೂರು ವಾರಿಯರ್ಸ್ ಕೇವಲ 25 ರನ್‌ಗಳಿಗೆ ಆರಂಭಿಕ ಬ್ಯಾಟರ್ ಎಲ್.ಆರ್. ಚೇತನ್(18) ವಿಕೆಟ್ ಕಳೆದುಕೊಂಡು ಆಘಾತ ಕಂಡಿತು. ನಂತರ ಜತೆಯಾದ ಕಾರ್ತಿಕ್ (35 ರನ್, 27 ಬಾಲ್) ಹಾಗೂ ರಿತೇಶ್ ಭಟ್ಕಳ್(46 ರನ್, 28 ಬಾಲ್) ತಂಡಕ್ಕೆ ಚೇತರಿಕೆ ನೀಡಿದರು. ಸಮಯೋಚಿತ ಆಟವಾಡಿದ ಈ ಜೋಡಿ 2ನೇ ವಿಕೆಟ್‌ಗೆ 74(47) ರನ್‌ಗಳಿಸಿದರು.

10 ಓವರ್‌ಗಳ ಅಂತ್ಯಕ್ಕೆ 99/2 ರನ್‌ಗಳಿಸಿ ಉತ್ತಮ ಸ್ಥಿತಿಯಲ್ಲಿದ್ದ ಮೈಸೂರು ವಾರಿಯರ್ಸ್ ಬೃಹತ್ ಮೊತ್ತ ಕಲೆ ಹಾಕುವ ನಿರೀಕ್ಷೆಯಲ್ಲಿತ್ತು. ಆದರೆ ಹುಬ್ಬಳ್ಳಿ ಟೈಗರ್ಸ್ ತಂಡದ ಚಾಣಾಕ್ಷ ಬೌಲರ್‌ಗಳಾದ ಎಲ್.ಆರ್. ಕುಮಾರ್ (14/3) ಹಾಗೂ ಹಾರ್ದಿಕ್ ರಾಜ್ (25/3) ಅತ್ಯುತ್ತಮ ಬೌಲಿಂಗ್ ಪ್ರದರ್ಶನದ ಮೂಲಕ ವಾರಿಯರ್ಸ್ ಪಡೆಯ ಲೆಕ್ಕಾಚಾರ ತಲೆಕೆಳಗಾಗಿಸಿದರು. ಇವರಿಬ್ಬರ ಬೌಲಿಂಗ್ ದಾಳಿಗೆ ತತ್ತರಿಸಿದ ಮೈಸೂರು ಬ್ಯಾಟರ್‌ಗಳು, ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿಕೊಂಡರು. ವಿಕಾಸ್ ಗೌಡ 2, ಶೀಖರ್ ಹಾಗೂ ಕುಮಾರ್ ತಲಾ 1 ವಿಕೆಟ್ ಪಡೆದರು.



ಮೊಹಮ್ಮದ್ ತಾಹ ಅಬ್ಬರದ ಬ್ಯಾಟಿಂಗ್

ಇಂಗ್ಲೆಂಡ್‌ಗೆ ಅಂಕ ಕಡಿತ, ಭಾರೀ ದಂಡ

ಲಂಡನ್: 2ನೇ ಟೆಸ್ಟ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಸೋತ ನಂತರ ಇಂಗ್ಲೆಂಡ್ ತಂಡಕ್ಕೆ ಭಾರೀ ಹೊಡೆತ ಬಿದ್ದಿದೆ. ಓವಲ್‌ನಲ್ಲಿ ನಡೆದ ಟೆಸ್ಟ್‌ನಲ್ಲಿ ನಿಧಾನಗತಿಯ ಓವರ್ ದರ ಕಾಯ್ದುಕೊಂಡಿದ್ದಕ್ಕಾಗಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಇಂಗ್ಲೆಂಡ್ ತಂಡದ 12 ಅಂಕಗಳನ್ನು ಕಡಿತಗೊಳಿಸಲಾಗಿದೆಯಲ್ಲದೆ, ಪಂದ್ಯ ಶುಲ್ಕದ 50% ದಂಡ ವಿಧಿಸಲಾಗಿದೆ.

ಡಬ್ಲ್ಯುಟಿಸಿ ಸರಣಿಯಲ್ಲಿ ಇಂಗ್ಲೆಂಡ್‌ನ ಕಳಪೆ ಪ್ರದರ್ಶನ ಮುಂದುವರೆದಿದ್ದು, 12 ಪಂದ್ಯಗಳಲ್ಲಿ ಅದು 7 ಪಂದ್ಯಗಳನ್ನು ಸೋತಿದೆ. ಇದೀಗ ಇಂಗ್ಲೆಂಡ್‌ನ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಒಟ್ಟು ಅಂಕಗಳನ್ನು 50ರಿಂದ 38ಕ್ಕೆ ಇಳಿಸಲಾಗಿದೆ. ಅಂಕ ಕಡಿತದ ನಂತರ ಇಂಗ್ಲೆಂಡ್ ಪ್ರಸ್ತುತ ವಿಶ್ವ ಟೆಸ್ಟ್ ಅಂಕಪಟ್ಟಿಯಲ್ಲಿ 7ನೇ ಸ್ಥಾನಕ್ಕೆ ಇಳಿದಿದ್ದು, ಭಾರತ 6ನೇ ಸ್ಥಾನದಲ್ಲಿದೆ.

ಟಾಕೀಸ್

ಸ್ಪಷ್ಟನೆ ನೀಡಿದ ಸತೀಶ್

ನಟ ನೀನಾಸಂ ಸತೀಶ್ ಚಿತ್ರರಂಗಕ್ಕೆ ಬರುವ ನಿಮಾಪಕರಿಗೆ 'ಶಿಕ್ಷಣ' ಬೇಕು ಎಂದು ಹೇಳಿದ್ದರು. ಈ ಹೇಳಿಕೆ ವಿವಾದಕ್ಕೆ ಕಾರಣವಾಗಿತ್ತು. ಹಲವು ನಿರ್ಮಾಪಕರು ಸತೀಶ್ ವಿರುದ್ಧ ಮುನಿದಿದ್ದರು. ಈಗ ಅದಕ್ಕೆ ಸ್ಪಷ್ಟನೆ ನೀಡಿದ್ದಾರೆ. ಮೊನ್ನೆ ಅಯೋಗ್ಯ 2 ಹಾಡು ಬಿಡುಗಡೆಯ ಕಾರ್ಯಕ್ರಮದಲ್ಲಿ ನಾನು 'ಶಿಕ್ಷಣ' ಎಂಬ ಪದ ಬಳಸಿದೆ. ಇಲ್ಲಿ 'ಶಿಕ್ಷಣ' ಎಂದರೆ ಶಾಲೆಗೆ ಹೋಗಿ ಕಲಿಯೋದಲ್ಲ, ಬದಲಾಗಿ ಸಿನಿಮಾದಲ್ಲಿ ಕಲಿಯುವುದರ ಬಗ್ಗೆ ಹೇಳಿದ್ದೆ. ಯಾಕೆಂದರೆ ನಾನು ನಟನಾಗಿ, ನಿರ್ಮಾಪಕ ನಾಗಿ ತುಂಬಾ ಕಲಿತ್ತಿದ್ದೇನೆ. ಚಿತ್ರ ರಂಗಕ್ಕೆ ಬರುವ ನಿರ್ಮಾಪಕರು ಸಿನಿಮಾರಂಗದ ಎಲ್ಲಾ ವಿಭಾಗಗಳ ಬಗ್ಗೆ ಕಲಿತರೆ ಒಳ್ಳೆಯದು ಎಂಬ ನಿಟ್ಟಿನಲ್ಲಿ 'ಶಿಕ್ಷಣ' ಎಂಬ ಪದವನ್ನು ಬಳಸಿದೆ. ಸಿನಿಮಾ ರಂಗದಲ್ಲಿ ಲಕ್ಷಾಂತರ ಜನರು ಬದುಕು ಕಟ್ಟಿಕೊಂಡಿದ್ದಾರೆ. ಅವರು ಉಳಿಯಬೇಕು ಎಂಬ ನಿಟ್ಟಿನಲ್ಲಿ ಆ ಮಾತು ಹೇಳಿದೆ. 'ಶಿಕ್ಷಣ' ಎಂದಾಗ ಸಿನಿಮಾದ ವಿತರಣೆಯೂ ಸೇರುತ್ತದೆ. ಅಲ್ಲಿ ವಿತರಣೆ ಎಂಬ ಪದ ಬಿಟ್ಟೋಗಿದ್ದು ಈ ಅಪಾರ್ಥಕ್ಕೆ ಕಾರಣವಾಗಿದೆ. ಯಾರಿಗೂ ನೋವು ಮಾಡುವ ಉದ್ದೇಶ ನನ್ನದಲ್ಲ, ನೋಯಿಸಿ ಖುಷಿಪಡುವ ವ್ಯಕ್ತಿತ್ವವೂ ನನ್ನದಲ್ಲ. ನನ್ನಿಂದ ಕೆಲವರಿಗೆ ಬೇಸರ ವಾಗಿದೆ. ಹಾಗಾಗಿ ನಿರ್ಮಾಪಕರ ಸಂಘದಲ್ಲಿ ಕ್ಷಮೆ ಯಾಚಿಸುತ್ತಿದ್ದೇನೆ ಎಂದು ನೀನಾಸಂ ಸತೀಶ್ ತಿಳಿಸಿದ್ದಾರೆ.

ಅಯೋಗ್ಯ-2ನ ಮೊದಲ ಹಾಡು ರಿಲೀಸ್

ಎಂಟು ವರ್ಷಗಳ ಹಿಂದೆ ಅಯೋಗ್ಯ ಚಿತ್ರ ತೆರೆಗೆ ಬಂದಿತ್ತು. ಮಹೇಶ್ ಕುಮಾರ್ ನಿರ್ದೇಶನದ ಈ ಚಿತ್ರದ ಭರ್ಜರಿ ಯಶಸ್ಸು ಕಂಡಿತ್ತು. ಈಗ ಅದೇ ಯಶಸ್ಸಿನ ಖುಷಿಯಲ್ಲಿ ಅಯೋಗ್ಯ 2 ಮೂಡಿಬರುತ್ತಿದೆ.

ತೆರೆಗೆ ಸಿದ್ಧವಾಗಿರುವ ಅಯೋಗ್ಯ 2 ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಮುದ್ದು.. ಮುದ್ದು.. ಪುಟ್ಟಲಕ್ಷ್ಮಿ... ಎಂಬ ರೊಮ್ಯಾಂಟಿಕ್ ಹಾಡು ಇದಾಗಿದ್ದು, ಚೇತನ್ ಕುಮಾರ್ ಸಾಹಿತ್ಯದ ಗೀತೆಗೆ ಅರ್ಜುನ್‌ಜನ್ಯ ಸಂಗೀತ ಸಂಯೋಜಿಸಿದ್ದಾರೆ. ಸಿದ್ ಶ್ರೀರಾಮ್ ಹಾಗೂ ಪೃಥ್ವಿ ಭಟ್ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ. ಅರ್ಜುನ್‌ಜನ್ಯ ಈ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಇಪ್ಪತ್ತೆರಡು ವರ್ಷಗಳ ಸಿನಿಪಯಣದಲ್ಲಿ ಇದೇ ಮೊದಲ ಬಾರಿಗೆ ಹಾಡೊಂದನ್ನು ಬಿಡುಗಡೆ ಮಾಡಿದ್ದೇನೆ. ಪೃಥ್ವಿ ಭಟ್ ತುಂಬಾ ಚೆನ್ನಾಗಿ ಹಾಡಿದ್ದಾರೆ. ಎಂಟು ವರ್ಷಗಳ ಹಿಂದೆ ಅಯೋಗ್ಯ ಸಿನಿಮಾದ ಹಾಡಿಗೆ ಸಂಗೀತ ಸಂಯೋಜಿಸುವಾಗ ಒಂದು ಸಂಭ್ರಮವಿತ್ತು. ಅದೇ ಸಂಭ್ರಮ ಅಯೋಗ್ಯ 2 ಚಿತ್ರದ ಸಂದರ್ಭದಲ್ಲಿಯೂ ಇತ್ತು. ಸಿನಿಮಾದ ಎಲ್ಲಾ ಹಾಡುಗಳು ಸಂಗೀತ ಪ್ರಿಯರ ಮನಸೆಳೆಯಲಿವೆ ಎಂದು ಅರ್ಜುನ್‌ಜನ್ಯ ತಿಳಿಸಿದರು.

ಎಂಟು ವರ್ಷದ ನಂತರ ಮತ್ತೆ ಅಯೋಗ್ಯ ಸಿನಿಮಾದ ಮುಂದುವರಿದ ಭಾಗವನ್ನು ನಿಮ್ಮ ಮುಂದೆ ತರುತ್ತಿದ್ದೇನೆ. ಅಯೋಗ್ಯ ಸಿನಿಮಾ ಎಲ್ಲಿಗೆ ನಿಂತಿತ್ತು. ಅಲ್ಲಿಂದ ಕಥೆ ಆರಂಭವಾಗುತ್ತದೆ. ಮೊದಲ ಭಾಗಕ್ಕಿಂತ ಅಯೋಗ್ಯ 2 ಚಿತ್ರದಲ್ಲಿ ಹೆಚ್ಚಿನ ಮನರಂಜನೆ ಇದೆ ಎಂದು ನಿರ್ದೇಶಕ ಮಹೇಶ್ ಕುಮಾರ್ ಹೇಳಿದರು.

ಎಂಟು ವರ್ಷಗಳ ಬಳಿಕ ಮತ್ತೆ ನಾನು ಹಾಗೂ ನೀನಾಸಂ ಸತೀಶ್ ಒಟ್ಟಿಗೆ ನಟಿಸಿದ್ದು, ಖುಷಿ ಕೊಟ್ಟಿದೆ. ಅಯೋಗ್ಯ ಮೊದಲ ಭಾಗಕ್ಕಿಂತ ಈ ಸಿನಿಮಾ ತುಂಬಾ ಸೆಳೆಯುತ್ತದೆ. ಅರ್ಜುನ್‌ಜನ್ಯ ಅವರ ಸಂಗೀತದಲ್ಲಿ ಮೂಡಿಬಂದಿರುವ ಎಲ್ಲಾ ಹಾಡುಗಳು ಕೇಳಲು ಮಧುರವಾಗಿವೆ ಎಂದು ನಟಿ ರಚಿತಾರಾಮ್ ಸಂತಸದಿಂದ ನುಡಿದರು. ಸುಂದರ್ ರಾಜ್, ಶಿವರಾಜ್ ಕೆ.ಆರ್.ಪೇಟೆ, ಅರುಣಾ ಬಾಲರಾಜ್, ಮಂಜು ಪಾವಗಡ ಮುಂತಾದವರು ತಾರಾಗಣದಲ್ಲಿದ್ದಾರೆ. ಅಯೋಗ್ಯ 2 ಆಗಸ್ಟ್ 7ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

ಲಕ್ಷ್ಮೀ ಪುತ್ರನ ರೊಮ್ಯಾಂಟಿಕ್ ಹಾಡು

ಹಾಸ್ಯ ನಟ ಚಿಕ್ಕಣ್ಣ ಉಪಾಧ್ಯಕ್ಷ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದರು. ಈಗ ಲಕ್ಷ್ಮೀಪುತ್ರ ಚಿತ್ರದಲ್ಲಿಯೂ ನಾಯಕನಾಗಿ ಎಂಟ್ರಿ ಕೊಡುತ್ತಿದ್ದು, ಮತ್ತೊಮ್ಮೆ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಚಿತ್ರೀಕರಣ ಮುಗಿಸಿರುವ ಲಕ್ಷ್ಮೀಪುತ್ರ ಚಿತ್ರದ ಹಾಡು ಬಿಡುಗಡೆಯಾಗಿದೆ. ಇನ್ನೇಲೆ.. ಎಂಬ ರೊಮ್ಯಾಂಟಿಕ್ ಗೀತೆ ಇದಾಗಿದ್ದು, ಕೇಳಲು ಮಧುರವಾಗಿದೆ. ಎ.ಪಿ. ಅರ್ಜುನ್ ಸಾಹಿತ್ಯದ ಈ ಗೀತೆಗೆ ಅರ್ಜುನ್‌ಜನ್ಯ ಸಂಗೀತ ಸಂಯೋಜಿಸಿದ್ದು, ದರ್ಶನ್ ಮೆಲವಂಕಿ ಹಾಗೂ ಪೃಥ್ವಿ ಭಟ್ ದನಿಯಾಗಿದ್ದಾರೆ. ಹಳ್ಳಿ ಸೊಗಡಿನಲ್ಲಿ ನಾಯಕಿಯ ಜತೆಗೆ ಲಕ್ಷ್ಮೀಪುತ್ರನ ಸವಾರಿ ಸಾಗುತ್ತಿದೆ. ವಂದಿತಾ, ಲಂಗ ಧಾವಣಿ ತೊಟ್ಟು ಅಪ್ಪಟ ಹಳ್ಳಿ ಹುಡುಗಿಯಾಗಿ ಕಂಗೊಳಿಸಿದ್ದಾರೆ. ಎ.ಪಿ.ಅರ್ಜುನ್ ಕಥೆ, ಚಿತ್ರಕಥೆ ಬರೆದಿರುವ ಈ ಚಿತ್ರವನ್ನು ವಿಜಯ್.ಎಸ್.ಸ್ವಾಮಿ ನಿರ್ದೇಶನ ಮಾಡಿದ್ದಾರೆ. ತಾರಾ ಅನುರಾಧಾ, ಧರ್ಮಣ್ಣ ಕಡೂರು, ಅನಂತ ಪದ್ಮನಾಭ, ಕುರಿ ಪ್ರತಾಪ್ ಮುಂತಾದವರು ತಾರಾಗಣದಲ್ಲಿದ್ದಾರೆ. ಎ.ಪಿ. ಅರ್ಜುನ್ ಫಿಲಂಸ್ ಬ್ಯಾನರ್‌ನಲ್ಲಿ ಅನ್ನಪೂರ್ಣಾ. ಎ.ಪಿ.ಅರ್ಜುನ್ ಚಿತ್ರ ನಿರ್ಮಾಣ ಮಾಡಿದ್ದಾರೆ.

ಲಕ್ಷ್ಮೀಪುತ್ರ ಗ್ರಾಮೀಣ ಸೊಗಡಿನ ಸಿನಿಮಾ, ಚಿತ್ರದಲ್ಲಿ ಕಾಮಿಡಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಅದರ ಜತೆಗೆ ಡ್ಯಾನ್ಸ್ ರೊಮ್ಯಾನ್ಸ್ ಎಲ್ಲವೂ ಇದೆ. ಈ ಚಿತ್ರದಲ್ಲಿ ಡ್ಯಾನ್ಸ್ ಮಾಡಿದ್ದು ನಿಜವಾಗಿಯೂ ಚಾಲೆಂಜಿಂಗ್ ಆಗಿತ್ತು. ನಿರ್ದೇಶಕರು ನೃತ್ಯ ಮಾಡುವವರೆಗೂ ನನ್ನನ್ನು ಬಿಡಲಿಲ್ಲ. ನಮ್ಮ ಚಿತ್ರ ಎಲ್ಲರಿಗೂ ಭರಪೂರ ಮನರಂಜನೆ ನೀಡಲಿದೆ ಎಂದು ಚಿಕ್ಕಣ್ಣ ಹೇಳಿದರು.

ಲಕ್ಷ್ಮೀಪುತ್ರ ಕಾಮಿಡಿಗೆ ಸೀಮಿತವಾಗಿಲ್ಲ, ಎಮೋಷನ್ ಕೂಡ ಬೆರೆತಿದೆ. ಉಪಾಧ್ಯಕ್ಷ ಬಳಿಕ ಚಿಕ್ಕಣ್ಣ ಅವರಿಗಾಗಿ ಸಿನಿಮಾ ಮಾಡೋಣ ಎಂದುಕೊಂಡಿದ್ದೆ. ಆಗ ಲಕ್ಷ್ಮೀಪುತ್ರನ ಕಥೆ ಹೊಳೆಯಿತು. ಚಿತ್ರದ ಕಥೆ ಎಲ್ಲರಿಗೂ ಕನೆಕ್ಟ್ ಆಗಲಿದೆ. ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನ ದಲ್ಲಿ ಚಿತ್ರದ ಎಲ್ಲಾ ಹಾಡುಗಳು ಮಧುರವಾಗಿ ಮೂಡಿ ಬಂದಿವೆ ಎಂದು ನಿರ್ಮಾಪಕ ಎ.ಪಿ. ಅರ್ಜುನ್ ಸಂತಸ ದಿಂದ ನುಡಿದರು.

ಮಾಲಿವುಡ್ ಅಂಗಳದಲ್ಲಿ ಕಿಚ್ಚ

ಕಿಚ್ಚ ಸುದೀಪ್ ಕನ್ನಡ ಮಾತ್ರವಲ್ಲ, ಹಿಂದಿ, ತಮಿಳು, ತೆಲುಗು ಚಿತ್ರರಂಗದಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಈಗ ಮಾಲಿವುಡ್ ಅಂಗಳಕ್ಕೂ ಎಂಟ್ರಿಕೊಟ್ಟಿದ್ದು, ಸಿನಿಪ್ರಿಯರನ್ನು ರಂಜಿಸಲು ಸಿದ್ಧವಾಗಿದ್ದಾರೆ. ಉಯಿರೆ ಚಿತ್ರದಲ್ಲಿ ಕಿಚ್ಚ ಸುದೀಪ್ ನಟಿಸಿದ್ದು, ಕಥೆಗೆ ತಿರುವು ನೀಡುವ ಪವರ್‌ಫುಲ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದು ಅತಿಥಿ ಪಾತ್ರವಾದರೂ ಚಿತ್ರದ ಪ್ರಮುಖ ಪಾತ್ರಗಳಲ್ಲೊಂದಾಗಿದೆಯಂತೆ. ಮರ್ಡರ್ ಮಿಸ್ಟರಿ ಕಥೆಯ ಈ ಸಿನಿಮಾದಲ್ಲಿ ರೋಷನ್ ಮ್ಯಾಥ್ಯು ನಾಯಕನಾಗಿ ನಟಿಸಿದ್ದು, ಸುದೀಪ್ ಅವರನ್ನು ಹೊಸ ಲುಕ್‌ನಲ್ಲಿ ಕಣ್ತುಂಬಿಕೊಳ್ಳಬಹುದಾಗಿದೆಯಂತೆ. ಬೈಜು ಸಂತೋಷ್, ಶ್ರುತಿ ಮೆನನ್, ವಿನೀತ್ ತಟ್ಟಿಲ್ ಮುಂತಾದವರು ತಾರಾಗಣದಲ್ಲಿದ್ದಾರೆ. ಇದು ನೈಜ ಘಟನೆಗಳನ್ನು ಆಧರಿಸಿ ಹೆಣೆಯಲಾದ ಕಥೆಯಾಗಿದ್ದು, ಎಂ.ಪದ್ಮಕುಮಾರ್ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾದ ಟೀಸರ್ ರಿಲೀಸ್ ಆಗಿದ್ದು ಕಿಚ್ಚನ ಫೋಟೊ ಕೂಡ ಟೀಸರ್‌ನಲ್ಲಿ ಹಾದು ಹೋಗುತ್ತದೆ. ಕಥೆಗೆ ತಿರುವು ನೀಡುವ ಪಾತ್ರದಲ್ಲಿ ಕಿಚ್ಚ ನಟಿಸಿದ್ದಾರೆ ಎನ್ನುವುದು ಇದರಿಂದ ತಿಳಿಯುತ್ತದೆ. ಉಯಿರ್ ಇದೇ ವಾರ ತೆರೆಗೆ ಬರಲಿದೆ.

ಸದ್ಯ ಸುದೀಪ್, ಬಿಲ್ಲ ರಂಗ ಭಾಷ ಚಿತ್ರದಲ್ಲಿ ಅಭಿನಯಿಸುತ್ತಿದ್ದು, ಇನ್ನೇನು ಚಿತ್ರತಂಡ ಸೇರಲಿದ್ದಾರೆ. ಅನೂಪ್ ಭಂಡಾರಿ ನಿರ್ದೇಶನದ ಈ ಚಿತ್ರ ಅದ್ದೂರಿ ವೆಚ್ಚದಲ್ಲಿ ಮೂಡಿಬರುತ್ತಿದ್ದು, ಹೈದರಾಬಾದ್‌ನಲ್ಲಿ ದೊಡ್ಡ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸಲಾಗುತ್ತಿದೆ. ವಿಕ್ರಾಂತ್ ರೋಣ ಬಳಿಕ ಸುದೀಪ್ ಹಾಗೂ ಅನೂಪ್ ಈ ಸಿನಿಮಾದಲ್ಲಿ ಮತ್ತೆ ಒಂದಾಗುತ್ತಿದ್ದಾರೆ. ಈ ಸಿನಿಮಾದ ಜತೆಗೆ ರಾಜಮೌಳಿ ನಿರ್ದೇಶನದ ವಾರಣಾಸಿ ಚಿತ್ರದಲ್ಲಿಯೂ ಕಿಚ್ಚ ಅಭಿನಯಿಸುತ್ತಿದ್ದು, ಈ ಸಿನಿಮಾದಲ್ಲಿಯೂ ಪವರ್‌ಫುಲ್ ಪಾತ್ರದಲ್ಲಿ ಕಾಣಿಸಿಕೊಳ್ಳದ್ದಾರೆ. ಈ ಚಿತ್ರದ ಜತೆಗೆ ಇನ್ನೂ ಮೂರು ಸಿನಿಮಾಗಳಲ್ಲಿ ಸುದೀಪ್ ಅಭಿನಯಿಸಲಿದ್ದಾರೆ.

ಕೆಎ18ನಲ್ಲಿ ಹಾರರ್ ಥ್ರಿಲ್ಲರ್

ಚಂದವನವನದಲ್ಲಿ ಹೊಸಬರ ದಂಡೇ ಇದೆ. ಹೊಸಬರು ಹೊಸ ಕಥೆಯಲ್ಲಿಯೇ ಗಮನಸೆಳೆಯುತ್ತಿದ್ದಾರೆ. ಅಂತೆಯೇ ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸುತ್ತಿರುವ ಕೆಎ18 ಚಿತ್ರದ ಮುಹೂರ್ತ ಸಮಾರಂಭ ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ಅದ್ದೂರಿಯಾಗಿ ನೆರವೇರಿತು. ಚಿತ್ರ ಸಾಹಿತಿ ವಿ. ನಾಗೇಂದ್ರ ಪ್ರಸಾದ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ನಟ ಮನೋಜ್ ಕ್ಯಾಮೆರಾ ಆನ್ ಮಾಡಿ ಶುಭಕೋರಿದರು. ಅಪ್ಪಾಜಿ ಪ್ರೊಡಕ್ಷನ್ಸ್‌ನಲ್ಲಿ ಎ.ಟಿ.ಎಂ.ಮಂಜು ಈ ಚಿತ್ರವನ್ನು ನಿರ್ಮಾಣ ಮಾಡುವುದರ ಜತೆಗೆ ನಾಯಕನಾಗಿ ಬಣ್ಣ ಹಚ್ಚುತ್ತಿದ್ದಾರೆ. ಮೋಹನ್ ಚಿಕ್ಕಿ ಕಥೆ,ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಸೋನಿಯಾ ರಾವುತ್ ಸಹ ನಿರ್ಮಾಪಕಿಯಾಗಿದ್ದು, ಒಂದು ಹಾಡಿಗೆ ಹೆಜ್ಜೆ ಹಾಕುತ್ತಿದ್ದಾರೆ. ತನಿಷಾ ಕುಪ್ಪಂಡ, ಸೋನಿಯಾ ರಾವುತ್, ದೀಪು, ವರ್ಧನ್, ವಿಜಿ, ಪೂಜಾ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ. ಕೆಎ 18 ಕನ್ನಡ ಸೇರಿದಂತೆ ತೆಲುಗು, ಹಿಂದಿ, ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ. ನಿರ್ಮಾಪಕರು ಒನ್‌ಲೈನ್ ಸ್ಟೋರಿ ಹೇಳಿದರು. ಅದೇ ಎಳೆಯನ್ನು ಇಟ್ಟುಕೊಂಡು ಕಥೆ ಬರೆದಿದ್ದೇನೆ. ಎರಡು ಮುಖ್ಯಪಾತ್ರಗಳ ಸುತ್ತ ಸಿನಿಮಾದ ಕಥೆ ಸಾಗಲಿದೆ. ಸಾಯಂಕಾಲ 6ರಿಂದ ಬೆಳಿಗ್ಗೆ 6 ಗಂಟೆಯವರೆಗೆ ನಡೆಯುವ ಘಟನೆ ಇಲ್ಲಿದೆ. ಅದನ್ನು ಸಸ್ಪೆನ್ಸ್, ಥ್ರಿಲ್ಲರ್, ಹಾರರ್ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗುತ್ತದೆ ಎಂದು ನಿರ್ದೇಶಕ ಮೋಹನ್ ಚಿಕ್ಕಿ ಹೇಳಿದರು. ನನಗೆ ಶಾಲೆ ಕಾಲೇಜು ದಿನಗಳಿಂದಲೂ ನಟನೆಯ ಬಗ್ಗೆ ಅಭಿರುಚಿ ಇತ್ತು. ಆಗಿನಿಂದಲೇ ಸಿನಿಮಾ ಮಾಡಬೇಕೆಂಬ ಆಸೆಯಿತ್ತು. ಅದಕ್ಕೆ ಈಗ ಕಾಲ ಕೂಡಿಬಂದಿದೆ. ಒಮ್ಮೆ ನನ್ನ ಅಪ್ಪನೊಂದಿಗೆ ಕೆಮ್ಮಣ್ಣುಗುಂಡಿಗೆ ಹೋಗಿದ್ದಾಗ ಅಲ್ಲಿ ನೋಡಿದಂತ ಘಟನೆಯನ್ನು ನಿರ್ದೇಶಕರಿಗೆ ಹೇಳಿದೆ. ಮೂಲಭೂತ ಸೌಕರ್ಯವಿಲ್ಲದ ಹಾದಿಯಲ್ಲಿ ಒಂದು ವಿಚಾರವನ್ನು ಬೆನ್ನತ್ತಿ ಹೊರಟಾಗ ಒಂದಷ್ಟು ಅಡಚಣೆಗಳು ಬರುತ್ತವೆ. ಕೊನೆಗೆ ಅದರಿಂದ ರಕ್ಷಣೆ ಸಿಗುತ್ತದಾ, ಇಲ್ಲವಾ ಎಂಬುದನ್ನು ಸಿನಿಮಾದಲ್ಲಿ ಹೇಳ ಹೊರಟದ್ದೀವೆ ಎಂದು ನಾಯಕ ನಟ, ನಿರ್ಮಾಪಕ ಎ.ಟಿ.ಎಂ.ಮಂಜು ತಿಳಿಸಿದರು. ನಾನು ಈ ಚಿತ್ರದಲ್ಲಿ ಅಂಕಿತಾ ಎಂಬ ಪಾತ್ರದಲ್ಲಿ ನಟಿಸುತ್ತಿದ್ದು, ಕಾಡು ದಾರಿಯಲ್ಲಿ ಅಪರಿಚಿತ ವ್ಯಕ್ತಿಯೊಂದಿಗೆ ಪಯಣಿಸುವಾಗ ಸಣ್ಣ ಪುಟ್ಟ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಯಾರು ಯಾರಿಗೆ ಒಳ್ಳೇದು, ಕೆಟ್ಟದ್ದು ಮಾಡುತ್ತಾರೆ ಎಂಬುದನ್ನು ನಿರ್ದೇಶಕರು ನನ್ನ ಪಾತ್ರದ ಮೂಲಕ ಹೇಳುತ್ತಿದ್ದಾರೆ ಎಂದು ತನಿಷಾ ತಿಳಿಸಿದರು. ಜೆ.ಕೆ.ಶಶಿಕುಮಾರ್ ಸಾಹಿತ್ಯ, ಮುಂಜಾನೆ ಮಂಜು ಛಾಯಾಗ್ರಹಣ, ರಘು ಶಿವರಾಮ್ ಸಂಕಲನ, ವೈಲೆಂಟ್ ವೇಲು ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.